


ಚಹರೆ

ಡಾ|| ಎಚ್.ಎಸ್.ಶ್ರೀಮತಿ

Scan



ಚಹರೆ



ಚಹರೆ

ಡಾ. ಎಚ್. ಎಸ್. ಶ್ರೀಮತಿ

ಇಳಾ ಪ್ರಕಾಶನ
ಬೆಂಗಳೂರು

CHAHARE
Dr. H. S. Sreemathi

Published by
Ila Prakashana
153, 4th Main, 8th Cross
Chamarajpet, Bangalore - 560 018

Pages : 14 + 134

Price : Rs. 70/-

ಪ್ರಕಾಶಕರು
ಇಳಾ ಪ್ರಕಾಶನ
೧೫೩, ೪ನೇ ಮುಖ್ಯರಸ್ತೆ, ೮ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು - ೧೮

ಬೆಲೆ : ರೂ. ೭೦/-

ಮುಖಪುಟ
ಯು.ಟಿ. ಸುರೇಶ್

ಅಕ್ಷರ ಜೋಡಣೆ
ಯಾಜಿ ಗ್ರಾಫಿಕ್ಸ್, ಹೊಸಪೇಟೆ

ಮುದ್ರಕರು
ಇಳಾ ಮುದ್ರಣ
ಚಾಮರಾಜಪೇಟೆ, ಬೆಂಗಳೂರು - ೧೮

ಸ್ತ್ರೀವಾದಿ ಮೀಮಾಂಸೆ : ಒಂದು ಹೊಸ ಯತ್ನ

ಸ್ತ್ರೀವಾದಿ ಚಿಂತನೆಯನ್ನು ಕುರಿತು ಕನ್ನಡದಲ್ಲಿ ಇತ್ತೀಚೆಗೆ ಸಾಕಷ್ಟು ಸಂಖ್ಯೆಯಲ್ಲಿ ಗ್ರಂಥಗಳೂ ಲೇಖನಗಳೂ ಪ್ರಕಟವಾಗಿವೆ. ಹಾಗೆ ನೋಡಿದರೆ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಯಾವುದೇ ಸಾಹಿತ್ಯ ಸಿದ್ಧಾಂತದ ಬಗ್ಗೆಯೂ ಇಷ್ಟು ಗಂಭೀರವಾದ ಮತ್ತು ಸೂಕ್ಷ್ಮವಾದ ಅಧ್ಯಯನ ಗ್ರಂಥಗಳು ದೊರೆಯುವುದಿಲ್ಲ. ಸ್ತ್ರೀವಾದಿ ಚಿಂತನೆಯೆನ್ನುವುದು ಕೇವಲ ಸಾಹಿತ್ಯ ಸಿದ್ಧಾಂತಕ್ಕಷ್ಟೇ ಸೀಮಿತಗೊಳ್ಳದೇ ಬದುಕಿನ ಎಲ್ಲ ಕ್ಷೇತ್ರಗಳ ಬಗ್ಗೆಯೂ ವಿಶ್ಲೇಷಕ ದೃಷ್ಟಿಯಿಂದ ಪರಿಶೀಲಿಸಲು ತೊಡಗಿರುವುದು ಮಹತ್ವದ ಸಂಗತಿ. ಇಷ್ಟೆಲ್ಲ ಶ್ರದ್ಧಾಪೂರ್ಣ ಪ್ರಯತ್ನಗಳ ನಡುವೆಯೂ ಸ್ತ್ರೀವಾದದ ಬಗ್ಗೆ ಅನಾದರ ಅನುಮಾನ ಉಳಿದಿದ್ದರೆ, ಅದಕ್ಕೆ ಸ್ತ್ರೀವಾದಿ ಪರಿಭಾಷೆಯಲ್ಲೇ ವಿವರಣೆ ಕೊಡುವುದಾದರೆ, ಪುರುಷ ಚಿಂತನೆಯ ಯಾಜಮಾನ್ಯವೇ ಕಾರಣ. ಸ್ತ್ರೀಯನ್ನು ಕ್ಷುಲ್ಲಕಗೊಳಿಸಿದಂತೆ ಸ್ತ್ರೀವಾದವನ್ನು ನಿರ್ಲಕ್ಷಿಸುವ ಪುರುಷ ಪ್ರಭುತ್ವದ ಪೂರ್ವಗ್ರಹ ಒಂದು ಕಡೆಯಾದರೆ, ಸ್ತ್ರೀವಾದವನ್ನು ಸರಳೀಕರಿಸಿ ಅದರ ಮೇಲ್ಮೈಯ ಕೆಲವು ಆಕರ್ಷಕ ಸಂಗತಿಗಳನ್ನಷ್ಟೇ ಸ್ವೀಕರಿಸಿ ಘೋಷಣೆಯ ಹಂತಕ್ಕೆ ಕೊಂಡೊಯ್ಯುವ ಅತ್ಯುತ್ಸಾಹ ಇನ್ನೊಂದು ಕಡೆ - ಈ ಎರಡು ಅತಿರೇಕದ ತುದಿಗಳ ನಡುವೆ ಸ್ತ್ರೀವಾದಿ ಚಿಂತನೆಯನ್ನು ಗ್ರಹಿಸುವ ಅಗತ್ಯ ಈಗ ಮುಖ್ಯವಾಗಿದೆ. ಈ ದೃಷ್ಟಿಯಿಂದ ಡಾ. ಎಚ್. ಎಸ್. ಶ್ರೀಮತಿಯವರ ಸ್ತ್ರೀವಾದಿ ಸಂಬಂಧಿ ಲೇಖನಗಳು ಹೊಸ ಒಳನೋಟವನ್ನು ಕೊಟ್ಟು ಈ ಚಿಂತನೆಯ ಸೂಕ್ಷ್ಮಗಳನ್ನು ಗೊಂದಲಗಳಿಲ್ಲದೆ ತೆರೆದಿಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿವೆ.

'ಸ್ತ್ರೀ ಪುರುಷ ಸಂಬಂಧಗಳು' ಎನ್ನುವ ಲೇಖನದಲ್ಲಿ ಸ್ತ್ರೀ ಪುರುಷ ಶ್ರೇಣೀಕರಣದ ಪರವಿರೋಧ ವರ್ಗೀಕರಣವನ್ನು ನಿರಾಕರಿಸಿ 'ಮಾನವಪರ' ಚೌಕಟ್ಟಿನಲ್ಲಿ ಗ್ರಹಿಸಲು ಪ್ರಯತ್ನಿಸಲಾಗಿದೆ. ಸಮಾಜವಾದಿ ಚಿಂತನೆಗಳನ್ನು ವರ್ಗಹೋರಾಟದ ನೆಲೆಗೆ ಅನ್ವಯಿಸುವಷ್ಟೇ ಸುಲಭವಾಗಿ ಸ್ತ್ರೀ ಪುರುಷ ಸಂಬಂಧಗಳಿಗೆ ಅನ್ವಯಿಸಲು ಸಾಧ್ಯವಿಲ್ಲ, ಸ್ತ್ರೀ ಪುರುಷ ಸಮಾನತೆಯನ್ನು ಅಂತರಂಗದಿಂದ ವೈಭವೀಕರಿಸುತ್ತ ಪಾತ್ರಧಾರಿಗೆ ವಹಿಸುವ ಪಾತ್ರಗಳು ಎಂತಹವು ಎಂಬ ಬಗ್ಗೆ ಯಾವುದೇ ನಿಗದಿತ ಚೌಕಟ್ಟು ಇಲ್ಲ, ಪುರುಷನೊಂದಿಗಿನ ಸಂಬಂಧಗಳನ್ನು ಕಡಿದುಕೊಂಡು ಸ್ವತಂತ್ರಳಾಗಬೇಕೆನ್ನುವ ಸಂದರ್ಭಗಳನ್ನು ಸ್ತ್ರೀ

ಸ್ವಾಗತಿಸುವುದು ಎಷ್ಟರಮಟ್ಟಿಗೆ ಸಾಧ್ಯ ಮತ್ತು ಉಚಿತ?-ಹೀಗೆ ಪ್ರಶ್ನೆಗಳನ್ನು ಹಾಕುತ್ತ, ತಂತ್ರ ಪ್ರತಿತಂತ್ರಗಳ ಮಾರ್ಗಗಳಿಗಿಂತ ಭಿನ್ನವಾಗಿ 'ಮಾನವಪರ' ಚಿಂತನೆಗಳೇ ಮುಖ್ಯ ಎನ್ನುವ ಅಭಿಪ್ರಾಯಕ್ಕೆ ಬರುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಮಹಾತ್ಮಾ ಗಾಂಧಿ ಮತ್ತು ಮಾವೋ ಚಿಂತನೆಗಳಿಂದ ಅಪರಿಗ್ರಹ, ಅಸಂಗ್ರಹ ತತ್ತ್ವಗಳನ್ನು ಮುಖ್ಯವೆಂದು ಪ್ರತಿಪಾದಿಸುತ್ತಾರೆ. ಅಸಮಾನತೆಯ ಸ್ವರೂಪವನ್ನು ಚರ್ಚಿಸುವ ಈ ಲೇಖನ ಸರಳ ಸ್ತ್ರೀವಾದದ ವ್ಯಾಪ್ತಿಯನ್ನು ಮೀರಿ ಸಮಾನತೆಯ ತತ್ತ್ವವನ್ನು ಮನವರಿಕೆ ಮಾಡಿಕೊಡುತ್ತದೆ. ಹೀಗಾಗಿ ಸ್ತ್ರೀವಾದವು ಸಮಾಜವಾದೀ ಚಿಂತನೆಯ ಒಂದು ಅಂಗವಾಗಿ ಕೆಲಸ ಮಾಡುತ್ತದೆ ಎನ್ನುವ ಸೂಚನೆ ಸ್ಪಷ್ಟವಾಗಿದೆ.

'ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು, ಸಂದೇಹಗಳು'- ಸ್ತ್ರೀವಾದಿ ಚಿಂತನೆಯ ಬಗ್ಗೆ, ಚಿಂತನೆಯ ಅಗತ್ಯದ ಬಗ್ಗೆ ವಿವರಣೆ ಕೊಡುವಲ್ಲಿಂದ ತೊಡಗಿ ಮಾನವ ಕಲ್ಯಾಣದ ಆಶಯ ಪ್ರತಿಪಾದನೆಯೊಂದಿಗೆ ಮುಕ್ತಾಯವಾಗುತ್ತದೆ. ಮತ್ತೆ ಇಲ್ಲಿಯೂ ಕೊನೆಗೆ ಮುಖ್ಯ ವಾಗುವುದು ಪುರುಷ-ಸ್ತ್ರೀಯರಿಗೆ ದೊರೆಯಬೇಕಾದ ಸಮಾನ ಅವಕಾಶಗಳು. ಹೆಣ್ಣು ಮತ್ತು ದುಡಿಮೆಯ ಸಂಬಂಧದ ಚರ್ಚೆ ಈಗಾಗಲೇ ಬಂದಿದ್ದರೂ ಅದರ ಮೂಲಕ ಕುಟುಂಬದ ಒಳಗೆ ಮತ್ತು ಹೊರಗೆ ಸಮಾನತೆಯ ಅವಕಾಶಗಳ ವೈರುಧ್ಯಗಳನ್ನು ಇಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಸ್ತ್ರೀವಾದಿ ಚಿಂತನೆಯನ್ನು ದಾರಿತಪ್ಪಿಸುವ ನಯಗಾರಿಕೆಯ ತಂತ್ರಗಳನ್ನು ಅನಾವರಣ ಮಾಡಿದ್ದಾರೆ. 'ಸೇವಾಕ್ಷೇತ್ರ' ಎನ್ನುವ ಪರಿಕಲ್ಪನೆ ಹೆಣ್ಣಿನ ಶೋಷಣೆಯ ತಂತ್ರವಾದ ಕಥನವನ್ನು ನಿರೂಪಿಸಿದ್ದಾರೆ. ವಿವಾಹ, ಕುಟುಂಬದಂತಹ ಸಂಸ್ಥೆಗಳು ಹೀಗೆ ಹೆಣ್ಣಿಗೆ ಅಧೀನತೆಯ ಅವಕಾಶಗಳನ್ನೇ ಕಲ್ಪಿಸಿವೆ ಎನ್ನುವುದನ್ನು ವಿವರಿಸಿದ್ದಾರೆ. ಹೆಣ್ಣು ಭ್ರೂಣಹತ್ಯೆ ಮತ್ತು ಏಡ್ಸ್ ರೋಗಗಳ ಕುರಿತು ಇವರು ನಡೆಸಿದ ಚಿಂತನೆ ತುಂಬ ಮಹತ್ವದ್ದು.

'ಸಾಮಾಜಿಕ ಚಿಂತನೆಗಳಲ್ಲಿ ಹೆಣ್ಣು' ಎನ್ನುವ ಲೇಖನದಲ್ಲಿ ರೋಗ ಲಕ್ಷಣವನ್ನು ಗುರುತಿಸುವಷ್ಟಕ್ಕೆ ನಿಲ್ಲದೆ ಔಷಧೋಪಚಾರಗಳನ್ನು ಸೂಚಿಸುವ ಕೆಲವು ಚಿಂತನೆಗಳು ದೊರೆಯುತ್ತವೆ. ಉತ್ಪಾದನೆ/ಸಂತಾನ, ಕುಟುಂಬ/ ಸಾಮಾಜಿಕತೆ / ಲೈಂಗಿಕತೆ ವಿವಾಹ- ಈ ನಾಲ್ಕು ನೆಲೆಗಳಲ್ಲಿ ಪರಿಹಾರದ ಸೂಚನೆಗಳನ್ನು ಕೊಡಲಾಗಿದೆ. ಮತ್ತೆ ಸೇವಾಕ್ಷೇತ್ರ, ಸಮಾನ ವೇತನ ಮತ್ತು ದುಡಿಯುವ ಹಕ್ಕುಗಳು ಎನ್ನುವ ನುಡಿಗಟ್ಟುಗಳು ನಾಜೂಕಿನಿಂದ ಹೆಣ್ಣನ್ನು ಭ್ರಮೆಗಳಲ್ಲಿ ಸಿಲುಕಿಸುವ ತಂತ್ರಗಳನ್ನು ಚರ್ಚಿಸಲಾಗಿದೆ. ಸಂತತಿ ಸಂರಕ್ಷಣೆಯ ಹೊಣೆಗಾರಿಕೆಯನ್ನು ಗಂಡು ಹೆಣ್ಣುಗಳು ಸಮಾನವಾಗಿ ಹಂಚಿಕೊಳ್ಳಬೇಕು ಎನ್ನುವ ಮೂಲಕ ಸಂತಾನ ಎನ್ನುವುದು ಹೆಣ್ಣೊಬ್ಬಳದೇ ಜವಾಬ್ದಾರಿಯಲ್ಲ ಎನ್ನುವ ಕಟುಸತ್ಯ ಕಾಣಿಸಿಕೊಂಡಿದೆ.

'ಹೆಸರಿಲ್ಲದ ಒಂದು ಸಮಸ್ಯೆ ಅಥವಾ ಹೌಸ್ ವೈಫ್ ಸಿಂಡ್ರೋಂ' ಎನ್ನುವ ಲೇಖನ ಮನೋವೈಜ್ಞಾನಿಕ ನೆಲೆಯಿಂದ ತೊಡಗಿ ಸಮಾಜದ ಪರಿಸರ ನಿರ್ಮಾಣದವರೆಗೆ ಹೆಣ್ಣಿಗೆ ಅವಕಾಶ ಕಲ್ಪಿಸುವ ವಿಷಯಗಳನ್ನು ಪ್ರಸ್ತಾಪಿಸುತ್ತದೆ. ಹೆಣ್ಣನ್ನು ನಂಬಿಸುವುದು ಮತ್ತು ಆಕೆ ಗಂಡನ್ನು ಅವಲಂಬಿಸುವಂತೆ ಮಾಡುವುದು ಪರಂಪರೆಯಿಂದ ತೊಡಗಿ ಆಧುನಿಕ ಕಾಲದವರೆಗೆ ತಾಳುವ ಭಿನ್ನ ವಿನ್ಯಾಸಗಳನ್ನು ಪರಿಶೀಲಿಸಿದ್ದಾರೆ. ಹೆಣ್ಣಿಗೆ ಸ್ವಂತ ವ್ಯಕ್ತಿತ್ವವಿದೆ ಎನ್ನುವ ತಿಳುವಳಿಕೆಯನ್ನು ಹೊಂದುವುದು ಮಾನವೀಯ ಘನತೆಯ ಮುಖ್ಯಾಂಶ ಎನ್ನುವುದು ಇಲ್ಲಿನ ಮುಖ್ಯವಾದ ಮಾತು.

'ಹೆಣ್ಣಿನ ಸಂವೇದನೆ ಬಾಯಾರಿದ ಕುಡಿ' ಎಂಬ ಟಿಪ್ಪಣಿಯಲ್ಲಿ ಆಧುನಿಕತೆಯು ಹೆಣ್ಣಿನ ಅವಗಣನೆಯನ್ನು ಪೋಷಿಸುವ ಬಗೆಗಳನ್ನು ವಿವರಿಸಲಾಗಿದೆ. ಹೆಣ್ಣಿನ ಸಂವೇದನೆಗಳಿಗೆ ಅಭಿವ್ಯಕ್ತಿ ಮಾರ್ಗಗಳನ್ನು ಕಂಡುಕೊಳ್ಳುವುದು ಬಹಳ ಮುಖ್ಯ, ಅದು ಅವಳದ್ದೇ ಸಂವೇದನೆಗಳು ಮತ್ತು ಅವಳದ್ದೇ ಮಾಧ್ಯಮಗಳು ಆಗಿರಬೇಕು ಎನ್ನುವ ಚಿಂತನ ಇಲ್ಲಿದೆ.

'ಹೆಣ್ಣಿನ ಸ್ವಾಭಾವವನ್ನು ಕುರಿತ ವೈಜ್ಞಾನಿಕ ಅಧ್ಯಯನಗಳು' ಎನ್ನುವ ಲೇಖನದಲ್ಲಿ ಹೆಣ್ಣನ್ನು ಕುರಿತು ಜೀವವಿಜ್ಞಾನ ಮತ್ತು ಮನೋವಿಜ್ಞಾನಗಳು ನಡೆಸಿರುವ ಚಿಂತನೆಗಳನ್ನು ಗಂಭೀರ ವಿಶ್ಲೇಷಣೆಗಳ ಮೂಲಕ ಪ್ರಶ್ನಿಸಲಾಗಿದೆ. ಪ್ರತಿಷ್ಠಿತ ಮನೋವಿಜ್ಞಾನಿಗಳು ಮತ್ತು ಜೀವವಿಜ್ಞಾನಿಗಳು ತಮ್ಮ ಪುರುಷಪೀಡಿತ ಮನೋಧರ್ಮದಿಂದಲೇ ಹೆಣ್ಣನ್ನು ಕುರಿತು ಪೂರ್ವಗ್ರಹದ ತೀರ್ಮಾನಗಳನ್ನು ಕೊಟ್ಟಿರುವುದನ್ನು ವಿವರವಾಗಿ ಚರ್ಚಿಸಲಾಗಿದೆ. ಎಲೀನರ್ ಮೆಕೊಬಿಯ ಮನೋವೈಜ್ಞಾನಿಕ ಸಂಶೋಧನೆಯನ್ನು ಉಲ್ಲೇಖಿಸುತ್ತಾ ಹೈಸ್ಕೂಲು ಹಂತದವರೆಗೆ ಸಮಾನ ಬೌದ್ಧಿಕ ಮಟ್ಟವಿದ್ದ ಹೆಣ್ಣು ಮತ್ತು ಗಂಡು ಮಕ್ಕಳು ಆ ಬಳಿಕ ಭಿನ್ನವಾಗುವ ಕಾರಣಗಳನ್ನು ಕೊಡಲಾಗಿದೆ. ಸಾಮಾಜಿಕ ನಿರೀಕ್ಷೆಗಳು ಹೆಣ್ಣನ್ನು ನಿಯಂತ್ರಿಸತೊಡಗಿದಂತೆಲ್ಲ ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಕಡಿಮೆ ಗುಣಮಟ್ಟವನ್ನು ತೋರಿಸುವ ಒತ್ತಡವಿರುತ್ತದೆ. ಹೀಗಾಗಿಯೇ ಅಸಮಾನತೆಯ ಪರಿಸರದಲ್ಲಿ ಸಮಾನತೆಯ ಫಲಿತಾಂಶಗಳನ್ನು ಹುಡುಕುವ ಮೌಢ್ಯವನ್ನು ವಿರೋಧಿಸಲಾಗಿದೆ.

'ಹೆಣ್ಣು ಮತ್ತು ಅವಳ ಸಾಮರ್ಥ್ಯ ಮಾಪನ' ಎನ್ನುವ ಲೇಖನ ಮತ್ತೆ ಮನೋವಿಜ್ಞಾನದ ಪೂರ್ವಗ್ರಹಗಳನ್ನು ಬಯಲು ಮಾಡುತ್ತದೆ. ಕೆಲವು ದೃಷ್ಟಿಗಳಿಂದ ಇದೊಂದು ಸವಾಲಿನ ಲೇಖನ. ಸ್ತ್ರೀವಾದದಲ್ಲಿಯೇ ಹೆಚ್ಚು ಚರ್ಚಿತವಾದ ಒಂದು ಗ್ರಹಿಕೆಯೆಂದರೆ ಸ್ತ್ರೀತ್ವದ ಪರಿಕಲ್ಪನೆ ಅಥವಾ ಸ್ತ್ರೀ ವಿಶಿಷ್ಟ ಪ್ರಜ್ಞೆ ಅಥವಾ ಹೆಣ್ಣಿನ ಅನನ್ಯತೆಯ ಸ್ಥಾಪನೆ. ಅನೇಕ ಸ್ತ್ರೀವಾದಿ ಚಿಂತಕಿಯರು ಈ ಪರಿಕಲ್ಪನೆಯ ಪರವಾಗಿ ವಾದಿಸುತ್ತಾರೆ. ಈ ರೀತಿಯ ಸ್ತ್ರೀ ಅನನ್ಯತೆಯು ಪ್ರತ್ಯೇಕತೆ ಮತ್ತು ಪುರುಷ ಚಿಂತನೆಯ ಸಮೀಪಕ್ಕೆ ಬಂದು ಹೆಣ್ಣಿನ ಬಗ್ಗೆ ಭ್ರಮೆಗಳ ಪ್ರಭಾವಲಯವನ್ನು ನಿರ್ಮಿಸುವ ಅಪಾಯವಿಲ್ಲವೇ ಎನ್ನುವುದು ಮುಖ್ಯ ಪ್ರಶ್ನೆ. ಡಾ. ಶ್ರೀಮತಿಯವರು ಈ ಸಮಸ್ಯೆಯ ಎಲ್ಲ ಸೂಕ್ಷ್ಮಗಳನ್ನು ಪರಿಶೀಲಿಸುವ

ಪರಿಶ್ರಮವನ್ನು ತೆಗೆದುಕೊಂಡಿದ್ದಾರೆ. ಮಹಿಳಾ ಮೀಸಲಾತಿಯಂತಹ ತೋರಿಕೆಯ ಪ್ರಗತಿಪರ ಕಾನೂನು ಹೇಗೆ ಒಂದು ನಯವಂಚನೆಯ ಆಟ ಎನ್ನುವುದನ್ನು ತೋರಿಸಿ ಕೊಟ್ಟಿದ್ದಾರೆ. ಹೆಣ್ಣಿನ ಮಾತನ್ನು ಗಂಭೀರವಾಗಿ ಕೇಳಲು ಸಿದ್ಧವಿಲ್ಲದ ಬೌದ್ಧಿಕರ ನಿರ್ಲಕ್ಷ್ಯದ ಕಾಯಿದೆಯನ್ನು ಗುರುತಿಸಿದ್ದಾರೆ. ಹೀಗೆ ಹೆಣ್ಣಿನ ಸಾಮರ್ಥ್ಯ ಮಾಪನ ಎನ್ನುವುದು ಎಷ್ಟು ಸಂಕೀರ್ಣ ಮತ್ತು ಭಾಷೆಯ ಮಟ್ಟದಿಂದ ತೊಡಗಿ ವಿಜ್ಞಾನಗಳ ಹಂತದವರೆಗೆ ಅದರ ಕಬಂಧ ಬಾಹುಗಳು ಹೇಗೆ ವ್ಯಾಪಿಸಿವೆ ಎನ್ನುವ ಚರ್ಚೆ ದೊರೆಯುತ್ತದೆ.

ಈ ಚರ್ಚೆಯ ಒಂದು ಮುಖ್ಯ ಮಗ್ಗುಲಾಗಿ 'ಹೆಣ್ಣಿನ ಭಾಷೆ' ಎಂಬ ಲೇಖನವಿದೆ. ಸ್ತ್ರೀವಾದಿ ಚಿಂತನೆಯಲ್ಲಿ ಚರ್ಚಿಸಲಾಗುವ ಒಂದು ನೆಲೆಯೆಂದರೆ 'ಹೆಣ್ಣಿನ ಭಾಷೆ' ಎನ್ನುವುದು ಪ್ರತ್ಯೇಕವಾಗಿ ಇದೆಯೇ ಎನ್ನುವುದು. ಅದರ ಮುಂದಿನ ಪ್ರಶ್ನೆ ಆ ರೀತಿ ಇರಬೇಕೇ ಎನ್ನುವುದು. ಗಂಡನ್ನು ಎಲ್ಲ ರೀತಿಯಲ್ಲೂ ಅನುಕರಿಸುವುದು ಗಂಡಸಿನ ಸವಲತ್ತುಗಳನ್ನು ಕೇಳುವುದು ಒಂದು ವಿಧವಾದರೆ, ಹೆಣ್ಣಾಗಿ ಗಂಡಿಗಿಂತ ಭಿನ್ನವಾಗಿ ಬದುಕುವುದು ಇನ್ನೊಂದು ಬಗೆ. ಭಾಷೆಯ ಬಳಕೆಯ ಹಂತಕ್ಕೆ ಬಂದಾಗ ನಮಗೆ ದೊರೆತ ಭಾಷೆ ಹೀಗೆ ಹೆಣ್ಣನ್ನು ಅವಗಣಿಸಿದೆ ಮತ್ತು ಕೀಳಾಗಿ ಕಂಡಿದೆ ಮತ್ತು ಇದನ್ನು ಮೀರಿದಾಗಲೆಲ್ಲ ಹೆಣ್ಣು ಹೇಗೆ ಹಾಸ್ಯಕ್ಕೆ ವಸ್ತುವಾಗುತ್ತಾಳೆ ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳನ್ನು ಕೊಟ್ಟಿದ್ದಾರೆ. ವ್ಯಾಕರಣದ ಲಕ್ಷಣಗಳಿಂದ ತೊಡಗಿ ಲಿಂಗಸಂಬಂಧಿ ವಿವರಗಳಿಂದ ಮುಂದುವರಿದು ವಚನಗಳ ಪ್ರಯೋಗಗಳವರೆಗೆ ಭಾಷೆ ಹೇಗೆ ಹೆಣ್ಣನ್ನು ಹೊರಗಿಟ್ಟಿದೆ ಅಥವಾ ಕೆಳಗಿಟ್ಟಿದೆ ಎನ್ನುವುದಕ್ಕೆ ಅನೇಕ ನೆಲೆಗಳ ನಿದರ್ಶನಗಳನ್ನು ಕೊಟ್ಟಿದ್ದಾರೆ. ಒಂದು ಅರ್ಥದಲ್ಲಿ ಕನ್ನಡದಲ್ಲಿ ಒಂದು ವ್ಯಾಪಕ ಅಧ್ಯಯನಕ್ಕೆ ಬೇಕಾದ ಸಂಶೋಧನೆಯ ವಿನ್ಯಾಸ ಈ ಪ್ರಬಂಧದಲ್ಲಿ ಇದೆ.

'ಸಮಕಾಲೀನ ಕನ್ನಡ ಸಾಹಿತ್ಯ -ಸ್ತ್ರೀ ವಾದಿ ಓದಿನ ಹಿನ್ನೆಲೆಯಲ್ಲಿ' : ಈ ಲೇಖನದಲ್ಲಿ ಸ್ತ್ರೀವಾದದ ಬಗ್ಗೆ ಚಿಂತನೆಯನ್ನು ಮಾಡುತ್ತ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿನ ಸ್ತ್ರೀಪರವಾದ ಚಿಂತನೆಗಳ ಮೂರು ವಿಭಾಗಗಳನ್ನು ಕೊಟ್ಟಿದ್ದಾರೆ. ಶಾವೊಲ್ಟರ್‌ರಂತಹ ಚಿಂತಕಿಯರು ಕೊಟ್ಟಿರುವ ಮಾದರಿಗಳಂತೆಯೇ ಕನ್ನಡದಲ್ಲಿಯೂ ಮಾದರಿಗಳನ್ನು ಶೋಧಿಸಿದಾಗ ಕೆಲವೊಮ್ಮೆ ಅಚ್ಚುಕಟ್ಟಾದ ವರ್ಗಗಳು ದೊರೆಯುವುದಿಲ್ಲ. ಕನ್ನಡದಲ್ಲಿ ಸ್ಥೂಲವಾಗಿ ಈ ಹಂತಗಳನ್ನು ಹೇಳಬಹುದೇ ಹೊರತು ಅವನ್ನು ಸಾಮಾನ್ಯೀಕರಿಸ ಲಾಗುವುದಿಲ್ಲ. ಹಾಗಾಗಿಯೇ ಈ ಲೇಖನದಲ್ಲಿಯೂ ಸ್ಥೂಲವಾಗಿ ಇಂತಹ ಮೂರು ಹಂತಗಳನ್ನು ಗುರುತಿಸಿ ಚರ್ಚಿಸಲಾಗಿದೆ. ಹೆಣ್ಣು ತನಗೆ ಬೇರೆಯೇ ಮಾಧ್ಯಮವನ್ನು ಶೋಧಿಸಬೇಕು, ಶಬ್ದ ಮಾಧ್ಯಮ ಒಗ್ಗದಿದ್ದರೆ ಶಬ್ದೇತರ ಮಾಧ್ಯಮವನ್ನು ಬಳಸ ಬಹುದು ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಆದರೆ ಅದು ಒಂದು ಸೂಚನೆಯಾಗಿ ಮಾತ್ರ ಉಳಿದಿದೆ.

ಡಾ. ಎಚ್. ಎಸ್. ಶ್ರೀಮತಿ ಅವರ ಈ ಒಂಬತ್ತು ಪ್ರಬಂಧಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬಂದವುಗಳಾದ್ದರಿಂದ ಅವುಗಳ ವಿಷಯದ ವ್ಯಾಪ್ತಿ ಮತ್ತು ಮಿತಿಯಲ್ಲಿ ಈ ಲೇಖನಗಳಿವೆ. ಹಾಗಾಗಿ ಕೆಲವೊಮ್ಮೆಯಾದರೂ ವಿಷಯಗಳ ಪುನರಾವರ್ತನೆ ಇಲ್ಲಿನ ಕೆಲವು ಲೇಖನಗಳಲ್ಲಿ ಕಾಣಿಸಿಕೊಂಡಿರುವುದು ಸಹಜ. ಆದರೆ ಈ ಎಲ್ಲ ಲೇಖನಗಳ ಬಹಳ ಮುಖ್ಯವಾದ ಅಂಶವೆಂದರೆ ಇಲ್ಲಿ ಕನ್ನಡ ಸ್ತ್ರೀವಾದಿ ಚಿಂತನೆಯ ಪ್ರಬುದ್ಧ ಹಂತದ ಸೂಕ್ಷ್ಮ ಅವಲೋಕನದ ಆಲೋಚನೆಗಳು ಕಾಣಿಸಿಕೊಂಡಿವೆ ಎಂಬುದು. ಸ್ತ್ರೀವಾದದ ಬಗ್ಗೆ ಈಗಾಗಲೇ ಸಾಕಷ್ಟು ಲೇಖನಗಳು, ಗ್ರಂಥಗಳು ಕನ್ನಡದಲ್ಲಿ ಬಂದಿರುವ ಕಾರಣ ಅವುಗಳನ್ನು ಪುನರಾವರ್ತಿಸದೇ ಸ್ತ್ರೀವಾದಿ ಚಿಂತನೆಯ ಬಗ್ಗೆ ಸಾಮಾನ್ಯವಾಗಿ ಎತ್ತಲಾಗುವ ಅನುಮಾನ ಮತ್ತು ಪ್ರಶ್ನೆಗಳನ್ನು ಎಳೆಎಳೆಯಾಗಿ ಚರ್ಚಿಸುವ ಪ್ರಯತ್ನಗಳನ್ನು ಇಲ್ಲಿ ಮಾಡಿದ್ದಾರೆ. ಗಂಡು ಮತ್ತು ಹೆಣ್ಣು ಎನ್ನುವ ಎರಡು ನೆಲೆಗಳನ್ನು ಕೇವಲ ಎದುರು ಬದುರಾಗಿ ಮಾತ್ರ ಇಟ್ಟುಕೊಳ್ಳದೆ ಅವುಗಳು ಪರಸ್ಪರ ಸಂವಾದ ನಡೆಸಲು ಅವಕಾಶ ಕಲ್ಪಿಸಿ ಆ ಮೂಲಕ ಸ್ತ್ರೀವಾದದ ಮಾನವ ಮುಖದ ತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಇದರ ಜೊತೆಗೆ ಭಾಷೆ, ಸಾಹಿತ್ಯ, ವಿವಾಹ, ಕುಟುಂಬ, ಉದ್ಯೋಗ, ಬೌದ್ಧಿಕ ರಂಗ- ಹೀಗೆ ಭಿನ್ನ ಕ್ಷೇತ್ರಗಳಲ್ಲಿ ಕಟ್ಟಲಾಗಿರುವ ಪುರುಷ ಚಿಂತನೆಗಳನ್ನು ಒಡೆಯುವ ಕೆಲಸವನ್ನು ಕೂಡ ಸಮರ್ಥವಾಗಿ ನಡೆಸಿದ್ದಾರೆ. ಆದರೆ ಕಟ್ಟಡಗಳನ್ನು ಬಿಚ್ಚುವ ಹುಮ್ಮಸ್ಸಿನಲ್ಲಷ್ಟೇ ತೃಪ್ತರಾಗದೇ ಬಿಚ್ಚಿದ ಬಳಿಕ ಮತ್ತೆ ಹೊಸದಾಗಿ ಈ ಎಲ್ಲ ರಚನೆಗಳನ್ನು ಕಟ್ಟುವ ಸಾಧ್ಯತೆಗಳ ಕಡೆಗೆ ಗಮನ ಹರಿಸಿದ್ದಾರೆ. ಒಂದು ಅರ್ಥದಲ್ಲಿ ಸ್ತ್ರೀವಾದದಲ್ಲಿ ಬಿಡಿ ಬಿಡಿಯಾಗಿ ಮತ್ತು ಬಹಳ ಬಾರಿ ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚಿತವಾಗಿರುವ ಈ ಎಲ್ಲ ಪರಿಮಾಣಗಳು ಒಂದು ಇನ್ನೊಂದರೊಡನೆ ಬೆಸೆದುಕೊಳ್ಳುವ ಸಂಕೀರ್ಣ ಸ್ವರೂಪವನ್ನು ಗ್ರಹಿಸಿಕೊಳ್ಳಲಾಗಿದೆ. ವಿಷಯದ ಸಂಕೀರ್ಣತೆಯ ಸರಿಯಾದ ಗ್ರಹಿಕೆಯೇ ಮಾನಸಿಕ ಬದಲಾವಣೆಯ ಮುಖ್ಯ ಬುನಾದಿ. ಇಂತಹ ಮಾನಸಿಕ ಬದಲಾವಣೆಯ ಮುಂದಿನ ಹಂತವೆಂದರೆ ಸಾಮಾಜಿಕ ಬದಲಾವಣೆ ಮತ್ತು ಆ ಮೂಲಕ ಅಸಮಾನತೆಯ ನಿವಾರಣೆ. ಇಲ್ಲಿನ ಎಲ್ಲ ಲೇಖನಗಳು ತೋರಿಕೆಗೆ ಬೇರೆ ಬೇರೆಯಂತೆ ಕಂಡರೂ ಒಂದು ಇನ್ನೊಂದರೊಡನೆ ಬೆಸೆದುಕೊಂಡು ಸ್ತ್ರೀವಾದ ಮೀಮಾಂಸೆಯ ಸಮಷ್ಟಿ ದರ್ಶನವನ್ನು ಕೊಡಲು ಪ್ರಯತ್ನಿಸಿವೆ ಎನ್ನುವುದು ಕನ್ನಡ ಸ್ತ್ರೀವಾದಿ ಚಿಂತನೆಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದುದು. ಡಾ. ಶ್ರೀಮತಿಯವರು ತಮ್ಮ ಲೇಖನಗಳ ಕೊನೆಯಲ್ಲಿ ಎತ್ತುವ ಪ್ರಶ್ನೆಗಳು, ಧ್ವನಿಸುವ ಸೂಚನೆಗಳು ಕನ್ನಡ ಸ್ತ್ರೀವಾದಿ ಮೀಮಾಂಸೆಯ ಮುಂದಿನ ಬೆಳವಣಿಗೆಯನ್ನು ರೂಪಿಸಲು ಸಮರ್ಥವಾಗಿವೆ.

ಬಿ. ಎ. ವಿವೇಕ ರೈ

ಚಹರೆಗಾಗಿ ಹುಡುಕಾಟ

ಮಹಿಳೆಯರ ಬದುಕಿನ ಬಹುಭಾಗ ಸಮಾಜ ವ್ಯವಸ್ಥೆಯ ಪ್ರಬಲ ನಿಯಂತ್ರಣದಲ್ಲಿದೆ. ತಮ್ಮ ಬದುಕು ತಮ್ಮದೇ ಹೌದೇ ಎಂಬ ಬಗೆಗೆ, ತಮ್ಮ ಚಹರೆಗಳು ಕಳೆದು ಹೋದದ್ದರ ಬಗೆಗೆ ಮಹಿಳೆಯರು ವಿಸ್ಮೃತಿಯನ್ನು ತಳೆದು ಬಿಡುವಷ್ಟು ಗಾಢ ನಿಯಂತ್ರಣವಿದು. ಇಂಥಾ ವಿಸ್ಮೃತಿಯಿಂದ ಹೊರಬಂದು ತನ್ನ ಚಹರೆಯನ್ನು ಗುರುತಿಸಿಕೊಳ್ಳಲು ಇಂದಿನ ಜಾಗ್ರತ ಮಹಿಳೆ ಆರಂಭಿಸಿದ್ದಾಳೆ. ಮಹಿಳೆಯ ಅಸ್ತಿತ್ವಕ್ಕೆ ಸಂಬಂಧಿಸಿದ ಮುಖ್ಯ ಪ್ರಶ್ನೆಗೆ ಉತ್ತರ ಇಲ್ಲಿಂದಲೇ ತೊಡಗುತ್ತದೆ. ಹಲವು ಆಯಾಮಗಳ ಈ ಪ್ರಶ್ನೆ ಉತ್ತರಗಳನ್ನು ಕೂಡ ಹಲವು ಆಯಾಮಗಳಲ್ಲೇ ಶೋಧಿಸಬೇಕು. ಈ ಶೋಧದ ಎಲ್ಲ ಬಿಂದುಗಳೂ ಸಮಾಜ ವ್ಯವಸ್ಥೆಯೊಂದಿಗೆ ಸಾಪೇಕ್ಷ ಸಂಬಂಧವನ್ನು ಪಡೆದೇ ಇವೆ. ಈ ಸಂಬಂಧಗಳನ್ನು ಗ್ರಹಿಸುವ ನನ್ನ ಪ್ರಯತ್ನ ಬಹಳ ಹಿಂದಿನದೇ ಇರಬೇಕು. ಬಹುಶಃ 'ಹೆಣ್ಣುಜನ್ಮ'ದಿಂದಾಗಿಯೇ ಪಡೆಯಬೇಕಾಗಿ ಬಂದ ಜೀವನಾನುಭವಗಳ ಪ್ರೇರಣೆಯಿಂದ ಶುರುವಾದದ್ದು. ನನ್ನ ಗ್ರಹಿಕೆಯನ್ನು ಸಮಾನರಲ್ಲಿ ಹಂಚಿಕೊಳ್ಳುವ ಆಸಕ್ತಿಯಿಂದ ಬರೆದ ಕೆಲವು ಲೇಖನಗಳನ್ನು ಇಲ್ಲಿ ಕೂಡಿಸಿದ್ದೇನೆ.

ಈ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಬೇಕೆಂಬ ನನ್ನ ಪ್ರಯತ್ನವನ್ನು ಸಾಧ್ಯವಾಗಿಸಿದವರು ಹಿರಿಯ ಗೆಳತಿ ಡಾ. ವಿಜಯಾ ಅವರು. ನನಗೆ ಅವರು ಒತ್ತಾಸೆಯಾಗಿ ನಿಂತ ನಿರಾಳ ಸ್ನೇಹದ ಬಗೆಯನ್ನು ಮಾತಿನಲ್ಲಿ ಹಿಡಿದಿಡುವುದು ಹೇಗೆಂದು ತೋಚುತ್ತಿಲ್ಲ. ಇಳಾ ಪ್ರಕಾಶನದ ಡಾ. ವಿಜಯಾ ಅವರನ್ನು, ಅವರ ಮಗ ಕಿರಿಯ ಮಿತ್ರ ಗುರು ಅವರನ್ನು ವಿಶ್ವಾಸದಿಂದ ನೆನೆಯುತ್ತೇನೆ.

ಹಿರಿಯ ವಿದ್ವಾಂಸರೂ, ಸಂವೇದನಾಶೀಲ ಸ್ತ್ರೀವಾದಿ ಚಿಂತಕರೂ ಆದ ಡಾ. ವಿವೇಕ ರೈ ಅವರು ಈ ಲೇಖನಗಳ ಬಗೆಗೆ ವಿಸ್ತೃತವಾದ ಮುನ್ನುಡಿಯನ್ನು ಬರೆದಿದ್ದಾರೆ. ಒಮ್ಮೆ ಅವರು ಕಳಿಸಿದ ಮುನ್ನುಡಿ ಅಂಚೆಯಲ್ಲಿ ಕಳೆದು, ಎರಡನೆಯ ಬಾರಿಗೆ ಬರೆಯಬೇಕಾಗಿ ಬಂದಾಗಲೂ ಬೇಸರಿಸದೆ ಬರೆದು ಕಳಿಸಿದ ಅವರ ವಿಶ್ವಾಸಪೂರ್ಣ ನಡವಳಿಕೆಗೆ ನಾನು ಆಭಾರಿಯಾಗಿದ್ದೇನೆ. ಡಾ. ವಿವೇಕ ರೈ ಅವರಿಗೆ ಲೇಖನಗಳನ್ನು ಕಳಿಸಿದ ನಂತರದಲ್ಲಿ ನಮ್ಮ ಮಹಿಳಾ ಅಧ್ಯಯನ ವಿಭಾಗವು ಹೊರತರುತ್ತಿರುವ 'ಮಹಿಳಾ ಅಧ್ಯಯನ' ಪತ್ರಿಕೆಯ

ಎರಡು ಸಂಚಿಕೆಗಳಿಗಾಗಿ 'ಭಾರತೀಯ ಮಹಿಳೆಯರ ಇಂದಿನ ಸ್ಥಿತಿಗತಿ' ಮತ್ತು 'ಮೋಲೆ ಮೂಡಿ ಬಂದರೆ ಹೆಣ್ಣೆಂಬರು' ಎಂಬ ಎರಡು ಲೇಖನಗಳನ್ನು ಬರೆದೆ. ಅವೆರಡನ್ನೂ ಈ ಸಂಕಲನದಲ್ಲಿ ಸೇರಿಸಿದ್ದೇನೆ.

ಇಲ್ಲಿನ ಕೆಲವು ಲೇಖನಗಳನ್ನು ಇತ್ತೀಚಿನ ತನ್ನ ಕೆಲವು ಸಂಚಿಕೆಗಳಲ್ಲಿ ಪ್ರಕಟಿಸಿದ 'ಮಾನಸ' ಪತ್ರಿಕೆಗೆ ಧನ್ಯವಾದಗಳು.

ಅಚ್ಚುಕಟ್ಟಾಗಿ ಅಕ್ಷರ ಜೋಡಣೆ ಮಾಡಿಕೊಟ್ಟ ಯಾಜಿ ಗ್ರಾಫಿಕ್ಸ್, ಹೊಸಪೇಟೆ ಇವರಿಗೆ, ಮುದ್ರಣ ವಿನ್ಯಾಸದಲ್ಲಿ ನೆರವಾದ ಶ್ರೀ ಸುಜ್ಞಾನಮೂರ್ತಿಯವರಿಗೆ ನನ್ನ ಸ್ನೇಹಪೂರ್ಣ ವಂದನೆಗಳು. ಮುಖಪುಟ ವಿನ್ಯಾಸ ಮಾಡಿದ ಕಲಾವಿದ ಶ್ರೀ ಯು. ಟಿ. ಸುರೇಶ್ ಅವರಿಗೆ ವಂದನೆಗಳು.

ಇಲ್ಲಿನ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುವ, ವಿಸ್ತರಿಸುವ ಸಮಾನ ಮನಸ್ಕರ ಪ್ರತಿಕ್ರಿಯೆಗಳಿಗಾಗಿ ಕಾತರಳಾಗಿದ್ದೇನೆ

ಎಚ್. ಎಸ್. ಶ್ರೀಮತಿ

ಪರಿವಿಡಿ

ಸ್ತ್ರೀವಾದಿ ಚಿಂತನೆ : ಕೆಲವು ಪ್ರಶ್ನೆಗಳು, ಸಂದೇಹಗಳು

ಇಂದು ಸ್ತ್ರೀವಾದಿ ಚಿಂತನೆಯಲ್ಲಿ ತೊಡಗುವವರನ್ನು ನಿರ್ಲಕ್ಷ್ಯವಾಗಿ ಪಕ್ಕಕ್ಕೆ ಸರಿಸುವ, ಅಥವಾ ಅಸಹಜ ಮತ್ತು ಅಸಂಗತವಾದ ವಿವಾದಗಳನ್ನೆಬ್ಬಿಸುವವರೆಂದು ಆರೋಪಿಸಿ ಗೇಲಿ ಎಬ್ಬಿಸುವ, ಇನ್ನೂ ಮುಂದುವರೆದು, ಈ ಚಿಂತನೆಯ ಸೋಗಿನಲ್ಲಿ ಇದನ್ನು ಸ್ವಾರ್ಥ ಸಾಧನೆಯ ರಾಜಕೀಯ ಅಸ್ತ್ರವಾಗಿ ಬಳಸುವ ಪ್ರವೃತ್ತಿ ಬಹಳವಾಗಿ ಕಾಣಬರುತ್ತದೆ. ಒಂದು ವೇಳೆ ಈ ಬಗ್ಗೆ ಗಂಭೀರವಾದ ಚರ್ಚೆಗಳಲ್ಲಿ ತೊಡಗಿದಂತೆ ಕಂಡುಬಂದರೂ ಅವುಗಳಲ್ಲಿ ಬಹುಪಾಲಿನವು ತೀರಾ ಅಕಾಡಮಿಕ್ ಆಗಿ, ಚರ್ಚೆಗಾಗಿ ಚರ್ಚೆ ಎಂಬಂತೆ ಮಾತ್ರ ಇರುತ್ತವೆ. ಹಾಗಾದರೆ, ಮಹಿಳೆಯರ ಸಮಸ್ಯೆ ತೀರಾ ಗಂಭೀರವಾದುದೇ ಆಗಿರುವಾಗಲೂ, ಅದರ ಬಗೆಗಿನ ಚಿಂತನೆ ಮಾತ್ರ ಅಷ್ಟು ಗಂಭೀರವಾಗಿ ಬೆಳೆಯಲು ತೊಡಕಾಗಿರುವ ಅಂಶವಾದರೂ ಯಾವುದು ಎಂಬುದನ್ನು ತಿಳಿಯಬೇಕಾದರೆ, ಈ ಚಿಂತನೆಯ ಬಗೆಗೆ ಪದೇ ಪದೇ ಏಳುವ ಪ್ರಶ್ನೆಗಳು, ಸಂದೇಹಗಳು ಯಾವ ರೀತಿಯವಾಗಿರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯಕ. ಏಕೆಂದರೆ ಇಂಥ ಪ್ರಶ್ನೆಗಳಲ್ಲಿ ಬಹುಪಾಲಿನವು ಸ್ತ್ರೀವಾದಿ ಚಿಂತನೆಯ ಅಗತ್ಯದ ಬಗ್ಗೆಯೇ ಎತ್ತಿರುವ ಆಕ್ಷೇಪಗಳಂತೆ ತೋರುತ್ತವೆ. ಮಹಿಳೆಯು ಸಮಾಜ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನೇ ಅಲ್ಲಗಳೆಯುವಂಥವುಗಳಾಗಿವೆ. ಸ್ತ್ರೀವಾದಿ ಚಿಂತನೆ ಎಂಬುದು, ಇಲ್ಲದ ಸಮಸ್ಯೆಯೊಂದನ್ನು ಹುಟ್ಟುಹಾಕಿರುವುದರ ಮೂಲಕ ಸಮಾಜ ವ್ಯವಸ್ಥೆಗೆ ಭಂಗ ತರುವಂತಹುದಾಗಿದೆ ಎಂದು ಆರೋಪಿಸಿದಂತೆಯೂ ತೋರುತ್ತವೆ. ಆದರೆ, ವಾಸ್ತವದಲ್ಲಿ ಸಮಾಜದಲ್ಲಿ ಹೆಣ್ಣಿನ ಸ್ಥಾನ ಗಂಡಿನ ಸ್ಥಾನಕ್ಕೆ ಖಂಡಿತಾ ಸಮಾನವಾಗಿಲ್ಲ. ಶತ ಶತಮಾನಗಳಿಂದಲೂ ಸಮಾಜ ವ್ಯವಸ್ಥೆ ಎಂಬುದು ಪುರುಷನ ಅಧೀನದಲ್ಲಿಯೇ ಇರುವುದರಿಂದ, ಇಲ್ಲಿನ ಎಲ್ಲ ಆಗು ಹೋಗುಗಳ ಸಂಪೂರ್ಣ ನಿಯಂತ್ರಣ ಅವನ ಕೈಯಲ್ಲೇ ಭದ್ರವಾಗಿದೆ. ಪ್ರತಿಯೊಂದನ್ನೂ ತನಗೆ ಅನುಕೂಲವಾಗುವಂತೆ ನಿರ್ವಚಿಸುವ, ವ್ಯಾಖ್ಯಾನಿಸುವ ಹಾಗೂ ನಿರ್ದೇಶಿಸುವ ಅವಕಾಶಗಳು ಅವನಿಗೆ ದಕ್ಕಿವೆ. ಈ ಪುರುಷ ಚಿಂತನೆ ಮಹಿಳೆಯನ್ನು ತನ್ನ ಸೇವೆಗೆ ಮೀಸಲಾದ ಪರಿಕರ ಎಂಬಂತೆ ನಿರ್ವಚಿಸುತ್ತಾ, ವ್ಯಾಖ್ಯಾನಿಸುತ್ತಾ, ನಿರ್ದೇಶಿಸುತ್ತಾ ಬಂದಿದೆ. ಸಂದರ್ಭಗಳ ಒತ್ತಡದಲ್ಲಿ ಮಹಿಳೆಯೂ ಇದನ್ನು ಒಪ್ಪಿಕೊಂಡೇ ಬಾಳುತ್ತಾ ಬಂದಿದ್ದಾಳೆಂಬಂತೆ ಮೇಲು ನೋಟಕ್ಕೆ

ಕಾಣುತ್ತವೆಯಾದರೂ, ಅವಳ ಪ್ರತಿಕ್ರಿಯೆಯ ಮುಖ ಇದೊಂದೇ ಅಲ್ಲ. ಪುರುಷ ತನ್ನನ್ನು ನಿರ್ವಚಿಸಿ ವ್ಯಾಖ್ಯಾನಿಸುವ ಬಗೆಗೂ, ತನ್ನ ಮೇಲೆ ಅಧಿಕಾರಯುತವಾಗಿ ಹೇರುವ ನಿರ್ದೇಶನಗಳ ಬಗೆಗೂ ಅವಳು ಎಂದಿನಿಂದಲೂ ಪ್ರತಿಕ್ರಿಯಿಸುತ್ತಲೇ ಬಂದಿದ್ದಾಳೆ. ಇಂತಹ ಪ್ರತಿಕ್ರಿಯೆಗಳ ದಾಖಲೆಗಳನ್ನು ಶಾಬ್ದಿಕ ಹಾಗೂ ಅಶಾಬ್ದಿಕ ನೆಲೆಗಳೆರಡರಲ್ಲೂ ಗುರುತಿಸ ಬಹುದು.

ಹೆಣ್ಣಿನ ಇಡೀ ಜೀವಮಾನವನ್ನು ಪುರುಷ ಚಿಂತನೆ ಒತ್ತೆ ಇಟ್ಟುಕೊಂಡಿದೆ ಎಂದಾಗ ಹೆಣ್ಣಿಗೆ ಈ ಬಗ್ಗೆ ಅಸಹನೆ ಸಹಜವೇ. ಈ ಅಸಹನೆಯನ್ನು ವ್ಯಕ್ತಪಡಿಸದೆ ಪುರುಷನ ಅಧಿಪತ್ಯವನ್ನೇ ಒಪ್ಪಿ ಬಂದಿದ್ದಾಳೆ ಎಂದರೆ ಅಸಹಾಯಕತೆಯೊಂದೇ ಅದಕ್ಕಿರಬಹುದಾದ ಕಾರಣ. ಹಾಗಾಗಿಯೇ, ಹೆಣ್ಣಿಗೆ ಒಂದಿಷ್ಟು ಅವಕಾಶ ದೊರೆತ ಸಂದರ್ಭಗಳಲ್ಲೆಲ್ಲ ಅವಳು ತಪ್ಪದೆ ತನ್ನ ಪ್ರತಿಭಟನೆಯನ್ನು ದಾಖಲುಗೊಳಿಸಲು ಪ್ರಯತ್ನಿಸಿದ್ದಾಳೆ. ಪುರುಷ ಕಾಲ ಕಾಲಕ್ಕೆ ಅವುಗಳನ್ನು ಹತ್ತಿಕ್ಕಲು ದಾರಿಗಳನ್ನು ಹುಡುಕುತ್ತಲೇ ಇರುತ್ತಾನೆಂಬುದೂ ಅಷ್ಟೇ ಸಹಜ. ಇದರ ಮೊದಲ ಹೆಜ್ಜೆ ಎಂದರೆ ಅವನು ಸಂಪೂರ್ಣವಾದ ಆರ್ಥಿಕ ಹತೋಟಿಯನ್ನು ಸಾಧಿಸಬೇಕು. ಜೀವನಾಧಾರಕ್ಕೆ ಹೆಣ್ಣು ತನ್ನನ್ನೇ ಸಂಪೂರ್ಣವಾಗಿ ಅವಲಂಬಿಸಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಹುಟ್ಟುಹಾಕಬೇಕು. ಸಮುದಾಯ ವ್ಯವಸ್ಥೆಯಲ್ಲಿ ಸಂಚಾರ ಜೀವನವನ್ನು ನಡೆಸುತ್ತಿದ್ದ ಕಾಲಘಟ್ಟದಲ್ಲಿ ಗಂಡು ಹೆಣ್ಣುಗಳಿಬ್ಬರಿಗೂ ಸಮಾನವಾದ ಮುಕ್ತ ಅವಕಾಶ ಇದ್ದೇ ಇತ್ತು. ಕೃಷಿ ಸಮಾಜಗಳ ವಿಸ್ತರಣೆಯ ಕಾಲಕ್ಕೆ ಒಂದೆಡೆ ನೆಲೆನಿಂತು ಬದುಕುವುದು ಸಹಜವಾಗುತ್ತಿದ್ದಂತೆ, ಅಂದಂದಿನ ಆಹಾರ ಸಂಗ್ರಹಕ್ಕಷ್ಟೇ ಸೀಮಿತವಾಗಿದ್ದ 'ಸಂಪಾದನೆ'ಯೂ ಬೆಳೆಯುತ್ತಾ ಹೋಯಿತು. ಈ ಹೆಚ್ಚುವರಿ 'ಸಂಪಾದನೆ', ಅಂದರೆ ಆರ್ಥಿಕ ಬಲದ ಮೇಲೆ, ಪುರುಷನು ಮಹಿಳೆಗೆ ಅರಿವು ಬರುವ ಮೊದಲೇ, ಹತೋಟಿಯನ್ನು ಸಾಧಿಸಲು ಸಾಧ್ಯವಾಯಿತು.

ಇದಕ್ಕೆ ಬಹು ಮುಖ್ಯವಾದ ಹಿನ್ನೆಲೆಯೊಂದು, ಈ ಮೊದಲೇ ಸಿದ್ಧವಾದಂತಿತ್ತು. ನೆಲೆನಿಂತ ಸಮಾಜವು ಮನೆಯನ್ನು ಕಟ್ಟಿಕೊಂಡಾಗ, ಮನೆಯ ಒಳಗೆ ಹಾಗೂ ಮನೆಯ ಹೊರಗೆ ಎಂಬ ಎರಡು ಕ್ಷೇತ್ರಗಳು ನಿರ್ಮಾಣವಾದವು. ಈ ಎರಡೂ ಕ್ಷೇತ್ರಗಳ ಕಾರ್ಯ ನಿರ್ವಹಣೆಗೆ ಶ್ರಮ ವಿಭಜನೆಯೂ ಅನಿವಾರ್ಯವಾಯಿತು. ಸಹಜವಾಗಿಯೇ ಮಕ್ಕಳು ಮರಿಗಳ ನಿರ್ವಹಣೆ, ಅದರೊಂದಿಗೆ ಮನೆಯೊಳಗಿನ ನಿರ್ವಹಣೆ ಹೆಣ್ಣಿನ ಪಾಲಿಗೆ ಬಂತು. ಮನೆಯ ಹೊರಗಿನ ನಿರ್ವಹಣೆ ಗಂಡಿನ ಪಾಲಾಯಿತು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಈ ಎರಡೂ ದುಡಿಮೆಯ ಕ್ಷೇತ್ರಗಳಲ್ಲಿ ಹಾಕಲಾದ ಶ್ರಮಗಳು ಯಾವ ಬಗೆಯ ಪ್ರತಿಫಲಗಳನ್ನು ನೀಡುತ್ತವೆ ಎಂಬುದು. ಗೃಹ ನಿರ್ವಹಣೆಯ ಶ್ರಮಗಳೆಂದರೆ ಮಕ್ಕಳು ಮರಿಗಳ ಲಾಲನೆ ಪಾಲನೆ, ಮನೆಯವರೆಲ್ಲರ ಯೋಗಕ್ಷೇಮದ ಹೊಣೆ, ಮನೆಯ ಸ್ವಚ್ಛತೆಗಳಿಗೆ ಸಂಬಂಧಿಸಿದಂಥವು. ಅಂದರೆ ಮೂಲಭೂತವಾಗಿ ಸೇವೆಯ ಸ್ವರೂಪದವು.

ಮನೆಯ ಹೊರಗಿನ ಕಾರ್ಯಕ್ಷೇತ್ರದಲ್ಲಿ ದುಡಿಯುವುದು, ಉತ್ಪಾದಿಸುವುದು. ಅಂದರೆ ಮನೆಯೊಳಗೆ ದುಡಿಯುವ ಸದಸ್ಯರಿಗೂ ಒದಗುವಂತೆ ಆಹಾರವನ್ನು ಉತ್ಪಾದಿಸುವುದು. ಇಷ್ಟಾದರೆ, ಮನೆಯ ಒಳಗೆ ದುಡಿಯುವುದೂ ಅಥವಾ ಹೊರಗೆ ದುಡಿಯುವುದೂ ಸಮವೇ ಆಯಿತು. ಆದರೆ ಮನೆಯ ಒಳಗೆ ದುಡಿದ ಮಹಿಳೆಯ ಶ್ರಮ ಕಣ್ಣಿಗೆ ಕಾಣುವಂತಹುದಲ್ಲ, ಕೇವಲ ಅನುಭವಕ್ಕೆ ಬರುವಂತಹುದು. ಆದರೆ ಗಂಡಸು ಶ್ರಮವಹಿಸಿ ಬೆಳೆದು ತಂದ ಆಹಾರ ಕಣ್ಣಿಗೆ ಕಾಣುವ ದಿನ ನಿತ್ಯದ ಅಗತ್ಯ. ಯಾರ ಕೈಯಲ್ಲಿ ಇದು ಇರುತ್ತದೋ ಅವರು ಬಹು ಸುಲಭವಾಗಿ ಅದರ ಅಗತ್ಯ ಅನಿವಾರ್ಯವಾದವರ ಮೇಲೆ ಹತೋಟಿಯನ್ನು ಸಾಧಿಸಬಹುದು. ಅಲ್ಲದೆ, ಹಿಂದಿನಂತೆ ಈಗ ಅಂದಂದಿನ ಆಹಾರವನ್ನು ಅಂದಂದೇ ಸಂಪಾದಿಸಿ ಮುಗಿಸಿಬಿಡಬೇಕೆಂದೇನೂ ಇಲ್ಲ. ಈಗ ಹೆಚ್ಚುವರಿ ಉತ್ಪಾದನೆಯನ್ನು ದಾಸ್ತಾನು ಮಾಡಬಹುದು. ಎಂದರೆ ಅಂದಂದಿನ ಖರ್ಚನ್ನು ತನ್ನ ಇಚ್ಛೆಯ ಮೇರೆಗೆ ನಿಯಂತ್ರಿಸಲೂ ಬಹುದು. ಆಹಾರವನ್ನು ದಾಸ್ತಾನು ಮಾಡಬಹುದಾದ ಅವಕಾಶ ದಿಂದಾಗಿ ಪುರುಷನಿಗೆ ತಾನು ನೀಡುವವನು, ಹೆಣ್ಣು ಅದನ್ನು ಕೈಯೊಡ್ಡಿ ಪಡೆಯ ಬೇಕಾದವಳು ಎಂಬುದನ್ನು ಸ್ಥಾಪಿಸಲು ಸಾಧ್ಯವಾಯಿತು. ಈ ಆರ್ಥಿಕ ಅವಲಂಬನೆಯೇ ಹೆಣ್ಣನ್ನು ಬಂಧನಕ್ಕೆ ಸಿಲುಕಿಸಿದ ಮೊದಲ ಸಾಧನ. ಒಮ್ಮೆ ಬಂಧನಕ್ಕೆ ಸಿಲುಕಿದ ಹೆಣ್ಣು ಹೊರಕ್ಕೆ ಬರುವ ಸಾಧ್ಯತೆಗಳು ಕಾಲಕ್ರಮೇಣ ದುರ್ಬಲಗೊಳ್ಳುತ್ತಲೇ ನಡೆದವು. ಈ ಬಂಧನ ಅವಳನ್ನು ಹೊರಗಿನ ಪ್ರಪಂಚದೊಂದಿಗೆ ಸಂಪರ್ಕವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವಂತೆ ಮಾಡಿತು. ಬಂಧನದಲ್ಲಿದ್ದ ಹೆಣ್ಣಿನ ಮೇಲೆ ಒತ್ತಡಗಳನ್ನು ಹೇರಿ ತನ್ನಿಚ್ಛೆಯಂತೆ ಅವಳನ್ನು ಮಣಿಸಿ ಪಳಗಿಸುವುದು ಪುರುಷನಿಗೆ ಕಷ್ಟದ ಮಾತಾಗಲಿಲ್ಲ. ಆದರೆ ಅಂತರಂಗದಲ್ಲೇ ಅವನಿಗೆ ಭಯವೂ ಇದ್ದಿರಬೇಕು. ತನಗೆ ಒದಗಿದ ಈ ಅನುಕೂಲ ಅವಕಾಶ ಶಾಶ್ವತವಾಗಿ ಉಳಿಯುವಂತೆ ಸದಾ ಹುನ್ನಾರಗಳನ್ನು ಹೊಂಚ ಬೇಕಾದ ಅಗತ್ಯವೂ ಅವನಿಗೆ ಕಂಡಿತು. ತನ್ನ ಬಿಡುಗಡೆಯ ಬಗೆಗೆ ಹೆಣ್ಣು ಎಂದೂ ಚಿಂತಿಸಬಾರದಂತೆ, ಅವಳನ್ನು ಅಜ್ಞಾನದಲ್ಲಿಯೇ ಉಳಿಯುವಂತೆ ಮಾಡುವ ಎಲ್ಲ ಉಪಾಯಗಳನ್ನೂ ಕೈಗೊಂಡ. ಧರ್ಮ, ತತ್ತ್ವಶಾಸ್ತ್ರ, ತರ್ಕಗಳನ್ನೆಲ್ಲಾ ಬಳಸಿ, ಹೆಣ್ಣು ತಾನು ಜನ್ಮ ಜಾತ ವಾಗಿಯೇ ಪುರುಷನಿಗೆ ಅಧೀನವಾಗಿರಬೇಕಾದ ದೈವನಿಯಮಕ್ಕೆ ಬದ್ಧಳಾದವಳು ಎಂದು ನಂಬಿ, ತನ್ನ ಅಸಹಾಯಕತೆಯನ್ನೇ ಸಹಜವೆಂದು ಸ್ವೀಕರಿಸುವಂತೆಯೂ ಮಾಡಿದ.

ಆದರೆ ಈ ಬಂಧನ ಎಷ್ಟೇ ಆದರೂ ಸಹಜ ಸ್ಥಿತಿಯಾಗಿರದೆ, ಪುರುಷನು ರಚಿಸಿದ ಒಂದು ಪರಿಸ್ಥಿತಿಯಾದ್ದರಿಂದ, ಆ ರಚನೆಯೊಳಗಿನಿಂದಲೇ ಹಲವು ಕಾರಣಗಳು ಒದಗಿ ಬಂದು, ಬಿಡುಗಡೆಯ ಅವಕಾಶಗಳು ಕಲ್ಪಿತವಾಗಿ ಬಿಡುತ್ತವೆ. ಈ ಅವಕಾಶಗಳು ಕಂಡಾಗಲೆಲ್ಲಾ ಹೆಣ್ಣು ಆ ಹಾದಿಯಲ್ಲಿ ನಡೆದು ಹೊರಬರಲು ಪ್ರಯತ್ನ ನಡೆಸಿದ್ದಾಳೆ. ಸಹಜವಾಗಿಯೇ ಪುರುಷನೂ ಇಂತಹ ಎಲ್ಲ ಪ್ರಯತ್ನಗಳನ್ನೂ ಹತ್ತಿಕ್ಕಲು ಪ್ರಯತ್ನಿಸುತ್ತಲೇ ಇದ್ದಾನೆ.

ಶತ ಶತಮಾನಗಳಿಂದಲೂ ನಡೆದು ಬಂದಿರುವ ಈ ಸಂಘರ್ಷದಲ್ಲಿ ಹೆಣ್ಣಿಗೆ ದೊರೆತಿರುವ ವಿಜಯದ ಗಳಿಗೆಗಳು ತೀರಾ ಅತ್ಯಲ್ಪ. ಮಹಿಳೆ ಇಂದು ತನ್ನ ಸ್ಥಿತಿಯ ಬಗ್ಗೆ ಜಾಗೃತಳಾಗಿದ್ದಾಳೆ, ಆ ಬಗ್ಗೆ ಚಿಂತನೆ ನಡೆಸಿದ್ದಾಳೆ, ಸಮಸ್ಯೆಯ ಪರಿಹಾರಕ್ಕಾಗಿ ಹೋರಾಡುತ್ತಿದ್ದಾಳೆ ಎಂದರೆ ಇದನ್ನು ಪುರುಷ ಚಿಂತನೆಯು ಪ್ರತಿರೋಧಿಸುತ್ತದೆ ಎಂಬುದು ಸಹಜವೇ. ಮಹಿಳೆಯು ಈ ಪ್ರಮಾಣದಲ್ಲಿ ಜಾಗೃತಳಾಗಿ ಚಿಂತನೆಗೆ ತೊಡಗಲು ಅವಳಿಗೆ ಚರಿತ್ರೆಯೇ ಅವಕಾಶವನ್ನು ಒದಗಿಸಿತು. ಪುರುಷನು ತನ್ನ ಅಗತ್ಯಕ್ಕಾಗಿಯೇ ಹೆಣ್ಣು ಮನೆಯಿಂದ ಹೊರಗೆ ಬರಲು ಅವಕಾಶ ಕಲ್ಪಿಸಿದ. ಅದೇನೇ ಇರಲಿ. ಅದಂತೂ ಮಹಿಳೆಯು ಜಾಗೃತಳಾಗಲು, ಧೈರ್ಯದಿಂದ ವರ್ತಿಸಲು, ವಿವೇಚನೆಯಿಂದ ಚಿಂತಿಸಲು ಕಾರಣವಾಯಿತು. ಬಿಡುಗಡೆಯ ದಾರಿಗಳು ಅವಳಿಗೆ ಈಗ ಸ್ಪಷ್ಟವಾಗಿ ಕಾಣತೊಡಗಿವೆ. ಅಲ್ಲದೆ ಈ ವಿಚಾರದಲ್ಲಿ ಮಹಿಳೆ ಸಂಘಟಿತಳೂ ಆಗುತ್ತಿದ್ದಾಳೆ. ಈ ನಡೆಯಲ್ಲಿ ಕೆಲವೊಮ್ಮೆ ದೌರ್ಬಲ್ಯಗಳು ಕಂಡುಬಂದರೂ ಒಟ್ಟಾರೆಯಾಗಿ ದೃಢತೆಯನ್ನೂ ಸಾಧಿಸಿದ್ದಾಳೆ. ಇಂತಹ ಸಂದರ್ಭದಲ್ಲಿ ಪುರುಷ ಚಿಂತನೆಯ ಸಾರ್ವಭೌಮತ್ವ ತಲ್ಲಣಗೊಳ್ಳುತ್ತಿದ್ದರೆ ಆಶ್ಚರ್ಯವೇನಿಲ್ಲ. ತನ್ನ ಪ್ರಭುತ್ವಕ್ಕೆ ಒಡ್ಡಿರುವ ಈ ಸವಾಲನ್ನು ಎದುರಿಸುವುದು ಸುಲಭವೆನಿಸುತ್ತಿಲ್ಲ. ಹತೋಟಿ ತಪ್ಪುತ್ತಿದೆ. ಈಗ ಉಳಿದಿರುವ ದಾರಿಯೆಂದರೆ ಅವಳ ಜಾಗೃತ ಸ್ಥಿತಿಯ ಮೇಲೆ ಧಾಳಿಮಾಡಿ ಅದು ಮುಂಚಿನ ನಿದ್ರಾಸ್ಥಿತಿಗೆ ಜಾರುವಂತೆ ಮಾಡಬೇಕು. ಇದು ಸುಲಭವಲ್ಲ.

ಹೆಣ್ಣು ಮೊದಲಿಗೆ ತಾಯಿ ಎಂಬುದು ನಿಸರ್ಗಸಹಜವಾದ ಸಂಗತಿ. ಮಾನವ ಸಂಬಂಧಗಳ ಬಗೆಗೆ ಅವಳಿಗಿರುವ ತೀವ್ರ ಕಾಳಜಿ, ಆ ಬಗೆಗಿನ ಅವಳ ಸೂಕ್ಷ್ಮ ಸಂವೇದನೆ ಪುರುಷನಿಗೆ ಇರುವುದು ಸಹಜವೇನಲ್ಲ. ಅವಳ ಚಿಂತನೆಯೂ, ಪುರುಷನ ಚಿಂತನೆಯಂತೆ ವ್ಯವಹಾರ ಪ್ರಧಾನವಾದ ಬುದ್ಧಿ ಪ್ರಧಾನವಾದ ಚಿಂತನೆಯಲ್ಲ. ಬದಲಿಗೆ ಭಾವ ಪ್ರಧಾನವಾದದ್ದು, ಪುರುಷ ಚಿಂತನೆ ಈ ಅಂಶದ ಬೆನ್ನು ಹಿಡಿದು ಅವಳ ಚಿಂತನೆಯ ದಿಕ್ಕು ತಪ್ಪಿಸುವ ಹುನ್ನಾರಗಳನ್ನು ರೂಪಿಸುತ್ತಿದೆ.

ಸ್ತ್ರೀವಾದಿ ಚಿಂತನೆ ಎಂಬುದಕ್ಕೆ ಸ್ವಲ್ಪ ಗಟ್ಟಿ ನೆಲೆ ದೊರೆಯುತ್ತಿರುವುದೇ ಈಗೀಗ. ತೋರಿಕೆಯ ಗಂಭೀರ ಪ್ರಶ್ನೆಗಳನ್ನೂ, ಸಂದೇಹಗಳನ್ನೂ ಈ ಚಿಂತನೆಗೆ ಸವಾಲಾಗಿ ನಿಲ್ಲಿಸುವ ಪ್ರಯತ್ನಗಳು ನಡೆಯುತ್ತಿವೆ. ವಿಶೇಷವೆಂದರೆ, ಪುರುಷ ಚಿಂತನೆಯು ಎತ್ತುವ ಈ ಪ್ರಶ್ನೆಗಳನ್ನು ಅದೇ ಪುರುಷ ಚಿಂತನೆಯೇ ಉತ್ತರಿಸುವ ನಾಟಕವನ್ನೂ ಆಡುತ್ತದೆ. ಸ್ತ್ರೀವಾದಿ ಚಿಂತನೆ ಎಂಬುದು ಹೇಗೆ ನಿರುಪಯುಕ್ತ ಎಂದು ನಿರೂಪಿಸುವಲ್ಲಿ, ಮನೆ ಮಕ್ಕಳು ಸಂಬಂಧಗಳು ಎಂಬ ಬಗ್ಗೆ ಹೆಣ್ಣಿಗೆ ಇರುವ ಸೂಕ್ಷ್ಮ ಸಂವೇದನೆಗಳನ್ನು ದೌರ್ಬಲ್ಯಗಳೆಂಬಂತೆ ಬಳಸಿಕೊಳ್ಳಲು ನೋಡುತ್ತದೆ. ಈ ಅಂಶದ ಬಗೆಗೆ ಸ್ತ್ರೀವಾದಿ ಚಿಂತಕರು ಹೆಚ್ಚಿನ ಜಾಗ್ರತೆ ವಹಿಸುವುದು ಬಹಳ ಮುಖ್ಯ. ಅಂದರೆ ಮಾತ್ರವೇ ಈಗೀಗಷ್ಟೇ ದೃಢಗೊಳ್ಳುತ್ತಿರುವ ಮಹಿಳೆಯ ಹೋರಾಟಕ್ಕೆ ಒಂದು ಸ್ಪಷ್ಟವಾದ ದಿಕ್ಕು ಗುರಿಗಳು ದೊರೆಯುವುದು ಸಾಧ್ಯ.

ಹಾಗಾಗಿ ಸ್ತ್ರೀವಾದಿ ಚಿಂತನೆಯ ಬಗೆಗೆ ಎತ್ತಲಾಗುವ ಇಂತಹ ಹಲವು ಪ್ರಶ್ನೆ ಸಂದೇಹಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು, ಆ ಬಗ್ಗೆ ಸೂಕ್ತವಾದ ಉತ್ತರಗಳನ್ನು ಕಂಡುಕೊಳ್ಳುವುದು ಈ ಚಿಂತನೆಯು ದಿಕ್ಕು ತಪ್ಪದೆ ಮುಂದುವರೆಯಲು ಅಗತ್ಯ.

ಮೊದಲಿಗೆ ಸ್ತ್ರೀವಾದಿ ಚಿಂತನೆಗಳ ಬಗೆಗೆ ಪ್ರಶ್ನೆಗಳನ್ನೂ ಸಂದೇಹಗಳನ್ನು ಎತ್ತುವ ಮನೋಭಾವದ ಹಿನ್ನೆಲೆಯನ್ನು ವಿವರಿಸಿಕೊಂಡ ಮೇಲೆ, ಈ ಪ್ರಶ್ನೆ ಹಾಗೂ ಸಂದೇಹಗಳ ಸ್ವರೂಪವನ್ನು ಗಮನಿಸಿದರೆ, ಈವರೆಗೆ ವಿವರಿಸಿಕೊಂಡ ಹಿನ್ನೆಲೆ ಆಧಾರರಹಿತವೇನೂ ಅಲ್ಲವೆಂಬುದು ಸ್ಪಷ್ಟಗೊಳ್ಳುತ್ತದೆ. ಸ್ತ್ರೀವಾದಿ ಚಿಂತನೆಯ ಬಗೆಗೆ ವ್ಯವಸ್ಥಿತವಾಗಿ ಅಪಪ್ರಚಾರ ನಡೆದುಕೊಂಡೇ ಬಂದಿದೆ ಎಂಬುದು ಒಂದಿಷ್ಟು ಕಣ್ಣುಬಿಟ್ಟು ನೋಡಿದರೂ ಅರ್ಥವಾಗುವ ಸತ್ಯ. ಸ್ತ್ರೀವಾದಿಗಳೆಂದರೆ ಪುರುಷ ದ್ವೇಷಿಗಳು, ಕುಟುಂಬ ವಿನಾಶಕರು, ಸ್ತ್ರೀತ್ವವನ್ನು ನಿರಾಕರಿಸುವವರು ಎಂದು ನಡೆಸುವ ಅಪಪ್ರಚಾರವನ್ನು ಒಂದು ಕಡೆ, ವಾಸ್ತವವಾಗಿ ಸ್ತ್ರೀಯ ಸಹಜ ಸ್ವರೂಪ ಇರಬೇಕಾದ್ದು ಹೀಗೆ ಎಂದು ತಮಗೆ ಬೇಕಾದಂತೆ ಪ್ರತಿಪಾದಿಸುತ್ತಾ ನಂಬಿಸಲು ಯತ್ನಿಸುವುದನ್ನು ಮತ್ತೊಂದು ಕಡೆ, ಪ್ರಧಾನ ಗುರಿಯಾಗಿ ಇಟ್ಟುಕೊಂಡು, ಮಾಧ್ಯಮಗಳು ನಿರಂತರವಾಗಿ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿವೆ. ದೃಶ್ಯ, ಶ್ರವ್ಯ, ಕಲೆ, ಸಾಹಿತ್ಯಗಳು ಮೊದಲಾಗಿ ಸಮಾಜದ ಎಲ್ಲ ಸ್ತರಗಳಲ್ಲೂ ಇಂಥಾ ಕಾರ್ಯಾಚರಣೆ ಜಾರಿಯಲ್ಲಿದೆ. ಇವೆಲ್ಲವೂ ಬಹುತೇಕ ಪುರುಷರ ನಿಯಂತ್ರಣದಲ್ಲಿ ಇರುವುದರ ಪರಿಣಾಮವಿದು. ಸ್ತ್ರೀವಾದಿಗಳು ಇಲ್ಲ ಸಲ್ಲದ ಗಲಭೆ ಎಬ್ಬಿಸುತ್ತಿದ್ದಾರಷ್ಟೇ, ಶತಮಾನಗಳಿಂದ ಸ್ತ್ರೀಯರು ಈ ಸಮಾಜದಲ್ಲೇ ಶಾಂತವಾಗಿ ಬದುಕಿ ಬರಲಿಲ್ಲವೇ, ಆಸೆಬುರುಕರಾದ ಮಧ್ಯಮ ವರ್ಗದ ಮಹಿಳೆಯರು ಮತ್ತು ಪಾಶ್ಚಾತ್ಯ ನಾಗರಿಕತೆಯ ಪ್ರಭಾವಕ್ಕೆ ಸಿಲುಕಿರುವ ಬೇರಿಲ್ಲದ ಹೆಣ್ಣುಗಳು ಇಂತಹ ಸಮಾಜದ್ರೋಹಿ ಚಿಂತನೆಗಳನ್ನು ಹರಡುತ್ತಿದ್ದಾರಷ್ಟೇ ..... ಎಂಬಂತಹ ಪ್ರಚಾರಗಳಲ್ಲಿ ಹಲವು ಬುದ್ಧಿಜೀವಿಗಳೂ ತೊಡಗಿದ್ದಾರೆ. ಮಹಿಳೆಯ ಹಕ್ಕು, ಸ್ವಾತಂತ್ರ್ಯ ಹಾಗೂ ಪ್ರಗತಿಯನ್ನು ಪುರುಷನ ಅಸ್ತಿತ್ವದ ಸವಾಲುಗಳೆಂದು ಪರಿಭಾವಿಸುವ ಪುರುಷ ಚಿಂತನೆಯ ಪರಿಣಾಮವಿದು. ಕುತಂತ್ರದ ಉದ್ದೇಶಗಳಿಗೆ ಸಮಾಧಾನ ಹೇಳುವ ಪ್ರಯತ್ನ ಅನಗತ್ಯ. ಆದರೆ, ದೀರ್ಘಕಾಲದ ಪುರುಷ ಚಿಂತನೆಯ ಸಮಾಜದಲ್ಲಿ ಬದುಕುತ್ತಾ ಅಪ್ರಜ್ಞಾಪೂರ್ವಕವಾಗಿ ಈ ಚಿಂತನೆಯ ಪ್ರಭಾವಗಳಿಗೆ ಸಿಲುಕಿ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಕಷ್ಟ ಪಡುವ ಸ್ತ್ರೀ ಪುರುಷರಿಬ್ಬರಿಗೂ, ಸ್ತ್ರೀವಾದಿ ಚಿಂತನೆಯ ಬಗೆಗಿನ ಪ್ರಶ್ನೆ ಹಾಗೂ ಸಂದೇಹಗಳನ್ನು ಕುರಿತ ಚರ್ಚೆ ಉಪಯುಕ್ತವಾಗಬಹುದು.

ಸ್ತ್ರೀವಾದಿ ಚಿಂತನೆ ಎಂದರೇನು?

ಎಲ್ಲ ಕಾಲದ ಎಲ್ಲ ಸ್ತ್ರೀಯರಿಗೆ ಅನ್ವಯಿಸಿದಂತೆ ಏಕಸೂತ್ರದಲ್ಲಿ ವಿವರಿಸಬಲ್ಲ 'ಸ್ತ್ರೀವಾದಿ ಚಿಂತನೆ' ಎಂಬುದೊಂದು ಇಲ್ಲ. ಇದನ್ನು ಕಾಲದೇಶಗಳ ಅಗತ್ಯಗಳಿಗೆ ಅನುಗುಣವಾಗಿ ನಿರ್ವಚಿಸಿಕೊಳ್ಳಬೇಕಾದ ಅಗತ್ಯವಿದೆ. ಜಾತಿ, ಜನಾಂಗ, ವರ್ಗ, ಲಿಂಗ ಮೊದಲಾದ

ಹಲವು ನೆಲೆಗಳಲ್ಲಿ ಶೋಷಣೆರಹಿತವಾದ ಸಮಾಜ ಬೇಕೆಂಬುದು ಅಪೇಕ್ಷಣೀಯ. ಆದರೆ ಇಂಥದೊಂದು ಸಮಾಜ ತನ್ನಷ್ಟಕ್ಕೇ ಸಾಧ್ಯವಾಗಬಲ್ಲದೆಂಬುದು ವಾಸ್ತವವಲ್ಲ. ದುರ್ಬಲರನ್ನು ಶೋಷಿಸುವುದು ಪ್ರಬಲರಿಗೆ ಸಹಜ. ಹಾಗೆಯೇ ಈ ಶೋಷಕ ವರ್ಗದ ವಿರುದ್ಧ ಶೋಷಿತ ವರ್ಗದ ಹೋರಾಟವೂ ನಿರಂತರವಾದುದು. ಪ್ರತಿಯೊಂದು ಹೋರಾಟವೂ ಅಂದಂದಿನ ಅಗತ್ಯಗಳಿಗೆ ತಕ್ಕಂತೆ, ದೊರೆತ ಅವಕಾಶಗಳಲ್ಲಿ ತನ್ನ ಗತಿ ವಿಧಾನಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರಲೇಬೇಕಾಗುತ್ತದೆ. ಈ ಅರ್ಥದಲ್ಲಿ ಪ್ರಸ್ತುತದಲ್ಲಿ 'ಸ್ತ್ರೀವಾದಿ ಚಿಂತನೆ' ಎಂಬುದನ್ನು 'ಕುಟುಂಬದ ಒಳಗಾಗಾಲೀ, ಹೊರಗಾಗಲೀ ಸಮಾಜವು ಸ್ತ್ರೀಯ ಮೇಲೆ ನಡೆಸುವ ದಬ್ಬಾಳಿಕೆ ಹಾಗೂ ಶೋಷಣೆಯ ಸ್ವರೂಪವನ್ನು ಅರ್ಥಮಾಡಿಕೊಂಡು, ಅಂತಹ ಪರಿಸ್ಥಿತಿಯ ನಿವಾರಣೆಗಾಗಿ ಪ್ರಜ್ಞಾಪೂರ್ವಕವಾಗಿ ನಡೆಸುವ ಚಿಂತನೆ ಹಾಗೂ ಚಟುವಟಿಕೆಗಳು' ಎಂದು ನಿರ್ವಚಿಸಿಕೊಳ್ಳಬಹುದು. ಅಂದರೆ, ಈ ಚಿಂತನೆ ವೇದಿಕೆಗಳಿಗೆ ಸೀಮಿತವಾದ ಬೌದ್ಧಿಕ ಚರ್ಚೆಯಲ್ಲ, ಸ್ತ್ರೀಯರು ಮಾತ್ರವೇ ತೊಡಗಿಕೊಳ್ಳಬೇಕಾದ ಚಟುವಟಿಕೆಯಲ್ಲ, ಕಾಲ ದೇಶಾತೀತವಾದ ಏಕರೂಪ ನಿಯಮಗಳನ್ನು ಹೊಂದಿರುವ ಸಿದ್ಧಾಂತವೂ ಅಲ್ಲ ಎಂದು ಸಹ ವಿವರಿಸಿಕೊಳ್ಳಬಹುದು.

ಈ ಬಗೆಯ ಚಿಂತನೆಯ ಫಲ ಸುಸಂಘಟಿತ ಕಾರ್ಯಕ್ರಮಗಳಲ್ಲಿ ಮಾತ್ರವೇ ಕಾಣಬೇಕೆಂದೇನೂ ಇಲ್ಲ. ವೈಯಕ್ತಿಕ ನಿಲುವುಗಳಲ್ಲಿ ವ್ಯಕ್ತಗೊಂಡಾಗಲೂ ಮಹತ್ವದವೇ ಎನಿಸುತ್ತವೆ. ಉದಾಹರಣೆಗೆ ಗೃಹಿಣಿಯೊಬ್ಬಳು ತನ್ನ ಮನೆಯಲ್ಲಿ ತನ್ನ ಅಸ್ತಿತ್ವ ಅಧೀನ ಸ್ತರದ್ದಲ್ಲ, ಸಮಾನ ನೆಲೆಯದು ಎಂಬುದನ್ನು ನಿರೂಪಿಸಲು ಪ್ರಜ್ಞಾಪೂರ್ವಕವಾಗಿ ನಡೆಸುವ ಪ್ರಯತ್ನಕ್ಕೆ ತನ್ನದೇ ಮಹತ್ವ ಖಂಡಿತಾ ಇದೆ. ತನ್ನ ಕುಟುಂಬದಲ್ಲಿ ತನ್ನ ಇರವನ್ನು ಸ್ಪಷ್ಟಪಡಿಸುವ ಈ ಪ್ರಯತ್ನದಲ್ಲಿ ಆಕೆ ಪುರುಷ ದ್ವೇಷಿಯಾಗಿಯೋ, ಕುಟುಂಬ ನಾಶಿನಿಯಾಗಿಯೋ ನಡೆದುಕೊಳ್ಳಬೇಕಾಗುತ್ತದೆಂದೇನಿಲ್ಲ. ತನ್ನ ಸ್ವಾಭಿಮಾನಕ್ಕೆ ಕುಂದುಂಟಾಗದಂತೆ, ಅದರೊಂದಿಗೇ ಕುಟುಂಬದ ಸೌಹಾರ್ದ ಹಾಳಾಗದಂತೆ ಕಾಯ್ದುಕೊಳ್ಳುವ ಅವಳ ಪ್ರಯತ್ನ ಸುಸಂಗತವಾದ ಸ್ತ್ರೀವಾದಿ ಚಿಂತನೆಯೇ. ಸುಸಂಘಟಿತ ಪ್ರಯತ್ನಗಳು ಕೆಲವು ಸಾರ್ವತ್ರಿಕ ಫಲಿತಾಂಶಗಳನ್ನು ನೀಡುತ್ತವೆ ಎಂಬುದು ನಿಜವಾದರೂ ಇವು ಮಾತ್ರವೇ ಸೂಕ್ತವಾದ ಹೋರಾಟಗಳು ಎನ್ನುವಂತಿಲ್ಲ. ವೈಯಕ್ತಿಕವಾಗಿ ಅಥವಾ ನಿರ್ದಿಷ್ಟ ವ್ಯಕ್ತಿಗಳ ಪರವಾಗಿ ಅನ್ಯಾಯಗಳನ್ನು ಎದುರಿಸಿದರೂ ಅಷ್ಟರ ಮಟ್ಟಿಗೆ ಅದೊಂದು ಸಾಧನೆಯೇ ಸರಿ. ಆದ್ದರಿಂದ ಮಹಿಳೆಯರ ಸಮಸ್ಯೆಗಳ ನಿವಾರಣೆಗಾಗಿ ನಡೆಸುವ ಎಲ್ಲ ಬಗೆಯ ಚಿಂತನೆ, ಚಟುವಟಿಕೆಗಳನ್ನೂ 'ಸ್ತ್ರೀವಾದ' ಎಂದು ಹೆಸರಿಸಬಹುದು. ಮೊದಮೊದಲಿಗೆ ಸಾರ್ವಜನಿಕ ಸ್ಥಾನಮಾನಗಳಿಗಾಗಿ ಆರಂಭವಾದ ಇಂತಹ ಹೋರಾಟಗಳು ಇಂದು ಮಹಿಳೆಯ ಸಮಗ್ರ ಪ್ರಗತಿಯನ್ನು ಗುರಿಯಾಗಿ ಹೊಂದಿವೆ. ಕಾಯಿದೆ, ಕಾನೂನು, ಸಂವಿಧಾನ, ಶಿಕ್ಷಣ, ಉದ್ಯೋಗ ಮೊದಲಾದ ಸಾರ್ವಜನಿಕ ಕ್ಷೇತ್ರಗಳಲ್ಲಿ

ಮಹಿಳೆಯ ಹಕ್ಕುಗಳನ್ನು ಪಡೆಯಲು ನಡೆಸಿದ ಸ್ತ್ರೀವಾದಿ ಚಿಂತನೆಗಳು, ಪುರುಷ ಚಿಂತನೆಯು ಇಂತಹ ವ್ಯವಸ್ಥೆಗಳ ಚೌಕಟ್ಟುಗಳನ್ನು ರೂಪಿಸುವಾಗಲೇ ಯಾವ ಬಗೆಯ ಹುನ್ನಾರಗಳನ್ನು ನಡೆಸಿವೆ ಎಂಬುದನ್ನು ಗುರುತಿಸಿವೆ. ಇಂತಹ ಹಲವು ವಿಸ್ತೃತ ಅಧ್ಯಯನಗಳು ನಡೆದಿವೆ. ಪುರುಷ ಚಿಂತನೆಯು ಸಂವಿಧಾನ, ಕಾನೂನು, ಕಾಯಿದೆ, ಶಿಕ್ಷಣ, ಉದ್ಯೋಗವೇ ಮೊದಲಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಮಾತ್ರವೇ ಅಲ್ಲದೆ ವ್ಯಕ್ತಿ, ವಿವಾಹ, ಧರ್ಮ, ಸಂಸ್ಕೃತಿ ಮೊದಲಾದ ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಗಳಲ್ಲಿಯೂ ಸೃಷ್ಟಿಸಿರುವ ಇಂತಹ ಹಲವು ಭ್ರಮೆಗಳನ್ನು ಅರ್ಥಮಾಡಿಸುವ ಮತ್ತು ಅಂತಹವುಗಳನ್ನು ಒಡೆಯಲು ಸಮರ್ಥವೆನಿಸುವ ಚರ್ಚೆಗಳನ್ನು ವಿಸ್ತೃತವಾಗಿ ನಡೆಸಬೇಕಾದ ಅಗತ್ಯವಿದೆ.

ಈ ಹಿಂದೆ ಇದ್ದಂತೆ ಇಂದು ಮಹಿಳೆ ಅಸಹಾಯಕಳಾಗಿ, ಮೂಕಳಾಗಿ ಉಳಿದಿಲ್ಲ, ಅವಳನ್ನು ಇನ್ನು ಕೇವಲ ಬಲದಿಂದ ಅಥವಾ ಮೋಸದಿಂದ ನಿಯಂತ್ರಿಸಲು ಸಾಧ್ಯವಿಲ್ಲ ಎಂಬುದನ್ನು ಗುರುತಿಸಿಕೊಂಡ ಪುರುಷ ಚಿಂತನೆ ಕುಯುಕ್ತಿಗಳ ಮಾರ್ಗವನ್ನು ಹಿಡಿಯಲಾರಂಭಿಸಿತು. 'ಸಮಾನತೆಯ ಅವಕಾಶ' ಎಂಬುದನ್ನು ಒಪ್ಪಿಕೊಂಡಂತೆ ಮಾಡಿ, ಅಂತಹುದೊಂದು ಭ್ರಮೆಯನ್ನು ಮಾತ್ರವೇ ಸೃಷ್ಟಿಸಿ ಮಹಿಳೆಯನ್ನು ಸುಮ್ಮನಾಗಿಸುವ ಪ್ರಯತ್ನವನ್ನು ಮಾಡಲಾರಂಭಿಸಿತು. ಆದರೆ ಜಾಗೃತ ಮಹಿಳೆಯರ ಚಿಂತನೆ ಇಂತಹ ಭ್ರಮೆಗಳನ್ನು ಗುರುತಿಸಿ ತರ್ಕಬದ್ಧವಾಗಿ ಅವುಗಳನ್ನು ಒಡೆಯುವಲ್ಲಿ ಇಂದು ಸಮರ್ಥವಾಗುತ್ತಿವೆ. ಸ್ತ್ರೀತನ ಮತ್ತು ಪುರುಷತನ ಎಂಬುದು ದೈಹಿಕ ಕಾರಣಗಳಿಂದಾಚೆಗೆ ವ್ಯಕ್ತಿತ್ವದ ಅನಿವಾರ್ಯ ಸಹಜ ಸ್ಥಿತಿಗಳೇನಲ್ಲ ಎಂಬುದನ್ನು ಸ್ತ್ರೀವಾದಿ ಚಿಂತನೆ ಪ್ರತಿಪಾದಿಸುತ್ತಾ, ಮಹಿಳೆಯ ಮೇಲೆ ಪುರುಷನು ತಾಯ್ತನ, ಸಹನೆ, ತಾಳ್ಮೆ, ಹೊಗಳಿಕೆಗಳ ಮುಸುಕಿನಲ್ಲಿ ನಡೆಸುತ್ತಿರುವ ಬ್ಲಾಕ್ ಮೇಲ್‌ಗಳನ್ನು ಪ್ರಶ್ನಿಸುತ್ತಿದೆ. ಸಮಾಜ ವ್ಯವಸ್ಥೆಯಲ್ಲಿ ಕುಟುಂಬವು ನಿರ್ವಹಿಸುವ ಹೊಣೆಗಾರಿಕೆ ಅತ್ಯಂತ ಮುಖ್ಯವಾದುದು, ಹೊರಗಿನ ಲೋಕದೊಂದಿಗೆ ಸೂಕ್ತವಾಗಿ ವ್ಯವಹರಿಸಬೇಕಾದುದೂ ಅಷ್ಟೇ ಪ್ರಮುಖವಾದ ಭಾಗ. ಹಾಗಾಗಿ ಇಂತಹ ಸಂಕೀರ್ಣ ಪರಿಸ್ಥಿತಿಯನ್ನು ಸುಸೂತ್ರವಾಗಿ ನಿರ್ವಹಿಸಬೇಕೆಂದರೆ ಗಂಡು ಹೆಣ್ಣುಗಳು ಒಟ್ಟು ಶ್ರಮವನ್ನು ವಿಭಜಿಸಿಕೊಳ್ಳಬೇಕಾದ್ದೂ ಅನಿವಾರ್ಯ ಎಂಬ ತರ್ಕವನ್ನು ಪುರುಷ ಚಿಂತನೆ ಮಂಡಿಸಿದಾಗ, ಇದರಲ್ಲಿ ಅಸಂಗತವಾದ ಯಾವುದೇ ಸಂಗತಿ ಇರುವಂತೆ ತೋರುವುದಿಲ್ಲ. ಆದರೆ ಈ ಶ್ರಮ ವಿಭಜನೆಯ ಸ್ವರೂಪವನ್ನು ನಿರ್ಧರಿಸುವ ಹಕ್ಕನ್ನು ಸಂಪೂರ್ಣವಾಗಿ ತನ್ನಲ್ಲಿ ಉಳಿಸಿಕೊಂಡ ಪುರುಷ ಚಿಂತನೆ ಪಾಲುಕೊಡುವ ಮುಂದಿನ ಎಲ್ಲ ಹಂತಗಳಲ್ಲೂ ಹಕ್ಕುಗಳೆಲ್ಲ ತನ್ನವು, ಬಾಧ್ಯತೆಗಳೆಲ್ಲ ಮಹಿಳೆಯ ಪಾಲಿನವು ಎಂಬಂತೆ ವರ್ತಿಸತೊಡಗುತ್ತದೆ. ಸ್ತ್ರೀವಾದಿ ಚಿಂತನೆ ಇಂತಹ ಪುರುಷ ಚಿಂತನೆಯ ಎಲ್ಲ ಪ್ರಯತ್ನಗಳನ್ನೂ ವಿಶ್ಲೇಷಿಸಿ, ಮಹಿಳೆಗೆ ಸಲ್ಲಬೇಕಾಗಿರುವ ಸಮಾನತೆ, ಮರ್ಯಾದೆ, ಸ್ವಾತಂತ್ರ್ಯಗಳನ್ನು ಪ್ರತಿಪಾದಿಸುತ್ತದೆ.

ನಮ್ಮಲ್ಲಿ ನಡೆಯುತ್ತಿರುವ ಸ್ತ್ರೀವಾದಿ ಚಿಂತನೆ ಎಂಬುದು ಪಾಶ್ಚಿಮಾತ್ಯ ಚಿಂತನೆಯ ಅನುಕರಣೆಯ ಫ್ಯಾಶನ್, ಅದಕ್ಕೆ ಸ್ವಂತಿಕೆ ಎಂಬುದೇ ಇಲ್ಲ ಎಂಬುದು ಒಂದು ಪ್ರಮುಖವಾದ ಆಕ್ಷೇಪಣೆ. ಸ್ತ್ರೀವಾದಿ ಚಿಂತನೆಯ ಬಗೆಗೆ ಬೆಳೆಯಬಹುದಾದ ಯಾವುದೇ ಬಗೆಯ ಸಹಾನುಭೂತಿಯನ್ನು ಚಿವುಟಿಹಾಕುವ ಪ್ರಯತ್ನವಿದು. ಭಾರತೀಯತೆ, ಸಂಸ್ಕೃತಿಗಳ ಭಾವುಕ ಸಂಗತಿಗಳನ್ನು ಅಸ್ತ್ರಗಳನ್ನಾಗಿ ಪರಿಗಣಿಸಿ ದುರ್ಬಳಕೆ ಮಾಡುವ ಸಂಚು. ಯಾವುದೇ ಗಂಭೀರ ಚಿಂತನೆ ಸಾರ್ವತ್ರಿಕ ಗುಣವನ್ನು ಹೊಂದಿರುತ್ತದೆ. ಅಧ್ಯಯನ, ಸಂಕಥನಗಳ ಅನುಕೂಲಕ್ಕೆ, ಕೆಲವೊಮ್ಮೆ ಪರಿಭಾಷೆಯ ನೆರವಿಗೆ, ಬೇರೊಂದು ಚಿಂತನೆಯೊಂದಿಗೆ ವಿನಿಮಯ ಮಾಡಿಕೊಂಡಷ್ಟಕ್ಕೆ ಆ ಚಿಂತನೆ ಅನುಕರಣೆಯದು ಎನಿಸಬೇಕಿಲ್ಲ. ಇಂಥಾ ಸಂಗತಿಗಳಿಗೆ ಅನುಕರಣೆ ಬೇಕಾಗುವುದೂ ಇಲ್ಲ. ಕೇವಲ ಬೌದ್ಧಿಕ ಚರ್ಚೆಗಳ ನೆಲೆಯಲ್ಲಿ ನಿಲ್ಲುವ ಸಂಗತಿಗಳು ಅನುಕರಣೆಯನ್ನು ಅವಲಂಬಿಸಿ ಮುನ್ನಡೆಯುವ ಸಾಧ್ಯತೆಗಳು ಇರಬಹುದೇನೋ. ಸಾಹಿತ್ಯ ವಿಮರ್ಶೆ ಅಥವಾ ಇತರ ಹಲವು ಅಕಾಡಮಿಕ್ ಶಿಸ್ತುಗಳ ಅಧ್ಯಯನಗಳಲ್ಲಿ ಮೂಡಿ ಬರುವ ಅಮೂರ್ತ ಚಿಂತನೆಗಳು ಹೀಗೆ ಬೆಳೆಯುತ್ತವೆಂಬುದನ್ನು ನೋಡಬಹುದು. ಕೆಲವೊಮ್ಮೆ ಸೈದ್ಧಾಂತಿಕ ಚರ್ಚೆಗಳು ಅನುಕರಣೆಯ ಆಧಾರವನ್ನವಲಂಬಿಸಿ ಬೆಳೆಯಲೂಬಹುದು. ಆದರೆ ಯಾವುದೇ ಜ್ವಲಂತ ಸಮಸ್ಯೆಯ ಬಗೆಗಿನ ಚಿಂತನೆ, ಹೋರಾಟಗಳಿಗೆ ಅನುಕರಣೆಯ ಅಗತ್ಯವೂ ಇಲ್ಲ. ಹಾಗೆ ಮುನ್ನಡೆಯುವ ಸಾಧ್ಯತೆಯೂ ಇಲ್ಲ. ಇದು ಯಾವುದೇ ಕ್ಷೇತ್ರದ ಚಿಂತನೆಗೂ ಅನ್ವಯಿಸುವ ಮಾತು. ಇನ್ನು ನಮ್ಮ ಸ್ತ್ರೀವಾದಿ ಚಿಂತನೆಯ ಮಾತಿಗೆ ಬಂದರೆ, ಇಲ್ಲಿನ ವಿಶೇಷ ಸಂದರ್ಭಗಳಾದ ವಿಧವಾ ಸಮಸ್ಯೆ, ಸತಿ ಪದ್ಧತಿ, ಪರದಾ ಪದ್ಧತಿ, ಬಹುಪತ್ನಿತ್ವ, ವರದಕ್ಷಿಣೆಗಳಂತಹ ವಿಚಾರಗಳ ಚಿಂತನೆಗೆ ಪಾಶ್ಚಾತ್ಯರ ಅನುಕರಣೆ ಹೇಗೆ ಸಾಧ್ಯವಾಗಬಹುದು? ಪಾಶ್ಚಾತ್ಯರು ಸ್ತ್ರೀವಾದಿ ಚಿಂತನೆಯಲ್ಲಿ ತೊಡಗಿದ ನಂತರವೇ ಇಲ್ಲಿ ಮಹಿಳೆಯ ಪರವಾದ ಹೋರಾಟ ಹುಟ್ಟಿಕೊಂಡಿತು ಎಂದೇನೂ ಅಲ್ಲ. ಎಂದಿನಿಂದಲೂ ಅದು ತನ್ನದೇ ರೀತಿಯಲ್ಲಿ ನಡೆದುಕೊಂಡೇ ಬಂದಿದೆ. ಯುದ್ಧ, ಕಲೆ, ಸಾಹಿತ್ಯ, ಸಂಪ್ರದಾಯ, ಆಚರಣೆ ಮುಂತಾದವುಗಳಲ್ಲಿ ಅಂತಹ ದಾಖಲೆಗಳನ್ನು ನೋಡಬಹುದು. ನಮ್ಮ ಅಕ್ಕಮಹಾದೇವಿಯರಂತಹ ಹಲವು ಮಹಿಳೆಯರನ್ನು ಇನ್ನು ಹೇಗೆ ತಾನೇ ವಿವರಿಸಿಕೊಳ್ಳಬಹುದು? ಇಲ್ಲಿನ ಸ್ತ್ರೀವಾದಿ ಚಿಂತನೆಗಳು ಪಾಶ್ಚಾತ್ಯ ಸ್ತ್ರೀವಾದಿಗಳು ಎತ್ತಿರುವ ಹಲವು ಪ್ರಶ್ನೆಗಳನ್ನೇ ಎತ್ತಿವೆಯಲ್ಲಾ ಎಂದರೆ, ಸಮಾನವಾದ ಅಂತಹ ಹಲವು ಸಮಸ್ಯೆಗಳಿವೆ ಎಂದಷ್ಟೇ ಅರ್ಥ. ಅವರಿಗೆ ಕೆಲವು ವಿಶಿಷ್ಟ ಸಮಸ್ಯೆಗಳಿವೆ. ಲೈಂಗಿಕ ಸ್ವಾತಂತ್ರ್ಯ, ಲೆಸ್ಬಿಯಾನ್ ಸಮಸ್ಯೆಗಳಂತಹವು ಇಲ್ಲಿನವರ ಚಿಂತನೆಗಳಲ್ಲಿ ಕೇವಲ ವಸ್ತುನಿಷ್ಠ ಚರ್ಚೆಗಳಾಗಿ ಬರಬಹುದಷ್ಟೇ. ಜಗತ್ತಿನ ಇತರ ಮಹಿಳೆಯರು ಎಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಆ ಬಗ್ಗೆ ಅವರ ಚಿಂತನೆ ಹೇಗೆ ನಡೆದಿದೆ, ಅದರ ವಿವರಣೆಗಾಗಿ ಅವರು ನಡೆಸಿರುವ ಹೋರಾಟದ ಸ್ವರೂಪವೇನು ಎಂಬಂತಹ ಚರ್ಚೆಗಳು, ನಮ್ಮ ಚಿಂತನೆಗೆ, ಹೋರಾಟಕ್ಕೆ ಹಲವು ಹೊಳಹುಗಳನ್ನು

ತೋರಬಹುದಾದ ಸಾಧ್ಯತೆಗಳ ಬಗ್ಗೆ ನಡೆಸುವ ಹುಡುಕಾಟಗಳಾಗಬಾರದೆಂದೇನಿಲ್ಲ. ಅಲ್ಲಿನವರಾಗಲೀ, ಇಲ್ಲಿನವರಾಗಲೀ, ತಮ್ಮ ತಮ್ಮ ಸಂದರ್ಭಗಳಲ್ಲಿ ನಿಂತು, ಮಹಿಳೆಯರಾಗಿ ತಮ್ಮ ಬದುಕು ಏನನ್ನು ಬಯಸುತ್ತದೆ ಎಂಬ ಬಗೆಗೆಯೇ ಚಿಂತನೆಗಳನ್ನು ನಡೆಸುತ್ತಿದ್ದಾರೆ, ಕಾರ್ಯ ಕ್ರಮಗಳನ್ನು ರೂಪಿಸುತ್ತಿದ್ದಾರೆ.

ಸ್ತ್ರೀವಾದಿ ಚಿಂತನೆ, ಹೋರಾಟಗಳ ಅಗತ್ಯವನ್ನೇ ಕುರಿತು ಆಕ್ಷೇಪಿಸುತ್ತಾ, ಈ ಚಿಂತನೆ ಇಲ್ಲದ ಸಮಸ್ಯೆಯೊಂದನ್ನು ಕಲ್ಪಿಸಿ, ಸಮಾಜದಲ್ಲಿ ಗೊಂದಲವನ್ನು ಸೃಷ್ಟಿಸುತ್ತಿದೆ ಎನ್ನುವ ಗುಂಪೂ ಇದೆ. ನಮ್ಮ ಸಂವಿಧಾನವು ಸಮಾನತೆಯ ಅವಕಾಶವನ್ನು ನೀಡಿದೆ. ಎಲ್ಲ ರಂಗಗಳಲ್ಲೂ ಮಹಿಳೆಗೆ ಸಮಾನತೆಯ ಅವಕಾಶಗಳನ್ನು ಕಲ್ಪಿಸಲಾಗಿದೆಯಲ್ಲವೇ, ಉದ್ಯೋಗಗಳಲ್ಲಿ ಮಾತ್ರವಲ್ಲದೆ ರಾಜಕೀಯ ಸ್ಥಾನಮಾನಗಳಲ್ಲಿಯೂ ಮಹಿಳೆಯರು ನೆಲೆಸಿಲ್ಲವೇ ಎಂಬಂತಹ ಪ್ರಶ್ನೆಗಳನ್ನೂ ಹಾಕಿ, ಇನ್ನೂ ಇನ್ನೂ ಬೇಕು ಎಂದರೆ ಅರ್ಥವೇನೆಂದು ಇವರು ಆಕ್ಷೇಪಿಸುತ್ತಾರೆ. ಚಾರಿತ್ರಿಕವಾದ ಕಾರಣಗಳ ಒತ್ತಡಗಳಿಗೆ ಮಣಿದು ಸಂವಿಧಾನ, ಕಾಯಿದೆ, ಕಾನೂನುಗಳಂತಹ ಸಮಾಜ ವ್ಯವಸ್ಥೆಯ ವಿವಿಧ ರಂಗಗಳಲ್ಲಿ ಮಹಿಳೆಗೆ ಅವಕಾಶಗಳನ್ನೇನೋ ಒದಗಿಸಲಾಗಿದೆ. ಆದರೆ ವಾಸ್ತವದಲ್ಲಿ ಅವುಗಳ ಸ್ವರೂಪ ಮತ್ತು ಅವುಗಳನ್ವಯ ಜಾರಿಗೊಳ್ಳುವ ಕಾರ್ಯಾಚರಣೆಗಳು ಮಹಿಳೆಯ ಪರವಾಗಿ ಎಷ್ಟರಮಟ್ಟಿಗೆ ಇವೆ ಎಂಬುದನ್ನು ವಿವರಿಸಿಕೊಳ್ಳಬೇಕಾದ ಅಗತ್ಯವಿದೆ. ಸೂಕ್ಷ್ಮ ಸಂವೇದನೆಯ ಹಲವು ಅಧ್ಯಯನಗಳು ಇಂತಹ ವಿಶ್ಲೇಷಣೆಗಳನ್ನು ಮಾಡಲು ಯತ್ನಿಸಿವೆ. ಸಮಾನತೆಯ ಅವಕಾಶ ಎಂಬ ಹಕ್ಕನ್ನು ನೀಡಲಾಗಿದೆ ಎಂದು ಹೇಳುತ್ತಲೇ, ಅಲ್ಲಿ ಸೃಷ್ಟಿಸಲಾಗಿರುವ ಭ್ರಮೆಗಳನ್ನು ಒಡೆಯುವ ಅಗತ್ಯವಿದೆ. ಕಾನೂನು ತಜ್ಞರಾದ ನಂದಿತಾ ಹಕ್ಸರ್ ಅಂತಹವರು ಈ ಅಂಶಗಳನ್ನು ಸಾಕ್ಷಿ ಆಧಾರಗಳ ಸಮೇತ, ವಾಸ್ತವ ಪ್ರಸಂಗಗಳ ಉಲ್ಲೇಖಗಳೊಂದಿಗೆ ವಿವರಿಸಿದ್ದಾರೆ. ಸಂವಿಧಾನವು ಭಾರತದ ಎಲ್ಲ ಪ್ರಜೆಗಳಿಗೂ, ಜಾತಿ, ವರ್ಗ, ಲಿಂಗ ಮೊದಲಾದ ಯಾವುದೇ ಭೇದವಿಲ್ಲದಂತೆ, 'ಸಮಾನತೆಯ ಅವಕಾಶ' ವನ್ನು ಕಲ್ಪಿಸಿದೆಯೇನೋ ಹೌದು. ಅಸಮಾನತೆಯ ಸಮಸ್ಯೆ ಮಾತ್ರ ಪರಿಹಾರವಾಗದೆ ಉಳಿಯಿತು. ಏಕೆ? ಅದಕ್ಕೂ ಸಂವಿಧಾನವೇ ಅವಕಾಶವನ್ನು ಕಲ್ಪಿಸಿದೆ. ನಮ್ಮ ದೇಶದಲ್ಲಿ ಧರ್ಮ, ಮತಗಳು ಅತ್ಯಂತ ಪ್ರಭಾವಶಾಲಿಯಾದವಲ್ಲವೇ? ಸಂವಿಧಾನದ ನಿಯಮಗಳು ಆಯಾ ಪ್ರಜೆಗಳ ಧರ್ಮಗಳು ಹೇಳುವ ನಿಯಮಗಳನ್ನೇನೂ ಮೀರುವಂತಿಲ್ಲ. ಧರ್ಮಗಳು ಹೇಳುವ ನಿಯಮಗಳಿಗೆ ಸೂಕ್ತವಾದ ತಿದ್ದುಪಡಿಗಳನ್ನು ತನಗೆ ಬೇಕಾದಂತೆ ಅನ್ವಯಿಸಿ ಜಾರಿಗೊಳಿಸುತ್ತವೆ. ಧರ್ಮಕ್ಕೆ ಈ ಹಕ್ಕು ಸಂವಿಧಾನದಿಂದಲೇ ದತ್ತವಾಗಿದೆ. ಉದಾಹರಣೆಗೆ ವಿವಾಹಕಾಯಿದೆಯನ್ವಯ ಬಹುಪತ್ನಿತ್ವಕ್ಕೆ ಅವಕಾಶವಿಲ್ಲ. ಆದರೆ ಮುಸ್ಲಿಂ ವಿವಾಹ ಕಾಯಿದೆಯಡಿ ಬಂದಾಗ ಈ ಮೂಲ ಕಾಯಿದೆಗೆ ಅರ್ಥವೇ ಇಲ್ಲ. ಇನ್ನು ಆಸ್ತಿಹಕ್ಕು, ದತ್ತು ಸ್ವೀಕಾರದಂತಹ ಪ್ರಸಂಗಗಳಲ್ಲಿ ಸಮಾನ ಅವಕಾಶ ಎಂಬುದು ಮಹಿಳೆಯನ್ನು ಮೋಸಗೊಳಿಸುವ ಭ್ರಮೆಗಳು ಮಾತ್ರವಲ್ಲದೆ ಇನ್ನೇನೂ ಅಲ್ಲ. ಶೀಲ ಎಂಬುದನ್ನು ಒಂದು

ಜೀವನ ಮೌಲ್ಯವೆಂದು ಈ ಸಮಾಜದಲ್ಲಿ ಪರಿಗಣಿಸಲಾಗುತ್ತದೆ. ಆದರೆ ಈ ಮೌಲ್ಯದ ಪರಿಪಾಲನೆಯ ಹೊಣೆ ಮಾತ್ರ ಮಹಿಳೆಗಷ್ಟೇ ಅನ್ವಯವಾಗುವಂಥದು. ಹೋಗಲಿ, ಇದೇನೋ ಪುರುಷ ಚಿಂತನೆಯು ಈ ಸಮಾಜ ನಡೆಸಿಕೊಂಡು ಬಂದಿರುವ ಒಂದು ನಯವಂಚನೆ. ಆದರೆ ಸಮಾನ ಅವಕಾಶದ ಮಾತನಾಡುವ ಸಂವಿಧಾನದ ಪ್ರತಿಕ್ರಿಯೆ ಎಂತಹುದು? ಕಾಯಿದೆ, ಕಾನೂನುಗಳು ಈ ವಿಚಾರದಲ್ಲಿ ಮಹಿಳೆಗೆ ಸೂಕ್ತ ಭದ್ರತೆಯನ್ನು ಒದಗಿಸುವಂತೆ ಮಾಡಲಾಗಿದೆ ಎನ್ನುತ್ತದೆ. ಹಿಂದೆಯೇ, ಈ ಕಾಯಿದೆ ಕಾನೂನುಗಳು ಇಂತಹ ಪ್ರಸಂಗಗಳಲ್ಲಿ ಶೋಷಣೆಗೆ ಒಳಗಾದ ಮಹಿಳೆಯೇ ಸಾಕ್ಷಿ ಪುರಾವೆಗಳನ್ನು ಒದಗಿಸಬೇಕೆನ್ನುವ ಕರಾರನ್ನು ಹಾಕುತ್ತವೆ. ರೂಢಿಗತ ಸಾಮಾಜಿಕ ಮುಜುಗರಗಳಲ್ಲಿ ಸಿಲುಕಿರುವ ಮಹಿಳೆಗೆ ನ್ಯಾಯ ಸಿಗುವ ಮಾತಂತೂ ದೂರ. ತನ್ನನ್ನು ಶೋಷಿಸಲಾದ ಪ್ರಸಂಗವನ್ನು ಸ್ವತಃ ಅವಳೇ ಮುಚ್ಚಿ ಹಾಕಬೇಕಾದ ಅನಿವಾರ್ಯವನ್ನು ಅವಳು ಅಸಹಾಯಕಳಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಇಂತಹ ದೈಹಿಕ ಮಾನಸಿಕ ಅನ್ಯಾಯಗಳ ಮಾತು ಹೀಗೆ. ಇನ್ನು ಸಾಮಾಜಿಕ ನ್ಯಾಯದ ಮಾತು ಬಂದರೆ ಅದೊಂದು ಬೇರೆಯೇ ದೊಡ್ಡ ಕತೆ. ಉದ್ಯೋಗ ರಂಗದಲ್ಲಿ ಮಹಿಳೆಗೆ ಅವಕಾಶ ಸಿಕ್ಕಿದ್ದು ಏಕೆ, ಹೇಗೆ, ಅದರ ಒಟ್ಟು ಪರಿಣಾಮವೇನು ಎಂಬಂತಹ ಪ್ರಶ್ನೆಗಳ ವಿಶ್ಲೇಷಣೆ ವಿವಿಧ ಅಧ್ಯಯನಗಳಲ್ಲಿ ನಡೆದಿದೆ. ಹಾಗೆಯೇ ರಾಜಕೀಯವಾಗಿ, ಆರ್ಥಿಕವಾಗಿ ಸ್ವತಂತ್ರಳಾಗಲು ಅವಳಿಗೆ ಎದುರಾಗುವ ಸಮಸ್ಯೆಗಳು ಯಾವುವು, ಇವುಗಳನ್ನು ಪರಿಹರಿಸಲು ಮಹಿಳೆಗೆ ಮೀಸಲಾತಿಯ ಅವಕಾಶವನ್ನು ಹೆಚ್ಚುವರಿಯಾಗಿ ಕಲ್ಪಿಸಿದಷ್ಟಕ್ಕೆ ಸರಿಹೋದೀತೆ ಎಂಬ ಚರ್ಚೆಗಳೂ ಸಾಕಷ್ಟು ನಡೆಯುತ್ತಿವೆ. ಮಹಿಳೆಯರು ತಮ್ಮ ಸಮಸ್ಯೆಗಳನ್ನು ಗುರುತಿಸಿ ಕೊಂಡು ಹೋರಾಟಗಳನ್ನು ರೂಪಿಸಿಕೊಳ್ಳಬಹುದು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಈಗ ಅಧಿಕಾರವನ್ನು ತಮ್ಮ ಕೈಯಲ್ಲೇ ಇರಿಸಿಕೊಂಡಿರುವ ಪುರುಷರನ್ನೇ ಅನುಸರಿಸಿ ಪರಿಹಾರಗಳನ್ನು ಪಡೆಯಬೇಕು.

ಹಲವು ಸಂದರ್ಭಗಳಲ್ಲಿ ಪ್ರಜಾಸತ್ತಾತ್ಮಕವಾಗಿಯೇ ಪರಿಹಾರಗಳು ದೊರೆತಂತೆ ತೋರುವುದೂ ಉಂಟು. ಹಿಂದೆಯೇ ಇವುಗಳ ಅನ್ವಯ ಕಾಲದಲ್ಲಿ ಆ ಪರಿಹಾರಗಳು ಮಹಿಳೆಗೆ ದಕ್ಕದಿರುವಂತೆ ಪುರುಷ ಚಿಂತನೆ ಹುನ್ನಾರಗಳನ್ನು ಕಲ್ಪಿಸುತ್ತದೆ. ಸಂವಿಧಾನಾತ್ಮಕವಾಗಿ ತನಗೆ ದೊರೆತ ಪರಿಹಾರವನ್ನು ಮಹಿಳೆ ಅನುಭವಿಸಲು ಹೊರಡು ತ್ತಿದ್ದಂತೆಯೇ ಹಲವು ಕಷ್ಟನಷ್ಟಗಳಿಗೆ ಒಳಗಾಗುತ್ತಾಳೆ. ಪರಿಹಾಸ್ಯ, ಅಪಮಾನ ಗಳಿಗೆ ಪಕ್ಕಾಗಿ ಮುಂದೆ ಹೆಜ್ಜೆ ಇಡುವ ಸಾಧ್ಯತೆಯ ಬಗ್ಗೆ ಭಯವಿಹ್ವಲಳಾಗುತ್ತಾಳೆ. ಇದಕ್ಕೆ ಒಂದು ಒಳ್ಳೆಯ ನಿದರ್ಶನವಾಗಿ ನಮ್ಮ ಚುನಾವಣೆಗಳನ್ನು ಗಮನಿಸಬಹುದು. ಹಲವು ಮುಖ್ಯ ಅಧಿಕಾರ ಸ್ಥಾನಗಳಿಗೆ ಮಹಿಳೆಗೆ ಮೀಸಲಾತಿಯೂ ಇದೆ. ಪುರುಷಾಧಿಕ್ಯದ ಈ ಅರಣ್ಯದಲ್ಲಿ ಮಹಿಳೆ ಕೈ ಕಾಲುಗಳನ್ನಾಡಿಸಿ ಸಂಚರಿಸುವುದು ಸುಲಭ ಸಾಧ್ಯವಿಲ್ಲ. ಕುಟುಂಬದಲ್ಲಿ ಅಥವಾ ಸಮಾಜದ ಇತರ ಹಲವು ಆಪ್ತ ವಲಯಗಳಲ್ಲಿನ ಪುರುಷರೇ ಹಾಗೆ ಸಂಚರಿಸಲು

ಹೊರಡುವ ಮಹಿಳೆಯರಿಗೆ ಬೆಂಗಾವಲಾಗಿ ಇರುತ್ತಾರೆ. ಬಹುಮಟ್ಟಿಗೆ ಇಂತಹ ನೆರವು ಆ ಪುರುಷರ ಸ್ವಂತ ಹಿತರಕ್ಷಣೆಯ ವಿಸ್ತರಣೆ ಮಾತ್ರವೇ ಆಗಿದ್ದು, ಅಲ್ಲಿ ಪ್ರತಿನಿಧಿತವಾಗುವ ಮಹಿಳೆ ನೆಪಮಾತ್ರದವಳಾಗುತ್ತಾಳೆ. ಪಂಚಾಯತ್ ರಾಜ್ಯ ಚುನಾವಣೆಗಳಲ್ಲಂತೂ ಈ ಮಾತು ಇನ್ನಷ್ಟು ಸ್ಪಷ್ಟವೆಂಬಂತೆ ತೋರುತ್ತದೆ. ರಾಜಕೀಯದ ಯಾವುದೇ ಹಿನ್ನೆಲೆಯಾಗಲೀ, ಆ ಬಗೆಗಿನ ಗ್ರಹಿಕೆಯಾಗಲೀ ಇಲ್ಲದ ಹೆಂಗಸರು ಹೇಗೆ ಸ್ಪರ್ಧೆಗೆ ನಿಂತು ಗೆದ್ದು ಬರುತ್ತಾರೆ. ಹಾಗೆ ಗೆದ್ದ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸಲು ಎಷ್ಟರ ಮಟ್ಟಿಗೆ ಸಮರ್ಥರಾಗಿರುತ್ತಾರೆ ಎಂಬ ಸಂಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಪುರುಷ ಚಿಂತನೆಯ ಹುನ್ನಾರಗಳು ಕೆಲಸ ಮಾಡುವ ಪರಿ ತಿಳಿಯಬಹುದು. ಹಾಗೆಂದಾಗ, ಮಹಿಳೆಗೆ ಆಡಳಿತವನ್ನು ನಿಭಾಯಿಸುವ ಸಾಮರ್ಥ್ಯವಿಲ್ಲ ಎಂಬ ನಿರಾಶಾದಾಯಕ ನಿರ್ಣಯವನ್ನು ಹೇಳಿದಂತೇನೂ ಅಲ್ಲ. ಬದಲಿಗೆ, ಸದ್ಯದಲ್ಲಿನ ಪರಿಸ್ಥಿತಿಯಲ್ಲಿ, ಮಹಿಳೆಗೆ ದೊರೆಯಬಹುದಾದ ಎಲ್ಲ ಅವಕಾಶಗಳು, ಉಂಟಾಗುವ ಹಲವು ಸಮಸ್ಯೆಗಳು, ಅವುಗಳಿಗೆ ದೊರೆಯುವ ಪರಿಹಾರಗಳು-ಇವೆಲ್ಲದರ ಹಿನ್ನೆಲೆಯಲ್ಲಿ ಪುರುಷನ ಕೈವಾಡವೇ ಅಧಿಕವಾಗಿದೆ ಎಂಬ ವಾಸ್ತವವನ್ನು ವಸ್ತುನಿಷ್ಠವಾಗಿ ಗ್ರಹಿಸಬೇಕು. ಮಹಿಳೆಗೆ ದೊರೆತ ಅವಕಾಶಗಳು, ಅವಳ ಸಮಸ್ಯೆಗಳಿಗೆ ದೊರೆತ ಪರಿಹಾರಗಳು ವಾಸ್ತವಗಳಾಗಿರದೆ ಭ್ರಮೆಗಳ ಸೃಷ್ಟಿಗಳಾಗಿರುವ ಸಾಧ್ಯತೆಗಳಿವೆ ಎಂಬ ಬಗ್ಗೆ ಜಾಗರೂಕರಾಗಿರಬೇಕು. ಇಂತಹ ಪರಿಸ್ಥಿತಿ ಇದೆ ಎಂದ ಮೇಲೆ, ಸ್ತ್ರೀವಾದಿ ಚಿಂತನೆ ಹಾಗೂ ಹೋರಾಟ ಇಂದು ಪ್ರಸ್ತುತವೇ ಎಂಬ ಪ್ರಶ್ನೆಯೇ ಮೂರ್ಖತನವಾದೀತು. ಬಹುಶಃ ಹಿಂದೆಂದಿಗಿಂತಲೂ ಇಂದು ಇದರ ಅಗತ್ಯ ಹೆಚ್ಚಿನದಾಗಿದೆ. ಕೇವಲ ಭೌತಿಕ ಹಕ್ಕು ಬಾಧ್ಯತೆಗಳ ಸಮಸ್ಯೆಗಳನ್ನೂ ಮೀರಿ, ಸಾಮಾಜಿಕ, ಕೌಟುಂಬಿಕ, ಮಾನಸಿಕ ಹಾಗೂ ವೈಯಕ್ತಿಕ ಮೊದಲಾದ ನೆಲೆಗಳಲ್ಲಿ ಸಮಾಜದಲ್ಲಿ ಪುರುಷನಿಗೆ ಸಮಾನವಾದ ಸ್ಥಾನಮಾನಗಳು ಮಹಿಳೆಗೆ ದೊರೆಯುವ ಬಗ್ಗೆ ಇನ್ನೂ ಆಳವಾದ ಪ್ರಯತ್ನಗಳು ನಡೆಯಬೇಕಿವೆ.

ಇಂದು ಸಾಕಷ್ಟು ಪರಿಣಾಮಕಾರಿಯಾಗಿ ರೂಪತಳೆಯುತ್ತಿರುವ ಸ್ತ್ರೀವಾದಿ ಚಿಂತನೆ ಹಾಗೂ ಹೋರಾಟಗಳಿಗೆ ಒಂದು ಪ್ರಬಲ ಕಾರಣ ಮಹಿಳೆಗೆ ದಕ್ಕಿದ ಉದ್ಯೋಗಾವಕಾಶ. ಹಾಗಾಗಿಯೇ ಮಹಿಳೆಯ ಮೇಲಿನ ತನ್ನ ಹಿಡಿತ ದುರ್ಬಲಗೊಳ್ಳುತ್ತಿದೆ ಎಂದು ಭಯಗೊಂಡಿರುವ ಪುರುಷ ಚಿಂತನೆ ಮಹಿಳೆಗೆ ದೊರೆತಿರುವ ಈ ಅವಕಾಶವನ್ನು ಮೊಟಕು ಮಾಡುವ ಹುನ್ನಾರದಲ್ಲಿ ತೊಡಗಿದೆ. ಮಹಿಳೆಯು ಕುಟುಂಬದ ಬಗೆಗೆ ಎಷ್ಟು ಭಾವುಕಳಾಗಿರುತ್ತಾಳೆಂಬುದನ್ನೇ ಹಿಡಿದು ಅವಳನ್ನು ಗೊಂದಲಕ್ಕೆ ಸಿಲುಕಿಸುವಂತೆ 'ಹೆಣ್ಣು ಮಕ್ಕಳು ಉದ್ಯೋಗಗಳಲ್ಲಿ ತೊಡಗಿಕೊಳ್ಳುತ್ತಿರುವುದರ ಪರಿಣಾಮವಾಗಿ ನಮ್ಮ ಕುಟುಂಬ ವ್ಯವಸ್ಥೆಗೆ ಅಪಾಯ ಒದಗುತ್ತಿಲ್ಲವೇ?' ಎಂಬ ಪ್ರಶ್ನೆಯನ್ನು ಎತ್ತುತ್ತದೆ. ನಮ್ಮ ನಿಜವಾದ ಕ್ಷೇಮ ನಮ್ಮ ಕುಟುಂಬದ ಒಟ್ಟು ಕ್ಷೇಮವನ್ನು ಕಾಪಾಡಿಕೊಳ್ಳುವುದರಲ್ಲೇ ಇದೆ ಎಂಬುದು ನಿರ್ವಿವಾದ. ಹಾಗಾಗಿ ಈ ಪ್ರಶ್ನೆಯನ್ನು ಸೂಕ್ತ ವಿವೇಚನೆಯಿಂದ ಪರಿಶೀಲಿಸುವುದು

ಅಗತ್ಯವೇ. ಆದರೆ, 'ಕುಟುಂಬದ ಕ್ಷೇಮ' ಎಂಬುದು ಮಹಿಳೆಯೊಬ್ಬಳೇ ನಿರ್ವಹಿಸಬೇಕಾದ, ನಿರ್ವಹಿಸಬಹುದಾದ ಹೊಣೆಗಾರಿಕೆಯಲ್ಲ. ಈ ಜವಾಬ್ದಾರಿಯನ್ನು ಸ್ತ್ರೀಪುರುಷರಿಬ್ಬರೂ ಸಮಾನವಾಗಿ ಹೊತ್ತುಕೊಳ್ಳಬೇಕೆಂಬುದು ಒಪ್ಪುವ ಮಾತು. ಆದರೆ ಇದರ ನಿರ್ವಹಣೆಯ ಶ್ರಮವನ್ನು ಗಂಡು ಹೆಣ್ಣುಗಳಲ್ಲಿ ಹಂಚಿಕೊಳ್ಳುವಾಗ ಮಾತ್ರ ಪುರುಷ ಚಿಂತನೆಯು ಮೇಲುಗೈ ಪಡೆದು ತನಗೆ ಅನುಕೂಲವಾಗುವಂತೆ ನೋಡಿಕೊಂಡಿದೆ. ಮನೆಯ ಒಳಗಿನ ಹೊಣೆ ಮತ್ತು ಹೊರಗಿನ ಜವಾಬ್ದಾರಿ ಎಂದು ಕುಟುಂಬ ನಿರ್ವಹಣೆಯನ್ನು ಬೇಗಡಿಸಿ, ಮನೆಯ ಗೋಡೆಗಳ ಮಧ್ಯ ಮಹಿಳೆಯನ್ನು ಇರಿಸುವುದರೊಂದಿಗೆ, ಆರ್ಥಿಕ ಗಳಿಕೆಯನ್ನು ಸ್ಪಷ್ಟವಾಗಿ ತೋರಿಸಲಾಗದ 'ಸೇವಾ ಕ್ಷೇತ್ರ' ಮಹಿಳೆಯ ಪಾಲಿಗೆ ಸಲ್ಲುವ ತಂತ್ರವನ್ನು ಹೂಡಲಾಯಿತು. ಆದರೆ ಸ್ಪಷ್ಟಗೋಚರವಾಗುವಂತೆ 'ಸಂಪಾದನೆ' ಇರುವ ಶ್ರಮ ಪುರುಷನು ವಹಿಸಿಕೊಂಡದ್ದರಿಂದ ಕ್ರಮೇಣ ಆರ್ಥಿಕ ನಿಯಂತ್ರಣ ಅವನಲ್ಲಿ ಉಳಿಯಿತು. ಇದೇ ಮುಂದೆ ಅವನ ಅಧಿಕಾರ ಸ್ಥಾಪನೆಗೆ ನೆರವಾದದ್ದು. ಮನೆಯ ಒಳಗೆ ಅವನು ಹೀಗೆ ಆರ್ಥಿಕ ನಿಯಂತ್ರಣವನ್ನು ಕೈಗೆ ತೆಗೆದುಕೊಂಡು ಅಧಿಕಾರವನ್ನು ಸ್ಥಾಪಿಸಿದ ಸಂಗತಿ ಮನೆಯ ಹೊರಗೂ ವಿಸ್ತರಿಸಿ ಬೆಳೆಯಲು ಯಾವ ತಡೆಯೂ ಇರಲಿಲ್ಲ. ಮಹಿಳೆಯು ಈ ಬಗ್ಗೆ ಅರಿವನ್ನು ಪಡೆಯಬಹುದಾದ ಎಲ್ಲ ಅವಕಾಶಗಳನ್ನೂ ಮುಚ್ಚಿಹಾಕಿ, ತನಗೆ ದೊರೆತ ಹಣ ಹಾಗೂ ಅಧಿಕಾರ ಬಲಗಳನ್ನು ಪುರುಷ ನಿರಂತರವಾಗಿ ಬಲಪಡಿಸಿಕೊಳ್ಳುತ್ತಾ ಬಂದದ್ದು ಹೆಣ್ಣಿನ ವ್ಯಥೆಯ ಕಥೆ.

ಇಂದು ಮಹಿಳೆ ಮನೆಯ ಹೊರಗೆ ಕಾಲಿಟ್ಟು ಉದ್ಯೋಗಗಳಲ್ಲಿ ತೊಡಗಿಕೊಳ್ಳುತ್ತಿದ್ದಾಳೆ, ಒಂದಿಷ್ಟು ಸಂಪಾದಿಸುತ್ತಿದ್ದಾಳೆ ಎಂಬ ಸಂಗತಿ ಮಹಿಳೆಯ ಸಮಸ್ಯೆಗಳು ಪರಿಹಾರಗೊಳ್ಳಲು ಆರಂಭಗೊಂಡಿವೆ ಎಂಬ ಅನಿಸಿಕೆಯನ್ನು ತರುತ್ತಿದೆಯೇನೋ ಹೌದು. ಆದರೆ, ಮಹಿಳೆಯು ಈಗ ಉದ್ಯೋಗಗಳಲ್ಲಿ ತೊಡಗಿ ಕೊಳ್ಳುತ್ತಿರುವ ವಿಧಾನ ಮತ್ತು ಅದರ ಪರಿಣಾಮಗಳು ಮಹಿಳೆಯ ಕ್ಷೇಮವನ್ನು ಬಯಸುವಂತೆ ತೋರುತ್ತಿಲ್ಲ. ಏಕೆಂದರೆ, ಮಹಿಳೆಯು ಉದ್ಯೋಗ ಕ್ಷೇತ್ರಕ್ಕೆ ಕಾಲಿಡಲು ದೊರಕಿದ ಅವಕಾಶ ಎಂಬುದು ಮಹಿಳೆಯ ಪ್ರಯತ್ನದ ಫಲ ಎನ್ನಲಾಗದು. ಪುರುಷನ ಕಾರ್ಯಕ್ಷೇತ್ರ ವಿಸ್ತರಿಸುತ್ತಾ ಹೋದಂತೆ, ಅವನಿಗೆ ಏಕತಾನವೆಂದು ತೋರಿದ, ಬೇಸರ ಬರಿಸಿದ ಒಂದಿಷ್ಟು ಸೇವಾಕ್ಷೇತ್ರದ ಭಾಗಗಳು ತೆರವಾದವು. ಆದರೆ ಈ ಕೆಲಸಗಳಂತೂ ನಡೆಯಲೇ ಬೇಕಿತ್ತಲ್ಲ. ಮಹಿಳೆಯನ್ನು ಬಿಡುಗಡೆಗೊಳಿಸುವ ಭ್ರಮೆಯನ್ನು ಹುಟ್ಟಿಸಿ, ಅವಳನ್ನು ಈ ತೆರಪಿನ ಕ್ಷೇತ್ರಗಳಲ್ಲಿ ದುಡಿಯಲು ಮನೆಯಿಂದ ಹೊರಗೆ ಕರೆತರಲಾಯಿತು. ಈ ಹೊಸ ಅವಕಾಶ ಮಹಿಳೆಗಂತೂ ಯಾವ ಹೊಸತನದ ಅನುಭವವನ್ನೂ ಕೊಡಲು ಸಾಧ್ಯವಿರಲಿಲ್ಲ. ಬದಲಿಗೆ ಅವಳು ತನ್ನ ಮೇಲೆ ಈಗಾಗಲೇ ಬಿದ್ದಿದ್ದ ಹೊರೆಯೊಂದಿಗೆ ಇನ್ನಷ್ಟನ್ನು ಹೊರಬೇಕಾಯಿತು. ಮನೆಯೊಳಗಿನ ದುಡಿತದ ವಿಸ್ತರಣೆಯೇ ಎಂಬಂತಿದ್ದ ಮನೆಯ ಹೊರಗಿನ ದುಡಿತದ ಸ್ವರೂಪ ಅವಳ ವ್ಯಕ್ತಿತ್ವ ವಿಕಸನದ ಹಾದಿಯಂತೂ ಆಗಿರಲಿಲ್ಲ. ಮಾಡು, ತೊಳಿ, ಬಳಿ ಎಂಬಂತಹ ಶ್ರಮ

ಅವಳನ್ನು ಇನ್ನಷ್ಟು ಕುಗ್ಗಿಸಿತು. ಈ ಮೊದಲು ಅವಳು ತನ್ನ ಮನೆಯವರ ಸೇವೆಯನ್ನು ಮಾತ್ರವೇ ಮಾಡುತ್ತಿದ್ದಳಾದರೆ, ಈಗ ಅವಳು ಸಾರ್ವಜನಿಕ ತೊತ್ತಾದಳು. ಇನ್ನು ಅವಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿತಲ್ಲವೇ ಎಂಬ ಪ್ರಶ್ನೆ. ಅವಳ ಶ್ರಮವನ್ನು ಎಂತಹ ಅಸಮಾನ ದೃಷ್ಟಿಯಿಂದ ಪರಿಗಣಿಸಲಾಗುತ್ತದೆ ಎಂಬುದನ್ನು ತೋರಿಸುವ ಅಧ್ಯಯನಗಳು ಇನ್ನೂ ಇನ್ನೂ ಬರುತ್ತಲೇ ಇವೆ. ಹೀಗೆ ಸಾರ್ವಜನಿಕ ರಂಗಕ್ಕೆ ಕಾಲಿಡುವ ಮೊದಲೂ ಮಹಿಳೆಯು ಮನೆಯ ಹೊರಗಿನ ದುಡಿತದಲ್ಲಿ ಪುರುಷನಿಗೆ ನೆರವಾಗುತ್ತಿದ್ದಳು. ಕೃಷಿಯಲ್ಲಿ, ವೃತ್ತಿ ಕಸಬುಗಳಲ್ಲಿ ಮಹಿಳೆಯರು ದುಡಿಯಲೇ ಬೇಕಿತ್ತು. ಆದರೆ ಪುರುಷನು ಬಹಳ ಚಾಣಾಕ್ಷನಾಗಿ ಅವಳ ದುಡಿಮೆಯನ್ನು ನಿಯಂತ್ರಿಸುತ್ತಾ ಕೆಲವು ಹಂತಗಳಲ್ಲಷ್ಟೇ ಅವಳಿಗೆ ಪ್ರವೇಶವನ್ನು ನೀಡಿದ್ದ. ಕೃಷಿಯಲ್ಲಿ ನಾಟಿ, ಕಳೆ ಕೀಳುವುದು ಮುಂತಾಗಿ ಮೊದಮೊದಲ ಶ್ರಮವನ್ನು ಮಹಿಳೆಗೆ ವಹಿಸಿದಂತೆ, ಇತರ ಕಸಬುಗಳಲ್ಲೂ ವೃತ್ತಿಯ ಪೂರ್ಣಫಲ ಕಾಣುವ ಮುಂಚಿನ ಹಂತಗಳಲ್ಲಷ್ಟೇ ಅವಳ ನೆರವನ್ನು ಪಡೆಯಲಾಯಿತು/ಶ್ರಮದ ಫಲ ಕೈಗೆ ದೊರೆಯುವ ಹಂತವನ್ನು ತನ್ನಲ್ಲೇ ಉಳಿಸಿಕೊಳ್ಳುವ ಮೂಲಕ ಆರ್ಥಿಕ ನಿಯಂತ್ರಣವನ್ನು ತನ್ನಲ್ಲೇ ಪುರುಷ ಉಳಿಸಿಕೊಂಡ. ಯಾವ ಯಾವ ಹಂತಗಳಲ್ಲಿ ಮಹಿಳೆಯ ಪ್ರವೇಶ ನಿಷಿದ್ಧ ಎಂಬುದನ್ನು ಧರ್ಮ, ದೇವರು, ಸಂಪ್ರದಾಯ, ಆಚರಣೆಗಳ ಹೆಸರಿನಲ್ಲಿ ನಿಯಮ ಬದ್ಧವಾಗಿಸಿದ. ಇದೀಗ ಸಾರ್ವಜನಿಕವಾಗಿ ಉದ್ಯೋಗ ಕ್ಷೇತ್ರಕ್ಕೆ ಮಹಿಳೆಗೆ ಪ್ರವೇಶ ದೊರೆತಿದೆ ಎಂದಾಗಲೂ ಮೂಲಭೂತವಾಗಿ ಈ ನಿಯಮವೇ ಜಾರಿಯಲ್ಲಿರುವುದು. ಕೂಲಿ ಕೆಲಸದಿಂದ ಹಿಡಿದು ಎಲ್ಲ ಹಂತಗಳಲ್ಲಿಯೂ ಮಹಿಳೆಯ ಶ್ರಮವನ್ನು ಎಷ್ಟು ನಿಕೃಷ್ಟವಾಗಿ ಕಾಣಲಾಗುತ್ತದೆ. ಆ ಶ್ರಮಕ್ಕೆ ಸಲ್ಲಬೇಕಾದ ಸಂಭಾವನೆಯಲ್ಲಾಗಲೀ, ಗೌರವದಲ್ಲಾಗಲೀ ತೋಳ ಕುರಿಮರಿಯ ನ್ಯಾಯವೇ ಹೇಗೆ ಸಂದಾಯವಾಗುತ್ತದೆ, ಮಹಿಳೆಗೆ ದೊರಕಬೇಕಾದ ಸವಲತ್ತು ಅನುಕೂಲಗಳ ಮಾತು ಬಂದಾಗ ವ್ಯವಸ್ಥೆ ಅದೆಷ್ಟು ಕ್ರೂರವಾಗಿ ವರ್ತಿಸುತ್ತದೆ- ಇಂಥವುಗಳನ್ನೆಲ್ಲಾ ಯಾವ ಮಹಿಳೆಯೂ ಪ್ರಶ್ನಿಸಬಾರದೆಂಬಂತೆ ಒತ್ತಡಗಳನ್ನು ಹೇಗೆ ಹೇರಲಾಗುತ್ತದೆ, ಹಾಗೊಮ್ಮೆ ಪ್ರಶ್ನಿಸುವ ಧೈರ್ಯವಹಿಸಿದವರನ್ನು ಬಲ ಪ್ರಯೋಗ ದಿಂದಾಗಲೀ ನಯವಂಚನೆಯಿಂದಾಗಲೀ ಎಷ್ಟು ಸುಲಭವಾಗಿ ಬಾಯಿ ಮುಚ್ಚಿಸಲಾಗುತ್ತದೆ- ಎಂಬಂತಹ ಸೂಕ್ಷ್ಮಗಳನ್ನೆಲ್ಲಾ ವಿವೇಚಿಸುವ ದೀರ್ಘ ಅಧ್ಯಯನಗಳು ಬರುತ್ತಲೇ ಇವೆ.

ಇರಲಿ, ಪ್ರಸ್ತುತ ಸ್ಥಿತಿಯನ್ನಷ್ಟೇ ಪರಿಗಣಿಸೋಣ. ಇಷ್ಟೆಲ್ಲಾ ಪರಿಶ್ರಮದಿಂದ ಅವಳ ಕೈಗೆ ಒಂದಿಷ್ಟು ಹಣ ಬಂದಿತು ಎಂದೇ ಇಟ್ಟುಕೊಳ್ಳಿ. ಕೈಗೆ ಹತ್ತಿದಷ್ಟನ್ನಾದರೂ ಆಕೆ ಸ್ವತಂತ್ರವಾಗಿ ತನ್ನದೆಂದು ಬಳಸಬಲ್ಲಳೇ ಎಂಬುದಕ್ಕೂ ದೊರೆಯುವುದು ನಿರಾಶಾ ದಾಯಕವಾದ ಉತ್ತರವೇ. ಗಳಿಸುವ ಮಹಿಳೆಯರು-ಅಷ್ಟೇಕೆ ಕೈಯಲ್ಲಿ ದುಡ್ಡು ಓಡಾಡಲು ಅವಕಾಶ ಸಿಕ್ಕಿದ ಎಲ್ಲ ಮಹಿಳೆಯರೂ-ಸೀರೆ, ಒಡವೆ, ಶೃಂಗಾರಗಳಿಗೇ ತಮ್ಮ ಹಣವನ್ನೆಲ್ಲಾ ಬಳಸುತ್ತಾರೆ ಎಂಬ ಗೇಲಿಯಂತೂ ಬಹಳ ಜನಪ್ರಿಯವಾದ ತಮಾಷೆ. ಇಂತಹ ಒಂದಷ್ಟು ಮಹಿಳೆಯರೂ ಇರಬಹುದು. ಹೀಗೆ ಮೋಜಿನ ಖರ್ಚು ಮಾಡುವ

ಮಹಿಳೆಯರ ಕೈಗೆ ಹಣ ಬರುವುದು ಎರಡು ಬಗೆಗಳಲ್ಲಿ. ಒಂದು ಅವರು ಸ್ವತಃ ಹೊರಗೆ ಉದ್ಯೋಗಗಳಲ್ಲಿ ದುಡಿದು ಸಂಪಾದಿಸುತ್ತಾರೆ. ಅಥವಾ ಮನೆಯ ಖರ್ಚಿಗೆಂದು ಗಂಡಂದಿರು ಅವರಿಗೆ ಒಂದಿಷ್ಟು ಹಣವನ್ನು ಕೊಟ್ಟಿರುತ್ತಾರೆ. ಉದ್ಯೋಗಸ್ಥ ಮಹಿಳೆಯರೆಲ್ಲರಿಗೂ ತಮ್ಮ ಸಂಪಾದನೆಯನ್ನು ತಾವು ಸ್ವತಂತ್ರವಾಗಿ ಬಳಸಬಹುದೆಂಬ ಅವಕಾಶವಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಸಂಬಳವಷ್ಟನ್ನೂ ಗಂಡನ ಕೈಗೆ ಹಾಕಿ, ತನ್ನ ದಿನನಿತ್ಯದ ಖರ್ಚಿಗೆ ಅವನು ತನಗೆ ಕೊಟ್ಟಷ್ಟಕ್ಕೆ ಕೈ ಚಾಚಬೇಕಾದ ಸ್ಥಿತಿಯೇ ಇರುತ್ತದೆ. ಅಥವಾ ಒಂದಿಷ್ಟನ್ನು ತನಗೆಂದು ಇಟ್ಟುಕೊಂಡು, ಉಳಿದಷ್ಟನ್ನೂ ಗಂಡನಿಗೆ ಒಪ್ಪಿಸಿ ಬಿಡುವವರೂ ಇದ್ದಾರೆ. ಇನ್ನು ಉದ್ಯೋಗಸ್ಥರಲ್ಲದ ಗೃಹಿಣಿಯರು ಮನೆಯ ಯಜಮಾನನ ಹಂಗಿಗೆ ಮತ್ತಷ್ಟು ಪಕ್ಕಾಗಿರುತ್ತಾರೆ. ಮನೆಗೆ ಬೇಕಾದ್ದನ್ನು ತಂದು ಹಾಕಬೇಕಾದ ಪೂರ್ಣ ಹೊಣೆಯನ್ನು ಗಂಡಸು ವಹಿಸಿಕೊಂಡರೆ ಅದೆಷ್ಟು ತ್ರಾಸ ದಾಯಕವೆಂದು ಅವನಿಗೆ ಗೊತ್ತು. ಹೀಗೊಮ್ಮೆ ಮಾಡಿದರೆ, ಹೆಣ್ಣಿನ ಕೈಗೆ ಹಣ ಬರುವ ಸಾಧ್ಯತೆಯೇ ಇಲ್ಲ. ಆದರೆ ಅಷ್ಟು ನಿರ್ಗತಿಕಳಾದ ಹೆಣ್ಣು ತನ್ನ ಪುಡಿಕಾಸಿನ ಖರ್ಚನ್ನು ನಿರ್ವಹಿಸಲಾದರೂ, ತಂದು ಹಾಕಿದ ಸಾಮಾನುಗಳನ್ನೇ ಮಾರಿಕೊಂಡಾದರೂ ದಾರಿ ಹುಡುಕಿದರೆ ಆಶ್ಚರ್ಯವೇನಿಲ್ಲ. ಅಂದರೆ ಮನೆಯ ಅಗತ್ಯಗಳನ್ನು ಹೇಳುವಾಗ ಯಜಮಾನನಿಗೆ ಸುಳ್ಳು ಲೆಕ್ಕಗಳು ತಲುಪುತ್ತವೆ. ಅಲ್ಲದೆ ಮನೆಯ ನಿರ್ವಹಣೆ ಎಂಬುದು ದಿನನಿತ್ಯದ ಜಂಜಡ. ಇದನ್ನೆಲ್ಲಾ ತಪ್ಪಿಸಿಕೊಳ್ಳಲು ಅವನು ಹೆಂಗಸಿನ ಕೈಯಲ್ಲಿ ನಿಗದಿತ ವಾದ ಒಂದು ಮೊತ್ತವನ್ನು ಹಾಕಿಬಿಟ್ಟು, ಹೇಗಾದರೂ ನಿಭಾಯಿಸಿಕೋ ಎಂದು ನಿರಾಳವಾಗಿ ಬಿಡುತ್ತಾನೆ. ಆದರೆ, ವಾಸ್ತವದಲ್ಲಿ ಅಷ್ಟು ನಿರಾಳನಾಗುವುದೂ ಇಲ್ಲ. ನಡೆದ ಎಲ್ಲ ಖರ್ಚುವೆಚ್ಚಗಳ ಬಗ್ಗೆ ಸರಿಯಾದ ಲೆಕ್ಕವನ್ನು ಅವಳು ಒಪ್ಪಿಸಬೇಕು. ಈ ಲೆಕ್ಕವನ್ನು ಸಂದೇಹದಿಂದಲೇ ಅವನು ಪರಿಶೀಲಿಸುತ್ತಾನೆ. ಸರಿ ತಪ್ಪುಗಳನ್ನು ತನಗೆ ಬೇಕಾದಂತೆ ನಿರ್ದೇಶಿಸುತ್ತಾನೆ. ಸಹಜವಾಗಿಯೇ ಈ ಹೆಣ್ಣು ತನಗಾಗಿ ಒಂದಿಷ್ಟು ಹಣವನ್ನು ಬೈತಿಟ್ಟರೆ ಅವಳನ್ನು ಏಕೆ ದೂರಬೇಕು? ಸ್ವತಃ ಸಂಪಾದಿಸುವ ಹೆಣ್ಣೇ ಆಗಲಿ. ಮನೆಯ ನಿರ್ವಹಣೆಗೆಂದು ಗಂಡಿನಿಂದ ಹಣ ಪಡೆದ ಹೆಣ್ಣೇ ಆಗಲಿ, ತಮ್ಮ ಕೈಯಲ್ಲಿನ ಹಣದ ಬಗ್ಗೆ ಸುಳ್ಳನ್ನೇಕೆ ಹೇಳುತ್ತಾರೆ. ಹಣದ ಬಗೆಗೆ ಯಾವ ಜವಾಬ್ದಾರಿಯಿಲ್ಲದವರಂತೆ ಸೀರೆ ಒಡವೆಗಳ ಶೋಕಿಗಾಗಿ ಉಡಾಯಿಸಿ ಬಿಡುತ್ತಾರೇಕೆ ಎಂಬುದರ ಸಾಮಾಜಿಕ ಅಧ್ಯಯನ ಹೆಣ್ಣಿನ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಅಸಹಾಯಕತೆಯನ್ನು ಇನ್ನಷ್ಟು ಸ್ಪಷ್ಟ ಗೊಳಿಸುತ್ತದೆ. ಅಂದರೆ ಇಂತಹ ಹೆಂಗಸರ ಈ ಬಗೆಯ ವರ್ತನೆ ಸಮರ್ಥನೀಯ ವೆಂದೇನೂ ಅಲ್ಲವಾದರೂ, ಪುರುಷ ಚಿಂತನೆಯು ಮಹಿಳೆಯ ಮೇಲೆ ಹೇರುವ ಹಲವು ಒತ್ತಡಗಳನ್ನು ಅವು ಸ್ಪಷ್ಟಪಡಿಸುತ್ತವೆ. ಇನ್ನೂ ಇಂತಹ ಶೋಕಿಗಳ ಬಗೆಗೆ ಎಂದೆಂದೂ ಯೋಚಿಸಲಾಗದೆ ತಮ್ಮ ಸಂಪಾದನೆಯಷ್ಟನ್ನೂ ಮನೆಯ ಯಜಮಾನನ ಸಂಪಾದನೆಗೆ ನೆರವು ಎಂದು ಒಪ್ಪಿಸಿಡಬೇಕಾದ ಮಹಿಳೆಯರ ಸ್ಥಿತಿಯನ್ನು ವಿವರಿಸಿಕೊಳ್ಳುವುದು ಕಷ್ಟ. ಮನೆಯ ಒಟ್ಟು

ಜವಾಬ್ದಾರಿಯನ್ನು ಸಮಾನವಾಗಿ ಹಂಚಿಕೊಂಡ ಗಂಡಹೆಂಡಿರು ತಮ್ಮಿಬ್ಬರ ಆದಾಯಗಳನ್ನೂ ಕೂಡಿಸಿ ಮನೆಯ ಒಂದು ಆದಾಯವೆಂದು ಪರಿಗಣಿಸು ವುದರಲ್ಲಿ ತಪ್ಪಿಲ್ಲ. ಆದರೆ ಇಲ್ಲಿ ಅವಳ ಆದಾಯವನ್ನೂ ತನ್ನ ಆದಾಯಕ್ಕೆ ಸೇರಿಸಿಕೊಂಡು, ಅವಳದೆಂಬುದೇನೂ ಇಲ್ಲವೆಂಬಂತೆ ಮಾಡುತ್ತಾನೆ. ಆಮೇಲೆ ಒಟ್ಟು ಆದಾಯದ ಬಳಕೆಯ ಬಗೆಗಿನ ನಿರ್ಧಾರವನ್ನೂ, ಹತೋಟಿಯನ್ನೂ ತನ್ನಲ್ಲಿ ಇಟ್ಟುಕೊಳ್ಳುತ್ತಾನೆ. ಮನಸ್ಸು ಬಂದರೆ ಅವಳ ಖರ್ಚಿಗೆ ಇಂತಿಷ್ಟು ಎಂದು ಬಿಸಾಡುತ್ತಾನೆ.

ಅವಳು ಸ್ವಲ್ಪ ಜೋರಿನವಳಾದರೆ, ತನ್ನ ಕೈಗೆ ಹಣ ಕೊಡುವದಿಲ್ಲವೆಂದು ಹಠತೊಟ್ಟು ನಿಂತರೆ, ಮನೆಯ ಖರ್ಚುವೆಚ್ಚಗಳೆಲ್ಲದರ ಹೊಣೆಯನ್ನೂ ಅವಳ ತಲೆಗೇ ಕಟ್ಟಿ, ತನ್ನದನ್ನು ಪ್ರತ್ಯೇಕವಾಗಿಟ್ಟುಕೊಂಡು ನಿರ್ಲಿಪ್ತನಾಗುತ್ತಾನೆ. ಮಧ್ಯಮ ಹಾಗೂ ಮೇಲು ವರ್ಗದ ಹೆಂಗಸರ ಪಾಡು ಇದಾದರೆ ಕೆಳವರ್ಗದ ಹೆಂಗಸರು ತಾವು ದುಡಿದದ್ದನ್ನೆಲ್ಲಾ ಗಂಡ ಮಕ್ಕಳಿಗೆ ಊಟ ಹಾಕಬೇಕಾದ ದಿನದಿನದ ಖರ್ಚನ್ನು ತೂಗುವುದರಲ್ಲೇಮುಗಿಸುತ್ತಾರೆ. ಆಕೆಯ ಗಂಡ ಮನೆಗೆ ಒಂದಿಷ್ಟು ತಂದು ಹಾಕಬೇಕೆಂಬ ಕರ್ತವ್ಯದಿಂದಲೂ ಬಿಡುಗಡೆ ಹೊಂದಿ, ಇವಳ ದುಡ್ಡಿನ ಮೇಲೂ ಅಧಿಕಾರ ಸ್ಥಾಪಿಸಲು ಯತ್ನಿಸುತ್ತಾನೆ. ಇವರನ್ನು ಬಿಟ್ಟರೆ ಮೇಲು ನೋಟಕ್ಕೆ ಯದ್ವಾತದ್ವಾ ಖರ್ಚು ಮಾಡುತ್ತಾ ಒಳ್ಳೆ ಮೋಜಿನ ಜೀವನವನ್ನು ಅನುಭವಿಸುತ್ತಿದ್ದಾರೆಂಬಂತೆ ಕಾಣುವ ತೀರಾ ಶ್ರೀಮಂತ ಮಹಿಳೆಯರು. ಇವರ ಸ್ವಾತಂತ್ರ್ಯ ಮೋಜಿಗಷ್ಟೇ ಸೀಮಿತ. ಯಾವುದೇ ಮುಖ್ಯ ಆರ್ಥಿಕ ಅಥವಾ ಕೌಟುಂಬಿಕ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ಅವಕಾಶ ಅವರಿಗೆಂದೆಂದೂ ದೊರೆಯುವದಿಲ್ಲ. ಬಹುಶಃ, ತಾವು ಯಾವ ಹಂತದವರೆಗೂ ಸಾಮಾಜಿಕ ಸಂಬಂಧಗಳನ್ನು ಹೊಂದಬೇಕು ಎಂಬುದರಿಂದ ಹಿಡಿದು ಶಿಕ್ಷಣ, ಉದ್ಯೋಗ, ವಿವಾಹ, ಮಕ್ಕಳು ಮರಿಗಳ ಯೋಗಕ್ಷೇಮಗಳಂತಹ ವೈಯಕ್ತಿಕ ಹಾಗೂ ಕೌಟುಂಬಿಕವಾದ ಎಲ್ಲ ಸಂಗತಿಗಳವರೆಗೆ ಈ ಮಹಿಳೆಯರಿಗೆ ಇರ ಬಹುದಾದಷ್ಟು ನಿರ್ಬಂಧಗಳು ಇತರ ವರ್ಗಗಳ ಸ್ತ್ರೀಯರಿಗೆ ಇಲ್ಲವೇನೋ. ಕುಟುಂಬದ ಪ್ರತಿಷ್ಠೆಯನ್ನು ಕಾಯುವ ನೆಪದಲ್ಲಿ ಇವರಷ್ಟು ಗೃಹ ಬಂಧನವೂ ಇತರ ಮಹಿಳೆಯರಿಗೆ ಇಲ್ಲವೆನಿಸುತ್ತದೆ.

ಅಂದರೆ, ಮಹಿಳೆ ಉದ್ಯೋಗಸ್ಥಳಾಗಿದ್ದು ದುಡಿದು ಸಂಪಾದಿಸುವವಳಿರಬಹುದು, ಇನ್ನಾವುದೇ ರೀತಿಯಲ್ಲಿ ಗಳಿಸುವವಳಾಗಿರಬಹುದು. ಖರ್ಚಿನ ಬಗ್ಗೆ ತಲೆಕೆಡಿಸಿಕೊಳ್ಳುವ ಪ್ರಸಂಗವಿಲ್ಲದಂತೆ ಗಂಡನಿಂದ ಹಣ ಪಡೆಯುವವಳಾಗಿರಬಹುದು. ಮಹಿಳೆ ಆರ್ಥಿಕವಾಗಿ ಅತಂತ್ರಳೇ ಆಗಿ ಉಳಿಯುವುದೇ ಅವಳ ಹಣೆಬರಹ ಎಂಬಂತೆ ಏಕೆ ಆಗುತ್ತದೆ? ನಾವು ಇಂದು ಬದುಕುತ್ತಿರುವುದು ಪುರುಷ ಚಿಂತನೆಯು ತನಗೆ ಬೇಕಾದಂತೆ ರೂಪಿಸಿರುವ ಸಮಾಜ ವ್ಯವಸ್ಥೆಯಲ್ಲಿ. ಇಲ್ಲಿನ ಎಲ್ಲ ಅಂಗಗಳೂ ಅವನಿಗೆ ಅನುಕೂಲಗಳನ್ನೂ, ಸವಲತ್ತು ಗಳನ್ನೂ, ಒದಗಿಸಲೆಂದೇ ಹುಟ್ಟಿಕೊಂಡಿವೆ. ಈ ಸಮಾಜದ ಪ್ರತಿಯೊಂದು ಅಂಗ ಸಂಸ್ಥೆಯೂ ಅವನ ನಿಯಂತ್ರಣದಲ್ಲಿದೆ. ಅದರಲ್ಲೂ ತೀರಾ ಮುಖ್ಯವಾದದ್ದು ವಿವಾಹ

ಸಂಸ್ಥೆ. ಮಹಿಳೆಯು ಎದುರಿಸಬೇಕಾಗಿ ಬರುವ ಬಹುತೇಕ ಎಲ್ಲ ಸಮಸ್ಯೆಗಳೂ ಈ ಕೇಂದ್ರದ ಸುತ್ತಲೇ ಗಿರಿಗುಟ್ಟುತ್ತವೆ. ಬಹುಶಃ ಈ ಸಮಸ್ಯೆಗಳಿಗೆ ಉತ್ತರಗಳನ್ನು ಈ ಕೇಂದ್ರವನ್ನು ಮುಖ್ಯವಾಗಿ ಪರಿಗಣಿಸಿಯೇ ಕಾಣಬೇಕೇನೋ. ಸ್ತ್ರೀವಾದಿ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಅವುಗಳಿಗೆ ನಿವಾರಣೋಪಾಯಗಳನ್ನು ಹುಡುಕಾಡುವ ಪ್ರಯತ್ನಗಳನ್ನು ನಮ್ಮ ಕಲಾವಿದರೂ ಸಾಹಿತಿಗಳೂ ನಡೆಸಿರುವುದೂ ಉಂಟು. ಇಂತಹ ಸ್ತ್ರೀವಾದಿ ಚಿಂತನೆಗಳು ಆ ಕಲಾವಿದರ ಸೃಜನಶೀಲತೆಯ ಭಾಗಗಳಾಗಿಯಷ್ಟೇ ಬಂದಿರಬಹುದು. ನಮ್ಮ ತ್ರಿವೇಣಿಯವರ ಕಾದಂಬರಿಗಳಲ್ಲಿ ಅವ್ಯಾಹತವಾಗಿ ಎಂಬಂತೆ ವಿವಾಹ ಸಂಸ್ಥೆಯನ್ನೇ ಕೇಂದ್ರವಾಗಿಟ್ಟುಕೊಂಡ ಕಥಾ ವಸ್ತುಗಳನ್ನು ನೋಡಬಹುದು. ತ್ರಿವೇಣಿಯವರದು ಪ್ರಜ್ಞಾಪೂರ್ವಕವಾಗಿ ನಡೆಸಿದ ಸ್ತ್ರೀವಾದಿ ಚಿಂತನೆ ಎನ್ನಲಾಗದು. ತಮ್ಮ ಸುತ್ತಲಿನ ಬದುಕನ್ನು ತಾವು ಕಂಡಂತೆ ಕಲಾತ್ಮಕವಾಗಿ ದಾಖಲಿಸುವಷ್ಟನ್ನೇ ಅವರು ಉದ್ದೇಶಿಸಿದ್ದರೇನೋ. ಆದರೆ ಈ ದಾಖಲೆಯ ಹಿನ್ನೆಲೆಯಲ್ಲಿ ಒಬ್ಬ ಮಹಿಳೆಯ ಸೂಕ್ಷ್ಮ ಸಂವೇದನೆ ಕೆಲಸ ಮಾಡಿದೆ. ಅವರ ಕಾದಂಬರಿಗಳಲ್ಲಿ ಮಹಿಳೆಯರ ಬದುಕಿಗೆ ಸಂಬಂಧಿಸಿದ ಸಮಸ್ಯೆಗಳು ವಿವಿಧ ಆಯಾಮಗಳಲ್ಲಿ ನಿರೂಪಿತವಾಗಿವೆ. ಈ ಸಮಸ್ಯೆಗಳ ಸ್ವರೂಪಗಳನ್ನು ವಿವರಿಸಿ, ಪರಿಹಾರಗಳನ್ನು ಸೂಚಿಸುವ ಪ್ರಯತ್ನಗಳನ್ನೂ ಅವರು ಮಾಡಿದ್ದಾರೆ. ಎಲ್ಲ ಜಾತಿ, ವರ್ಗ, ಪ್ರದೇಶಗಳ ವ್ಯಾಪ್ತಿಯನ್ನು ಇವರ ಕಾದಂಬರಿಗಳು ಒಳಗೊಂಡಿಲ್ಲವೆಂಬ ಮಿತಿಯನ್ನು ಇಲ್ಲಿ ಕಾಣುತ್ತೇವೆ.

ಆದರೂ ಮಹಿಳೆಯ ಸಮಸ್ಯೆಯ ಮೂಲವನ್ನು ಶೋಧಿಸಲು ಹೊರಡುವ ತ್ರಿವೇಣಿಯವರ ಪ್ರಯತ್ನ ಒಂದು ದೃಷ್ಟಿಯಿಂದಂತೂ ಗಮನಾರ್ಹ. ಸಮಾಜ ವ್ಯವಸ್ಥೆಯ ಒಂದು ಮುಖ್ಯ ಅಂಗವಾದ ವಿವಾಹದ ಸುತ್ತ ಮಹಿಳೆಯ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಅವರು ಯತ್ನಿಸಿದ್ದಾರೆ. ವಿವಾಹ ವ್ಯವಸ್ಥೆಯೂ ಪುರುಷ ಚಿಂತನೆಯ ಫಲವೇ. ವಿವಾಹ ಪುರುಷನಿಗೆ ಸಕಲ ಸವಲತ್ತುಗಳನ್ನೂ ಒದಗಿಸಲೆಂದೇ ಇರುವಂಥದು ಎಂಬುದರಲ್ಲಿ ಆಶ್ಚರ್ಯವೇನಿಲ್ಲ. ಈ ವ್ಯವಸ್ಥೆಯಲ್ಲಿ ಪುರುಷನು ತನ್ನ ಹಕ್ಕುಗಳನ್ನೂ ಹೆಣ್ಣಿನ ಕರ್ತವ್ಯಗಳನ್ನೂ ಕುರಿತ ನಿರ್ವಚನ, ವ್ಯಾಖ್ಯಾನ ಹಾಗೂ ನಿರ್ದೇಶನಗಳನ್ನು ಅಳವಡಿಸಿದ್ದಾನೆ. ಇದರಲ್ಲಿ ಪಾಲ್ಗೊಳ್ಳುವುದು ಮಹಿಳೆಗೆ ಅನಿವಾರ್ಯ. ಆಯ್ಕೆಯ ಅವಕಾಶವೇನೂ ಇಲ್ಲ. ವಿವಾಹದ ನೆಪದಲ್ಲಿ ಮಹಿಳೆಯ ಇಡೀ ಜೀವಮಾನವನ್ನು ಪುರುಷ ಚಿಂತನೆ ಒತ್ತೆ ಇಟ್ಟುಕೊಳ್ಳುತ್ತದೆಯಾಗಿ, ಮಹಿಳೆಯ ಎಲ್ಲ ಸಮಸ್ಯೆಗಳನ್ನೂ ಈ ಕೇಂದ್ರವನ್ನಾಧರಿಸಿಯೇ ವಿವೇಚಿಸುವುದು ಅತ್ಯಂತ ಸೂಕ್ತವೆನಿಸುತ್ತದೆ. ತ್ರಿವೇಣಿಯವರು ಪುರುಷ ಚಿಂತನೆಯು ಹೆಣ್ಣನ್ನು ನಿರ್ವಚಿಸಿ, ವ್ಯಾಖ್ಯಾನಿಸಿ, ನಿರ್ದೇಶಿಸುವ ಬಗ್ಗೆ ವಿಸ್ತಾರವಾದ ಚರ್ಚೆಗೆ ಅವಕಾಶವನ್ನು ಕಲ್ಪಿಸಿದ್ದಾರೆಂಬುದರ ಜೊತೆಗೆ, ಈ ಬಗ್ಗೆ ಮಹಿಳೆಯ ಪ್ರತಿಕ್ರಿಯೆಗಳನ್ನು ದಾಖಲಿಸುವ ಕೆಲಸವನ್ನೂ ಮಾಡಿದ್ದಾರೆ. ತ್ರಿವೇಣಿಯವರ ಕಾದಂಬರಿಗಳನ್ನು ವಿಶೇಷವಾಗಿ ಹೀಗೆ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಇನ್ನಷ್ಟು ಸೂಕ್ಷ್ಮ ಅಧ್ಯಯನಕ್ಕೆ

ಒಳಪಡಿಸಬಹುದು. ಇನ್ನಿತರ ಕಲಾಪಿದರಲ್ಲೂ, ಕಲಾಕೃತಿಗಳಲ್ಲೂ ಇಂತಹ ದೃಷ್ಟಿ ಕೋನಗಳನ್ನು ಗುರುತಿಸಬಹುದು.

ಮುಖ್ಯವಾಗಿ, ಮಹಿಳೆಗೆ ಹೊಸದಾಗಿ ದೊರಕಿದ ಉದ್ಯೋಗಾವಕಾಶ ಎಷ್ಟರ ಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕಲ್ಪಿಸುವಲ್ಲಿ ಅವಳಿಗೆ ನೆರವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇಷ್ಟೆಲ್ಲಾ ವಿವರಣೆಗಳನ್ನು ಚರ್ಚಿಸಬೇಕಾಯಿತು. ಉದ್ಯೋಗ ಮಾಡಿ ಸಂಪಾದಿಸಿದ, ಅಥವಾ ಇನ್ನಾವುದೇ ಮೂಲದಿಂದ ಅವಳ ಕೈಗೆ ಹತ್ತಿದ ಹಣದಿಂದ ಮಹಿಳೆಗೆ ದೊರೆಯಬಹುದಾದ ಸುಖದ ಸ್ವರೂಪ ಈ ಬಗೆಯದು. ಪುರುಷನ ಸಂಪಾದನೆಗೆ ಈ ತೊಡಕುಗಳಿಲ್ಲ. ಮಹಿಳೆ ಮನೆಯ ಹೊರಗೆ ಬಂದು ಉದ್ಯೋಗ ಮಾಡತೊಡಗಿದ್ದು ಪುರುಷನ ಅಗತ್ಯಗಳಿಗಾಗಿಯೇ. ಅವನು ಹೂಡಿದ ಹುನ್ನಾರಗಳಿಗೆ, ಅವು ತೋರಿದ ಭ್ರಮೆಗಳಿಗೆ ಅವಳು ಸಿಲುಕಿದಳೇನೋ ಹೌದು. ಆದರೆ ಅದರ ಒಟ್ಟು ಪರಿಣಾಮ ಮಾತ್ರ ಮಹಿಳೆಯ ಪಾಲಿನ ವರದಾನವೂ ಆಯಿತು. ಅವು ನೇರವಾಗಿ ಅವಳಿಗೆ ಹಲವು ಸಂಕಟಗಳನ್ನು ತಂದೊಡ್ಡಿದರೂ ಪರೋಕ್ಷವಾಗಿ ಹೊಸ ಗಾಳಿಯಲ್ಲಿ ಉಸಿರಾಡುವ ಅವಕಾಶವನ್ನೂ ಕಲ್ಪಿಸಿದವು.

ಪುರುಷನು ತನ್ನ ದುಡಿಮೆಯ ಕ್ಷೇತ್ರದಲ್ಲಿ ತನಗೆ ಹೆಚ್ಚುವರಿ ಎನಿಸಿ ಬೇಸರ ತರಿಸಿದ್ದ ಭಾಗಗಳ ನಿರ್ವಹಣೆಗಾಗಿ ಎಂದೇ ಮಹಿಳೆಯನ್ನು ಮನೆಯ ಹೊರಗೆ ಬರಲು ಆಹ್ವಾನಿಸಿದ. ತನ್ನ ಅನುಕೂಲಕ್ಕಾಗಿ ಅವಳು ದುಡಿಯಲಿ ಎಂದು ಆಶಿಸಿದ. ಆದರೆ ಉದ್ಯೋಗ ಕ್ಷೇತ್ರದಲ್ಲಿ ತನ್ನ ಪಾಲಿಗೆ ಬಂದದ್ದರ ನಿರ್ವಹಣೆಗಾಗಿ ಮಹಿಳೆ ಹೊರ ಲೋಕಕ್ಕೆ ಕಾಲಿರಿಸಿದ ಕೆಲವೇ ದಿನಗಳಲ್ಲಿ ಪುರುಷನಿಗೆ ತಾನು ತಪ್ಪಿದೆನೇನೋ ಎನಿಸುವಂತಾಯಿತು. ಮುಖ್ಯವಾಗಿ ಪುರುಷನಿಗೆ ದೊರೆಯುತ್ತಿದ್ದ ಸವಲತ್ತುಗಳಿಗೆ ಕ್ರಮೇಣ ಸಂಚಕಾರ ಬರತೊಡಗಿತು. ಹೊರಗೆ ದುಡಿಯಲು ಹೊರಟ ಮಹಿಳೆ ಹಿಂದಿನಷ್ಟು ಸಂಪೂರ್ಣವಾಗಿ ಮನೆಯವರ ಸೇವೆಯಲ್ಲಿ ನಿರತಳಾಗಲು ಸಮಸ್ಯೆಯಾಗತೊಡಗಿತೆಂಬುದು ಸಹಜವೇ. ಗಂಡ, ಮಕ್ಕಳ ಸೇವೆಯಲ್ಲಿ, ಮನೆಯ ಒಪ್ಪ ಓರಣಗಳಲ್ಲಿ ವ್ಯತ್ಯಯವಾದಾಗ ಗಂಡಸು ಸಹಿಸಲಾರದಾದ. ಮನೆಯ ಒಳಗಿನ ಶ್ರಮ ಅವಳಿಗೆ ಹೊರಗಿನ ಶ್ರಮ ತನಗೆ ಎಂದು ವಿಂಗಡಿಸಿದ್ದಾಗ ಸಮರ್ಪಕವೆನಿಸಿದ್ದ ತರ್ಕವನ್ನೇ ಅನ್ವಯಿಸಿ, ಅವಳು ಹೊರಗಿನ ಶ್ರಮದಲ್ಲಿ ಹೆಚ್ಚುವರಿಯಾಗಿ ತೊಡಗಿಕೊಂಡಾಗ, ತಾನು ಒಳಗಿನ ಶ್ರಮದಲ್ಲಿ ಪಾಲು ತೆಗೆದುಕೊಳ್ಳಬೇಕೆಂಬುದು ಅವನಿಗೆ ಒಪ್ಪಿಗೆಯಾಗುವ ಸಂಗತಿಯಾಗಲಿಲ್ಲ. ಹಾಗೆಂದು ತನಗೆ ಸಲ್ಲುವ ಸೇವೆಯಲ್ಲಿ ಕೊರತೆಯುಂಟಾಗುವುದನ್ನೂ ಸಹಿಸಲು ಸಾಧ್ಯವಿಲ್ಲ. ಹೋಗಲಿ ಎಂದರೆ, ಮಹಿಳೆಗೆ ಒದಗಿದ ಹೊಸ ಅವಕಾಶ ಅವಳ ಪಾಲಿಗೆ ಎರಡೆರಡು ಕಡೆಯ ದುಡಿತದ ಹೊರೆಯನ್ನು ಸಹಿಸಬೇಕಾದ ಅಪ್ರಿಯ ಸಂಗತಿಯಾದದ್ದು ನಿಜವಾದರೂ, ಅದರಲ್ಲೇ ಒಂದು ಗುಣಾತ್ಮಕ ಅಂಶವೂ ಅವಳ ಪಾಲಿಗಿತ್ತು. ಹೊರಗಿನ ಪ್ರಪಂಚದ ಗಾಳಿಯನ್ನು

ಅವಳು ಉಸಿರಾಡತೊಡಗಿದಂತೆ ಕ್ರಮೇಣ ಅವಳು ಜಾಗೃತಳಾಗತೊಡಗಿದ್ದಾಳೆ, ತನ್ನ ಹತೋಟಿಯನ್ನು ಮೀರಿ ಬೆಳೆಯುತ್ತಿದ್ದಾಳೆ ಎಂಬ ಸಂಗತಿ ಅವನ ಪಾಲಿಗೆ ನುಂಗಲಾರದ ತುತ್ತಾಗಿದೆ. ಈಗ ತನ್ನ ಶ್ರಮವನ್ನು ಹಗುರಗೊಳಿಸಿಕೊಳ್ಳುವ ಆಸೆಯಿಂದ ಮಹಿಳೆಯನ್ನು ಮನೆಯ ಹೊರಗೆ ಕಾಲಿರಿಸಲು ಅವಕಾಶ ಕಲ್ಪಿಸಿದ್ದು ತನಗೆ ಎಂತಹ ತೊಡಕನ್ನು ನಿರ್ಮಿಸಿತು ಎಂಬುದು ಹೊಳೆದುಬಿಟ್ಟಿದೆ. ಅವಳ ಮೇಲಿನ ತನ್ನ ಹಿಡಿತವನ್ನು ಮತ್ತೆ ಮೊದಲಿನಂತೆ ಬಲಪಡಿಸಬೇಕು. ಅವಳನ್ನು ಮತ್ತೆ ಮನೆಯುಷ್ಟಕ್ಕೆ ಬಂಧಿಸಬೇಕು. ಆದರೆ ಈಗ ಬಲಪ್ರಯೋಗದಿಂದ ಕೆಲಸ ಸಾಗುವಂತೆ ತೋರುತ್ತಿಲ್ಲ. ಅದಕ್ಕಾಗಿ ಅವನೀಗ ಕುತರ್ಕಗಳ ಮೊರೆ ಹೊಕ್ಕಿದ್ದಾನೆ. ಮಕ್ಕಳು, ತಾಯ್ತನ ಮೊದಲಾದ ಭಾವನಾ ಕ್ಷೇತ್ರದ ಮೇಲೆ ಧಾಳಿಮಾಡುತ್ತಾ, ಬ್ಲಾಕ್‌ಮೇಲ್ ಮಾಡುವ ತಂತ್ರಗಳನ್ನು ಹೂಡುತ್ತಿದ್ದಾನೆ.

ಈಗ ಮಹಿಳೆ ಎಚ್ಚೆತ್ತು ನಡೆಯಲು ಕಲಿತಿದ್ದಾಳೆ. ಸ್ತ್ರೀವಾದಿ ಚಿಂತನೆಗಳು, ಹೋರಾಟಗಳು ತಮ್ಮೆದುರು ಸವಾಲುಗಳೆಂಬಂತೆ ನಿಲ್ಲುವ ಪುರುಷ ಚಿಂತನೆಯ ಧಾಟಿಗಳ ಮೂಲಗಳನ್ನು ಶೋಧಿಸಿವೆ. ಕುಟುಂಬ ಕಲ್ಯಾಣ, ಮಾನವ ಜನಾಂಗದ ಒಟ್ಟು ಹಿತ ಎಂಬ ಆದರ್ಶಗಳನ್ನು ಮುಂದೆ ಒಡ್ಡುವ ಪುರುಷ ಚಿಂತನೆಯ ಹಿನ್ನೆಲೆಯಲ್ಲಿ ಪುರುಷನ ಸ್ವಾರ್ಥವೇ ಕೆಲಸ ಮಾಡುತ್ತಿರುವುದು ಎಂಬ ಅರಿವು ಮಹಿಳೆಗೆ ಸ್ಪಷ್ಟವಾಗಬೇಕು. ಮಾನವ ಜನಾಂಗದ ಹಿತದೃಷ್ಟಿಯನ್ನು ಕುರಿತ ಕಾಳಜಿ ಪರಿಗಣನೆಗೆ ಅರ್ಹವಾದ ಸಂಗತಿಯೇ ಹೌದು. ಆದರೆ ಇದರ ಪೂರ್ಣ ಹೊಣೆಗಾರಿಕೆಯನ್ನು ಮಹಿಳೆಯ ಮೇಲೆಯೇ ಹೊರಿಸಿಬಿಡುವುದು ನ್ಯಾಯವಲ್ಲ. ಈ ಕರ್ತವ್ಯದಲ್ಲಿ ಗಂಡು ಹೆಣ್ಣುಗಳಿಬ್ಬರೂ ಸಮನಾಗಿ ಪಾಲುಗೊಳ್ಳಬೇಕು. ಅದು ಬಿಟ್ಟು ಹಕ್ಕುಗಳೆಲ್ಲವೂ ಪುರುಷನವು, ಬಾಧ್ಯತೆಗಳೆಲ್ಲವೂ ಮಹಿಳೆಯ ಪಾಲಿನವು ಎಂಬ ಕುತರ್ಕದ ಬಗ್ಗೆ ಮಹಿಳೆ ಚಿಂತನೆಗೆ ತೊಡಗಿದ್ದಾಳೆ. ಅವಳೀಗ ಹಕ್ಕುಗಳನ್ನು ಕೇಳತೊಡಗಿದ್ದಾಳೆ. ಸಮಾನ ಸ್ಥಾನಮಾನಬೇಕು ಎನ್ನುತ್ತಿದ್ದಾಳೆ. ತನ್ನ ಅನ್ಯಾಯಗಳನ್ನು ಎತ್ತಿ ತೋರಿಸಿ ಪ್ರಶ್ನಿಸುತ್ತಿದ್ದಾಳೆ. ಅವಳು ಮೊದಲಿನಂತೆ ಮನೆಯ ಒಳಗೆ ಬಂಧಿಯಾಗಿದ್ದರೆ ಮಾತ್ರವೇ ತಾನು ಮೊದಲಿನಂತೆ ಹಾಯಾಗಿರುವುದು ಸಾಧ್ಯ. ಅವಳನ್ನು ಹೊರಗೆ ತಂದಷ್ಟೇ ಸುಲಭವಾಗಿ ಒಳಗೆ ತಳ್ಳಿ ಕೂಡಿಹಾಕಲು ಸಾಧ್ಯವಾಗದು. ಕುತರ್ಕದ ಅಸಂಗತ ವಾದಗಳನ್ನು ಮಂಡಿಸತೊಡಗಿದ್ದಾನೆ.

ಉದ್ಯೋಗ ಕ್ಷೇತ್ರದಲ್ಲಿ ಹೆಣ್ಣು ಸಮರ್ಥವಾಗಿ ದುಡಿಯುವುದು ಸಾಧ್ಯವಿಲ್ಲ. ಆದ್ದರಿಂದ ಅವಳು ತನಗೆ ಉಚಿತವಾದ ಮನೆಯ ಕೆಲಸಗಳಿಗೆ ಹಿಂತಿರುಗಲಿ ಎಂಬುದು ಅಂತಹ ಒಂದು ಮುಖ್ಯ ವಾದ. ಶತಮಾನಗಳಿಂದ ಅವನೇ ಆಳುತ್ತಾ ಬಂದ ಕ್ಷೇತ್ರವಾದ್ದರಿಂದ ಉದ್ಯೋಗ ಕ್ಷೇತ್ರದ ಪೂರ್ಣ ಹತೋಟಿ ಅವನಲ್ಲೇ ಇರುವುದು ಸಹಜ. ತನ್ನ ಈ ಹತೋಟಿಯನ್ನು ಅವನೀಗ ಆಯುಧವಾಗಿ ಬಳಸುತ್ತಾನೆ. ದುಡಿಯುವ ಕ್ಷೇತ್ರಗಳಲ್ಲಿ ಅವಳಿಗೆ ಸೂಕ್ತವಾದ ಅವಕಾಶಗಳನ್ನು ನಿರಾಕರಿಸುತ್ತಾ, ಅವಮಾನಕರವಾಗಿ ಅವಳನ್ನು

ನಡೆಸಿಕೊಳ್ಳುವುದರ ಮೂಲಕ, ಈ ಕ್ಷೇತ್ರದಲ್ಲಿ ತನ್ನ ಬದುಕು ಅಸಹನೀಯವೆಂಬುದನ್ನು ಮಹಿಳೆಯೇ ಒಪ್ಪಿ ಸೋತು ಕೈಚೆಲ್ಲಿ ಮನೆಗೆ ವಾಪಸಾಗಿಬಿಡುವಂತೆ ಸಹ ಅವನು ಪ್ರಯತ್ನಿಸುತ್ತಿದ್ದಾನೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಂಗಸು ಹಗಲು ರಾತ್ರಿಗಳನ್ನು ಪರಿಗಣಿಸದೆ ಹಲವು ಪುರುಷರ ನಡುವೆ ಒಂಟಿಯಾಗಿ ಕೆಲಸ ನಿರ್ವಹಿಸಲು ಇರುವ ಸಮಸ್ಯೆಗಳು, ವಿವಾಹಕ್ಕೆ ಸಂಬಂಧಿಸಿದಂತೆ ಉದ್ಯೋಗಕ್ಕೆ ತೊಡಕಾಗಿ ಬರುವ ಸಮಸ್ಯೆಗಳು, ದೈಹಿಕ ಅನಿವಾರ್ಯಗಳಾಗಿ ಬರುವ ಬಸಿರು ಬಾಣಂತನಗಳ ಸಮಸ್ಯೆಗಳು ಇಂತಹವುಗಳನ್ನೆಲ್ಲಾ ಅಸ್ತ್ರಗಳಾಗಿ ಬಳಸಿ ಅವಳು ಉದ್ಯೋಗ ಕ್ಷೇತ್ರವನ್ನು ತಾನಾಗಿಯೇ ತೊರೆದು ಮತ್ತೆ ಮನೆಯ ಬಂಧನಕ್ಕೆ ಸಿಲುಕಿಕೊಳ್ಳುವಂತೆ ಒತ್ತಡಗಳನ್ನು ಹೇರುತ್ತಿದ್ದಾನೆ. ಮನೆಯ ಒಳಗಿನದಾಗಲೀ, ಹೊರಗಿನದಾಗಲೀ ಈ ಸಮಾಜ ವ್ಯವಸ್ಥೆಯ ಇಂಚಿಂಚೂ ಪುರುಷನ ಹತೋಟಿಯಲ್ಲೇ ಇರುವುದು. ಇಡೀ ರಚನೆ ಇರುವುದೇ ಅವನ ಅನುಕೂಲಕ್ಕಾಗಿ. ಉದ್ಯೋಗ ಕ್ಷೇತ್ರದಲ್ಲಿ ತಾನು ಸಲೀಸಾಗಿ ಮುನ್ನಡೆಯುವ ಸಾಧ್ಯತೆಗಳು ಇಲ್ಲ ಎಂಬ ಮಾತು ಮಹಿಳೆಯ ಅನುಭವಕ್ಕೆ ಬರುತ್ತಿರುವ ವಿಷಯವೇ ಆದರೂ, ಮನೆಯ ಒಳಗಡೆ ಸಿಲುಕಿಕೊಳ್ಳುವುದರ ಅರ್ಥ ಅವಳಿಗೆ ಈಗ ಚೆನ್ನಾಗಿ ತಿಳಿದಿದೆ. ಪುರುಷ ಚಿಂತನೆಯು ನಿರ್ದೇಶಿಸುವ ಶ್ರಮವಿಭಜನೆ ಅವಳಿಗೆ ಈಗ ಒಪ್ಪಿಗೆ ಇಲ್ಲ. ಅದನ್ನು ಎದುರಿಸಿ ಪ್ರಶ್ನಿಸುವ ಧೈರ್ಯವನ್ನೀಗ ಅವಳು ಕೂಡಿಸಿಕೊಳ್ಳ ತೊಡಗಿದ್ದಾಳೆ. ಈ ಹೋರಾಟದಲ್ಲಿ ತಾನು ತೀವ್ರವಾದ ಸಂಘರ್ಷವನ್ನು ಎದುರಿಸಬೇಕಾಗಿದೆ ಎಂಬ ಎಚ್ಚರದಿಂದಲೇ ಮುನ್ನಡೆದಿದ್ದಾಳೆ. ಮಹಿಳೆಯರ ಈ ಸ್ಥಿತಿಯನ್ನು ಸ್ತ್ರೀವಾದಿ ಚಿಂತನೆ ಮನವರಿಕೆ ಮಾಡಿ ಕೊಡಲು ಯತ್ನಿಸುತ್ತಿದೆ.

ಮಕ್ಕಳನ್ನು ಹೊತ್ತು ಹೆರುವ ದೈಹಿಕ ಕರ್ತವ್ಯ ಮಹಿಳೆಯ ಪಾಲಿನದು ಎಂಬುದೇನೋ ನಿಸರ್ಗ ನಿಯಮ. ಆದರೆ ಮಕ್ಕಳ ಪಾಲನೆ, ಗೃಹ ನಿರ್ವಹಣೆ ಮೊದಲಾದ ಉಳಿದೆಲ್ಲ ಕರ್ತವ್ಯಗಳನ್ನೂ ಗಂಡಸು ಹಂಚಿಕೊಳ್ಳಲು ಸಾಧ್ಯವಿದೆ. ಈ ಕೆಲಸಗಳನ್ನು ಹೆಂಗಸರು ಮಾತ್ರವೇ ಸಮರ್ಥರಾಗಿ ನಿರ್ವಹಿಸಲು ಸಾಧ್ಯ ಎಂಬುದು ಹೊಗಳಿಕೆಯ ಹೊನ್ನ ಶೂಲವಷ್ಟೇ. ಮಕ್ಕಳ ಮೇಲೆ, ಮನೆಯ ಮೇಲೆ ಹಕ್ಕನ್ನು ಮಾತ್ರ ಚಲಾಯಿಸುವ ಗಂಡಸು, ಪಾಲನೆ ನಿರ್ವಹಣೆಗಳ ಚಾಕರಿಯಷ್ಟನ್ನೂ ಹೆಣ್ಣಿನ ಮೇಲೆ ಹಾಕಿಬಿಡುತ್ತಾನೆ. ಈಗ ಮಹಿಳೆ ಉದ್ಯೋಗದಲ್ಲಿ ತೊಡಗುತ್ತಾಳೆಂದರೆ, ತಾನು ಮನೆಯ ಒಂದಿಷ್ಟು ಹೊಣೆಯನ್ನು ಹಂಚಿಕೊಳ್ಳಲು ಮುಂದಾಗುವ ಬದಲು ಅವಳೇ ಉದ್ಯೋಗ ತೊರೆದು ಮನೆಯಲ್ಲಿರಲಿ ಎನ್ನುತ್ತಾನೆ. ಮಹಿಳೆ ಉದ್ಯೋಗ ಕ್ಷೇತ್ರದಲ್ಲಿ ಬಂದರೆ ಮನೆಯ ಶಾಂತಿ ಕದಡುತ್ತದೆ. ಎನ್ನುತ್ತಾನೆ. ರಾಜಿಗಳನ್ನು ಮಾಡಿಕೊಳ್ಳಬೇಕಾಗಿ ಬರುತ್ತದೆ ನಿಜ. ಆದರೆ ಮತ್ತೆ ಇದರ ಪೂರ್ಣ ಹೊಣೆಯನ್ನು ಹೆಣ್ಣಿನ ತಲೆಗೆ ಕಟ್ಟಲು ಗಂಡಸು ಹವಣಿಸುತ್ತಾನೆ. ಈ ಪುರುಷ ಮಹಿಮೆಯು ಸಮಾಜದಲ್ಲಿ ಒಪ್ಪಿತವಾಗುವುದೂ ಇದೇ. ವಿವಾಹ ಪೂರ್ವದಲ್ಲಾಗಲೀ ನಂತರದಲ್ಲಾಗಲೀ ಹೆಣ್ಣೇ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತಿದೆ. ಉದ್ಯೋಗದ

ಆಯ್ಕೆ, ಕಾರ್ಯಕ್ಷೇತ್ರ, ಬಡ್ತಿ, ವರ್ಗಾವಣೆ-ಎಲ್ಲ ವಿಷಯಗಳಲ್ಲೂ ಅವಳ ಮೇಲೆಯೇ ಒತ್ತಡ ಬೀಳುತ್ತದೆ. ಮಕ್ಕಳಿಗಾಗಿ, ಮನೆಗಾಗಿ ರಾಜಿ ಎಂಬ ತತ್ತ್ವ ನಿಜವೇ. ಆದರೆ ಗಂಡ ಹೆಂಡಿರಿಬ್ಬರೂ ಸಮಾನವಾಗಿ ಸಿದ್ಧರಾಗಬೇಕೆಂಬುದು ಪುರುಷನಿಗೆ ಒಪ್ಪಿಗೆಯಾಗುವ ತರ್ಕವಲ್ಲ.

ಗೃಹ ಬಂಧನದಿಂದ ಬಿಡುಗಡೆಯಾಗುವ ಒಂದು ಉಪಾಯವಾಗಿ ಮಹಿಳೆಗೆ ಉದ್ಯೋಗಾವಕಾಶವೆಂಬುದು ತೆರೆದುಕೊಂಡಿದೆ ಎಂಬುದು ನಿಜವಾದರೂ, ಮಹಿಳೆಯು ಅಂಥದೊಂದು ಅವಕಾಶವನ್ನು ಬಳಸಿಕೊಂಡರೆ ಮಾತ್ರವೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಸಾಧ್ಯ ಎಂದೇನೂ ಅಲ್ಲ. ಉದ್ಯೋಗಸ್ಥ ಹೆಣ್ಣು ಎಷ್ಟೆಲ್ಲಾ ಸಂಘರ್ಷಗಳನ್ನು ಎದುರಿಸಬೇಕಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ಈ ಹೋರಾಟದಲ್ಲಿ ಅವಳು ಸದಾ ದಣಿಯಬೇಕಾಗುತ್ತದೆ. ಸಾಕಷ್ಟು ಸಾಮರ್ಥ್ಯವಿಲ್ಲದಿದ್ದರೆ ಹೆಚ್ಚಿನ ದುಡಿತವಷ್ಟೇ ಅವಳ ಪಾಲಿಗೆ ದಕ್ಕುವುದು. ಮುಂದೆ ಒಟ್ಟು ಪರಿಣಾಮದಲ್ಲಿ ಈ ಅವಕಾಶ ಮಹಿಳೆಗೆ ಸಹಾಯಕವೇ ಇರಬಹುದು. ಈಗಿನ ಮಟ್ಟಿಗಂತೂ ಇದೊಂದು ಸಂಘರ್ಷವೇ ಎನಿಸಿರುವುದು ಸುಳ್ಳಲ್ಲ. ಹಾಗಾದರೆ ಮಹಿಳೆಯೊಬ್ಬಳು ತನ್ನ ಆತ್ಮಾಭಿಮಾನವನ್ನು ಬಲಿಗೊಡದಂತೆ ಬದುಕಬೇಕಾದರೆ ಸ್ವತಃ ಅವಳ ನಿಲುವು ಹಾಗೂ ಸಾಮರ್ಥ್ಯಗಳು ಹೇಗೆ ವ್ಯಕ್ತವಾಗಬೇಕು ಎಂಬುದು ಪ್ರಶ್ನೆ. ಈ ಗುಣಗಳಿಲ್ಲದ ಹೆಣ್ಣು ಉದ್ಯೋಗಸ್ಥಳಾದರೂ ಏನನ್ನೂ ಸಾಧಿಸಲಾರಳು. ಹಾಗಾಗಿ ಉದ್ಯೋಗ, ಸಂಪಾದನೆಗಳಂತಹ ವಿಚಾರದಲ್ಲಿ ಸ್ತ್ರೀವಾದಿ ಚಿಂತನೆ ಯಾವ ಧೋರಣೆಯನ್ನು ತಳೆಯಬೇಕು?

ಗಂಡ ಹೆಂಡರಿಬ್ಬರೂ ದುಡಿದರೆ ಮಾತ್ರವೇ ಸಂಸಾರದ ಪಥ ಸಾಗುತ್ತದೆ ಎಂಬ ಅನಿವಾರ್ಯವಿಲ್ಲದಾಗ, ಇಬ್ಬರಲ್ಲಿ ಯಾರೇ ಸಂಪಾದನೆಗೆ ತೊಡಗಿದರೂ ಅದು ಕುಟುಂಬದ ಒಟ್ಟು ಆದಾಯವೆಂಬಂತೆ ಅವರಿಬ್ಬರೂ ಪರಿಗಣಿಸಲು ಒಪ್ಪಿದಾಗ, ಒಬ್ಬರು ಮನೆಯ ಒಳಗೆ ಮತ್ತೊಬ್ಬರು ಮನೆಯ ಹೊರಗೆ ದುಡಿಯುವುದನ್ನು ತರತಮ ಭಾವವಿಲ್ಲದೆ ಹಂಚಿಕೊಂಡಾಗ, ನಿಜವಾಗಿಯೂ ಕುಟುಂಬದ ಎಷ್ಟೋ ಒತ್ತಡಗಳು ಹಗುರಗೊಳ್ಳುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಇದು ಕೇವಲ ಆದರ್ಶ ಸ್ಥಿತಿಯ ಒಂದು ಕನಸು ಮಾತ್ರ ಎಂಬುದೂ ಸ್ಪಷ್ಟ. ಆದರೆ, ಈ ವಿಭಜನೆಯಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲದೆ, ಹೆಂಗಸು ಮನೆಯ ಒಳಗಿನ ಸೇವಾಕ್ಷೇತ್ರಕ್ಕೆ, ಗಂಡಸು ಮನೆಯ ಹೊರಗಿನ ಸಂಪಾದನೆಯ ಕ್ಷೇತ್ರಕ್ಕೆ ಮೀಸಲು ಎಂಬಂತಾಗಿ, ಪುರುಷನು ಆರ್ಥಿಕ ಹತೋಟಿಯನ್ನು ಗಳಿಸಿ ಆ ಮೂಲಕವೇ ಅಧಿಕಾರದ ಹಕ್ಕನ್ನೂ ಸ್ಥಾಪಿಸಿ ಹೆಂಗಸನ್ನು ನಿಯಂತ್ರಿಸಲು ತೊಡಗುತ್ತಾನೆಂಬುದು ಚಾರಿತ್ರಿಕವಾಗಿ ನಡೆದು ಬಂದಿರುವ ಸಾಮಾಜಿಕ ಸತ್ಯ. ಹೆಂಗಸು ಮನೆಯಲ್ಲಿ ದುಡಿಯುತ್ತಾಳೆಂಬುದಕ್ಕೆ ಬೆಲೆಯೇ ಇಲ್ಲದಂತಾಗಿ, ಅವನು ತಂದು ಹಾಕಿದ ಕೂಳಿಗೆ ಅವಳು ಅವನಿಗೆ ಸೇವೆಯನ್ನು ಒದಗಿಸಬೇಕಾದ್ದು ಅನಿವಾರ್ಯ ಎಂಬಂತಾಗುತ್ತದೆ.

ಆದರೆ ಇವಳ ಸೇವೆಗೂ ಅವನು ತಂದು ಹಾಕಿದ್ದಕ್ಕೂ ಸಮನಾಯಿತು ಎಂಬಂತಲ್ಲ (ಅವಳು ಅವನ ಹಂಗಿನ ಕೂಳಿಗೆ ಇರುವವಳು ಎಂಬಂತೆ ಹೀನಾಯವಾಗುತ್ತದೆ. ಈ ಸ್ಥಿತಿ ಸಹಜವಾಗಿ ಮಹಿಳೆಯ ಅಸ್ತಿತ್ವದ ಪ್ರಶ್ನೆಯಾಗುತ್ತದೆ. ಸಂಪಾದನೆ, ಸೇವೆಗಳೆರಡೂ ಸಮಾನ ಮೌಲ್ಯದವೆನಿಸಿ, ಅವೆರಡೂ ಪರಸ್ಪರ ಅವಲಂಬಿತ ಅಂಶಗಳು ಎಂಬುದು ಪರಿಗಣಿತವಾದರೆ ಸಮಸ್ಯೆ ಇಲ್ಲ. ಆದರೆ ಪುರುಷ ಚಿಂತನೆ ಇದನ್ನೆಂದೂ ಒಪ್ಪಿ ನಡೆಯುವುದಿಲ್ಲ. ಪುರುಷನಿಗೆ ತಾನು ಅಧೀನಳಲ್ಲ, ಸಮಾನಳು ಎಂದು ಸ್ಥಾಪಿಸುವುದು ಹೇಗೆ ಎಂಬುದೇ ಹೆಣ್ಣಿನ ಮುಂದೆ ಇರುವ ದೊಡ್ಡ ಸಮಸ್ಯೆ.) ಈ ಮೊದಲೇ ಹೇಳಿದಂತೆ ಹೊರಗೆ ದುಡಿದು ಸಂಪಾದಿಸಿದರೂ ಅದರ ಮೇಲಿನ ತನ್ನ ಹಕ್ಕನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗದ ಹೆಂಗಸಿಗೆ, ಹೊರಗಿನ ಉದ್ಯೋಗ ಎಂಬುದು ಕೇವಲ ಹೆಚ್ಚುವರಿ ಹೊರೆ ಮಾತ್ರವೇ ಆಗಬಹುದು. ತನ್ನ ವಿಕಸನಕ್ಕೆ ಹೊರಗಿನ ಪ್ರಪಂಚದ ಅನುಭವವನ್ನು ಅಳವಡಿಸಿಕೊಳ್ಳಲು ಅವಳಲ್ಲಿ ಸಾಮರ್ಥ್ಯ ಕೂಡದಿದ್ದರೆ, ಕುಟುಂಬದ ಶೋಷಣೆಯ ಜೊತೆಗೆ ಸಾರ್ವಜನಿಕ ಶೋಷಣೆಗೂ ಸಿಲುಕಬೇಕಾದ ಸಂಕಟ ಮಾತ್ರವೇ ಅವಳಿಗೆ ದಕ್ಕುವುದು. ಬಾಣಲೆಯಿಂದ ಬೆಂಕಿಗೆ ಹಾರುವ ಈ ಪ್ರಯತ್ನದಲ್ಲಿ ಖಂಡಿತವಾಗಿಯೂ ಲಾಭವಿಲ್ಲ. ಮನೆಯ ಹೊರಗಿನ ಅವಕಾಶಗಳಿಗೆ ತೆರೆದುಕೊಳ್ಳಬೇಕೆಂಬ ಪ್ರಯತ್ನದಲ್ಲಿ ಬಿಡುಗಡೆಯ ಆಶಯವಿದೆ. ಕೇವಲ ಹಣ ಸಂಪಾದಿಸುವ ಗುರಿಯಲ್ಲ. ಹಣವು ಅವಳ ಸ್ವಾಭಿಮಾನವನ್ನು ನೆಲೆಗೊಳಿಸುವ, ಅವಳ ಹಕ್ಕನ್ನು ಅವಳು ಪಡೆಯಲು ಸಾಮರ್ಥ್ಯವನ್ನು ಅವಳಲ್ಲಿ ಬೆಳೆಸುವ, ಅವಳ ಬದುಕನ್ನು ಸ್ವಂತ ಇಚ್ಛೆಯಿಂದ ರೂಪಿಸಿ ಬಾಳಲು ನೆರವಾಗುವ ಸಾಧನವಾಗಬೇಕಷ್ಟೇ. ಸಂಪಾದಿಸಿ ದಷ್ಟಕ್ಕೇ ಮಹಿಳೆಗೆ ಇವೆಲ್ಲ ತಾನಾಗಿ ದಕ್ಕಿ ಬಿಡುವುದಿಲ್ಲ. ಆದ್ದರಿಂದ ಮನೆಯ ಒಳಗೇ ಉಳಿದು ಸಹ ಹೆಣ್ಣು ತನ್ನ ಸ್ವಾಭಿಮಾನವನ್ನು ಕಾಯ್ದುಕೊಂಡು ಬದುಕುವ ಸಾಧ್ಯತೆ ಇದ್ದೇ ಇದೆ. ಮನೆಯ ಒಳಗಿನ ತನ್ನ ಕರ್ತವ್ಯಗಳಷ್ಟನ್ನೂ ಮಾಡುತ್ತಲೇ, ಹೆಣ್ಣೆಂದರೆ ಹೀಗೆ ಎಂದು ನಿರ್ವಚಿಸಿ ನಿರ್ದೇಶಿಸುವ ಪುರುಷನ ಅಭಿಪ್ರಾಯವನ್ನು ಪಲ್ಲಟಗೊಳಿಸಿ, ಮನೆಯ ಒಳಗಿನ ತನ್ನ ದುಡಿಮೆಗೂ ಪುರುಷನು ಮನೆಯ ಹೊರಗೆ ದುಡಿದು ತರುವ ಸಂಪಾದನೆಯಷ್ಟೇ ಬೆಲೆ ಇದೆ ಎಂದು ಸ್ಥಾಪಿಸಲು ಅವಳು ಸಮರ್ಥಳಾದರೆ, ನಿಜವಾದ ಅರ್ಥದಲ್ಲಿ ಅವಳೂ ಸ್ತ್ರೀವಾದಿಯೇ. ತನ್ನ ಬದುಕನ್ನು ಜಗತ್ತಿನ ಚೌಕಟ್ಟಿನಲ್ಲಿ ಸುಂದರವಾಗಿ ಚಿತ್ರಿಸಬಲ್ಲ ಸಾಮರ್ಥ್ಯ ಈ ಹೆಣ್ಣಿಗೆ ಇರುತ್ತದೆ.

ಹೀಗೆ ಸ್ತ್ರೀವಾದದ ಬಗೆಗೆ ನಮಗೆ ನಾವೇ ವಿವರಿಸಿಕೊಳ್ಳುತ್ತಾ ಈ ಬಗ್ಗೆ ಪ್ರಶ್ನೆಗಳನ್ನೂ ಸಂದೇಹಗಳನ್ನೂ ಚರ್ಚೆಗೆ ಒಳಗು ಮಾಡುತ್ತಾ ಎಷ್ಟೇ ದೀರ್ಘವಾಗಿ ಮಾತನಾಡಿದರೂ, ಕೊನೆಗೊಮ್ಮೆ ನಿವಾರಣೆ ಮಾಡಿಯೇ ತೀರಬಹುದೆಂಬ ರೀತಿಯ ಸಮಾಧಾನಗಳನ್ನು ಪಡೆಯುವುದೇನೂ ಸಾಧ್ಯವಿಲ್ಲ. ಏಕೆಂದರೆ ಪುರುಷನು ಚರ್ಚೆಗಾಗಿ, ತಿಳುವಳಿಕೆಗಾಗಿಯೇನೂ ಈ ಪ್ರಶ್ನೆಗಳನ್ನೆತ್ತಿಲ್ಲ. ಅವನ ಉದ್ದೇಶವೇ ಬೇರೆಯಾದ್ದರಿಂದ ಅವನ ಪ್ರಶ್ನೆಗಳು ಮುಗಿಯುವುದೂ ಇಲ್ಲ. ಪ್ರಶ್ನೆಗಳು ಒಮ್ಮೆ ಮುಗಿಯಿತೆಂದರೂ, ಸ್ತ್ರೀವಾದಿ ಚಿಂತನೆಗೆ

ಬೇರೆಯದೇ ಆದ ಹಲವು ಬಗೆಯ ಸವಾಲುಗಳನ್ನೆಸೆಯುತ್ತಲೇ ಇರುತ್ತಾನೆ. ಸ್ತ್ರೀವಾದಿ ಚಿಂತನೆಯ ಬಗೆಗೆ ವಿರೋಧದ, ಅಪಪ್ರಚಾರದ ಅಭಿಪ್ರಾಯಗಳು ಏಕೆ ಬರುತ್ತವೆ, ಅವು ಹೆಂಗಸರನ್ನು ಒಳಗೊಂಡುಬಿಡುವಷ್ಟು ತೀವ್ರವಾಗಿ ಹೇಗೆ ಹರಡುತ್ತವೆ, ಸ್ತ್ರೀವಾದಿ ಚಿಂತನೆಗಳು ಏಕೆ ಗೇಲಿ ತಮಾಷೆಗಳಿಗೆ ಒಳಗಾಗುತ್ತವೆ, ಸ್ತ್ರೀವಾದಿಗಳೆಂದರೆ ಪುರುಷ ದ್ವೇಷಿಗಳೇ, ತಾಯ್ತನದ ವಿರೋಧಿಗಳೇ, ಮನೆ ಗಂಡ ಮಕ್ಕಳು ಎಂದರೆ ಮೂಗೆಳೆಯುವ ಕುಟುಂಬ ನಾಶಕ ತಿಳಿಗೇಡಿಗಳೇ-ಎಂಬಂತಹ ಆಕ್ಷೇಪಗಳನ್ನೂ ಸಂದೇಹಗಳನ್ನೂ ನಾವಿಂದು ಸ್ವಸ್ಥ ಚಿಂತನೆಗೆ ಒಡ್ಡಿ ನಿರುದ್ವಿಗ್ನರಾಗಿ ಮುನ್ನಡೆಯ ಬೇಕಿದೆ.

ಇಷ್ಟೆಲ್ಲಾ ಹೇಳಿದ ಮೇಲೆ ಒಂದು ಸಂದೇಹ ಉಳಿಯುತ್ತದೆ. ಪುರುಷರೆಲ್ಲರೂ ಸ್ತ್ರೀವಿರೋಧಿಗಳೇನು? ಅವಳ ಹಿತಾಸಕ್ತಿಯನ್ನು ಬಯಸುವ ಪುರುಷರು ಚಿಂತನೆ ಮಾಡಿಯೇ ಇಲ್ಲವೇನು? ಸ್ತ್ರೀಯರು ಪುರುಷ ದ್ವೇಷಿಗಳಲ್ಲ, ಸ್ತ್ರೀವಾದಿ ಚಿಂತನೆ ಎಂಬುದು ಒಟ್ಟಾರೆಯಾಗಿ ಬದುಕಿನ ಸಾಮರಸ್ಯವನ್ನು ಸಾಧಿಸಲು ಪುರುಷ ಚಿಂತನೆಯೊಂದಿಗೆ ನಡೆಸಿರುವ ಒಂದು ಸಂಧಾನ ಎಂಬ ಮಾತು ಹೇಗೆ ನಿಜವೋ, ಹಾಗೆಯೇ ಬದುಕಿನಲ್ಲಿ ಇಂತಹುದೊಂದು ಸಾಮರಸ್ಯವನ್ನು ಬಯಸಿ ಚಿಂತನೆಗೆ ತೊಡಗುವ ಪುರುಷರಿದ್ದಾರೆ ಎಂಬುದೂ ನಿಜ. ವಾಸ್ತವವಾಗಿ ಮಹಿಳೆಯರ ಸಮಸ್ಯೆಗಳನ್ನು ಸಾಮಾಜಿಕ ಸಮಸ್ಯೆಗಳೆಂದು ಮೊದಲಿಗೆ ಗುರುತಿಸಿ ಪ್ರತಿಪಾದಿಸಿದವರು, ಅವುಗಳ ಬಗೆಗೆ ಮಹಿಳೆಯರನ್ನು ಎಚ್ಚರಿಸಲು ಪ್ರಯತ್ನಿಸಿದವರು, ಸ್ವತಃ ಮುಂದೆ ನಿಂತು ಆ ಸಮಸ್ಯೆಗಳ ನಿವಾರಣೆಗಾಗಿ ದುಡಿದವರು ಪುರುಷರೇ. ದೀರ್ಘಕಾಲದ ಅಧೀನತೆಯಲ್ಲಿ ಮಹಿಳೆ ತೊಳಲುತ್ತಿದ್ದಾಳಾದರೂ, ತನ್ನ ಸಮಸ್ಯೆಯನ್ನು ಕುರಿತು ಸಾರ್ವತ್ರಿಕವಾಗಿ ಚಿಂತಿಸಿ, ಸಮಸ್ಯೆಯ ಸ್ವರೂಪವನ್ನು ವಿವರಿಸಿಕೊಳ್ಳುವಲ್ಲಿ 'ಅವಳಿಗೆ ಅಗತ್ಯವಾಗಿದ್ದ ಚೈತನ್ಯವೇ ಅವಳಲ್ಲಿರಲಿಲ್ಲ. ಈ ಚೈತನ್ಯವನ್ನು ಚಿಗುರಿಸುವ ಪ್ರಯತ್ನಗಳು ಆರಂಭಗೊಂಡದ್ದೂ ಇಂತಹ ಮಹನೀಯರಾದ ಹಲವು ಪುರುಷರಿಂದಲೇ. ನಮ್ಮಲ್ಲಿ ಸ್ತ್ರೀವಾದಿ ಚಿಂತನೆಗಳನ್ನು ಸಮರ್ಥವಾಗಿ ಮತ್ತು ನಿರಂತರವಾಗಿ ನಡೆಸುತ್ತಲೇ ಬಂದಿರುವ ಪುರುಷ ಚಿಂತಕರೇನೂ ಕಡಿಮೆ ಸಂಖ್ಯೆಯಲ್ಲಿಲ್ಲ. ಅಂತಹವರನ್ನು ಸ್ನೇಹಪೂರ್ಣವಾಗಿ ಪರಿಗಣಿಸಿ ಒಪ್ಪಿಯೂ, ಇಂತಹ ಪುರುಷರ ಸ್ತ್ರೀವಾದಿ ಚಿಂತನೆಗಳಲ್ಲಿ, ಅವರು ಪುರುಷರು ಎಂಬ ಕಾರಣದಿಂದಾಗಿಯೇ ನುಸುಳಿ ಬರುವ ಕೆಲವು ಮಿತಿಗಳನ್ನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಈ ಮಿತಿಗಳಿಗೆ ಬಹುಮುಖ್ಯ ಕಾರಣ, ಈ ಸಮಾಜ ಬಹುದೀರ್ಘಕಾಲದ ಪುರುಷ ಚಿಂತನೆಯ ನೆರಳಲ್ಲೇ ಬದುಕಿ ಬಂದಿದೆ ಎಂಬುದೇ ಆಗಿದೆ. ಹಾಗಾಗಿ ಇವು ವ್ಯಕ್ತಿಗಳ ಮಿತಿಗಳಲ್ಲ. ಪುರುಷ ಪ್ರಧಾನ ಸಮಾಜದ ಸ್ತ್ರೀವಿರೋಧಿ ಚಿಂತನೆಗಳು ಮಹಿಳೆಯರನ್ನೇ ಪ್ರಭಾವಿಸಿ ಒಪ್ಪಿಸಿ ಬಿಡುತ್ತವೆ ಎಂದ ಮೇಲೆ, ಪುರುಷರು ಇದರ ಪ್ರಭಾವಕ್ಕೆ ಪಕ್ಕಾಗುತ್ತಾರೆಂಬುದು ತೀರಾ ಸಹಜ. ಇಂಥಾ ಪ್ರಭಾವದಿಂದಲೂ ಹೊರಗಿಣುಕಿ ವಸ್ತು ನಿಷ್ಠವಾಗಿ ವಿವೇಚಿಸಿ ಬದುಕಿನ ಪರವಾದ ಚಿಂತನೆಗೆ ತೊಡಗುವುದು ಅವರಿಗೆ ಸಾಧ್ಯವಾಯಿತೆಂಬುದೂ ಗೌರವಾನ್ವಿತ ಸಂಗತಿಯೇ. ಆದರೂ, ಅವರ

ಚಿಂತನೆಗಳಲ್ಲಿನ ಮಿತಿಗಳನ್ನು ಗುರುತಿಸುವುದು ಅವರಿಗೆ ತೋರುವ ಅವಿನಯವೆಂದೇನೂ ಭಾವಿಸಲಾಗದು.

ಸ್ತ್ರೀವಾದಿ ಚಿಂತನೆಗಳಲ್ಲಿ ತೊಡಗುವವರು ಮಹಿಳೆಯರೇ ಆಗಿದ್ದಾಗ, ಸಮಸ್ಯೆಗಳನ್ನು ಸಾಕಷ್ಟು ವಸ್ತುನಿಷ್ಠವಾಗಿ ಪರಿಶೀಲಿಸುವ ಸಮತೋಲನ ಅವರಿಗೆ ಕಾಣದಿರಬಹುದು. ಅದು ವಿಪರೀತ ಪ್ರತಿಕ್ರಿಯೆಗಳಿಗೆ ಕಾರಣವಾಗಲೂಬಹುದು. ಎಲ್ಲಕ್ಕಿಂತ ಮಿಗಿಲಾಗಿ ತಾನು ಚಿಂತಿಸಿದ್ದನ್ನು ಸಮರ್ಥವಾಗಿ ಅಭಿವ್ಯಕ್ತಿಸಲು ಅವಳಿಗೆ ಸಾಧ್ಯವಾಗದೆಯೂ ಹೋಗಬಹುದು. ಈ ಕೊನೆಯಲ್ಲಿ ಹೇಳಿದ ಮಿತಿಗೆ ಮುಖ್ಯ ಕಾರಣ ಅವಳು ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸುವ ಭಾಷೆ, ಪುರುಷ ಚಿಂತನೆಯು ತನ್ನ ಅನುಕೂಲಕ್ಕಾಗಿ ನಿರ್ಮಿಸಿಕೊಂಡ ಭಾಷೆಯೇ ಆಗ ಬೇಕಿದೆ ಎಂಬುದು. ಮಹಿಳೆಗೆ ಈಗೀಗಷ್ಟೇ ಬಾಯಿ ತೆರೆದು ಮಾತನಾಡಲು ಅವಕಾಶ ಸಿಕ್ಕಿದೆ. ಅವಳಿನ್ನೂ ತನ್ನ ಅಭಿವ್ಯಕ್ತಿಗೆ ಸೂಕ್ತವಾಗಿ ಭಾಷೆಯನ್ನು ರೂಪಿಸಿಕೊಳ್ಳುವ ಅಗತ್ಯವಿದೆ. ಹಾಗಾಗಿ ಮಹಿಳೆಯರೇ ನಡೆಸುವ ಸ್ತ್ರೀವಾದಿ ಚಿಂತನೆಗಳಲ್ಲಿ ಇಂತಹ ಸಮಸ್ಯೆಗಳು ನುಸುಳುವ ಸಾಧ್ಯತೆ ಇದೆ. ಪುರುಷರು ಸ್ತ್ರೀವಾದಿ ಚಿಂತನೆಗಳಲ್ಲಿ ತೊಡಗಿದಾಗ ಬೇರೆಯೇ ಕೆಲವು ಮಿತಿಗಳು ತಲೆಹಾಕುತ್ತವೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷನ ಬೌದ್ಧಿಕ ಪ್ರಗತಿಗೆ ಅವಕಾಶಗಳು ದೊರೆಯುತ್ತಾ ಬಂದಿದೆ. ಅಲ್ಲದೆ, ಮಹಿಳೆಯ ವ್ಯಕ್ತಿತ್ವದಲ್ಲಿ ಬೆರೆತು ಹೋದಷ್ಟು ಭಾವಪ್ರಧಾನತೆ ಪುರುಷನ ವ್ಯಕ್ತಿತ್ವದಲ್ಲಿ ಕಾಣುವುದಿಲ್ಲ. ಪ್ರತಿಯೊಂದನ್ನು ಅವನು ವಸ್ತುನಿಷ್ಠವಾಗಿ ದೂರ ನಿಂತು ನೋಡಬಲ್ಲ. ಬೌದ್ಧಿಕ ಚರ್ಚೆಗೆ ಈ ಗುಣ ಅತ್ಯಂತ ಸಹಕಾರಿಯಾದದ್ದು. ಆದರೆ ಸ್ತ್ರೀವಾದಿ ಚಿಂತನೆ ಕೇವಲ ಬೌದ್ಧಿಕ ಸಾಮರ್ಥ್ಯವನ್ನು ಅವಲಂಬಿಸಿದ್ದಲ್ಲ. ಇದು ಮಾನವ ಸಂಬಂಧಗಳ ಪ್ರಶ್ನೆಯನ್ನು ಕುರಿತದ್ದು. ಈ ಅಂಶ ಒಂದಿಷ್ಟು ಮರೆಯಾದರೂ ಚರ್ಚೆ ವಸ್ತುನಿಷ್ಠತೆಯ ವಿಪರೀತ ಹಂತಕ್ಕೆ ದಾಟಿ ಬಿಡಬಹುದು. ಸ್ತ್ರೀವಾದಿ ಚಿಂತನೆಯಲ್ಲಿ ಚರ್ಚಿತವಾಗುವ ಸಮಸ್ಯೆಗಳು ಬಹುಮಟ್ಟಿಗೆ ಸ್ತ್ರೀಯ ಸಮಸ್ಯೆಗಳು. ಪುರುಷ ಎಷ್ಟೇ ಸಹಾನುಭೂತಿಯಿಂದ ಅವನ್ನು ಪರಿಶೀಲಿಸಿದರೂ ಅದೊಂದು ಪ್ರಜ್ಞಾಪೂರ್ವಕ ಪ್ರಯತ್ನವೇ ಆಗಿರುತ್ತದೆ. ಹಾಗಾಗಿ ಬೌದ್ಧಿಕತೆ ಮೇಲುಗೈ ಪಡೆಯುವ ಸಾಧ್ಯತೆಗಳೂ ಹೆಚ್ಚು. ಹೀಗಾದಾಗ, ಮೇಲುನೋಟಕ್ಕೆ ಬಹಳ ತರ್ಕಬದ್ಧವಾಗಿ ಕಂಡರೂ, ಕೆಲವೊಮ್ಮೆ ವಾಸ್ತವ ಸಮಸ್ಯೆಯನ್ನು ಗ್ರಹಿಸುವಲ್ಲಿ ಅಂತಹ ಚಿಂತನೆ ವಿಫಲವಾಗಲೂ ಬಹುದು. ಇಂತಹ ಕೆಲವು ಚರ್ಚೆಗಳನ್ನು ನಾನು ಗಮನಿಸಿದ್ದೇನೆ. ಇಲ್ಲಿ ಪುರುಷರ ಪ್ರತಿಕ್ರಿಯೆಗಳು, ಅಧ್ಯಯನದ ವಿಧಿವಿಧಾನಗಳು, ಮಾದರಿಗಳು, ತರ್ಕ ಮುಂತಾದವನ್ನು ಹೆಚ್ಚಾಗಿ ಗಮನಿಸುವಂತೆ ತೋರುತ್ತವೆ. ಮಹಿಳೆಯು ತನ್ನ ಸಮಸ್ಯೆಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಯೋಚಿಸದೆ ದಿನನಿತ್ಯದ ಪರಿಕರಗಳನ್ನೇ ದೊಡ್ಡದು ಮಾಡುವುದರಿಂದ ಚಿಂತನೆಯ ಹಾದಿಯೇ ತಪ್ಪುತ್ತದೆ ಎಂದು ಅವರು ಭಾವಿಸಿ, ಸ್ತ್ರೀವಾದಿ ಚಿಂತನೆಗೆ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುವಲ್ಲಿ ಶ್ರಮವಹಿಸುತ್ತಾರೆ. ಗಂಭೀರವಾದ ಯಾವುದೇ ಚಿಂತನೆಗೆ ಹೀಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು

ರೂಪಿಸಿಕೊಳ್ಳುವ ಅಗತ್ಯವಿದೆ ಎಂಬುದು ಒಪ್ಪಬೇಕಾದ್ದೇ. ಆದರೂ ದಿನ ನಿತ್ಯದ ಬದುಕಿನ ಪ್ರಸಂಗಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಬಹುಶಃ ಮಹಿಳೆಯ ದೈನಂದಿನ ಸಮಸ್ಯೆಗಳು ಪುರುಷನ ಅನುಭವಕ್ಕೆ ತೀವ್ರವಾಗಿ ಬಾರದೆ ಹೋಗಬಹುದಾದ್ದರಿಂದ ಹೀಗಾಗಬಹುದು. ನನ್ನ ಈ ಅನಿಸಿಕೆ ನಾನು ಭಾಗವಹಿಸಿದ ಒಂದು ಚರ್ಚೆಯಲ್ಲಿ ರೂಪತಳೆದದ್ದು. ಆ ಸಭೆಯಲ್ಲಿ ನನ್ನ ಗೆಳತಿಯೊಬ್ಬರು 'ಪುರುಷ ಪ್ರಧಾನವಾದ ಈ ಲೋಕದಲ್ಲಿ ನಡೆಯುವ ಸಂಶೋಧನೆಗಳು ಸಹ ಪುರುಷನ ಪ್ರಗತಿಯನ್ನಷ್ಟೇ ಚಿಂತಿಸುತ್ತದೆ' ಎಂದು ಪ್ರತಿಪಾದಿಸುತ್ತಾ ಭ್ರೂಣವು ತಾಯಿ ಗರ್ಭದಲ್ಲಿರುವಾಗಲೇ ಅದರ ಸ್ಥಿತಿಗತಿಗಳನ್ನು ಅಭ್ಯಸಿಸುವ ಸೌಕರ್ಯವನ್ನು ಕಲ್ಪಿಸುವ ಅಮ್ನಿಯೊಸಿಸ್‌ನ ಸಂಶೋಧನೆ ಹೇಗೆ ಹೆಣ್ಣು ಮಗು ಗರ್ಭದಲ್ಲೇ ಕೊಲೆಗೀಡಾಗುವ ಪ್ರಸಂಗವನ್ನು ಸೃಷ್ಟಿಸಿದೆ ಎಂದು ಉದ್ವಿಗ್ನರಾಗಿ ನಿರೂಪಿಸಿದರು. ನಮ್ಮ ಸ್ತ್ರೀವಾದಿ ಚಿಂತನೆಗಳ ಬಗ್ಗೆ ಬಲು ಸೂಕ್ಷ್ಮವಾಗಿ ಮಾತನಾಡಬಲ್ಲವರೆಂದೇ ಹೆಸರು ಗಳಿಸಿದ್ದ ಒಬ್ಬ ಗೆಳೆಯರು ಇದಕ್ಕೆ ಪ್ರತಿಕ್ರಿಯಿಸಿದ ವಿಧಾನದಿಂದಂತೂ ನಾನು ಒಂದು ನಿಮಿಷ ಮೂಕಳಾಗಿ ಹೋದೆ. 'ಈ ಹೆಣ್ಣು ಭ್ರೂಣ ಹತ್ಯೆಯನ್ನು ನಾವು ಪಾಸಿಟಿವ್ ಆಗಿ ಸಹ ತೆಗೆದುಕೊಳ್ಳಬಹುದು. ಮುಂದೆ ಬರುವ ದಶಕಗಳಲ್ಲಿ ಈ ಹೆಣ್ಣು ಭ್ರೂಣ ಹತ್ಯೆಯ ಕಾರಣದಿಂದ ಸ್ತ್ರೀ-ಪುರುಷ ಸಂಖ್ಯೆಯ ಪ್ರಮಾಣ ಸಮತೋಲನ ಕಳೆದುಕೊಂಡು ಪುರುಷರು ಸ್ತ್ರೀಯರ ಕೊರತೆಯನ್ನು ಅನುಭವಿಸುತ್ತಾರೆ. ಅಂದರೆ ಆಗ ಸ್ತ್ರೀಯರಿಗೆ ಡಿಮ್ಯಾಂಡ್ ಜಾಸ್ತಿಯಾಗಿ ಅವರು ಪುರುಷರನ್ನು ನಿಯಂತ್ರಿಸಬಲ್ಲ ಸ್ಥಾನವನ್ನು ಗಳಿಸುತ್ತಾರೆ' ಎಂಬ ಅವರ ತರ್ಕಕ್ಕೆ, ಅವರೊಳಗೆ ಪರಂಪರಾಗತವಾದ ಪುರುಷ ಚಿಂತನೆ ಆಯಾಚಿತವಾಗಿ ಬೆರೆತುಹೋಗಿದೆ ಎಂಬುದರ ಹೊರತು ಇನ್ನಾವ ವಿವರಣೆಯೂ ನನಗೆ ತೋಚಲಿಲ್ಲ. ಪ್ರಜ್ಞಾಪೂರ್ವಕವಾಗಿ ತಮ್ಮನ್ನು ಸ್ತ್ರೀವಾದಿ ಚಿಂತನೆಯಲ್ಲಿ ತೊಡಗಿಸಿಕೊಂಡಿರುವ ಈ ಮಹನೀಯರಿಗೆ ಹೆಣ್ಣು ಭ್ರೂಣದ ಹತ್ಯೆಯು ಮುಂದೆ ಪುರುಷನಿಗೆ ಉಂಟು ಮಾಡುವ ಕೊರತೆಯನ್ನು ಕುರಿತ ಚಿಂತೆಯಾಗಿ ಕಂಡಿತೇ ಹೊರತು, ಹೆಣ್ಣಿಗಾಗುತ್ತಿರುವ ಅನ್ಯಾಯ, ಅವಮಾನಗಳೆಂದು ಕಾಣಲಿಲ್ಲ. ಇಷ್ಟಕ್ಕೂ ಗಂಡು-ಹೆಣ್ಣುಗಳ ಸಂಖ್ಯಾಪ್ರಮಾಣದಲ್ಲಿ ಉಂಟಾಗುವ ವ್ಯತ್ಯಾಸದಿಂದ ಗಂಡಿಗೆ ತೊಂದರೆಯಾಗುವುದು ಸಾಧ್ಯವೂ ಇಲ್ಲ. ಈಗಲೇ ಗಂಡು ಬಹುಪತ್ನಿತ್ವದ ಅನುಕೂಲ ಪಡೆದು, ಕನ್ಯೆಯರು ಗಂಡುಗಳು ಸಿಗದೆ ಮದುವೆಯಾಗದೆ ಉಳಿಯಬೇಕಾದ ಪ್ರಸಂಗಗಳಿವೆಯೇ ಹೊರತು, ಅಂಗವಿಹೀನ ಮತಿವಿಹೀನನಾದರೂ ಗಂಡಿಗೆ ಹೆಣ್ಣಿನ ಕೊರತೆ ಬರುವುದು ಈ ಸಮಾಜದಲ್ಲಿ ಇಲ್ಲವೇ ಇಲ್ಲ. ಇನ್ನು ಹೆಣ್ಣುಗಳ ಸಂಖ್ಯೆ ಕಡಿಮೆಯಾದರೆ, ಒಬ್ಬಳ ಮೇಲೆ ಹಲವು ಗಂಡಸರು ಹರಿಹಾಯ್ದು ಹಂಚಿ ಛಿದ್ರಗೊಳಿಸುತ್ತಾರೆಂಬುದು ನಿರ್ವಿವಾದ. ಆಗಲೂ ಹೆಣ್ಣಿನ ಗತಿ ಎಷ್ಟು ಹೀನಾಯವಾಗಬಹುದು ಎಂಬುದನ್ನೇ ಚಿಂತಿಸಬೇಕಾಗುತ್ತದೆ. ಇದಕ್ಕೆ ನಮ್ಮೆದುರು ನಿದರ್ಶನವಾಗಿ ದ್ರೌಪದಿಯ ಪ್ರಸಂಗವಿದೆಯಲ್ಲ.

ಇದನ್ನೇ ಮುಂದುವರೆಸಿ ಹೇಳುವುದಾದರೆ ಪ್ರಸ್ತುತ ಏಡ್ಸ್ ರೋಗದ ಬಗೆಗೆ ನಡೆಯುತ್ತಿರುವ ಚರ್ಚೆಗಳನ್ನು ಪುರುಷ ಚಿಂತನೆಯ ಪ್ರತೀಕಗಳೆಂದೇ ಪರಿಗಣಿಸ ಬೇಕಾಗುತ್ತದೆ. ಈ ರೋಗ ಸಮಂಜಸವಲ್ಲದ ಲೈಂಗಿಕ ಕ್ರಿಯೆಗಳಿಂದಾಗಿ ಬರುತ್ತದೆ. ರಕ್ತದಾನದ ವೇಳೆಯಲ್ಲಿ, ಮದ್ದು ಚುಚ್ಚುವ ಸೂಜಿಗಳಿಂದಾಗಿಯೂ ಬರುತ್ತದೆನ್ನುವುದು ಸದ್ಯಕ್ಕೆ ಪಕ್ಕಕ್ಕಿಡೋಣ. ಮೊದಲಿನ ಕಾರಣವಾದ ಲೈಂಗಿಕ ಕ್ರಿಯೆಯಿಂದ ಗಂಡು ಹೆಣ್ಣುಗಳಿಬ್ಬರೂ ರೋಗವನ್ನು ಪಡೆಯುತ್ತಾರೆ. ಹಾಗೆ ನೋಡಿದರೆ ಹೆಣ್ಣಿಗೇ ಹೆಚ್ಚು ಅಪಾಯ. ಅವಳು ಈ ಕ್ರಿಯೆಯಿಂದ ಗರ್ಭಧರಿಸಿ ರೋಗವನ್ನು ತನ್ನ ಮಗುವಿಗೂ ದಾಟಿಸುತ್ತಾಳೆ. ಆದರೆ ರೋಗವನ್ನು ತಡೆಗಟ್ಟುವಿಕೆಯ ಪ್ರಚಾರದಲ್ಲಿ ವೇಶ್ಯೆಯರ ಸಹವಾಸದಿಂದ ಗಂಡಸು ದೂರವಿರಬೇಕೆಂಬುದನ್ನೇ ಒತ್ತಿ ಹೇಳಲಾಗುತ್ತದೆ. ಆದರೆ ಯಾವ ಹೊರಗಿನ ಕಾರಣದಿಂದಲೂ ಅಲ್ಲದೆ ದುಶ್ಚಟದ ತನ್ನ ಗಂಡಸಿಂದಲೇ ರೋಗವನ್ನೂ ಪಡೆಯುವ, ತನ್ನ ಮಗುವಿಗೂ ಇದನ್ನು ದಾಟಿಸುವ ಹೆಣ್ಣಿನ ಬಗೆಗೆ, ಅವಳ ರಕ್ಷಣೆಯ ಬಗೆಗೆ ಈ ಚರ್ಚೆಗಳು ತಲೆಕೆಡಿಸಿಕೊಳ್ಳುವುದಿಲ್ಲ. ಕುಟುಂಬ ಕಲ್ಯಾಣಯೋಜನೆಗಳು ರೂಪಿಸುವ ಕಾರ್ಯಕ್ರಮಗಳನ್ನೇ ಗಮನಿಸಿ. ಪ್ರಾಣಾಪಾಯವನ್ನೊಡ್ಡುವ ಶಸ್ತ್ರಚಿಕಿತ್ಸೆಗಳನ್ನೂ, ಗೊತ್ತುಗುರಿ ಇಲ್ಲದಂತಹ ಗುಳಿಗೆ, ವಂಕಿಗಳನ್ನೂ, ಅವು ಒಡ್ಡುವ ಎಷ್ಟೋ ತ್ರಾಸದಾಯಕ ಅಡ್ಡಪರಿಣಾಮಗಳನ್ನೂ ಅವ್ಯಾಹತವಾಗಿ ಹೆಣ್ಣಿನ ಮೇಲೆ ಪ್ರಯೋಗಿಸಲಾಗುತ್ತದೆ. ಗಂಡಸು ಬಲು ಸುಲಭದ ಶಸ್ತ್ರ ಕ್ರಿಯೆಯನ್ನೂ ತಪ್ಪಿಸಿಕೊಳ್ಳಲು ಹವಣಿಸುತ್ತಾನೆ. ಸಂಶೋಧನೆಗಳೂ ಅವನ ಮೇಲೆ ಹೆಚ್ಚಿನ ಒತ್ತಡಗಳನ್ನೂ ಹೇರಿಲ್ಲ. ಸ್ತ್ರೀವಾದಿ ಚಿಂತನೆಗಳಲ್ಲಿ ತೊಡಗುವ ಪುರುಷರ ಆಲೋಚನೆಗಳು ಹೀಗೂ ಹರಿಯುತ್ತದೆ ಎಂದು ಹೇಳುವಾಗ, ಅಂತಹ ಪುರುಷರ ಸದುದ್ದೇಶವನ್ನೇ ಪ್ರಶ್ನಿಸುವ ಉದ್ಧಟತನವೆಂದು ತಿಳಿಯಬಾರದು. ಅವರ ಚಿಂತನೆಗಳಲ್ಲಿ ದೀರ್ಘಕಾಲದ ಪುರುಷ ಪ್ರಧಾನ ಸಮಾಜದ ಪ್ರಭಾವಗಳು ಅಯಾಚಿತವಾಗಿ ನುಸುಳಿ ಬರುವ ಮಿತಿಗಳ ಬಗ್ಗೆ ಅರಿತಿರಬೇಕು ಎಂಬುದಷ್ಟೇ ಇಲ್ಲಿನ ಉದ್ದೇಶ. ತಲೆಮಾರುಗಳಿಂದ ಪುರುಷ ಚಿಂತನೆಯ ತರಬೇತಿಯಲ್ಲಿ ನಾವೆಲ್ಲ ನಡೆದು ಬಂದಿದ್ದೇವೆ. ಇದರ ಪರಿಣಾಮಗಳು ವೈಯಕ್ತಿಕ ಉದ್ದೇಶಗಳಿಲ್ಲದೆಯೂ ವ್ಯಕ್ತವಾಗುವುದು ಸಾಧ್ಯ. ಸ್ವತಃ ಹೆಂಗಸರೂ ಇದರಿಂದ ಎಷ್ಟೋ ಸಲ ಪ್ರಭಾವಿತರಾಗಿ ಹೆಂಗಸರ ವಿರುದ್ಧವೇ ಮಾತನಾಡತೊಡಗುವುದನ್ನು ಕಾಣುತ್ತೇವೆ ಎಂದ ಮೇಲೆ, ಪುರುಷ ಚಿಂತನೆಯ ಪ್ರಭಾವದ ಆಧಿಕ್ಯವನ್ನು ಎಚ್ಚರದಿಂದ ನಿರ್ವಹಿಸಬೇಕು. ಸಾಮಾನ್ಯರ ಮಾತೇನು. ಸ್ವತಃ ಗಾಂಧೀಜಿಯವರು ಮಹಿಳೆಯು ಉದ್ಯೋಗಸ್ಥಳಾಗುವ ಮಾತು ಬಂದಾಗ ಕುಟುಂಬದ ಹಿತರಕ್ಷಣೆಗಾಗಿ ಅವಳು ಮನೆಯಲ್ಲೇ ಉಳಿಯಬೇಕೆಂಬ ಅಭಿಪ್ರಾಯವನ್ನು ಸೂಚಿಸಿದರು. ಸ್ವಾತಂತ್ರ್ಯ ಸಂಗ್ರಾಮದಂತಹ ಕಠಿಣ ಪ್ರಸಂಗದಲ್ಲಿ ಹೆಣ್ಣಿನ ಮಹತ್ವವನ್ನು ಮನಗಂಡು ಅವಳು ಮನೆಯಿಂದ ಹೊರಬಂದು ಹೋರಾಡ ಬೇಕೆಂದು ಕರೆಯಿತ್ತ ಮಹಾತ್ಮನಿಗೆ, ಮಹಿಳೆಯ ಭಾಗವಹಿಸುವಿಕೆ ಕೇವಲ ಒಂದು ಯುದ್ಧ

ತಂತ್ರ ಮಾತ್ರ ಎನಿಸಿತೇ? ಮಹಿಳೆಯು ಬಗೆಗೆ ತೀವ್ರ ಕಾಳಜಿಯಿಂದ, ಸೂಕ್ಷ್ಮ ತಿಳುವಳಿಕೆಯಿಂದ, ಬಲು ಗಂಭೀರವಾಗಿ ಚಿಂತಿಸಿದ ಈ ಸೂಕ್ಷ್ಮ ಸಂವೇದನಾಶೀಲ ಪುರುಷನಿಗೂ ಮಹಿಳೆಯು ಗೃಹ ಬಂಧನದಲ್ಲಿ ಬೀಳುವುದರ ಅರ್ಥ ಹೊಳೆಯಲಿಲ್ಲವೇ? ಮನೆಯ ಹೊರಗಿನ ಲೋಕದತ್ತ ಅವಳು ಹೆಜ್ಜೆ ಇಟ್ಟಾಕ್ಷಣಕ್ಕೆ ಕುಟುಂಬದ ವಿನಾಶವಾಗಬೇಕೆಂದೇನೂ ಇಲ್ಲ. ಕುಟುಂಬ ರಕ್ಷಣೆಯ ಹೊಣೆ ಗಂಡಸಾದವನಿಗೂ ಇರಬೇಕೆಂದು ಅವರು ತಿಳಿಸಿ ಹೇಳಬಹುದಿತ್ತು. ಅಂದರೆ, ಇಂತಹ ಚಿಂತನೆಗಳ ಮಿತಿಗೆ ವ್ಯಕ್ತಿಗಳು ಪೂರ್ಣಕಾರಣರಲ್ಲದೆಯೂ ಇರಬಹುದು. ಪ್ರಜ್ಞಾಪೂರ್ವಕವಾಗಿ ಇಂತಹ ಇತಿ ಮಿತಿಗಳನ್ನು ದಾಟಲು ಸಮರ್ಥರಾದಾಗ ಸ್ತ್ರೀ ಪುರುಷರಲ್ಲಿ ಯಾರು ಪ್ರತಿ ಪಾದಿಸಿದರೂ ಸ್ತ್ರೀವಾದಿ ಚಿಂತನೆ ಶಕ್ತವಾಗಿರುತ್ತದೆ. ಅಂತಹ ಚಿಂತನೆ ಯಾವ ಪಕ್ಷವನ್ನೂ ಹಿಡಿಯದೆ, ಒಟ್ಟು ಮಾನವ ಕಲ್ಯಾಣವನ್ನು ಆಶಿಸುವಂಥದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸ್ತ್ರೀವಾದಿ ಚಿಂತನೆಯು ನಡೆದು ಬಂದ ಹಾದಿಯನ್ನು ನೋಡಬೇಕು. ಇತ್ತೀಚಿನ ಹಲವು ದಶಕಗಳಿಂದಷ್ಟೇ, ನಾವು ಇಂದು ಗುರುತಿಸಿ ನೋಡುತ್ತಿರುವ ಸ್ಪಷ್ಟ ರೂಪದಲ್ಲಿ ಸ್ತ್ರೀವಾದಿ ಚಿಂತನೆಗಳು ಸಾಗಿ ಬಂದಿವೆ. ಸ್ತ್ರೀ ಪರವಾದ ಹೋರಾಟಗಳು ರೂಪುಗೊಂಡು ವ್ಯಕ್ತವಾಗುತ್ತಿವೆ. ಎಷ್ಟೋಸಲ ತೀವ್ರಗಾಮಿ ಸ್ವರೂಪವನ್ನು ತಳೆದು ಪುರುಷನನ್ನು ಶತ್ರುವೆಂಬಂತೆ ಭಾವಿಸಿ ದಾಳಿ ಮಾಡಲು ಹವಣಿಸಿದೆ. ದೀರ್ಘಕಾಲದ ಹಿಂಸೆಯ ಅನುಭವ ಅವಳ ಚಿಂತನೆಯ ಸಾಮರ್ಥ್ಯವನ್ನು ಕಂಗೆಡಿಸಿ ದಿಕ್ಕು ತಪ್ಪಿಸಿದೆ. ಹಲವು ಪ್ರಸಂಗಗಳಲ್ಲಿ ಅವಳ ವರ್ತನೆ ಹಾಸ್ಯಾಸ್ಪದವಾಗಿ ಕಂಡು ತೀವ್ರ ಆರೋಪಗಳಿಗೂ ಗುರಿಯಾಗಿದೆ. ಹಲವು ವೇಳೆ ಇವು ಸ್ತ್ರೀವಾದಿ ಚಿಂತನೆಗಳ, ಅವು ರೂಪಿಸಿದ ಹೋರಾಟಗಳ ಹಿನ್ನಡೆಗೂ ಕಾರಣಗಳಾಗಿವೆ. ಆದರೂ, ಮಹಿಳೆ ಈ ಸಮಾಜದಲ್ಲಿ ಘನತೆ, ಗೌರವ, ಮರ್ಯಾದೆಯ ಸ್ಥಾನವನ್ನು ಗಳಿಸಿ ಪುರುಷನಿಗೆ ಸಮಾನಳಾಗಿ ಬದುಕುವ ಅವಕಾಶಗಳನ್ನು ರೂಪಿಸಿಕೊಳ್ಳಬೇಕೆಂದು ಸ್ತ್ರೀವಾದಿ ಚಿಂತನೆ ಆಶಿಸುತ್ತದೆ. ಮಹಿಳೆಗೆ ಬದುಕಿನ ಅವಕಾಶಗಳು ದಕ್ಕದಂತೆ ಆದದ್ದು ಏಕೆ, ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ, ಅವುಗಳನ್ನು ಮತ್ತೆ ಪಡೆಯುವ ಹಾದಿಯಲ್ಲಿ ಸ್ತ್ರೀವಾದಿ ಚಿಂತನೆ ಹಾಗೂ ಅಧ್ಯಯನಗಳು ಸಾಗಿ ಬಂದಿವೆ. ಇತ್ತೀಚಿನ ದಿನಗಳಲ್ಲಿ ಪುರುಷನನ್ನು ವಿರೋಧಿಸುವ, ಅವನೆದುರು ಬಂಡೇಳುವ ನೆಲೆಯ ಚಿಂತನೆಗಳು ಸಮರ್ಥನೆಯನ್ನು ಪಡೆಯುತ್ತಿಲ್ಲ. ಬದಲಿಗೆ ಪುರುಷನ ಮನಸ್ಸನ್ನು ಒಟ್ಟು ಮಾನವ ಕಲ್ಯಾಣದ ಕಡೆಗೆ ಒಲಿಸಿ ಅವನನ್ನು ಪರಿವರ್ತಿಸಬೇಕೆಂಬ ಚಿಂತನೆಯೇ ಹೆಚ್ಚು ಒಪ್ಪಿತವೆನಿಸಿ ಮಂಡನೆಯಾಗುತ್ತಿದೆ. ಈ ಮೊದಲು ಪ್ರಸ್ತಾಪಿಸಿದಂತೆ, ತ್ರಿವೇಣಿಯವರ ಕಾದಂಬರಿಗಳಲ್ಲಿ ಆಕೆ ಇಂತಹುದೊಂದು ಅಭಿಪ್ರಾಯವನ್ನು ಆ ಕಾಲಕ್ಕೇ ಸೂಚಿಸಿದ್ದಾರೆಂಬುದನ್ನು ಕಾಣಬಹುದು. ಇದು ಪುರುಷ ಚಿಂತನೆಯ ಬಗ್ಗೆ ಹೆಣ್ಣು ಸಮಾಜ ವ್ಯಕ್ತ ಪಡಿಸಿರುವ ಒಂದು ಪ್ರತಿಕ್ರಿಯೆಯೂ ಹೌದು. ವಿವಾಹ ವ್ಯವಸ್ಥೆಯ ಚೌಕಟ್ಟಿನಲ್ಲಿ ಗಂಡು ಹೆಣ್ಣುಗಳಿಬ್ಬರೂ ಒಂದು ಸುಸಂಗತ ಒಪ್ಪಂದಕ್ಕೆ ಬರಬೇಕೇ ಹೊರತು, ಒಬ್ಬರ

ಮೇಲೆ ಹೇರಿದ ನಿರ್ಬಂಧದಿಂದ ಸಮಸ್ಯೆ ಪರಿಹಾರವಾಗದು ಎಂಬುದು ಇಲ್ಲಿ ವ್ಯಕ್ತವಾಗಿರುವ ತಿಳುವಳಿಕೆ. ಹೆಣ್ಣು ಸದಾ ತನಗೆ ಅಧೀನಳಾಗಿ ಉಳಿಯಬೇಕೆಂಬುದು ಪುರುಷ ಚಿಂತನೆಯು ಹುಟ್ಟುಹಾಕುವ ಒತ್ತಾಯ. ಇಂತಹ ಪಾರಂಪರಿಕ ಜೀವವಿರೋಧಿ ನ್ಯಾಯವನ್ನು ಖಂಡಿಸಿ, ಇಬ್ಬರೂ ಸಮಾನವಾಗಿ ಹೆಜ್ಜೆ ಹಾಕಬೇಕೆಂಬುದು ಮಾನವ ಕಲ್ಯಾಣವನ್ನು ಬಯಸುವ ಆಶಯ. ಈ ಆಶಯವೇ ಇಂದು ಸ್ತ್ರೀವಾದಿ ಚಿಂತನೆಯಲ್ಲಿ ಮಹತ್ವವನ್ನು ಪಡೆದಿರುವ ಮುಖ್ಯ ಅಂಶ.

ಸ್ತ್ರೀ ಪುರುಷ ಸಂಬಂಧಗಳು

ಸಮಾಜ ರಚನೆಯಲ್ಲಿಯೇ ಅಂತರ್ಗತವಾಗಿರುವ ಹಲವು ಅಂಶಗಳು, ಶ್ರೇಣೀಕರಣಗಳನ್ನು ಉಂಟುಮಾಡುವ ಕಾರಣಗಳಾಗಿವೆ. ಈ ಶ್ರೇಣಿಕರಣವು ಜಾತಿ, ವರ್ಗ, ಸಮಾಜ, ಸಮುದಾಯ, ದೇಶ, ವಿಜ್ಞಾನ ತಂತ್ರಜ್ಞಾನ-ಮೊದಲಾದ ಹಲವು ನೆಲೆಗಳಲ್ಲಿ ತೋರಿಬರುವುದು ಒಂದು ಸಾಮಾಜಿಕ ಸಿದ್ಧಾಂತ ಎಂಬಷ್ಟು ಸಹಜವಾಗಿಬಿಟ್ಟಿದೆ. ಮಾನವ ಸಮಾಜದ ಚರಿತ್ರೆಯುದ್ದಕ್ಕೂ ಕಂಡುಬರುವುದು ಈ ಬಗೆಗಿನ ಘರ್ಷಣೆಯೇ. ಜಾತಿ, ಜನಾಂಗ, ವರ್ಗ-ಮೊದಲಾದ ಮೂರ್ತ ನೆಲೆಗಳ ಶ್ರೇಣೀಕರಣದ ಸ್ವರೂಪ ಹೆಚ್ಚು ಸ್ಪಷ್ಟವಾದುದಾಗಿರುತ್ತದೆ. ಹಾಗಾಗಿ ಇಲ್ಲಿ ಹುಟ್ಟುವ ಘರ್ಷಣೆಗೂ ಒಂದು ನಿಶ್ಚಿತ ಆಕಾರ ಸಾಧ್ಯವಾಗುತ್ತದೆ. ಯಾರನ್ನು ಕುರಿತ ಹೋರಾಟ ಎಂಬ ಮಟ್ಟಿಗಾದರೂ ಸಂದೇಹಾತೀತವಾಗಿರುತ್ತದೆ. ಏಕೆಂದರೆ, ಈ ಬಗೆಯ ಹೋರಾಟದಲ್ಲಿನ ಪಕ್ಷ ಪ್ರತಿ ಪಕ್ಷಗಳ ಪ್ರತ್ಯೇಕತೆಯನ್ನು ಗುರುತಿಸಲು ಯಾವುದೇ ಪ್ರಯತ್ನದ ಅಗತ್ಯವಿರುವುದಿಲ್ಲ. ಆದರೆ, ಸ್ತ್ರೀ ಪುರುಷ ಶ್ರೇಣೀಕರಣದ ಬಗೆಗಿನ ಘರ್ಷಣೆಯಲ್ಲಿನ ಸಂದರ್ಭ ಇಷ್ಟು ಸರಳವಲ್ಲ. ಉಳಿದ ಬಗೆಯ ಶ್ರೇಣಿಕರಣಕ್ಕೆ ಸಮಾಜ ರಚನೆಯಲ್ಲಿನ ದೋಷಗಳೇ ಕಾರಣ ಎಂಬುದನ್ನು ವಿವರಿಸುವಷ್ಟು ಸುಲಭವಾಗಿ ಸ್ತ್ರೀ ಪುರುಷ ಶ್ರೇಣೀಕರಣದ ಕಾರಣವನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಈ ಶ್ರೇಣೀಕರಣದ ತರ್ಕವನ್ನು 'ಸಮಾಜ ರಚನೆ'ಯ ಹೊರಗೆ ಹುಡುಕಬಹುದಾದ ಸಾಧ್ಯತೆಗಳಿವೆ. ಉದಾಹರಣೆಗೆ ಸ್ತ್ರೀ ಪುರುಷ ದೇಹರಚನೆ, ಮನೋಭಾವ ಹಾಗೂ ಅವುಗಳನ್ನಾಧರಿಸಿದ ಬಲಾಬಲಗಳ ಕಾರಣವನ್ನು ಇಲ್ಲಿನ ತರ್ಕವಾಗಿ ಬಳಸಬಹುದಾಗಿದೆ. ಇವು ಸ್ತ್ರೀ ಪುರುಷರಲ್ಲಿ ವ್ಯಕ್ತವಾಗುವ ಮೂರ್ತ ಗುಣಗಳಾದ್ದರಿಂದ, ಈ ತರ್ಕವನ್ನು ನಿರಾಕರಿಸುವುದೂ ಅಷ್ಟು ಸುಲಭವಲ್ಲ. ಆದರೆ, ಈ ತರ್ಕ ಅತ್ಯಂತ ನಯವಾಗಿ ಹಾಗೂ ಮನವೊಲಿಸುವ ರೀತಿಯಲ್ಲಿ ಮಂಡಿತವಾಗುತ್ತದೆನ್ನುವುದನ್ನು ಗಮನಿಸಿ. ಬೇರೆ ಬಗೆಯ ಶ್ರೇಣೀಕರಣದಲ್ಲಿ ಇಂತಹ ನಯಗಾರಿಕೆಯೇನೂ ಇರುವುದಿಲ್ಲ. ಈ ನಯಗಾರಿಕೆಗೆ ಕಾರಣವನ್ನು ಹುಡುಕಲು ಬಹಳ ದೂರವೇನೂ ಹೋಗಬೇಕಾಗಿಲ್ಲ. ಸ್ತ್ರೀ ಪುರುಷ ಶ್ರೇಣೀಕರಣದಲ್ಲಿ ಪುರುಷನು ಮೇಲುಗೈ ಸಾಧಿಸಿದ್ದಾನೆ ಎಂಬುದು ಅರ್ಧಸತ್ಯ ಮಾತ್ರ. ಏಕೆಂದರೆ, ಬದುಕಿನ ಮೂಲಭೂತ ನೆಲೆಗಳಲ್ಲಿ ಪುರುಷ ಸ್ತ್ರೀಗೆ ಅಧೀನನೇ. ಇದು ಕೇವಲ ತಮಾಷೆಯ ಅಥವಾ ಆವೇಶದ ನೆಲೆಯ

ಮಾತಲ್ಲ. ಮಾನವ ಬದುಕಿನಲ್ಲಿ ಸ್ತ್ರೀ ಪುರುಷರ ಪರಸ್ಪರ ಅವಲಂಬನೆಯಲ್ಲಿ, ಪುರುಷನು ಸ್ತ್ರೀಯನ್ನು ಅವಲಂಬಿಸುವ ಪ್ರಮಾಣ ಎಷ್ಟು ಅಧಿಕವೆಂಬುದನ್ನು ಗುರುತಿಸುವುದು ಬಹಳ ಸುಲಭ. ಪ್ರಕೃತಿಯನ್ನು ಪುರುಷನು ಅವಲಂಬಿಸಬೇಕಾದ ಈ ಸಂಗತಿ ಹೊರಗಿನ ಕಾರಣಗಳಿಂದ ಸೃಷ್ಟಿಯಾದದ್ದಾಗಿರದೆ, ಮೂಲಭೂತ ಸಹಜ ಸಂಗತಿಯಾಗಿದೆ. ಹಾಗಾಗಿ ಈ ಅವಲಂಬನೆಯಿಂದ ಮುಕ್ತವಾಗಬೇಕಾದ ಅಗತ್ಯವೇ ಅಲ್ಲಿ ಉಂಟಾಗುವುದಿಲ್ಲ. ಆದರೆ, ಮೊದಲೇ ಹೇಳಿದಂತೆ, ಪುರುಷನಲ್ಲಿ ಹಲವು ಮೂರ್ತ ಸಾಮರ್ಥ್ಯಗಳು ಇವೆ. ಸ್ತ್ರೀಯನ್ನು ತಾನು ಅವಲಂಬಿಸಿದ್ದೇನೆ ಎಂಬುದನ್ನು ವಕ್ರವಾಗಿ (negative) ಗ್ರಹಿಸಲು ಇವು ಪುರುಷನನ್ನು ಪ್ರೇರೇಪಿಸುತ್ತವೆ. ಅಲ್ಲದೆ, ಯಾವ ಹಂತದಲ್ಲಾದರೂ ಸ್ತ್ರೀ ತನ್ನನ್ನು ಪೂರ್ಣವಾಗಿ ಅಧೀನವಾಗಿಸಿಕೊಳ್ಳಬಹುದೇನೋ ಎಂಬ ಭೀತಿಯನ್ನು ಅವನಲ್ಲಿ ಹುಟ್ಟುಹಾಕುತ್ತವೆ. ವಾಸ್ತವವಾಗಿ ಈ ಭೀತಿ ಭ್ರಮಾತ್ಮಕವಾದದ್ದು. ಏಕೆಂದರೆ, ಸ್ತ್ರೀ ಪುರುಷರು ಪ್ರಕೃತಿ ಸಹಜವಾಗಿ ಪರಸ್ಪರ ಅವಲಂಬಿತರಾಗುವ ಪ್ರಕ್ರಿಯೆ ಅಧೀನವಾಗಿಸಿಕೊಳ್ಳುವ ಅಥವಾ ಅಧೀನವಾಗುವ ಬಾಹ್ಯ ರಚನೆಯೇನೂ ಅಲ್ಲ. ಆದರೂ ಪುರುಷನು ಅನವಶ್ಯಕವಾಗಿಯೇ ಭೀತಿಯ ಭ್ರಮೆಗೆ ಬೀಳುತ್ತಾನೆ. ದುರಂತವೆಂದರೆ, ತನ್ನ ಬಾಹ್ಯ ಸಾಮರ್ಥ್ಯಗಳ ನೆರವಿನಿಂದ ಸ್ತ್ರೀಯನ್ನು ತನ್ನ ಅಧೀನವಾಗಿಸಿಕೊಳ್ಳುವ, ತನ್ನ ಅಧಿಕಾರವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ತೊಡಗುತ್ತಾನೆ. ಅನಗತ್ಯವಾದ ಸಂಘರ್ಷದ ಹುಟ್ಟಿಗೆ ಕಾರಣನಾಗುತ್ತಾನೆ. ಅವನ ಭೀತಿ ಹಾಗೂ ಅವನು ಹುಟ್ಟುಹಾಕಿದ ಸಂಘರ್ಷಗಳೆರಡೂ ಅವನೇ ಕಲ್ಪಿಸಿದ ಎಲ್ಲ ಬಾಹ್ಯ ರಚನೆಗಳಲ್ಲೂ ಸ್ಪಷ್ಟವಾಗಿ ವ್ಯಕ್ತವಾಗಿವೆ. ಸಮಾಜ ರಚನೆ ಹಾಗೂ ಅದರ ವಿವಿಧ ಅಂಗಗಳಾದ ಭಾಷೆ, ಪುರಾಣ, ಸಂಸ್ಕೃತಿ, ನಾಗರಿಕತೆ, ಕುಟುಂಬ, ಜಾತಿ, ಜನಾಂಗ- ಮೊದಲಾದ ಎಲ್ಲ ಬಾಹ್ಯ ರಚನೆಗಳೂ ಪುರುಷ ಅಭಿವ್ಯಕ್ತಿಗಳೇ ಆಗಿರುವುದು, ಹಾಗೂ ಅವುಗಳ ಮೇಲೆ ಅವನ ಹಿಡಿತ ಸಾಧ್ಯವಾಗಿರುವುದು- ಈ ಎರಡಕ್ಕೂ ಅವನ ದೇಹರಚನೆ, ಮನೋಭಾವ ಹಾಗೂ ಆ ಕಾರಣವಾಗಿ ಅವನಿಗೆ ಲಭ್ಯವಾಗಿರುವ ಬಾಹ್ಯ ಸಾಮರ್ಥ್ಯಗಳೇ ಆಧಾರ. ಈ ನೆಲೆಯಲ್ಲಿ ಸಹಜ ದೌರ್ಬಲ್ಯಗಳನ್ನು ಹೊಂದಿರುವ ಸ್ತ್ರೀ, ಈ ಬಾಹ್ಯ ರಚನೆಗಳ ಯಾವುದೇ ವ್ಯವಸ್ಥೆಯಲ್ಲಿ ಅವನ ಹಿಡಿತಕ್ಕೆ ಸಿಕ್ಕಿ ಬೀಳುವುದೂ ಸಹಜವೇ. ಕಾಡು ಮೃಗಗಳ ಸಹಜ ಬಲವನ್ನು ಪಂಜರಗಳಲ್ಲಿ ಬಂಧಿಸಿ ಇಡಬಲ್ಲ ಬೇಟೆಗಾರನ ಸಾಮರ್ಥ್ಯವಿದು. ಇಡೀ ಪ್ರಕೃತಿಯನ್ನು ಜಯಿಸಿಬಿಡುವೆನೆಂಬ ವಿಜ್ಞಾನ-ತಂತ್ರಜ್ಞಾನದ ಜಾಣ್ಮೆ ಇಂಥವುಗಳನ್ನು ಇದಕ್ಕೆ ಸಮಾನ ಉದಾಹರಣೆಗಳೆನ್ನಬಹುದೇನೋ. ಭೀತಿಯ ಭ್ರಮೆಗಿಂತಲೂ, ತನ್ನ ಅಧಿಕಾರವನ್ನು ಸ್ಥಾಪಿಸಬೇಕೆಂಬ ಹುಚ್ಚು ದಾಹವೇ ಇಲ್ಲಿ ಮನುಷ್ಯನನ್ನು ಅಪಮಾರ್ಗಕ್ಕೆ ಎಳೆದಿರುವ ಮುಖ್ಯ ಸಂಗತಿ. ದೇಹ ಬಲ, ಜಾಣ್ಮೆ-ಈ ಮೊದಲಾದ ಬಾಹ್ಯ ಸಾಮರ್ಥ್ಯಗಳನ್ನು ಅವಲಂಬಿಸಿದ ಈ ಸಾಧನೆ ನಿರಂತರವಾದ ನಿಯಂತ್ರಣವನ್ನು ಅಪೇಕ್ಷಿಸುತ್ತದೆ. ಈ ಪ್ರಯತ್ನದಲ್ಲಿ ಎಲ್ಲ ಸಹಜ ಸಂಗತಿಗಳೂ ಮರವೆಯಾಗುವುದು ಅನಿವಾರ್ಯ. ಕಠಿಣ ಪರಿಶ್ರಮದ ಈ ನಿಯಂತ್ರಣ

ಕಾರ್ಯದಲ್ಲಿ ಅಪ್ಪಿತಪ್ಪಿಯೂ ದಯದಾಕ್ಷಿಣ್ಯಗಳ ದೌರ್ಬಲ್ಯ ಕಾಣುವಂತಿಲ್ಲ. ಒಂದು ಕ್ಷಣವೂ ಹಿಡಿತವನ್ನು ಸಡಿಲಿಸುವಂತಿಲ್ಲ. ಎಲ್ಲ ಬಗೆಯ ನಿಯಂತ್ರಣಗಳಿಗೂ ಈ ಮಾತು ಅನ್ವಯಿಸುತ್ತದೆ. ಈ ನಿಯಂತ್ರಣದ ವಿರುದ್ಧ ನಿಯಂತ್ರಿತವು ಸದಾ ಪ್ರತಿಭಟನೆಯನ್ನು ಒಡ್ಡುತ್ತಲೇ ಇರುತ್ತದೆ. ಅವಕಾಶಗಳನ್ನನುಸರಿಸಿ ಅವು ಹಲವು ಹತ್ತು ಬಗೆಗಳಲ್ಲಿ ವ್ಯಕ್ತವಾಗುತ್ತಲೂ ಇರುತ್ತದೆ.

ಸ್ತ್ರೀ ಪುರುಷ ಸಂಬಂಧಗಳಲ್ಲಿ ವ್ಯಕ್ತವಾಗುವ ಈ ನಿಯಂತ್ರಣ ಹಾಗೂ ಪ್ರತಿಭಟನೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ವ್ಯವಸ್ಥಿತ ಅಧ್ಯಯನಗಳು ಇತ್ತೀಚೆಗಷ್ಟೇ ಗಮನಾರ್ಹವಾಗಿ ಹೆಚ್ಚುತ್ತಿದೆ. ಹಲವು ಬಗೆಯ ಸಿದ್ಧಾಂತಗಳನ್ನು ವಿದ್ವಾಂಸರು ಮಂಡಿಸುತ್ತಿದ್ದಾರೆ. ಸಿದ್ಧಾಂತ ಚಿಂತನೆಗಳನ್ನಾಧರಿಸಿದ ಹಲವು ಬಗೆಯ ಕ್ರಿಯಾ ಯೋಜನೆಗಳೂ, ಚಳುವಳಿಗಳೂ ಸಹ ನಡೆಯುತ್ತಿವೆ.

ಮೊದಲೇ ಹೇಳಿದಂತೆ ಸ್ತ್ರೀ-ಪುರುಷ ಶ್ರೇಣೀಕರಣದಲ್ಲಿ ಪರ-ವಿರೋಧ ಎಂಬ ಸಂಗತಿಗಳು ಅನಗತ್ಯ ಹಾಗೂ ಅಸಹಜವಾದ ರಚನೆಗಳು. ಒಟ್ಟು ಮಾನವ ಜನಾಂಗದ ಒಳಿತನ್ನು ಅಪೇಕ್ಷಿಸುವ ಎಲ್ಲ ಸ್ತ್ರೀ-ಪುರುಷರೂ ಈ ಶ್ರೇಣೀಕರಣವನ್ನು ನಿರಾಕರಿಸುತ್ತಾರೆ. ಏಕೆಂದರೆ ಇಲ್ಲಿ ಹುಟ್ಟುವ ಘರ್ಷಣೆಯ ಪರಿಣಾಮಗಳನ್ನು, ಅಧಿಕಾರವನ್ನು ಸ್ಥಾಪಿಸಲು ಯತ್ನಿಸುವ ಅಥವಾ ಅದನ್ನು ಪ್ರತಿಭಟಿಸಲು ಹೊರಡುವ ಎರಡು ಪಕ್ಷಗಳೂ ಒಟ್ಟಿಗೆ ಅನುಭವಿಸಬೇಕಾಗುತ್ತದೆ. ಅಂದರೆ, ತಾನು ಎದುರಾಳಿ ಎಂದು ಭಾವಿಸಿದವರ ಸೋಲು, ನೋವು ಹಾಗೂ ಅವಮಾನಗಳು ತನ್ನ ಸೋಲು, ನೋವು ಅವಮಾನಗಳೇ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ಸ್ತ್ರೀ ಪುರುಷ ಶ್ರೇಣೀಕರಣ ನಿರಾಕರಣೆಯ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಬೇಕೆನಿಸುತ್ತದೆ. ಈಗ ಪ್ರವೃತ್ತವಾಗಿರುವ ಘರ್ಷಣೆಯಲ್ಲಿ ಬಾಹ್ಯ ಸೂಚಕಗಳಾಗಿ ಎರಡು ಪಕ್ಷಗಳಿವೆ. ಪುರುಷ ನಿಯಂತ್ರಿಸುವ ಪಕ್ಷವಾದರೆ, ಸ್ತ್ರೀ ಪ್ರತಿಭಟಿಸುವ ಪಕ್ಷ ಅಥವಾ ಶೋಷಕ -ಶೋಷಿತ ಪಕ್ಷಗಳು. ಇದನ್ನೇ ಇನ್ನಷ್ಟು ಹಿಂಜಿ ವಿವರಿಸಿದರೆ, ಅನ್ಯಾಯದ ವಿರುದ್ಧ ಪ್ರತಿಭಟನೆ. ಅಂದರೆ, ಪುರುಷನ ವಿರುದ್ಧ ಸ್ತ್ರೀಯು, ಸ್ವತಃ ಅಥವಾ ಅವಳ ಪರವಾಗಿ ಒಂದು ಶಕ್ತಿಯು, ನಡೆಸುವ ಹೋರಾಟ. ಈ ತರ್ಕದಲ್ಲೇ ಸ್ತ್ರೀವಾದಿ ಚಿಂತನೆ, ಸ್ತ್ರೀಪರ ಚಳುವಳಿ, ಮಹಿಳಾ ಸ್ವಾತಂತ್ರ್ಯ ಸ್ತ್ರೀ ಸ್ವಾತಂತ್ರ್ಯ ಎಂಬಂತಹ ಪರಿಕಲ್ಪನೆಗಳು ಮೂಡಿ ಬಂದಿರುವಂತಿದೆ. ಇದನ್ನೇ ಆಧರಿಸಿ ಬಹು ಗಂಭೀರವಾದ ಚಿಂತನೆಗಳೂ, ಸಿದ್ಧಾಂತಗಳು ಪ್ರಸ್ತಾಪಗೊಳ್ಳುತ್ತಿವೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಜನಾಂಗಿಕ, ಕೌಟುಂಬಿಕ, ಮಾನಸಿಕ -ಹೀಗೆ ಜಾಗತಿಕವಾದ ಎಲ್ಲ ನೆಲೆಗಳಿಗೂ ಅನ್ವಯಿಸಿದಂತೆ ವಿವರ ವಿವರಗಳಲ್ಲಿ ಅಧ್ಯಯನಗಳು ನಡೆದಿದೆ. ಪುರುಷನ ಅಧಿಕಾರ ಸ್ಥಾಪನೆಯ ಸ್ವರೂಪ ಹಾಗೂ ಮಹಿಳೆಯು ತನ್ನ ಹಕ್ಕು ಬಾಧ್ಯತೆಗಳಿಗಾಗಿ ನಡೆಸಿರುವ ಹೋರಾಟದ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಈ ಚಿಂತನೆಗಳು ಹಾಗೂ ಸಿದ್ಧಾಂತಗಳು

ನೆರವಾಗುತ್ತವೆಂಬುದೇನೋ ನಿಜ. ಅಷ್ಟರ ಮಟ್ಟಿಗೆ ಇಂತಹ ಅಧ್ಯಯನಗಳು ಅವಶ್ಯಕವೂ ಅರ್ಥಪೂರ್ಣವೂ ಹೌದು. ಆದರೆ, ಕೊನೆಗೂ ಇಂತಹ ಹೋರಾಟದ ಫಲಿತವಾಗಿ ನಮಗೆ ಬೇಕಾಗಿರುವುದು ಸೋಲು ಗೆಲುವಿನ ನಿಷ್ಕರ್ಷೆಯಲ್ಲ. ವಾಸ್ತವ ಸತ್ಯವಾಗಿ ಇಂತಹುದೊಂದು ನಿಷ್ಕರ್ಷೆ ಸಾಧ್ಯವೂ ಇಲ್ಲ ಎಂಬ ಮಾತು ಬೇರೆ. ಆದರೂ ಸಿದ್ಧಾಂತ ಅಥವಾ ಚಿಂತನೆಗಳ ತರ್ಕಬದ್ಧ ನೆಲೆಯಲ್ಲಿಯೇ ಆದರೂ, ಇಂತಹ ಪರ-ವಿರೋಧ ನಿಲುವು ಅಪೇಕ್ಷಣೀಯವಲ್ಲ. ಇಂತಹ ನಿಲುವು, ಇರುವ ಶ್ರೇಣೀಕರಣವನ್ನು ಬಲಪಡಿಸುತ್ತದೆ ಅಥವಾ ಅದರ ಸ್ವರೂಪವನ್ನು ಬದಲಿಸಿ ಹೊಸ ರೀತಿಯಲ್ಲಿ ಪ್ರಸ್ತುತ ಪಡಿಸುತ್ತದೆ.

ಈ ಹಿನ್ನೆಲೆಯಲ್ಲಿ ಸದ್ಯ ಪ್ರಚಲಿತವಿರುವ ಚಿಂತನೆಗಳು ಹಾಗೂ ಸಿದ್ಧಾಂತಗಳನ್ನು ಪರಿಶೀಲಿಸಬೇಕೆಂಬ ಆಶಯದಿಂದ, ಇಲ್ಲಿ ಅಂತಹ ಕೆಲವನ್ನು ಪ್ರಸ್ತಾಪಿಸಲು ಯತ್ನಿಸುತ್ತೇನೆ. ಮೊದಲೇ ಹೇಳಿದಂತೆ, ಈ ಸಿದ್ಧಾಂತ ಹಾಗೂ ಚಿಂತನೆಗಳ ಮೂಲ ಆಕರಗಳನ್ನು ನಿಖರ ವಿವರಗಳಲ್ಲಿ ಸೂಚಿಸಬೇಕಾದ ಶಿಸ್ತನ್ನು ಇಲ್ಲಿ ಪಾಲಿಸಿಲ್ಲ. ಬದಲಿಗೆ ಹಲವು ಆಕರಗಳಿಂದ ಈ ಬಗ್ಗೆ ನಾನು ಗ್ರಹಿಸಿರುವುದನ್ನು ಒಟ್ಟಾರೆಯಾಗಿ ಅರ್ಥಮಾಡಿಕೊಳ್ಳಲು ನೆರವಾಗುವಂತೆ, ಇಲ್ಲಿನ ಚರ್ಚೆಯಲ್ಲಿ ಮಂಡಿಸುತ್ತೇನೆ. ಶ್ರೇಣೀಕರಣ ನಿರಾಕರಣೆಯ ಚಿಂತನೆಗಳನ್ನು ಸ್ತ್ರೀವಾದಿ, ಸ್ತ್ರೀಪರ ವಿಮೋಚನೆ ಎಂಬಂತಹ ಪರಿಕಲ್ಪನೆಗಳ ಚೌಕಟ್ಟಿನಲ್ಲಿ ಅಧ್ಯಯನ ಮಾಡುವ ಬದಲು, ಒಟ್ಟಾರೆ 'ಮಾನವ ಪರ' ಎಂಬ ಚೌಕಟ್ಟಿನಲ್ಲಿ ಗ್ರಹಿಸಲು ಸಾಧ್ಯವಾದರೆ, ಶ್ರೇಣೀಕರಣ ನಿರಾಕರಣೆಯ ಹೋರಾಟವನ್ನು ತಾತ್ವಿಕವಾಗಿಯಾದರೂ ಸಮರ್ಥಿಸಬಹುದು. ಮತ್ತೆ ಇಲ್ಲಿ 'ಮಾನವ' ಎಂದರೆ 'ಪುರುಷ' ಎಂಬ ಸೀಮಿತ ಅರ್ಥದ ಕುಚೋದ್ಯ ಬೇಡ.

ಕೆಲವು ಪ್ರಮುಖ ಪ್ರಚಲಿತ ಚಿಂತನೆಗಳು:

೧. ಪುರುಷನು ಸ್ತ್ರೀಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಲು ಸಾಧ್ಯವಾದದ್ದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಯತ್ನಿಸುವ ಹಲವು ಚಿಂತನೆಗಳಿವೆ. ದೇಹಸಾಮರ್ಥ್ಯದ ಕಾರಣವನ್ನು ಹೇಳುವ ಚಿಂತನೆಯನ್ನು ಒಂದು ಸಾಮಾಜಿಕ ಸಿದ್ಧಾಂತ ಎಂದು ಹೇಳಲಾಗದು. ಅದನ್ನು ಬಿಟ್ಟರೆ, ಸಾಮಾಜಿಕ ವರ್ಗ ಸಂಬಂಧಗಳನ್ನಾಧರಿಸಿ ಮಾರ್ಕ್ಸಿಸ್ಟ್ ವಿಶ್ಲೇಷಣೆಗಳನ್ನು ಈ ಸಂಬಂಧದಲ್ಲಿಯೂ ಅನ್ವಯಿಸುವ ಚಿಂತನೆ ಹೆಚ್ಚು ಪ್ರಚಲಿತವಾದದ್ದು. 'ಎಲ್ಲ ಸಾಮಾಜಿಕ ಅಸಮಾನತೆಗಳಿಗೂ ಬಂಡವಾಳಶಾಹಿ ಧೋರಣೆಯೇ ಮುಖ್ಯ ಕಾರಣವೆಂಬುದು ಸ್ತ್ರೀಪುರುಷ ಸಂಬಂಧಗಳಿಗೂ ಸಹ ಅನ್ವಯಿಸುತ್ತದೆ. ಹಾಗಾಗಿ, ಸ್ತ್ರೀ ಪುರುಷ ಸಂಬಂಧಗಳಲ್ಲಿ ಅಸಮಾನತೆ ಹೋಗಬೇಕೆಂದರೆ, ಸ್ತ್ರೀಯು ಮೊದಲು ತನ್ನ ಆರ್ಥಿಕ ಸ್ವಾವಲಂಬನೆಗಾಗಿ ಹೋರಾಡಬೇಕು' ಎಂಬ ಹಾದಿಯನ್ನು ಹಿಡಿದು ಹೊರಟ ಈ ಚಿಂತನೆ ಎಲ್ಲ ಆರ್ಥಿಕ ರಂಗಗಳಲ್ಲಿ ಸ್ತ್ರೀಗೆ ಸಮಾನ ಅವಕಾಶ ದೊರಕಬೇಕೆನ್ನುತ್ತದೆ. ಅಲ್ಲದೆ, ಶ್ರಮ ಹಾಗೂ ಸಂಪಾದನೆಗಳ ಸಮೀಕರಣದಲ್ಲಿ

ಉಂಟಾಗಿರುವ ಅನ್ಯಾಯಗಳನ್ನು ಶೋಧಿಸುತ್ತದೆ. ಈ ಸಮೀಕರಣದಲ್ಲಿ ನಿರ್ಣಾಯಕವಾಗಿ ಪುರುಷನೇ ಇರುವುದರಿಂದ ಸ್ತ್ರೀಯು ನಿರ್ವಹಿಸುವ ಶ್ರಮಗಳಿಗೆ ಕನಿಷ್ಠ ಬೆಲೆಯನ್ನು ನಿಗದಿಗೊಳಿಸಲಾಗಿದೆಯಷ್ಟೇ ಅಲ್ಲದೆ, ಎಷ್ಟೋ ವೇಳೆ ಅವುಗಳನ್ನು ಬಿಟ್ಟಿ ದುಡಿಮೆಯಾಗಿ ಪರಿಗಣಿಸಲಾಗಿದೆ. ಪರಂಪರಾಗತ ಕುಲಕಸಬುಗಳಲ್ಲಿನ ಸ್ತ್ರೀಯ ದುಡಿಮೆ ಹಾಗೂ ಮನೆಕೆಲಸಗಳ ನಿರ್ವಹಣೆ ಹಾಗೂ ಮಕ್ಕಳ ಪಾಲನೆ ಪೋಷಣೆಗಳಲ್ಲಿನ ಸ್ತ್ರೀಯ ಹೊಣೆಗಾರಿಕೆಯನ್ನು 'ದುಡಿಮೆ' ಎನ್ನುವುದಿಲ್ಲ. ಇಲ್ಲಿ ಅವಳ ಪಾಲಿನ 'ಸಂಪಾದನೆ' ಏನೂ ಇಲ್ಲ. ಈ ಕೆಲಸಗಳನ್ನು ಮಾಡುವ ಅವಳನ್ನು 'ಸುಮ್ಮನೆ ಕುಳಿತಿದ್ದಾಳೆ' ಎಂದೇ ವಿವರಿಸಲಾಗುತ್ತದೆ. ವರ್ಗಸಂಬಂಧೀ ಅಸಮಾನತೆಯಲ್ಲಿ, ದುಡಿಮೆಗೆ ತಕ್ಕ ಸಂಪಾದನೆ ಇಲ್ಲ ಎಂಬ ಅನ್ಯಾಯವಷ್ಟೇ ಇದ್ದರೆ, ಲಿಂಗ ಸಂಬಂಧೀ ಅಸಮಾನತೆಯಲ್ಲಿ ಅವಳ ದುಡಿಮೆಯನ್ನು ಯಾವ ಲೆಕ್ಕಕ್ಕೂ ಇಟ್ಟಿಲ್ಲ ಎಂಬ ದುರಂತವಿದೆ. ಇದನ್ನು ಸ್ತ್ರೀಯ ಮೇಲೆ ಹೊರಿಸಲು ಸಾಧ್ಯವಾದದ್ದು ಹೇಗೆ? ಹಿಂದೆ ಹೇಳಿದ ನಯಗಾರಿಕೆಯ ಮಾತಿನ ಬಳಕೆಯನ್ನು ಇಲ್ಲಿ ನೆನಪು ಮಾಡಿಕೊಳ್ಳಿ. ಸ್ತ್ರೀ ಪುರುಷರು ಒಟ್ಟಿಗೆ ಬಾಳಬೇಕಾದ 'ಕುಟುಂಬ' ಎಂಬ ವ್ಯವಸ್ಥೆ, ಅದನ್ನು ಪುರುಷ ನಿರ್ಮಿತ ರಚನೆ ಎಂದು ಎಷ್ಟೇ ವಿವರಿಸಿದರೂ, ಉಳಿದ ರಚನೆಗಳಿಗಿಂತ ಭಿನ್ನ. ಇಲ್ಲಿ ರಕ್ತ ಸಂಬಂಧಗಳಿವೆ. ಇವು ಪ್ರಕೃತಿ ಸಹಜ ಸಂಬಂಧ ಗಳಾದ್ದರಿಂದ ಇಲ್ಲಿ ಮನೋಲೋಕ ಎಂಬುದಿದೆ. ಮನಸ್ಸಿನ ಮಾತಿಗೆ ಬಂದರೆ ಸ್ತ್ರೀ ಪುರುಷರಲ್ಲಿ ಕೆಲವು ಸಹಜ ಭಿನ್ನತೆಗಳಿವೆ. ಹಲವು ವೇಳೆ ಇವು ಸಾಮರ್ಥ್ಯಗಳಾಗಿ ನಿಂತರೆ, ಮತ್ತೆ ಕೆಲವು ವೇಳೆ ದೌರ್ಬಲ್ಯಗಳಾಗಿ ಉಳಿಯುತ್ತವೆ. ಬಹುಶಃ ಪ್ರಕೃತಿಯು ಸ್ತ್ರೀಗೆ ತಾಯ್ತನದ ಹೊಣೆಗಾರಿಕೆಯನ್ನು ವಹಿಸಿರುವ ಸಂಗತಿಯಿಂದಾಗಿಯೇ ರಕ್ತ ಸಂಬಂಧಗಳ ವಿಚಾರದಲ್ಲಿ ಅವಳನ್ನು ಹೆಚ್ಚು ಮೆದುವಾಗಿಸಿದೆ. ತನ್ನ ಅನುಕೂಲಗಳ ಕಡೆಯೇ ಗಮನವಿಟ್ಟು ಸಾಧಕನಾಗುವುದು ಪುರುಷನಿಗೆ ಸಾಧ್ಯವಾದಂತೆ ಸ್ತ್ರೀಗೆ ಸಾಧ್ಯವಾಗಲಿಲ್ಲವೆಂಬುದಕ್ಕೆ ಈ ಗುಣ ಕಾರಣವೇನೋ.

ಕ್ರಮೇಣ ಪುರುಷನು ಇದನ್ನೇ ತನ್ನ ಪ್ರಬಲ ಸಾಧನವಾಗಿ ಬಳಸುತ್ತಾ ಸಮಾಜ ರಚನೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಾಯಿತು. ದುಡಿಮೆ ಹಾಗೂ ಸಂಪಾದನೆಗಳನ್ನೂ ತನಗೆ ಅನುಕೂಲವಾಗುವಂತೆ ನಿರ್ವಚಿಸಿದ. ಸ್ತ್ರೀಯ ದುಡಿಮೆಯನ್ನು ಅವಳದೇ ಮನೋದೌರ್ಬಲ್ಯದ ಅಸ್ತ್ರವನ್ನು ಬಳಸಿ, 'ಸಂಪಾದನೆ'ಯಿಂದ ಡಿಲಿಂಕ್ ಮಾಡಿಟ್ಟ. ಅವಳ ದುಡಿಮೆ 'ಕರ್ತವ್ಯ' ಎನಿಸಿತು. ಇದರ ನಿರ್ವಹಣೆಯಲ್ಲಿ ಅವಳು ಸಹಜವಾಗಿ ತೋರುತ್ತಿದ್ದ ಮಮಕಾರವನ್ನು ವೈಭವೀಕರಿಸುವ ನಯಗಾರಿಕೆಯಿಂದ ಆ ಚೌಕಟ್ಟಿಗೆ ಅವಳು ಬದ್ಧಳಾಗಿರಬೇಕೆಂಬ ಮೌಲ್ಯವನ್ನು ಆರೋಪಿಸಿ ನಂಬಿಸಲಾಯಿತು. ಸ್ತ್ರೀ ಪುರುಷ ಅಸಮಾನತೆಯನ್ನು ನಿರಾಕರಿಸುವ ವ್ಯವಸ್ಥಿತ ಚಿಂತನೆಗಳು ಈ ಚರಿತ್ರೆಯನ್ನು ಗ್ರಹಿಸಿವೆ. ಹಾಗಾಗಿಯೇ, ಹೆಣ್ಣಿನ ದುಡಿಮೆ-ಸಂಪಾದನೆಗಳ ಸಮೀಕರಣದ ಕೊಂಡಿಯನ್ನು ಸರಿಪಡಿಸುವ ಮೂಲಕ ಅಸಮಾನತೆಯ ಸಮಸ್ಯೆಯನ್ನು ಪರಿಹರಿಸಬಹುದೆಂದು ಇವು

ಸೂಚಿಸುತ್ತವೆ. ಇವು ಸ್ತ್ರೀಯು ಮನೆಯಲ್ಲಿ ನಿರ್ವಹಿಸುವ ಎಲ್ಲ ಕೆಲಸಗಳಿಗೆ-ಮಕ್ಕಳ ಹಾಗೂ ಕುಟುಂಬದ ಇತರ ಸದಸ್ಯರ ಪಾಲನೆ ಪೋಷಣೆಯೂ ಸೇರಿದಂತೆ-ಕೂಲಿ ಅಥವಾ ಸಂಬಳ ಎನ್ನಬಹುದಾದ ಬೆಲೆಯನ್ನು ಕಟ್ಟುವುದರಿಂದ ಹಿಡಿದು, ಪುರುಷನು ನಿರ್ವಹಿಸುವ ಎಲ್ಲ ಉದ್ಯೋಗ ಕ್ಷೇತ್ರಗಳಲ್ಲೂ ಸ್ತ್ರೀಯು ಸಮಾನ ಅವಕಾಶಗಳನ್ನು ಪಡೆಯಬೇಕು ಎನ್ನುವವರೆಗೆ ಚಳುವಳಿಗಳನ್ನು ರೂಪಿಸಿವೆ. ಹಲವು ಹಂತಗಳಲ್ಲಿ ಇವು ಕಾರ್ಯರೂಪಕ್ಕೂ ಬಂದಿವೆ. ಆದರೆ, ಇವುಗಳ ಒಟ್ಟಾರೆ ಪರಿಣಾಮವನ್ನು ಗಮನಿಸಿದಾಗ ಅಷ್ಟೇನೂ ಉತ್ಸಾಹವೆನಿಸುವುದಿಲ್ಲ. ಸ್ತ್ರೀಪರವಾದ ಹಲವು ಬಗೆಯ ಅನುಕೂಲಗಳೇನೋ ಕಾಣುತ್ತಿವೆ. ಆದರೆ ಈ ಅನುಕೂಲಗಳು ಎಲ್ಲ ಸಂದರ್ಭಗಳಲ್ಲೂ ಅವಳ ಪಾಲಿನ ಸಂತೋಷಗಳಾಗಿಲ್ಲ.

ನಿಜವಾಗಿ ದುಡಿಯುವ ವರ್ಗಕ್ಕೆ ಸೇರಿದ ಮಹಿಳೆಯರು, ಕೇವಲ ಮನೆಗೆಲಸಗಳಲ್ಲಿ ಇದ್ದ ಮಧ್ಯಮ ಹಾಗೂ ಮೇಲುವರ್ಗದ ಮಹಿಳೆಯರು-ಇಬ್ಬರೂ ಈ ಹೊಸ ಅವಕಾಶಗಳ ಪರಿಸರದಲ್ಲಿ ಹೊಸ ರೀತಿಯ ಶೋಷಣೆಗಳಿಗೆ ಒಳಗಾಗಿದ್ದಾರೆ. ಕುಲಕಸಬುಗಳಿಗೆ ಸಂಬಂಧಿಸಿ ಹೇಳುವುದಾದರೆ, ಪುರುಷನಿಂದ ನಿಯಂತ್ರಿತವಾಗಿರುವ ವಿಜ್ಞಾನ ತಂತ್ರಜ್ಞಾನಗಳ ಎಲ್ಲ ಆವಿಷ್ಕಾರಗಳೂ ಪುರುಷರಿಗೆ ಮಾತ್ರವೇ ಅನುಕೂಲವಾಗುವಂತೆ ನಡೆದಿವೆ ಎಂಬ ಮಾತು, ಹೊಸ ಉದ್ಯೋಗಾವಕಾಶಗಳನ್ನು ಹಿಡಿಯಲು ಹಾತೊರೆದು ಹೊರಗೆ ಹೊರಟ ಗೃಹಿಣಿಯರು ಎರಡೂ ಕಡೆಗಳ ನಿರ್ವಹಣೆಯಲ್ಲಿ ನುಗ್ಗಾಗುತ್ತಿದ್ದಾರೆಂಬ ಸಂಗತಿ, ಹೊರಗಿನ ಉದ್ಯೋಗಗಳಲ್ಲೂ ಕೆಳದರ್ಜೆಯನ್ನೇ ಒಪ್ಪಬೇಕಾದ ಅನಿವಾರ್ಯ ಸ್ಥಿತಿ, ಇಷ್ಟಾಗಿಯೂ ಮೂಲಭೂತವಾದ ಆರ್ಥಿಕ ಸ್ವಾತಂತ್ರ್ಯವೆಂಬುದು ದಕ್ಕಿಯೇ ಇಲ್ಲ ಎಂಬ ಸತ್ಯ, ಇವೆಲ್ಲದರ ಮಧ್ಯೆ ಕುಟುಂಬ ವ್ಯವಸ್ಥೆಯಲ್ಲಿ ಆಗಿರುವ ಅಲ್ಲೋಲ ಕಲ್ಲೋಲ-ಇವುಗಳನ್ನೆಲ್ಲಾ ಅಸ್ಪಷ್ಟವಾಗಿ ವಿವರಿಸಲಾಗದು. ಹಾಗಾಗಿ, ಸಮಾಜವಾದಿ ಚಿಂತನೆಗಳನ್ನು ವರ್ಗ ಹೋರಾಟದ ನೆಲೆಗೆ ಅನ್ವಯಿಸುವಷ್ಟೇ ಸುಲಭವಾಗಿ ಸ್ತ್ರೀ ಪುರುಷ ಸಂಬಂಧಗಳಿಗೆ ಅನ್ವಯಿಸುವುದು ಸಾಧ್ಯವಿಲ್ಲ. ಈ ಸಂಬಂಧಗಳ ವರ್ತನೆಗಳು ಇಂದಿಗೆ ಮಾತ್ರ ಅನ್ವಯಿಸದೆ ಮಾನವ ಜನಾಂಗದ ಭವಿಷ್ಯಕ್ಕೂ ಸಂಬಂಧಿಸುವುದರಿಂದ ಇಲ್ಲಿನ ಸಮಸ್ಯೆ ಹೆಚ್ಚು ಸಂಕೀರ್ಣವಾದುದಾಗಿದೆ. ಈ ಸಮಸ್ಯೆಯನ್ನು ಒಂದು ನಿಟ್ಟಿನ ಲೆಕ್ಕಾಚಾರದ ಕ್ರಮದ ಅಥವಾ ತರ್ಕಶುದ್ಧತೆಯಿಂದ ಬಿಡಿಸಲಾಗದು. ಸಮಾಜವಾದಿ ಚಿಂತನೆಯನ ್ನಾಧರಿಸಿದ ಈ ಯಾವ ಕ್ರಮಗಳಿಂದಲೂ ಸಾಮಾಜಿಕ, ಆರ್ಥಿಕ, ರಾಜಕೀಯ, ವೈಯಕ್ತಿಕ, ಕೌಟುಂಬಿಕ - ಈ ಯಾವ ನೆಲೆಗಳಲ್ಲೂ ಸ್ತ್ರೀಗೆ ನೆಮ್ಮದಿ ಒದಗಿಲ್ಲ. ಪುರುಷನ ಅಧಿಕಾರ ದಾಹವೇ ಇಲ್ಲಿನ ಮುಖ್ಯ ಸಮಸ್ಯೆ. ಹೊರಗಿನ ಸಂದರ್ಭಗಳಲ್ಲಿ ಮಾತ್ರವೇ ತಂದ ಬದಲಾವಣೆಗಳು ಸಮಸ್ಯೆಗೆ ಪರಿಹಾರಗಳಲ್ಲ. ಬದಲಿಗೆ ಸಮಸ್ಯೆಗಳು ಹೊಸ ರೂಪಗಳನ್ನು ಪಡೆದುಕೊಳ್ಳುತ್ತದಷ್ಟೇ.

೨. ಬಾಹ್ಯ ಸಂಗತಿ ಎನಿಸಿದ ಆರ್ಥಿಕ ಸಮಾನತೆಯ ಮೂಲಕ ಇತರ ಸಮಾನತೆಗಳನ್ನೂ ಸಾಧಿಸಬಹುದೆಂಬ ಈ ಸಮಾಜವಾದಿ ಚಿಂತನೆ ಸ್ತ್ರೀ ಪುರುಷ ಸಂಬಂಧಗಳ ಸಮಸ್ಯೆಯ ಪರಿಹಾರವಲ್ಲ ಎಂದ ಮೇಲೆ, ಸಮಸ್ಯೆಯ ಮೂಲವು ಅಂತರಂಗಿಕ ಸಂಗತಿಗಳಿಗೆ ಸಂಬಂಧಿಸಿರಬಹುದೇ ಎಂದು ಯೋಚಿಸಬೇಕಾಗುತ್ತದೆ. ಈ ದಿಸೆಯ ಚಿಂತನೆಗಳು, ಪ್ರಧಾನವಾಗಿ ಸಮಾಜದಲ್ಲಿ ಸ್ತ್ರೀ ಪುರುಷರಿಗೆ ಸಹಜವಾಗಿ ನಿಗದಿತವಾಗಿರುವ ಪಾತ್ರಗಳಾವುವು ಎಂಬುದನ್ನು ಅರ್ಥ ಮಾಡಿಕೊಳ್ಳಲು, ಸ್ತ್ರೀ ಪುರುಷರಿಬ್ಬರೂ ಪರಸ್ಪರ ಅತಿಕ್ರಮಿಸದೆ, ಸಹಾನುಭೂತಿಯಿಂದ, ಗೌರವದಿಂದ ನಿರ್ವಹಿಸುವುದನ್ನು ಸೂಚಿಸುವ ಜೊತೆಗೆ, ಚರಿತ್ರೆಯಲ್ಲಿ ಪುರುಷನು ಈ ನಿಯಮವನ್ನು ಮೀರುತ್ತಾ ಬಂದಿರುವ ಸಂಗತಿಯನ್ನು ವಿಶ್ಲೇಷಿಸುತ್ತವೆ. ಈ ಬಗೆಯ ಚಿಂತನೆಗಳಿಗೆ ಹಲವು ಬಗೆಯ ಮಿತಿಗಳಿವೆ. ಸಮಾಜವಾದೀ ಚಿಂತನೆಯಷ್ಟು ಸ್ಪಷ್ಟವಾಗಿ ಒಂದು ಸಿದ್ಧಾಂತ ಎಂಬಂತೆ ಈ ಚಿಂತನೆಗಳು ಮಂಡಿತವಾಗಿಯೂ ಇಲ್ಲ. ಜೀವನ ನಾಟಕದ ಪಾತ್ರಧಾರಿಗಳು ನಾವು ಎಂಬ ರೂಪಕವನ್ನೇ ಈ ಚಿಂತನೆ ಬೆಳಸುತ್ತದೆ. ವ್ಯಕ್ತಿಗೂ ಆ ವ್ಯಕ್ತಿಯು ನಿರ್ವಹಿಸಬೇಕಾದ ಸಾಮಾಜಿಕ ಸ್ಥಾನಕ್ಕೂ ಇರುವ ಅಂತರವನ್ನು ವಿಶ್ಲೇಷಿಸುವುದು ಈ ಚಿಂತನೆಯ ಮೊದಲ ತರ್ಕ. ನಂತರ ಆ ಸ್ಥಾನಕ್ಕೆ ನಿಗದಿತವಾದಂತೆ ಕೆಲ ಬಗೆಯ ರೀತಿ ನೀತಿಗಳು ಇರುತ್ತದೆನ್ನುವುದು ಎರಡನೆಯ ತರ್ಕ. ಅಂದರೆ, ಇವೆರಡೂ ನಾಟಕದ ಪಠ್ಯಕ್ಕೂ ಪಾತ್ರಧಾರಿಗೂ ಇರುವ ಸಂಬಂಧವನ್ನು ಹೋಲುತ್ತದೆ. ಮುಂದಿನ ಮೂರು ತರ್ಕಗಳು ಈ ಪಠ್ಯಕ್ಕೆ ಹೊಂದುವಂತೆ ನಾಟಕವು ರಂಗದ ಮೇಲೆ ನಿರೂಪಿತವಾಗುವ ಬಗೆಯನ್ನು ಹೇಳುತ್ತವೆ. ಪಾತ್ರಧಾರಿಯು ಯಾವ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕು ಎಂಬ ಬಗ್ಗೆ ನಿಗದಿತ ನಿರೀಕ್ಷೆಗಳಿರುತ್ತವೆ. ಇವುಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ಘಟಕಗಳಿರುತ್ತವೆ. ನಿರ್ಮಾಪಕ, ನಿರ್ದೇಶಕ, ಸಂಘ ಸಂಸ್ಥೆಗಳಂತೆ. ಇವು ಶಿಕ್ಷೆ ಅಥವಾ ಬಹುಮಾನಗಳ ರೂಪದ ಇತ್ಯಾತ್ಮಕ ಅಥವಾ ನೇತ್ಯಾತ್ಮಕ ಕ್ರಮಗಳನ್ನನುಸರಿಸಿ ನಿರೀಕ್ಷೆಗಳು ಕಾರ್ಯಗತಗೊಳ್ಳುವಂತೆ ಮಾಡುತ್ತವೆ. ಈ ತರ್ಕಗಳನ್ನು ಬಳಸಿ ಸ್ತ್ರೀ ಪುರುಷ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಈ ಚಿಂತನೆಗಳು ಯತ್ನಿಸುತ್ತವೆ. ಆದರೆ ಈ ತರ್ಕದಲ್ಲಿರುವ ಮೂಲಭೂತವಾದ ತೊಡಕೆಂದರೆ, ಇದನ್ನು ಸ್ತ್ರೀ ಪುರುಷ ಸಂಬಂಧಗಳಿಗೆ ಮಾತ್ರವೇ ಅನ್ವಯಿಸಬೇಕೆಂದೇನೂ ಇಲ್ಲ. ಯಾವುದೇ ವ್ಯಕ್ತಿ ಸಂಬಂಧಗಳಿಗೆ ಅನ್ವಯಿಸಬಹುದಾಗಿದೆ. ವಿಶೇಷವಾಗಿ ಸ್ತ್ರೀ ಪುರುಷ ಸಂಬಂಧದ ಸಮಸ್ಯೆಯನ್ನು ವಿಶ್ಲೇಷಿಸಲು ಅನ್ವಯಿಸಲಾಗದು. ಹಾಗೆ ಅನ್ವಯಿಸಿ ಮಾಡಿದ ವಿವರಣೆಗಳಲ್ಲಿ ಹೆಚ್ಚಿನ ಗೊಂದಲಗಳು ಕಂಡು ಬಂದಿವೆ. ಏಕೆಂದರೆ, ಜೀವನದ ಸಂದರ್ಭಗಳು ಹೀಗೆ, ನಿಖರವಾಗಿ ಇಂಥವರ ನಿರ್ವಹಣೆಗಾಗಿ ಎಂಬಂತೆ, ಒದಗುವುದಿಲ್ಲ. ಸಹಜವಾದ ಕೆಲವು ದೇಹ ಸಂಬಂಧೀ ಕ್ರಿಯೆಗಳನ್ನು ಬಿಟ್ಟರೆ, ಹೆಣ್ಣು ಅಥವಾ ಗಂಡು ವ್ಯಕ್ತಿಗಳಿಗೆ ಪ್ರತ್ಯೇಕ ಕ್ರಿಯೆಗಳೆಂಬುದೇನೂ ನಿಗದಿತವಾಗಿಲ್ಲ. ಪ್ರತ್ಯೇಕ ಸಂದರ್ಭಗಳಿಗೆ 'ಹೆಣ್ಣು ಗುಣ' ಅಥವಾ 'ಗಂಡುಗುಣ'ದ ಕ್ರಿಯೆಗಳಿರಬಹುದು. (ಇಂಗ್ಲಿಶಿನಲ್ಲಿ sex ಮತ್ತು gender ಎಂಬ ಪ್ರತ್ಯೇಕ

ಪದಗಳಲ್ಲಿ ಇದನ್ನು ಸೂಚಿಸಲಾಗುವುದು) ಹೆಣ್ಣು ಪಾತ್ರ ಅಥವಾ ಹೆಣ್ಣು ಗುಣದ ಪಾತ್ರ ಗಂಡು ಪಾತ್ರ ಅಥವಾ ಗಂಡು ಗುಣದ ಪಾತ್ರ- ಇವುಗಳ ಪಾತ್ರಧಾರಿಗಳು ವಾಸ್ತವದ ಹೆಣ್ಣು ಗಂಡುಗಳೇ ಆಗಿರಬೇಕಿಲ್ಲ. ಮೊದಲ ಹಂತಕ್ಕೆ ಈ ವಿಶ್ಲೇಷಣೆ ಆಕರ್ಷಕವೆನಿಸುತ್ತದೆ. ಏಕೆಂದರೆ ಸ್ತ್ರೀ ಪುರುಷ ಸಹಜ ವ್ಯತ್ಯಾಸಗಳನ್ನು ಇದು ಸುಲಭವಾಗಿ ಮೀರಿ ಬಿಡುತ್ತದೆ. ಎರಡನೆಯದಾಗಿ, ಸಾಮಾಜಿಕ ಹಾಗೂ ಮಾನಸಿಕ ನೆಲೆಗಳ ಗೆರೆಯನ್ನು ಇಲ್ಲವಾಗಿಸುವ ಮೂಲಕ ಸಮಾಜ ರಚನೆ ಹಾಗೂ ವ್ಯಕ್ತಿತ್ವಗಳಿಗೆ ಸಂಬಂಧವನ್ನು ಕಲ್ಪಿಸುತ್ತದೆ. ಅಂದರೆ, ವ್ಯಕ್ತಿಗಳನ್ನು ಸಾಮಾಜಿಕ ಸಂಬಂಧಗಳಾಗಿ ವಿಲೀನಗೊಳಿಸಿ ಬಿಡುತ್ತದೆ. ವ್ಯಕ್ತಿಯು ತನ್ನ ಪಾತ್ರವನ್ನು 'ಕಲಿತು' 'ಸಾಮಾಜಿಕ'ನಾಗುತ್ತಾನೆ ಎಂಬ ಚಿಂತನೆ ಇಲ್ಲಿದೆ. ಸಮಾಜ ರಚನೆಯ ವಿವಿಧ ಅಂಗಗಳಿಗೆ, ಈ ಗುಣವನ್ನು ಎತ್ತಿ ಹಿಡಿಯುವುದರಲ್ಲಿ ಆಸಕ್ತಿ ಸಹಜ. ಕುಟುಂಬ, ಶಾಲೆ, ಮಾಧ್ಯಮಗಳು-ಇಂಥವೆಲ್ಲ ಸ್ತ್ರೀ ಪುರುಷ ಮಾದರಿಗಳನ್ನು ಮಕ್ಕಳಿರುವಾಗಲೇ ಕಲಿಸುತ್ತವೆ ಎಂದು ಈ ಚಿಂತನೆ ಮಂಡಿಸುತ್ತದೆ. ಮುಂದುವರೆದು, ಇದನ್ನು ಅರ್ಥ ಮಾಡಿಕೊಂಡು ಸುಧಾರಣೆಯ ತಂತ್ರವನ್ನು ರೂಪಿಸಬೇಕು ಎನ್ನುತ್ತದೆ.

ಅಲ್ಲದೆ, ಸ್ತ್ರೀಯರು ನಿರ್ವಹಿಸುವ ಪಾತ್ರಗಳು ಎಂಬ ನಿರೀಕ್ಷೆಯ ಕಾರಣವಾಗಿಯೇ ಸಮಾಜದಲ್ಲಿ ಸ್ತ್ರೀಯರು ಇಂದು ಶೋಷಣೆಗೆ ಒಳಗಾಗಿ ದುರ್ಬಲರಾಗಿದ್ದಾರೆಂಬುದು ಸಮಸ್ಯೆಯಾದರೆ, ಇದಕ್ಕೆ ಪರಿಹಾರವಾಗಿ ನಿರೀಕ್ಷೆಯಲ್ಲಿಯೇ ಬದಲಾವಣೆಯನ್ನು ತರಬೇಕಾಗುತ್ತದೆ ಎನ್ನುವುದು ಈ ಚಿಂತನೆ ಸೂಚಿಸುವ ತಂತ್ರ. ಶಾಲೆಗಳ ವಿವಿಧ ಕಾರ್ಯಯೋಜನೆಗಳಲ್ಲಿ, ಕಾನೂನು ಕಾಯಿದೆಗಳಲ್ಲಿ, ಉದ್ಯೋಗಾವಕಾಶಗಳಲ್ಲಿ, ಗಂಡು ಹೆಣ್ಣು ಮಕ್ಕಳನ್ನು ಬೆಳೆಸುವ ಬಗೆಯಲ್ಲಿ- ಈ ತಂತ್ರವನ್ನು ಬಳಸುವ ಪ್ರಯತ್ನಗಳು ನಡೆದಿವೆ. ಇಲ್ಲಿನ ತೊಂದರೆ ಎಂದರೆ, ಸ್ತ್ರೀ ಪುರುಷ ಅಸಮಾನತೆಯನ್ನು ಇದು ಅಂತ ರಂಗದಿಂದ ವೈಭವೀಕರಿಸುತ್ತದೆ. ಪಾತ್ರಗಳ ಮೇಲು ಕೀಳುಗಳನ್ನು ಒಪ್ಪಿ, ಕೀಳು ಪಾತ್ರಗಳು ಮೇಲು ಪಾತ್ರಗಳಾಗಿ ಬದಲಾಗಬೇಕೆಂದು ಸೂಚಿಸುವ ಈ ಚಿಂತನೆ, ಪಾತ್ರಗಳನ್ನು ಅವುಗಳು ಇರುವ ನೆಲೆಯಲ್ಲಿಯೇ ಗೌರವಿಸುವುದನ್ನು ಹೇಳುವುದಿಲ್ಲ. ಅಲ್ಲದೆ, ಇನ್ನೊಂದು ಸಮಸ್ಯೆಯೂ ಇದೆ. ಸಮಾಜ ರಚನೆಯಲ್ಲಿ ಯಾವ ಪಾತ್ರಧಾರಿಗೂ ಒಂದೇ ಪಾತ್ರ ನಿರ್ವಹಣೆ ಎಂಬ ಸೂತ್ರವಿಲ್ಲ. ಮೂಲಭೂತವಾಗಿ ಒಟ್ಟು ಕುಟುಂಬದ ಎಲ್ಲ ಲಕ್ಷಣಗಳನ್ನೂ ಉಳಿಸಿಕೊಂಡು ಬಂದಿರುವ ನಮ್ಮ ಭಾರತೀಯ ಸಮಾಜ ರಚನೆಗಳ ಸಂದರ್ಭದಲ್ಲಿ ಇದು ಹೆಚ್ಚು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ವಿವಿಧ ಪಾತ್ರಗಳನ್ನು ನಿರ್ವಹಿಸುವ ಈ ಏಕಪಾತ್ರಧಾರಿಗೆ, ತನಗೆ ಬೇಕಾದಂತೆ ಹಂತಗಳನ್ನು ದಾಟಿಕೊಳ್ಳುವ ಸ್ವಾತಂತ್ರ್ಯವಿರುವುದಿಲ್ಲ. ಏಕೆಂದರೆ, ಪಾತ್ರಧಾರಿಗೆ ದೊರೆತ ವಿವಿಧ ಪಾತ್ರಗಳಲ್ಲಿ ಇರುವ ಅಂತರಂಗಿಕವಾದ ಸಂಬಂಧಗಳು ಲೆಕ್ಕಾಚಾರಕ್ಕೆ ಸಿಲುಕುವಷ್ಟು ಸರಳವಲ್ಲ. ಅತ್ಯಂತ ಸಂಕೀರ್ಣವಾದವು. ಪಾತ್ರಧಾರಿಗೆ ವಹಿಸಲಾಗುವ ವಿವಿಧ ಪಾತ್ರಗಳು ಎಂತಹವು ಎಂಬ ಬಗ್ಗೆಯೂ ಯಾವುದೇ ನಿಗದಿತ ಚೌಕಟ್ಟು ಅಥವಾ ಸೂತ್ರ ಇಲ್ಲ ಎಂದ ಮೇಲೆ,

ಚರ್ಚೆಗಳಲ್ಲಿ ಎಷ್ಟೇ ಆಕರ್ಷಕವೆನ್ನಿಸಿದರೂ ಈ ಬಗೆಯ ಚಿಂತನೆ ಜೀವನಗ್ರಾಹ್ಯವಾಗುವ ಬಗೆ ಹೇಗೆಂದು ತಿಳಿಯುವುದಿಲ್ಲ.

೩. ಮೂರನೆಯದೊಂದು ಚಿಂತನೆಯು, ಸ್ತ್ರೀ ಪುರುಷ ಸಂಬಂಧಗಳಲ್ಲಿ ಅಸಮಾನತೆಯ ಸಮಸ್ಯೆಗೆ ಕಾರಣವನ್ನು ಹುಡುಕುವಾಗ, ವ್ಯಕ್ತಿಗೆ ಸಾಂಸ್ಕೃತಿಕವಾಗಿ ದತ್ತವಾಗಿರುವ ಹಿತಾಸಕ್ತಿಗಳು ಹಾಗೂ ಸಾಮಾಜಿಕವಾಗಿ ನಿಯೋಜಿತವಾಗಿರುವ ಹಿತಾಸಕ್ತಿಗಳು ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎನ್ನುತ್ತದೆ. ಸ್ತ್ರೀಯ ನಿಜವಾದ ಶತ್ರು ಸ್ತ್ರೀಯೇ ಆಗಿರುವ ಸಾಧ್ಯತೆಗಳನ್ನು ಉದಾಹರಿಸುತ್ತದೆ. ಶೋಷಣೆಗೂ ಅಧಿಕಾರ ಸ್ಥಾಪನೆಗೂ ಇರುವ ಸಂಬಂಧವನ್ನು ಪ್ರಧಾನ ಎಂದು ಪರಿಗಣಿಸುವ ಚಿಂತನೆ, ಸ್ವಲ್ಪ ಮಟ್ಟಿಗೆ ಮಾರ್ಕ್ಸಿಸ್ಟ್ ಚಿಂತನೆಗಳಿಗೆ ಹೊಂದಿಸಬಹುದಾದಂಥದ್ದು. 'ಮದುವೆ' ಎಂಬ ಸಮಾಜ ರಚನೆಯಲ್ಲಿ, ಪಿತೃಪ್ರಧಾನ ವ್ಯವಸ್ಥೆಯು, ಆರ್ಥಿಕ ಅಧಿಕಾರವನ್ನು ಚಲಾಯಿಸಲು ರೂಪಿಸಿರುವ ಹಲವು ತಂತ್ರಗಳನ್ನು ಈ ಚಿಂತನೆ ವಿಶ್ಲೇಷಣೆಗೆ ಒಳಗು ಮಾಡಿದೆ. ಗಂಡು ಮಕ್ಕಳಲ್ಲೇ ಆಸ್ತಿ ದಾಟಿ ಹೋಗುವ ತಂತ್ರವನ್ನು, ಹೆಣ್ಣುಗಳ ಬಿಟ್ಟಿ ದುಡಿಮೆಯನ್ನು ತನ್ನ ಸಂಪಾದನೆಯ ಬಂಡವಾಳವನ್ನಾಗಿಸುವ ಮದುವೆ ಎಂಬ ವ್ಯವಸ್ಥೆಯ ತಂತ್ರಗಳನ್ನು ವಿವರಿಸಲಾಗಿದೆ. ಸಾಮಾಜಿಕ ಚೌಕಟ್ಟುಗಳ ಮೂಲಕ, ತನ್ನ ಅಧಿಕಾರ ಕ್ಷೇತ್ರವನ್ನು ವಿವಿಧ ಗುಂಪುಗಳಾಗಿ ಪ್ರತ್ಯೇಕಿಸಿಕೊಳ್ಳುವ ಮೂಲಕ ಪುರುಷ ಸ್ತ್ರೀ ಮೇಲೆ ಒಡೆತನವನ್ನು ಸ್ಥಾಪಿಸುತ್ತಾನೆ. ಈ ಒಡೆತನ ಕೇವಲ ದೇಹಸಂಬಂಧಿ ಎಂದೇನಿಲ್ಲ. ಸಾಮಾಜಿಕ ಪ್ರಗತಿಗೆ ಸಂಬಂಧಿಸಿದಂತೆ ಸಂಪಾದನೆ, ಶಿಕ್ಷಣ, ಉದ್ಯೋಗ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಪುರುಷನು ಅಳವಡಿಸಿರುವ ತಂತ್ರವನ್ನು ವಿಶ್ಲೇಷಿಸುವಲ್ಲಿ ಅನೇಕ ಅಧ್ಯಯನಗಳು ಸಫಲವಾಗಿವೆ. ಇಲ್ಲೆಲ್ಲಾ, ಪುರುಷನ ಅಧಿಕಾರ ದಾಹ ಹಾಗೂ ಆ ಕಾರಣ ವಾಗಿಯೇ ಸಂವೇದನೆಗಳ ಎಲ್ಲ ಸೂಕ್ಷ್ಮಗಳನ್ನೂ ಕಳೆದುಕೊಂಡು ಬಿಡುವ ಅವನ ವ್ಯಕ್ತಿತ್ವ ಗೋಚರವಾಗಿ, ದಿಗ್ಭ್ರಮೆಯನ್ನುಂಟು ಮಾಡುತ್ತದೆ. ಸಮಾಜ ಎಂಬ ಯಂತ್ರವು ಅವನಿಂದ ನಿರ್ಮಿತವಾಗಿ ನಿಯಂತ್ರಣಗೊಳ್ಳುತ್ತಿದೆಯಾಗಿ ಮಾನವ ಬದುಕಿನ ಪರಿಸರ ಕೊಳೆತು ನ ಾರಲು ಕಾರಣವಾಗಿದೆ. ಇದಕ್ಕೆ ಪರಿಹಾರವಾಗಿ, ಪುರುಷನ ಈ ಅಧಿಕಾರವನ್ನು ಒಡೆಯುವುದನ್ನು ಸೂಚಿಸಲಾಗಿದೆ. ಅಧಿಕಾರವು ಅತ್ಯಂತ ಪ್ರಬಲವಾಗಿ ವ್ಯಕ್ತವಾಗುವ ರಾಜಕೀಯ ಕ್ಷೇತ್ರದಲ್ಲಿ ಈ ಒಡೆಯುವಿಕೆ ಮೊದಲು ಆರಂಭಗೊಳ್ಳುವುದರಿಂದ ತಂತ್ರಕ್ಕೆ ಪ್ರತಿ ತಂತ್ರವನ್ನು ರೂಪಿಸಲು ಈ ಚಿಂತನೆಯಾಧಾರಿತ ಚಳುವಳಿಗಳು ಯತ್ನಿಸಿವೆ. ಉದ್ಯೋಗ, ವ್ಯವಹಾರ, ರಾಜಕಾರಣಗಳಲ್ಲಿ ಹೆಚ್ಚು ಹೆಚ್ಚಿನ ಉನ್ನತ ಸ್ಥಾನಗಳಲ್ಲಿ ಸ್ತ್ರೀಯರು ಬರಬೇಕು ಎಂದಾಗ, ಈ ಚಿಂತನೆಯ ತಂತ್ರವು, ಇತರ ಹಲವು ಚಿಂತನೆಗಳು ಸೂಚಿಸುವುದಕ್ಕಿಂತ ಹೆಚ್ಚಿನ ವ್ಯಾವಹಾರಿಕತೆಯನ್ನು ತೋರಿರುವಂತಿದೆ. ಆದರೂ, ಈ ಚಿಂತನೆಯ ಮೂಲದಲ್ಲಿ ಪುರುಷನ ಅಧಿಕಾರದಿಂದ ಸ್ತ್ರೀಯು ಮುಕ್ತಳಾಗಬೇಕು ಎಂಬ ಪರ-ವಿರೋಧ ರೀತಿಯ ಘರ್ಷಣೆಯೇ ಇರುವುದು. ವಾಸ್ತವದಲ್ಲಿ ಪುರುಷನೊಂದಿಗಿನ

ಸಂಬಂಧಗಳನ್ನು ಕಡಿದುಕೊಂಡು ಸ್ವತಂತ್ರಳಾಗಬೇಕೆನ್ನುವ ಸಂದರ್ಭಗಳನ್ನು ಸ್ತ್ರೀಯು ಸ್ವಾಗತಿಸುವುದು ಎಷ್ಟು ಮಟ್ಟಿಗೆ ಸಾಧ್ಯ, ಅಥವಾ ಉಚಿತ?

ಹಾಗಾದರೆ, ಈ ಸಮಸ್ಯೆಗೆ ಪರಿಹಾರ ಎಂಬುದೇ ಇಲ್ಲವೆ? ಸ್ತ್ರೀ ಪುರುಷ ಸಂಬಂಧಗಳ ಸ್ವರೂಪವಿರುವುದೇ ಹೀಗೆ ಎಂದು ಒಪ್ಪಿ ಸುಮ್ಮನಾಗುವುದೊಂದೇ ದಾರಿಯೇ? ಸ್ತ್ರೀ ಪುರುಷ ಸಂಬಂಧಗಳ ಚಾರಿತ್ರಿಕ ಹಿನ್ನೆಲೆಯೊಂದನ್ನು ವ್ಯವಸ್ಥಿತವಾಗಿ ಗುರುತಿಸುವ ಅಧ್ಯಯನಗಳೆಲ್ಲವೂ, ಅದರ ಮೂಲ ಕಾರಣಗಳು, ಬೆಳವಣಿಗೆಯ ಹಂತಗಳು, ಸದ್ಯದ ಪರಿಸ್ಥಿತಿ ಎಂಬಂತಹ ಒಂದು ಚೌಕಟ್ಟನ್ನು ನಿರ್ಮಿಸುತ್ತವೆ. ಮಾತೃಪ್ರಧಾನ ಮೂಲ ಸ್ವರೂಪ, ಅಧಿಕಾರ ದಾಹದ ಪುರುಷನ ತಂತ್ರದಿಂದಾಗಿ ಬಂದ ಪಿತೃ ಪ್ರಧಾನರೂಪ, ಅದನ್ನು ಮತ್ತೆ ಒಡೆದು ಸರಿಪಡಿಸಲು ಹೊರಟಿರುವ ಸ್ತ್ರೀವಾದಿ ಚಿಂತನೆಗಳು ಹಾಗೂ ಚಳುವಳಿಗಳು-ಹೀಗೆ ಚಾರಿತ್ರಿಕ ಗತಿಯೊಂದನ್ನು ಅನುಸರಿಸುವ ಒಂದು ತಿಳುವಳಿಕೆಯ ಬಗೆಗಳಾಗಿವೆ. ಈ ಚಾರಿತ್ರಿಕ ಗತಿಯಲ್ಲಿ ಮಾನವ ವರ್ತನೆಗಳೇ ಪ್ರಧಾನ ಸಾಧನ ಗಳೆನ್ನುವುದಾದರೆ, ಭವಿಷ್ಯದ ಜನಾಂಗದ ಬದುಕಿನ ಹೊಣೆ ಇಂದಿನ ನಮ್ಮದೇ ಅಲ್ಲವೇ? ಈ ಹೊಣೆಯನ್ನು ನಿರ್ವಹಿಸುವ ಬಗೆಯನ್ನು ಕಂಡುಕೊಳ್ಳುವುದು ಹೇಗೆ? ಪ್ರಚಲಿತ ವಿಧಾನದಿಂದ ಅದು ಸಾಧ್ಯವೇ?

ಸ್ತ್ರೀ ಪುರುಷರಲ್ಲಿನ ನಿಸರ್ಗ ಸಹಜ ವ್ಯತ್ಯಾಸಗಳು ಇತರ ಪ್ರಾಣಿ ವರ್ಗಗಳಲ್ಲೂ ಇರುವಂಥವೇ. ಇಲ್ಲಿ ವೈವಿಧ್ಯವಿದೆಯೇ ಹೊರತು ಅಸಮಾನತೆ ಇಲ್ಲ. ಸಮಾಜ ಎಂಬ ಕೃತಕ ರಚನೆ ಮಾನವ ಪ್ರಾಣಿಗಷ್ಟೇ ಸೀಮಿತವಾದದ್ದು. ಈ ಕೃತಕ ರಚನೆಯಲ್ಲಿ ಮಾತ್ರವೇ ಅಸಮಾನತೆಯ ಪ್ರಶ್ನೆ ಬರುತ್ತದೆ. ಈ ಅಸಮಾನತೆಯೇ ಒಂದು ಉದ್ದೇಶಿತ ರಚನೆ ಯಾದ್ದರಿಂದ ಇದರ ನಿವಾರಣೆಯೂ ಒಂದು ಉದ್ದೇಶಿತ ತಂತ್ರವಾಗಿಯೇ ರೂಪುಗೊಳ್ಳಲು ಸಾಧ್ಯವಿದೆ. ವಿವಿಧ ಸಮಾಜ ರಚನೆಗಳಲ್ಲಿನ ವಿಶಿಷ್ಟ ಸಮಸ್ಯೆಗಳಿಗೆ ಅನ್ವಯಿಸುವ ಸೂಕ್ಷ್ಮ ಬಗೆಯ ಚಿಂತನೆಗಳೂ ಪ್ರಸ್ತಾಪಗೊಳ್ಳಬಹುದು. ಪ್ರಪಂಚದ ವಿವಿಧ ಭಾಗಗಳಲ್ಲಿ ಈ ದಿಸೆಯಲ್ಲಿ ಅಧ್ಯಯನಗಳೂ, ಪ್ರಯೋಗಗಳೂ ನಡೆಯುತ್ತಲೇ ಇವೆ. ನಮ್ಮ ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳಲು ಇವುಗಳನ್ನು ಆಕರಗಳೆಂದು ಬಳಸಲೂ ಬಹುದು. ಅಷ್ಟರ ಮಟ್ಟಿಗೆ ಈ ಸಿದ್ಧಾಂತಗಳು, ಪರಿಕಲ್ಪನೆಗಳು ಸಹಾಯಕವೇ ಹೌದು. ಆದರೂ, ತಂತ್ರ ಪ್ರತಿತಂತ್ರಗಳ ಮಾರ್ಗಗಳಿಗಿಂತ ಭಿನ್ನವಾದ, ಒಟ್ಟಾರೆಯಾಗಿ 'ಮಾನವ ಪರ' ವಾದ ಚಿಂತನೆಗಳೇ ಭವಿಷ್ಯ ಮಾರ್ಗವನ್ನು ಸ್ಪಷ್ಟಪಡಿಸುವ ನೆರವುಗಳೆಂದು ನನಗೆ ತೋರುತ್ತದೆ.

ಇದುವರೆಗೆ ನಡೆದು ಬಂದಿರುವ ಚಿಂತನೆಗಳು, ಹಾಗೂ ಅವುಗಳನ್ನಾಧರಿಸಿದ ಚಳುವಳಿಗಳ ಬಗೆಗೆ ನನಗೆ ಇರುವ ಸಂದೇಹಗಳನ್ನು ಹೇಳಿದ ಮೇಲೆ, ಇದಕ್ಕೆ ಉತ್ತರ ವೆನಿಸುವ ಪರ್ಯಾಯ ಚಿಂತನೆಯೊಂದನ್ನು ಸೂಚಿಸಬಲ್ಲೆ ಎಂಬ ಒರಟು ಧೈರ್ಯ ಅಥವಾ ಅರ್ಹತೆ ನನಗಿದೆ ಎಂದು ಹೇಳುತ್ತಿಲ್ಲ. ಆದರೂ, ಈ ದಿಸೆಯಲ್ಲಿ ನನ್ನೊಳಗೇ ನಡೆದಿರುವ

ಒಂದಿಷ್ಟು ಆಲೋಚನೆಗಳನ್ನು ಸಮಾನರಲ್ಲಿ ಹಂಚಿಕೊಳ್ಳುವ ಮೂಲಕ ನನಗೆ ನಾನೇ ಸ್ಪಷ್ಟವಾಗುವ ಒಂದು ನಿರೀಕ್ಷೆಯಿಂದ ಎರಡು ಮಾತುಗಳನ್ನು ಇಲ್ಲಿನ ಚರ್ಚೆಗಾಗಿ ಮಂಡಿಸುತ್ತೇನೆ. ಈ ಲೋಕದ ಬದುಕನ್ನು ಹಸನಾಗಿಸುವ ಚಿಂತನೆ ಪರಲೋಕವನ್ನು ಸಾಧಿಸುವ ಆಧ್ಯಾತ್ಮ ನೆಲೆಯ ಚಿಂತನೆಗಿಂತ ಅಮೂಲ್ಯವಾದುದು. ಅಂತಹ ಮಾನವಪರ ಚಿಂತನೆಗಳನ್ನು ಮಾಡಿದವರಲ್ಲಿ ಮಹಾತ್ಮಾಗಾಂಧಿ ಹಾಗೂ ಮಾವೋ ಅನೇಕ ಕಾರಣಗಳಿಂದ ನಮ್ಮ ಸಮೀಪದವರು. ಇವರಿಬ್ಬರ ಚಿಂತನೆಗಳ ಕೆಲವು ಅಂಶಗಳನ್ನು ಬಳಸಿ, ಸ್ತ್ರೀ ಪುರುಷ ಅಸಮಾನತೆಯ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಬಹುದೇನೋ.

ಅಸಂಗ್ರಹ, ಅಪರಿಗ್ರಹ ಎಂಬ ಗಾಂಧೀ ಚಿಂತನೆಯ ಅಂಶಗಳು ಸಂಪತ್ತನ್ನು ನಿರಾಕರಿಸಬೇಕು ಎಂಬ ಸನ್ಯಾಸ ಜೀವನದ ವೇದಾಂತ ಎಂಬಂತೆ ತೋರಿದರೂ, ವಾಸ್ತವವಾಗಿ ಅದು ಸಮಾಜದ ಅಂತಸ್ತುಗಳನ್ನು ನಿವಾರಿಸುವ ತಂತ್ರವೇ ಆಗಿದೆ. ಯಾವುದೇ ಅಸಮಾನತೆಯನ್ನು ಕುರಿತ ವಿಶ್ಲೇಷಣೆ ಮೊದಲು ತೊಡಗುವುದು ಆರ್ಥಿಕ ನೆಲೆಯಿಂದಲೇ. ವ್ಯಾವಹಾರಿಕವಾದ ಎಲ್ಲ ಅಸಮಾನತೆಗಳು ಆರಂಭಗೊಳ್ಳುವುದೂ ಇಲ್ಲಿಯೇ. ಬಂಡವಾಳಶಾಹಿ ಧೋರಣೆಯನ್ನು ನಿರಾಕರಿಸಬೇಕೆಂಬುದೇ ಇದಕ್ಕಿರುವ ಉತ್ತರ. ಆದರೆ, ಈ ದಿಸೆಯ ಬಹುತೇಕ ಇತರ ಚಿಂತನೆಗಳು ಬಂಡವಾಳ ಶಾಹಿಯನ್ನು ವಿರೋಧಿಸುತ್ತಲೇ ಬಂಡವಾಳವನ್ನು ಬೆಂಬಲಿಸುತ್ತವೆ. ಅಂದರೆ, ಇಲ್ಲಿ ಬಂಡವಾಳವನ್ನು ಹೊಂದಿರುವ ಗುಂಪಿನೊಂದಿಗೆ ಘರ್ಷಣೆ ಇದೆಯೇ ಹೊರತು ಆ ಪ್ರವೃತ್ತಿಯ ಬಗೆಗೆ ವಿರೋಧವಿಲ್ಲ. ಆ ಬಂಡವಾಳ ತನ್ನ ಪಾಲಿನದಾಗಲಿ ಎಂಬ ಕಡೆಗೆ ಹೋರಾಟ ರೂಪುಗೊಳ್ಳುತ್ತದೆ. ಅಂದರೆ, ಮೂಲಭೂತವಾಗಿ ಇದು ಹೋರಾಟವನ್ನು ನಿರಂತರವಾಗಿಸಿಬಿಡುತ್ತದೆ. ಈ ಘರ್ಷಣೆಗೆ ಅಂತ್ಯವಿಲ್ಲ. ಪಕ್ಷಗಳು ತಮ್ಮ ಬಲಾಬಲಗಳಿಗೆ ಅನುಗುಣವಾಗಿ ಅಸಮಾನತೆಯ ಚಕ್ರದಲ್ಲಿ ಮೇಲೆ ಕೆಳಗೆ ಚಲಿಸುತ್ತಿರುತ್ತವೆ. ಅಪರಿಗ್ರಹ, ಅಸಂಗ್ರಹ ಎಂಬ ಗಾಂಧೀಚಿಂತನೆ, ಸಂಪತ್ತಿನ ವಿಚಾರದಲ್ಲಿ ಹೆಚ್ಚು ಸ್ಪಷ್ಟವಾಗಿ ಅರ್ಥವಾಗುವಂಥದು. ತನ್ನದಲ್ಲದ್ದನ್ನು ತನ್ನ ಅಗತ್ಯಕ್ಕಿಂತ ಹೆಚ್ಚಿನದನ್ನು ಸಂಗ್ರಹಿಸುವ ಅಥವಾ ಪರಿಗ್ರಹಿಸುವುದರಿಂದಲೇ ಅಸಮಾನತೆ ಪ್ರಾರಂಭವಾಗಿ, ಅದು ಎಲ್ಲ ಬಗೆಯ ಘರ್ಷಣೆಗಳಿಗೆ ಕಾರಣವಾಗುತ್ತದೆ ಎಂಬ ಪರಂಪರಾಗತ ಆಧ್ಯಾತ್ಮಿಕ ಚಿಂತನೆಯನ್ನೇ ಗಾಂಧಿ ಹೇಳಿರುವುದು. ಕರಾರುವಕ್ಕಾಗಿ ಇದನ್ನು ಗ್ರಹಿಸುವುದು ಸಾಧ್ಯವಿದ್ದಿದ್ದರೆ ಲೋಕದಲ್ಲಿ ಸಮಸ್ಯೆಗಳೇ ಇರುತ್ತಿರಲಿಲ್ಲ. ಆದರೂ, ಈ ದಿಸೆಯಲ್ಲಿ ಇಡುವ ಹೆಜ್ಜೆಗಳೇ ನಮ್ಮ ಮನುಷ್ಯತ್ವವನ್ನು ಕಾಪಾಡಬಲ್ಲವು. ಸ್ಪಷ್ಟ ಗೋಚರವಾಗುವ ಸಂಪತ್ತಿನ ವಿಚಾರದಲ್ಲಿ ಅಪರಿಗ್ರಹ, ಅಸಂಗ್ರಹ ಎಂಬ ಈ ಚಿಂತನೆಯನ್ನು ಅಳವಡಿಸಿಕೊಳ್ಳುವ ಮೊದಲ ಹಂತವನ್ನು ಆರಂಭಿಸಿದರೆ, ಕ್ರಮೇಣ ನಮ್ಮ ಜೀವನ ವಿಧಾನದ ಎಲ್ಲ ಹಂತಗಳಿಗೂ ಇದನ್ನು ವಿಸ್ತರಿಸುವ ಬಗೆ ತಂತಾನೇ ಸ್ಪಷ್ಟಗೊಳ್ಳುತ್ತದೆ. ತನ್ನದಲ್ಲದ್ದನ್ನೂ, ತನ್ನ ಅಗತ್ಯಕ್ಕಿಂತ ಹೆಚ್ಚಿನದನ್ನೂ

ನಿರಾಕರಿಸುವ ಮೂಲಕವೇ, ಬದುಕನ್ನು ಶ್ರೀಮಂತಗೊಳಿಸಿಕೊಳ್ಳುವ ದಾರಿಯನ್ನು ಈ ಚಿಂತನೆ ತೋರಿಸುತ್ತದೆ.

ಅಸಮಾನತೆಯ ಮೂಲ ಸ್ವರೂಪವನ್ನು ವಿವರಿಸುವ ಮಾವೋ ಚಿಂತನೆ, ಅಸಮಾನತೆಯನ್ನು ಶತೃತ್ವದೊಂದಿಗೆ ಸಮೀಕರಿಸಬೇಕಾದ ಅಗತ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಸೃಷ್ಟಿಯಲ್ಲಿನ ಸಂಗತಿಗಳನ್ನು ಕೈ ಬೆರಳುಗಳಿಗೆ ಹೋಲಿಸುವುದು ಹೊಸತೇನಲ್ಲ. ಕೈ ಬೆರಳುಗಳೆಲ್ಲಾ ಒಂದೇ ಸಮನಾಗಿಲ್ಲ ಎಂಬುದು ವಿಷಾದದ ಸಂಗತಿಯೂ ಅಲ್ಲ. ತನ್ನ ಸ್ಥಾನ ಅಥವಾ ಗಾತ್ರದಿಂದ ಯಾವ ಬೆರಳೂ ಮುಖ್ಯ ಅಥವಾ ಅಮುಖ್ಯವೆನಿಸುವುದಿಲ್ಲ. ಅಂದರೆ, ಬೆರಳಿನ ಹೋಲಿಕೆಯನ್ನು ಕುತಂತ್ರವಾಗಿ ಬಳಸಿ, ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನಗಳೂ ಸೃಷ್ಟಿಯಲ್ಲಿ ಪೂರ್ವ ನಿಯೋಜಿತವಾಗಿರುತ್ತವೆ ಎಂದು ಹೇಳುವ ರೀತಿಯದಲ್ಲ. ಬದಲಿಗೆ, ಬೆರಳುಗಳ ಅಸಮಾನತೆ ಎನ್ನುವುದು ಅವುಗಳಲ್ಲಿನ ವೈವಿಧ್ಯವೇ ಹೊರತು ಮೇಲುಕೀಳುಗಳೆಂಬ ಪ್ರಭೇದಗಳಲ್ಲ ಎಂಬ ತಿಳುವಳಿಕೆ ಇಲ್ಲಿ ಮುಖ್ಯ. ಅಸಮಾನತೆಯಲ್ಲಿ ಭಿನ್ನ ಬಗೆಗಳಿವೆ. ಪ್ರಧಾನ ಭಿನ್ನತೆ ಹಾಗೂ ಗೌಣ ಭಿನ್ನತೆ ಎಂಬ ಒಂದು ಬಗೆಯ ವಿಂಗಡಣೆ ಸಾಧ್ಯ. ಸ್ತ್ರೀ ಪುರುಷರಿಗೆ ಸಂಬಂಧಿಸಿ ಹೇಳುವುದಾದರೆ ದೇಹರಚನೆ ಪ್ರಧಾನ ಭಿನ್ನತೆಯಾದರೆ, ಬುದ್ಧಿ ಅಥವಾ ಮನೋ ಭಾವಗಳಲ್ಲಿನ ಭಿನ್ನತೆ ಗೌಣವಾದದ್ದು. ಮೊದಲಿನದು ಅತ್ಯಂತ ಮೂಲಭೂತವಾದ ಭಿನ್ನತೆ. ಸಹಜವಾದ ಯಾವುದೇ ಸಂದರ್ಭದಲ್ಲೂ ಇದನ್ನು ನಿರಾಕರಿಸುವ ಸಾಧ್ಯತೆ ಅಥವಾ ಅಗತ್ಯ ಇಲ್ಲ. ಎರಡನೆಯ ಬಗೆಯದು, ಸ್ತ್ರೀ ಪುರುಷರಲ್ಲಿ ಪ್ರಕಟಗೊಳ್ಳುವ ಸಹಜ ಸಾಧ್ಯತೆಗಳೂ ಇವೆ. ಅಥವಾ ಅವುಗಳನ್ನು ಪ್ರಯತ್ನ ಪೂರ್ವಕವಾಗಿ ಬೆಳೆಸಿಕೊಳ್ಳುವುದೂ ಸಾಧ್ಯವಿದೆ. ಈ ಎರಡೂ ಬಗೆಯ ಭಿನ್ನತೆಗಳೂ ಸ್ತ್ರೀ ಪುರುಷ ವಿಶೇಷಗಳೇ ಹೊರತು ಮೇಲು ಕೀಳಿನ ಅಸಮಾನತೆಗಳೇನಲ್ಲ. ಆದರೆ ಭಿನ್ನತೆಗಳು ಶತೃಗಳೆನಿಸುವ ಸಂದರ್ಭಗಳು ಮಾತ್ರ ವ್ಯವಸ್ಥೆಯು ಹುಟ್ಟುಹಾಕುವ ಕೃತಕ ರಚನೆಗಳಾಗಿರುತ್ತವೆ. ಹೆಚ್ಚಾಗಿ ತಿನ್ನುವ, ಅದನ್ನು ಜೀರ್ಣಿಸಿಕೊಳ್ಳುವ, ಹಾಗೆ ಬಲಯುತವಾಗುವ ಸಹಜ ಸಾಧ್ಯತೆಯವರು ಹಾಗೆ ಇಲ್ಲದವರು ಎಂಬುದು ಸಹಜ ಭಿನ್ನತೆ, ಆದರೆ, ಯಾವುದೇ ಕುತಂತ್ರದಿಂದ ತನಗೆ ತಿನ್ನಲು ಸಾಧ್ಯವಿಲ್ಲದಿದ್ದರೂ, ಎದುರಿನವನ ಪಾಲಿನದನ್ನೂ ಕಸಿದು ಅವನನ್ನು ಅಸಹಾಯಕನನ್ನಾಗಿಸುವ ವ್ಯವಸ್ಥೆ, ಸಹಜವಾಗಿಯೇ ಶತೃತ್ವವನ್ನು ಹುಟ್ಟುಹಾಕುತ್ತದೆ. (ಬಹುಶಃ ಅಪರಿಗ್ರಹ, ಅಸಂಗ್ರಹ ಚಿಂತನೆಯೇ ಇದನ್ನೂ ವಿವರಿಸುತ್ತದೆ) ಇಂತಹ ಶತೃತ್ವದ ಬೀಜದಿಂದ ಹುಟ್ಟುವ ಅಸಮಾನತೆಯನ್ನು ಅರ್ಥಮಾಡಿಕೊಳ್ಳಬೇಕೆಂದು ಮಾವೋ ಚಿಂತನೆ ಹೇಳುತ್ತದೆ. ಸಮಾಜವಾದಿ ಚಿಂತನೆ ಬಂಡವಾಳಶಾಹಿ ಪ್ರವೃತ್ತಿಯನ್ನು ವಿರೋಧಿಸುತ್ತದೆಯಾದರೆ, ಮಾವೋ ಹಾಗೂ ಗಾಂಧೀ ಚಿಂತನೆಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಬಂಡವಾಳವನ್ನು ವಿರೋಧಿಸುತ್ತವೆ. ವರ್ಗ ಅಸಮಾನತೆಯ ಬಗೆಗೆ ಈ

ಚಿಂತನೆಗಳು ಹೇಳುವ ಮೂರ್ತ ವಿವರಗಳನ್ನು ಜಾತಿ, ಲಿಂಗ ಮೊದಲಾದ ಬೇರೆ ಬಗೆಯ ಅಸಮಾನತೆಗಳ ಅಮೂರ್ತ ವಿವರಗಳಿಗೂ ಅನ್ವಯಿಸುವುದು ಸಾಧ್ಯ.

ಪ್ರಾಯೋಗಿಕ ಸಾಧುತ್ವದ ಪ್ರಶ್ನೆ ಬಂದರೆ ವರ್ಗ ಅಸಮಾನತೆಯ ಸಂದರ್ಭದ ಸಮಸ್ಯೆಗಳೇ ಇಲ್ಲೂ ಇವೆ. ಪ್ರಾಯಶಃ ಜಾತಿ ಅಸಮಾನತೆ ವರ್ಗ ಅಸಮಾನತೆಗಿಂತ ಹೆಚ್ಚು ಅಮೂರ್ತವೆನಿಸಬಹುದಾದರೆ, ಸ್ತ್ರೀ ಪುರುಷ ಅಸಮಾನತೆ ಜಾತಿ ಅಸಮಾನತೆಗಿಂತ ಇನ್ನಷ್ಟು ಅಮೂರ್ತ ಮಾತ್ರವೇ ಅಲ್ಲ, ಬಹಳ ಸಂಕೀರ್ಣ ಸ್ವರೂಪದ್ದೂ ಹೌದು.

ಆದ್ದರಿಂದಲೇ, ಈ ಚಿಂತನೆಗಳನ್ನು ಸಮಸ್ಯೆಯ ನಿಶ್ಚಿತ ಪರಿಹಾರಗಳೆಂದೇನೂ ಹೇಳುತ್ತಿಲ್ಲ. ಬದಲಿಗೆ ನಮ್ಮ ಚಿಂತನೆಗಳು ಈ ಹಾದಿಯನ್ನು ಹಿಡಿಯಬಹುದಾದ ಸಾಧ್ಯತೆಗಳ ಬಗೆಗೆ ಚರ್ಚೆಗಳನ್ನು ನಿರೀಕ್ಷಿಸಿ ಸೂಚಿಸಲಾಗುತ್ತದೆಯಷ್ಟೇ.

ಸಾಮಾಜಿಕ ಚಿಂತನೆಗಳಲ್ಲಿ ಹೆಣ್ಣು

ಸಮಾಜದಲ್ಲಿ ಎಂದೂ ಹೆಣ್ಣು ಅಧೀನಳಾಗಿಯೇ ಉಳಿದು ಬಂದಿದ್ದಾಳೆಂಬ ಸಮಸ್ಯೆಯನ್ನು, ಈ ಸಮಸ್ಯೆ ಪರಿಹಾರಗೊಳ್ಳಬೇಕೆಂಬ ಚಿಂತನೆಯನ್ನು ನಮ್ಮ ಸಮಾಜವಾದಿ ಚಿಂತಕರು ಪ್ರತಿಪಾದಿಸಲು ಹತ್ತೊಂಬತ್ತನೆಯ ಶತಮಾನದ ವೇಳೆಗೆ ತೊಡಗಿದರು. ಆ ಮುಂಚೆ ಈ ಸಮಸ್ಯೆಯನ್ನು ಗುರುತಿಸುವ ಪ್ರಯತ್ನ ಕೂಡ ನಡೆಯಲಿಲ್ಲ. ಆದರೆ ಸಮಸ್ಯೆಯನ್ನು ಗುರುತಿಸಲು ತೊಡಗಿದ ನಂತರದ ಎರಡು ಶತಮಾನಗಳಲ್ಲೂ ಈ ಚಿಂತನೆಗೆ ಒಂದು ಸ್ಪಷ್ಟವಾದ ಸೈದ್ಧಾಂತಿಕ ಚೌಕಟ್ಟು ಲಭ್ಯವಾಗಿಲ್ಲ. ನಮ್ಮ ಸಾಮಾಜಿಕ ಚಿಂತನೆಗಳಲ್ಲಿ ಹೆಣ್ಣಿನ ಸಮಸ್ಯೆ ಎಂಬುದು ಒಂದು ಅನುಷಂಗಿಕ ಸಂಗತಿಯಾಗಿ ಮಾತ್ರವೇ ಪ್ರಸ್ತಾಪಗೊಳ್ಳುತ್ತಿದೆ. ಪದೇ ಪದೇ ವಿಸ್ಮರಣೆಗೆ ಒಳಗಾಗುತ್ತಾ, ಆಗೀಗಷ್ಟೇ ತೀರಾ ವಿರಳವಾಗಿ, ಕ್ಷೀಣ ಧ್ವನಿಯಲ್ಲಿ, ಆಕಸ್ಮಿಕವಾಗಿ ಎಂಬಂತೆ ಕೇಳಿಬರುತ್ತಿದೆ.

ಸಮಕಾಲೀನ ಸಮಾಜವಾದಿ ಚಿಂತನೆಗಳಲ್ಲಿ ಹೆಣ್ಣಿನ ಪರಿಸ್ಥಿತಿಯನ್ನು ಕುರಿತಂತೆ ಇಂತಹ ಮೌನ ಯಾಕಾಗಿ ಆವರಿಸಿದೆ? ವರ್ಗ, ವರ್ಣ, ಜಾತಿ, ಬಂಡವಾಳ - ಇಂತಹ ಸಂಗತಿಗಳು ತುಂಬಾ ಗಂಭೀರವಾದ ಚಟುವಟಿಕೆಗಳನ್ನು ಹುಟ್ಟು ಹಾಕುವ ಚಿಂತನಗಳಿಗೆ ವಸ್ತುಗಳೆನಿಸಿವೆ. ನಿರರ್ಗಳವಾಗಿ ಸಿದ್ಧಾಂತಗಳನ್ನು ಮಂಡಿಸುತ್ತಾ ಬಂದಿರುವ ನಮ್ಮ ಸಾಮಾಜಿಕ ಚಿಂತನೆಗಳು ಸಮಾಜದಲ್ಲಿ ನಡೆದು ಬಂದಿರುವ ಈ ಅನೇಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿವೆ. ಈ ಸಂಗತಿಗಳಿಗೆ ಸಂಬಂಧಿಸಿದಂತೆ ಸಮಾಜವು ಒಂದಿಷ್ಟು ಘನತೆಯನ್ನು ಕಾಪಾಡಿಕೊಳ್ಳಲು ನೆರವಾಗಿವೆ. ಆದರೆ, ಈ ಜಗತ್ತಿನಲ್ಲಿ ಸದಾ ಗಂಡನ್ನು ಆಶ್ರಯಿಸಿಯೇ ಬದುಕಬೇಕಾದ ದಾರುಣ ಸ್ಥಿತಿ ಹೆಣ್ಣಿಗೆ ಇದೆ ಎಂಬ ಬಗ್ಗೆ ಈ ಚಿಂತನೆಗಳೇಕೆ ಮೌನವಾಗಿವೆ? ಮಾನವ ಸಂಸ್ಕೃತಿಯ ಘನತೆಗೂ ಈ ಸಮಸ್ಯೆಗೂ ಸಂಬಂಧವಿಲ್ಲವೇ? ಅಥವಾ ಗ್ರಹಿಕೆಗೂ ಬಾರದಷ್ಟು ನಿಕೃಷ್ಟ ಪ್ರಮಾಣದ ಸಮಸ್ಯೆಯದು ಎಂಬ ಉದಾಸೀನವೇ? ಇಂತಹ ಪ್ರಶ್ನೆಗಳು ಎದುರಾದಾಗ, ನಮ್ಮ ಮಹಾನ್ ಚಿಂತಕರೆಲ್ಲರೂ ಬೌದ್ಧಿಕ ಸಾಮರ್ಥ್ಯವು ಗಂಡಸಿನ ಸಹಜ ಆಸ್ತಿ ಎಂದು ಪರಿಭಾವಿಸುವ ಈ ಸಮಾಜದ ಗಂಡಸರೇ ಆಗಿರುತ್ತಾರಾಗಿ, ಹೆಣ್ಣಿನ ಬಗೆಗಿನ ಚಿಂತನೆ ಎಂದರೆ ಸ್ವಂತದ ಬುಡಕ್ಕೆ ನೀರು ತಿದ್ದಿಕೊಳ್ಳುವ ಕೆಲಸ ಎಂದು ಸುಮ್ಮನಾಗಿಬಿಟ್ಟರೇ ಎನಿಸುತ್ತದೆ. ಆದರೆ ಮಾತು ಕೇವಲ ಹಗುರವೂ, ಪಕ್ಕಕ್ಕೆ ತಳ್ಳಿಬಿಡುವಂಥದೂ ಆಗಬಹುದು.

ಹಾಗಾಗಿ, ಈ ಸಮಸ್ಯೆಯ ಚಿಂತನೆಗಳು ಒಂದು ಸೈದ್ಧಾಂತಿಕ ರೂಪವನ್ನು ಪಡೆಯುವಷ್ಟು ಪ್ರಬಲವಾಗಿ ಬೆಳೆಯದಿರಲು ಕಾರಣಗಳೇನು, ಅವು ಕ್ರಿಯಾಶೀಲ ಚಟುವಟಿಕೆಗಳಾಗಿ ರೂಪುಗೊಳ್ಳಲು ಇರುವ ಅಡೆತಡೆಗಳೇನು ಎಂಬ ಪ್ರಶ್ನೆಗಳನ್ನು ಎದುರಿಸಲು ತೊಡಗುವುದು ಉಪಯುಕ್ತವಾದೀತು. ನಮ್ಮ ಸಾಮಾಜಿಕ ರಚನೆಯ ತೀರಾ ಆಳದ ಪದರಗಳಲ್ಲಿ ಇದರ ಕಾರಣಗಳು ಹುದುಗಿರುವಂತೆ ತೋರುತ್ತದೆ. ಇವುಗಳನ್ನು ಶೋಧಿಸಿ ಹೊರ ತೆಗೆಯಬೇಕಾದ ಅಗತ್ಯವಿದೆ. ಈವರೆಗಿನ ನಮ್ಮ ಸಾಮಾಜಿಕ ಚಿಂತನೆಗಳು ಹೆಣ್ಣಿನ ಪರಿಸ್ಥಿತಿಯ ಸಮಸ್ಯೆಯನ್ನು ಗುರುತಿಸಲು ಹೋಗಿಯೇ ಇಲ್ಲವೆಂದಲ್ಲ. ಸಮಸ್ಯೆಯ ತೀವ್ರತೆಯನ್ನು ಗುರುತಿಸಿಯೂ, ಅದಕ್ಕೊಂದು ಸೈದ್ಧಾಂತಿಕ ಪರಿಹಾರವನ್ನು ಸೂಚಿಸುವಲ್ಲಿ ಅವು ಪ್ರಯತ್ನಗಳನ್ನು ನಡೆಸಿದಂತೆ ತೋರುವುದಿಲ್ಲ. ಸ್ತ್ರೀ ಸ್ವಾತಂತ್ರ್ಯ, ವಿಮೋಚನೆ, ಸಮಾನತೆ-ಯಾವ ಮಾತೇ ಇರಲಿ-ಯ ಅವಶ್ಯಕತೆಯನ್ನು ಗುರುತಿಸಿವೆ. ಆದರೆ ಮುಂದೆ ಹೆಜ್ಜೆಯನ್ನಿಡದೆ ನಿಂತುಬಿಟ್ಟಿವೆ. ಅಂದರೆ, ಅವಶ್ಯಕತೆಯನ್ನು ಪೂರೈಸುವ, ಕಾರ್ಯಗತಗೊಳಿಸುವ ಹೊಣೆಯನ್ನು ಯಾರೂ ಹೊತ್ತಂತಿಲ್ಲ.

ಹೀಗೆ ರೋಗಲಕ್ಷಣಗಳನ್ನು ಗುರುತಿಸುವಷ್ಟಕ್ಕೇ ನಿಲ್ಲದೆ, ಔಷಧೋಪಚಾರವನ್ನು ಕೆಲಮಟ್ಟಿಗೆ ಸೂಚಿಸುವ ಕೆಲವು ಚಿಂತನೆಗಳು ವಿರಳವಾಗಿಯಾದರೂ ಮಂಡಿತವಾಗಿದೆ. ಸಿಮೋನ್‌ದ ಬಾವರ ಚಿಂತನೆಯಲ್ಲಿ (ದ ಸೆಕೆಂಡ್ ಸೆಕ್ಸ್) ಕೂಡ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನ ಎಂತಹುದಿತ್ತು ಎಂಬ ಬಗ್ಗೆಯೇ ಹೆಚ್ಚಿನ ಗಮನವನ್ನು ಹರಿಸಲಾಗಿದೆಯಾದರೂ, ಕೊನೆಗೊಮ್ಮೆ ಸಮಸ್ಯೆಯ ಪರಿಹಾರದ ಬಗ್ಗೆಯೂ ಸೂಚನೆಗಳನ್ನು ಕೊಡಲಾಗಿದೆ. 'ಆರ್ಥಿಕತೆ' ಮತ್ತು 'ಸಂತಾನ' ದ ಕಾರಣಗಳು ಹೆಣ್ಣಿನ ದೌರ್ಬಲ್ಯಗಳಾಗಿ ಅವಳನ್ನು ಕಾಡಿವೆ, ಇದರಿಂದ ಹೊರ ಬರಬೇಕಾದ ಮಾರ್ಗವನ್ನು ಶೋಧಿಸುವುದೇ ಹೆಣ್ಣಿನ ಸಮಸ್ಯೆಗೆ ಇರುವ ಪರಿಹಾರ ಎಂದು ಆಕೆ ಸೂಚಿಸಿದ್ದಾಳೆ. ಆದರೆ ಇವು ಸ್ವಲ್ಪ ಮಟ್ಟಿನ ಉಪಶಮನಗಳಾಗಬಹುದೇ ಹೊರತು, ಸಮಸ್ಯೆಯ ಪರಿಹಾರವಾಗಲಾರದು ಎನಿಸುತ್ತದೆ. ಹೆಣ್ಣನ್ನು ಇಂತಹ ಹಲವು ದೌರ್ಬಲ್ಯಗಳಲ್ಲಿ ಸಿಲುಕಿಸಿದ ಕಾರಣಗಳು ಎಲ್ಲಿವೆ ಎಂಬುದರ ಶೋಧನೆಯ ಅಗತ್ಯವಿದೆ.

ಜೂಲಿಯಟ್ ಮಿಚೆಲ್ ಇಂತಹ ಚಿಂತನೆಯೊಂದನ್ನು ಮಂಡಿಸುತ್ತಾ ಸಮಾಜ ರಚನೆಯ ಯಾವ ಪದರಗಳಲ್ಲಿ ರೋಗದ ಕಾರಣಗಳು ಹುದುಗಿವೆ ಎಂಬುದರತ್ತ ಗಮನ ಸೆಳೆಯುತ್ತಾಳೆ. ಈವರೆಗಿನ ನಮ್ಮ ಮುಖ್ಯ ಸ್ತ್ರೀವಾದಿ ಚಿಂತನೆಗಳೆಲ್ಲವೂ ರೋಗ ಲಕ್ಷಣಗಳನ್ನು ಗುರುತಿಸುವ, ಉಪಶಮನಗಳನ್ನಷ್ಟೇ ಸೂಚಿಸುವ ಹಂತಗಳಲ್ಲಿ ನಿಂತು ಬಿಟ್ಟಿವೆ. ಮಿಚೆಲ್ ಮೂಲ ಕಾರಣಗಳನ್ನು ಸೂಚಿಸಿ, ಪರಿಹಾರಗಳನ್ನು ಈ ಆಳದ ನೆಲೆಗಳಲ್ಲಿ ಕಂಡುಕೊಳ್ಳಬೇಕೆಂದಿದ್ದಾಳೆ.

ಸಮಾಜ ರಚನೆಯ ನಾಲ್ಕು ಮುಖ್ಯ ಪದರಗಳಲ್ಲಿ ಈ ಕಾರಣಗಳು ಹುದುಗಿವೆ. ಉತ್ಪಾದನೆ, ಸಂತಾನ, ಸಮಾಜಿಕತೆ, ಲೈಂಗಿಕತೆ- ಈ ನಾಲ್ಕು ಅಂಶಗಳು ವಿವಿಧ ಹಂತಗಳಲ್ಲಿ ಬೇರೆ ಬೇರೆಯಾಗಿ ಅಥವಾ ಒಟ್ಟೊಟ್ಟಾಗಿ ಕೂಡಿಕೊಂಡು ಹೆಣ್ಣಿನ ಪರಿಸ್ಥಿತಿಯನ್ನು ನಿಯಂತ್ರಿಸುತ್ತವೆ. ಅಂದ ಮೇಲೆ ಹೆಣ್ಣಿನ ಸಮಸ್ಯೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾದರೆ ಆಯಾ ಕಾಲದಲ್ಲಿ ಈ ಸಾಮಾಜಿಕ ಪದರಗಳು ಎಷ್ಟೆಷ್ಟರ ಮಟ್ಟಿಗೆ ಕ್ರಿಯಾಶೀಲವಾಗಿ ಹೆಣ್ಣನ್ನು ನಿಯಂತ್ರಿಸುತ್ತಿವೆ ಎಂಬುದನ್ನು ವಿವರಗಳಲ್ಲಿಯೇ ನೋಡಬೇಕಾಗುತ್ತದೆ.

ಉತ್ಪಾದನೆ

ಸಮಾಜವು ಹೆಣ್ಣನ್ನು 'ಉತ್ಪಾದನೆ'ಯ ವಿಭಾಗದಿಂದ ದೂರವೇ ಇಟ್ಟಿರಲು ಸತತ ಪ್ರಯತ್ನದಲ್ಲಿ ತೊಡಗಿಯೇ ಇದೆ ಎಂಬುದು ಚಾರಿತ್ರಿಕ ಸತ್ಯ. ಮಾನವ ಮನೆ ಮಾಡಿದಾಗಲಾಗಲೀ, ಕೃಷಿಯಲ್ಲಿ ಅಥವಾ ಬೇಟೆಯಲ್ಲಿ ತೊಡಗಿದಾಗಲಾಗಲೀ, ಔದ್ಯೋಗಿಕರಣದ ನಾಗರಿಕತೆಗೆ ಧಾವಿಸಿದಾಗಲಾಗಲೀ-ಯಾವ ಸಂದರ್ಭದಲ್ಲೂ 'ಉತ್ಪಾದನೆ'ಯಲ್ಲಿ ಹೆಣ್ಣಿಗೆ ಪಾಲು ದೊರೆತದ್ದಿಲ್ಲ. ಹೆಣ್ಣು ಮನೆಯಲ್ಲಿ, ವೃತ್ತಿ ಕಸಬುಗಳಲ್ಲಿ, ಉದ್ಯೋಗದಲ್ಲಿ-ಎಲ್ಲೇ ದುಡಿಯುತ್ತಿರಲಿ ಅವಳ ದುಡಿಮೆ ಎಂದೂ 'ಸೇವಾಕ್ಷೇತ್ರ'ಕ್ಕೆ ಸೇರಿಬಿಡುತ್ತದೆ. ಗಂಡಸಿನ ಅಧೀನಕ್ಕೆ ಒಳಪಟ್ಟು, ಗಂಡಸಿನ ಸೌಲಭ್ಯಕ್ಕಾಗಿಯೇ ನಡೆಸಲಾಗುವ ಕೆಲಸ ಕಾರ್ಯಗಳಲ್ಲಿ ಮಾತ್ರವೇ ಅವಳು ತೊಡಗಿಕೊಳ್ಳಬೇಕಾಗುತ್ತದೆ. ಉತ್ಪಾದನೆಯ ಒಡೆಯನಾಗುವ ಗಂಡಸನ್ನು ಅವಲಂಬಿಸದೆ ಹೆಣ್ಣಿಗೆ ಗತ್ಯಂತರವಿಲ್ಲವಾಗುತ್ತದೆ.

ಸಂತಾನ

ಮಾನವ ಜನಾಂಗದ ಅಸ್ತಿತ್ವವಾದ ಸಂತಾನವನ್ನು ಹೊರುವ, ಹೆರುವ ಹೊಣೆಯನ್ನು ಪ್ರಕೃತಿ ಹೆಣ್ಣಿನ ಮೇಲೆ ಹೊರಿಸಿದೆ. ಅಸ್ತಿತ್ವದ ಮೂಲಭೂತ ಹೊಣೆಯನ್ನು ನಿರ್ವಹಿಸುತ್ತಿರುವ ಹೆಣ್ಣಿನ ಬಗೆಗೆ ಗಂಡಸು ಎಂದೂ ಯಾವ ರಿಯಾಯಿತಿಗಳನ್ನೂ ತೋರಿಲ್ಲ. ಸಹಾನುಭೂತಿಯಂತೂ ಇಲ್ಲವೇ ಇಲ್ಲ. ಪ್ರಕೃತಿಯು ಹೊರಿಸಿರುವ ಸಮಸ್ಯೆಯೇ ಹೆಣ್ಣಿನ ಎದುರು ಅಗಾಧವಾಗಿದೆ. ಅವಳ ಆಯಸ್ಸು, ಆರೋಗ್ಯ, ಯೌವನ ಎಲ್ಲದರ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುವ ಈ ನೈಸರ್ಗಿಕ ಹೊಣೆಯ ನಿರ್ವಹಣೆಯಲ್ಲಿ ಸಮಾಜ ರಚನೆಯು ಯಾವ ನೆಲೆಗಳಲ್ಲೂ ನೆರವನ್ನು ನೀಡುವ ಘನತೆಯನ್ನು ತೋರಿಲ್ಲ. ವಿಜ್ಞಾನ ತಂತ್ರಜ್ಞಾನಗಳನ್ನೂ ಒಳಗೊಂಡಂತೆ ಯಾವ ಸಾಮಾಜಿಕ ಚಿಂತನೆಗಳೂ ಹೆಣ್ಣಿನ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಮಾನವ ಪ್ರಗತಿ ಎಂದರೆ ಗಂಡಸಿನ ಅನುಕೂಲ, ಸೌಲಭ್ಯಗಳನ್ನಷ್ಟೇ ಪರಿಗಣಿಸುವ ಚಿಂತನೆಯಾಗಿದೆ. ಹೀಗೆ ಪಕ್ಷಪಾತದ ಧೋರಣೆಯಲ್ಲಿ ಮುನ್ನಡೆಯುತ್ತಿರುವ ಪ್ರಗತಿ ಚಿಂತನೆ ಹೆಣ್ಣಿನ ಮೇಲೆ ಹಿಂದೆಂದಿಗಿಂತಲೂ ಹೆಚ್ಚಿನ ಒತ್ತಡಗಳನ್ನು ಹೇರುತ್ತಿದೆ.

ಕುಟುಂಬ/ಸಾಮಾಜಿಕತೆ

ಈವರೆಗೆ ಇದ್ದ 'ಕುಟುಂಬ'ದ ಮಾದರಿಯಲ್ಲಿ ಹಲವು ಸಮಸ್ಯೆಗಳ ನಡುವೆಯೂ ಅದು ಹೆಣ್ಣಿಗೆ ಒಂದು ಮುಖ್ಯ ನೆಲೆಯಂತೂ ಆಗಿತ್ತು. ಆದರೆ ಈಗ ಜಾರಿಯಲ್ಲಿರುವ ಪ್ರಗತಿ ಮಾದರಿಯಿಂದಾಗಿ 'ಕುಟುಂಬ'ವು ಛಿದ್ರಗೊಳ್ಳುತ್ತಾ ಹಲವು ನಕಾರಾತ್ಮಕ ಪರಿಣಾಮಗಳನ್ನು ಎದುರಿಸುತ್ತಿದೆ. ಸಮಾಜ ರಚನೆಯಲ್ಲಿ 'ಕುಟುಂಬ'ವು ಒಂದು ಪ್ರಭಾವಶಾಲಿ ಸಂಸ್ಥೆಯಾಗಿತ್ತು. ಆರ್ಥಿಕ, ರಾಜಕೀಯ, ಸಾಮಾಜಿಕ ನೆಲೆಗಳಲ್ಲಿ 'ಕುಟುಂಬ'ದ ಪಾತ್ರ ಮಹತ್ವದ್ದಾಗಿತ್ತು. ಉತ್ಪಾದನೆ, ಉದ್ಯೋಗ, ಶಿಕ್ಷಣ, ವೃತ್ತಿ ಮೊದಲಾಗಿ ಎಲ್ಲ ಪ್ರಮುಖ ನೆಲೆಗಳಲ್ಲೂ 'ಕುಟುಂಬ'ದ ಅಸ್ತಿತ್ವವು ಇಂದು ಕ್ಷೀಣವಾಗಿಬಿಟ್ಟಿದೆ. ಇಂದಿನ ಉತ್ಪಾದನಾ ಮಾದರಿಯು ಕುಟುಂಬವನ್ನು ಪ್ರತ್ಯೇಕ ಚಿಕ್ಕ ಘಟಕಗಳನ್ನಾಗಿ ಒಡೆದು ಬಿಟ್ಟಿದೆ. ಇದರ ಪರಿಣಾಮವೆಂದರೆ 'ಕುಟುಂಬ'ವು ಈಗ ಒಂದು ಸಾಮಾಜಿಕ ಶಕ್ತಿಯಾಗಿ ಉಳಿದಿಲ್ಲ. ಇದರ ನೇರ ಪರಿಣಾಮ ಬಹುಮಟ್ಟಿಗೆ ಹೆಣ್ಣಿನ ಮೇಲೇ ಒತ್ತರಿಸಿದೆ. ಅವಳ ಮುಖ್ಯ ನೆಲೆಯ ಮೇಲೆ ಆದ ಈ ಆಕ್ರಮಣದಿಂದಾಗಿ ಅವಳು ಒಂಟಿತನ, ಅರಕ್ಷೆ, ಬೇಸರ ಮೊದಲಾದ ಆತಂಕಗಳಿಗೆ ಸಿಲುಕುತ್ತಿದ್ದಾಳೆ. ಎಂದಿನಿಂದಲೂ ಹೆಣ್ಣು ಮನೆಯ ಮಕ್ಕಳು ಸುಸಂಗತವಾಗಿ ಸಾಮಾಜಿಕರೆನಿಸಲು ನೆರವಾಗುವ ಅಂಶವಾಗಿದ್ದಾಳೆ. ಹಾಗೆಯೇ ಮಕ್ಕಳಿಗೆ ಸುರಕ್ಷೆಯ ಭಾವವನ್ನು ತುಂಬುವ ಹೊಣೆಯನ್ನು ನಿರ್ವಹಿಸುತ್ತಾ ಬಂದಿದ್ದಾಳೆ. ಆದರೆ ಈಗ ತನ್ನಲ್ಲೇ ತುಂಬುತ್ತಿರುವ ಆತಂಕಗಳಿಂದಾಗಿ ಭವಿಷ್ಯದಲ್ಲಿ ಮಕ್ಕಳಿಗೆ ಭರವಸೆಯನ್ನು ತುಂಬುವ ಅವಳ ಸಾಮರ್ಥ್ಯಕ್ಕೆ ಧಕ್ಕೆಯುಂಟಾಗುತ್ತಿದೆ. ಅಲ್ಲದೆ, ಒಟ್ಟಾರೆಯಾಗಿ 'ಕುಟುಂಬ'ದ ಎಲ್ಲ ಗಂಡು-ಹೆಣ್ಣು ಸದಸ್ಯರ ಸಂಬಂಧಗಳ ಮೇಲೂ 'ಕುಟುಂಬ' ದ ಹಿನ್ನಡೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ. ಈ ಪರಿಣಾಮಗಳೂ ಕೂಡ ಅಂತಿಮವಾಗಿ ಹೆಣ್ಣಿನ ಮೇಲೆಯೇ ವಾಲುತ್ತವೆ.

ಲೈಂಗಿಕತೆ /ವಿವಾಹ

ಸಮಾಜ ರಚನೆಯ ಪದರಗಳಲ್ಲಿ ಉತ್ಪಾದನೆ, ಸಂತಾನ ಹಾಗೂ ಸಾಮಾಜಿಕತೆಗಳ ಅಂಶಗಳು ಹೆಚ್ಚೂ ಕಡಿಮೆ ಸ್ಥಿರ ಲಕ್ಷಣಗಳನ್ನೇ ತೋರುತ್ತಾ ಬಂದಿವೆ. ಕಾಲಕಾಲಕ್ಕೆ ತೋರಿಬರುವ ಹಲ ಕೆಲವು ಬದಲಾವಣೆಗಳು ಹೊರ ಪದರಗಳಲ್ಲಷ್ಟೇ ಜರುಗಿದವಾಗಿವೆಯಷ್ಟೇ. ಆದರೆ ಲೈಂಗಿಕತೆ/ವಿವಾಹಗಳಿಗೆ ಸಂಬಂಧಿಸಿದಂತೆ ಸಮಾಜ ರಚನೆಯು ಅಳವಡಿಸಿಕೊಳ್ಳುತ್ತಾ ನಡೆದಿರುವ ವಿವಿಧ ಪದರಗಳು ಹಲವು ವಿರೋಧಾಭಾಸಗಳನ್ನು ಸೃಷ್ಟಿಸುತ್ತಿವೆ. ವಾಸ್ತವವಾಗಿ ಸಮಾಜ ರಚನೆಯಲ್ಲಿ ವಿವಾಹ ಎಂಬುದು ಸಾಮಾಜಿಕರ ಸಹಜ ಲೈಂಗಿಕ ವರ್ತನೆಗಳ ಮೇಲೆ ನಿಯಂತ್ರಣವನ್ನು ಹಾಕುವ ಒಂದು ಸಂಸ್ಥೆ. ಲೈಂಗಿಕ ಸಂಬಂಧಿ ಪೈಪೋಟಿಗಳನ್ನು ಹತೋಟಿಯಲ್ಲಿಟ್ಟು ಸಹಬಾಳ್ವೆಗೆ ನೆರವಾಗುವ ಉದ್ದೇಶದ ಒಂದು ಸಾಮಾಜಿಕ ರಚನೆ. ಅಂದರೆ ಒಂದರ್ಥದಲ್ಲಿ ಲೈಂಗಿಕ ಸ್ವಾತಂತ್ರ್ಯಕ್ಕೆ ಒಂದು ಬಂಧನ.

ಸ್ವಾತಂತ್ರ್ಯ ಕಲ್ಪನೆಯು ಹಲವು ಪ್ರಗತಿ ಮಾದರಿಗಳನ್ನು ಸಮಾಜವು ಕಾಲಕಾಲಕ್ಕೆ ರೂಪಿಸುತ್ತಾ ಬಂದದ್ದೂ ಇದೆ. ವಿಚ್ಛೇದನ, ವಿವಾಹ ಬಾಹಿರ ಸಂಬಂಧಗಳು ಇತ್ಯಾದಿ. ಆದರೆ ಒಟ್ಟಾರೆಯಾಗಿ ವಿವಾಹದ ಮೂಲ ಕಲ್ಪನೆಯಲ್ಲಾಗಲೀ, ಪ್ರಗತಿಯ ಮಾದರಿಗಳಲ್ಲಾಗಲೀ ವಿವಾಹವು ಹೆಣ್ಣಿನ ಮೇಲಿನ ನಿಯಂತ್ರಣವನ್ನು ಸಡಿಲಗೊಳ್ಳಲು ಅವಕಾಶ ನೀಡಿಲ್ಲ ಎಂಬುದು ಗಮನಾರ್ಹ. ಕೆಲವು ಮಾದರಿಗಳಲ್ಲಿ ಅವಳು ಗಂಡಸಿಗೆ ಉತ್ಪಾದನಾ ಸಹಾಯಕಿಯಾಗಿ, ಇನ್ನೂ ಕೆಲವು ಮಾದರಿಗಳಲ್ಲಿ ಅವನ ಅನುಭೋಗದ, ವಿಲಾಸದ ಸಾಧನವಾಗಿ ನಿಲ್ಲುತ್ತಾಳೆ. ಒಟ್ಟಿನಲ್ಲಿ ವಿವಾಹ ಎಂಬ ಸಮಾಜ ರಚನೆಯಲ್ಲಿ ಹೆಣ್ಣು ಗಂಡಿನ ಆಸ್ತಿಯಾಗಿ ಮಾತ್ರ ಉಳಿಯುತ್ತಾಳೆ. ಅವಳಿಗೆ ಸ್ವತಂತ್ರವಾದೊಂದು ಅಸ್ತಿತ್ವವಿದೆ ಎಂಬುದಕ್ಕೆ ಈ ಸಮಾಜ ರಚನೆ ಅವಕಾಶವನ್ನು ಕೊಡುವುದಿಲ್ಲ.

ಪ್ರಸ್ತುತ ಸ್ತ್ರೀವಾದಿ ಚಿಂತನೆಯಲ್ಲಿನ ಸಮಸ್ಯೆ

ಉದ್ಯೋಗಾವಕಾಶ, ಸಮಾನ ವೇತನ, ದುಡಿಯುವ ಸ್ಥಳದಲ್ಲಿ ಕ್ರಷ್, ನರ್ಸರಿ ಶಾಲೆ, ಹೆರಿಗೆ ಬಾಣಂತನಗಳಿಗೆ ಸೂಕ್ತ ರಜೆಗಳು- ಇಂತಹ ಸೌಲಭ್ಯ ಸವಲತ್ತುಗಳನ್ನು ಅಪೇಕ್ಷಿಸುವ ಬೇಡಿಕೆಗಳು ಸಮಸ್ಯೆಯ ಪರಿಹಾರಗಳಲ್ಲ. ಹೆಚ್ಚೆಂದರೆ ಇವು ತಾತ್ಕಾಲಿಕ ನೆರವುಗಳೆನಿಸಬಹುದು. ಇನ್ನು ಲೈಂಗಿಕ ಸ್ವಾತಂತ್ರ್ಯ, ವಿವಾಹದ ನಿರಾಕರಣೆ, ವಿಚ್ಛೇದನೆ, ವಿವಾಹ ಬಾಹಿರ ಸಂಬಂಧಗಳಿಗೆ ಅನುಮೋದನೆ-ಮುಂತಾದವಂತೂ ಸ್ವಂತಕ್ಕಾಗಲೀ, ಸಂತತಿಗಾಗಲಿ ಕ್ಷೇಮಕಾರಿಗಳಲ್ಲ. ಒಂದು ದೋಷದ ನಿವಾರಣೆಯ ಯತ್ನದಲ್ಲಿ ಹಲವು ದೋಷಗಳಿಗೆ ನೀಡುವ ಆಹ್ವಾನಗಳಾಗಬಹುದಷ್ಟೇ. ಕುಟುಂಬವು ಈ ಮೊದಲು ಉತ್ಪಾದನೆ, ಸಂತತಿ, ಲೈಂಗಿಕತೆ, ಸಾಮಾಜಿಕತೆ-ಈ ನಾಲ್ಕು ಪ್ರಮುಖ ಚಟುವಟಿಕೆಗಳನ್ನು ಸಮಗ್ರವಾಗಿ ನಿರ್ವಹಿಸುವ ಕೇಂದ್ರವಾಗಿತ್ತು. ಇಲ್ಲೂ ಕೂಡ ಉತ್ಪಾದನಾ ಚಟುವಟಿಕೆಯ ಮೇಲೆ ಗಂಡಸಿನ ನಿಯಂತ್ರಣ ಪ್ರಬಲವಾಗಿದ್ದದ್ದು ಹೌದಾದರೂ, ಉಳಿದ ಚಟುವಟಿಕೆಗಳಲ್ಲಿ ಹೆಣ್ಣಿಗೊಂದು ಪ್ರಮುಖ ಪಾತ್ರವಿದ್ದಿತು. ಆಧುನಿಕ ಪ್ರಗತಿ ಮಾದರಿಯಲ್ಲಂತೂ ಕುಟುಂಬವು ಈ ಎಲ್ಲ ಅಂಗಗಳ ಸಮಗ್ರ ನಿರ್ವಹಣೆಯನ್ನು ಭರಿಸುತ್ತಿಲ್ಲ. ಬದಲಿಗೆ ಸಂತಾನ, ಲೈಂಗಿಕತೆ, ಸಾಮಾಜಿಕತೆಯ ಜವಾಬ್ದಾರಿಗಳು ಹೆಂಗಸಿನ ಕೊರಳಿಗೆ ಉರುಳುಗಳಾಗುತ್ತಿವೆಯಾದರೆ, ಉತ್ಪಾದನಾ ನಿರ್ವಹಣೆ ಗಂಡಿನ ಅಧಿಕಾರಕ್ಕೆ ಯಾವುದೇ ಪ್ರತಿರೋಧವಿಲ್ಲದೆ ದಕ್ಕುತ್ತದೆ. ಅಂದರೆ ಹೆಣ್ಣನ್ನು ಉತ್ಪಾದನಾ ಚಟುವಟಿಕೆಗಳಿಂದ ಹೊರತುಪಡಿಸಿ ಉಳಿಸುವ ತಂತ್ರ ಹಿಂದೆಂದಿಗಿಂತಲೂ ಇಂದು ಆಕ್ರಮಣಕಾರಿಯಾಗಿದೆ.

ಹಾಗಾಗಿ ಹೆಣ್ಣಿನ ಸಮಸ್ಯೆಗೆ ಯಾವ ನೆಲೆಯಲ್ಲಿ ಪರಿಹಾರವನ್ನು ಶೋಧಿಸಬೇಕೆಂಬ ಬಗ್ಗೆ ಹೆಚ್ಚಿನ ಜಾಗೃತಿ ಈಗ ಅಗತ್ಯವಿದೆ. ಆರ್ಥಿಕ ಸ್ವಾತಂತ್ರ್ಯದ ಕಲ್ಪನೆಯಲ್ಲಿ ಈಗಿನ ಸ್ತ್ರೀವಾದಿ ಚಿಂತನೆಗಳು ಮಂಡಿಸುತ್ತಿರುವ ಪ್ರಮುಖ ಬೇಡಿಕೆಗಳಲ್ಲಿ 'ಉದ್ಯೋಗಾವಕಾಶ' ಹಾಗೂ 'ಸಮಾನ ವೇತನ' ಎಂಬವು ಮುಖ್ಯವಾಗಿವೆ. ಈ ಬೇಡಿಕೆಗಳನ್ನು ಸಲ್ಲಿಸಲೇಬೇಕಾದ

ಅನಿವಾರ್ಯವನ್ನು ಸಮಾಜವು ಒಪ್ಪಿದಂತೆಯೂ ಕಾಣುತ್ತಿದೆ. ಆದರೆ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ, ಈ ಪ್ರಕ್ರಿಯೆಯು ಹೆಣ್ಣನ್ನು ಹಲವು ಭ್ರಮೆಗಳಲ್ಲಿ ಸಿಲುಕಿಸುವ ತಂತ್ರಗಳಾಗಿ ಮಾತ್ರ ರೂಪುಗೊಳ್ಳುತ್ತಿವೆ ಎಂಬುದು ಕಾಣುತ್ತದೆ. 'ದುಡಿಮೆಯ ಹಕ್ಕು' ಎಂದಾಗ ಸದ್ಯ ಮನೆಯಲ್ಲಿ ಮಾಡುವ ಕೆಲಸಗಳ ವಿಸ್ತರಣೆಯಾಗಿ ಹೆಣ್ಣನ್ನು 'ಸೇವಾಕ್ಷೇತ್ರ' ಗಳಲ್ಲಿ ದುಡಿಮೆಗೆ ಹಚ್ಚಲಾಗುತ್ತದೆ. 'ಸಮಾನ ವೇತನ' ಎಂದರೆ ಸಮಾನ ವೇತನವನ್ನು ಕೊಟ್ಟಂತೆ ಮಾತ್ರ ಮಾಡಲಾಗುತ್ತದೆ. ಅಂದರೆ ಅವಳು ಎಂದೂ ಉನ್ನತ ಪದಾಧಿಕಾರಗಳನ್ನು ಪಡೆಯಲು ಅವಕಾಶವನ್ನೇ ನೀಡದಂತೆ ಮಾಡುವ ಮೂಲಕ 'ಸಮಾನ ಗಳಿಕೆ'ಯನ್ನು ನಿರಾಕರಿಸಲಾಗುತ್ತದೆ. ಅಂದರೆ, ಈಗ ಉಳಿದಿರುವ ದಾರಿ ಎಂದರೆ ನಾವೀಗ 'ಸಮಾನ ದುಡಿಮೆ'ಗಾಗಿ ಬೇಡಿಕೆಯನ್ನಿಡಬೇಕು. ಎಲ್ಲ ಕ್ಷೇತ್ರಗಳಲ್ಲಿಯೂ ಅವಕಾಶವು ಸಮಾನವಾಗಿ ಸಿಗಬೇಕು.

ಮುಖ್ಯವಾಗಿ 'ಸಮಾನ ದುಡಿಮೆ'ಯ ಅವಕಾಶದಿಂದ ಹೆಣ್ಣನ್ನು ವಂಚಿಸಲು ಹೂಡಿರುವ ತಂತ್ರವಾಗಿ ಅವಳಿಗೆ 'ಸಮಾನ ಶಿಕ್ಷಣ'ವನ್ನು ನಿರಾಕರಿಸಲಾಗಿದೆ. ಶಿಕ್ಷಣ, ತರಬೇತಿಗಳ ನೆಲೆಯಲ್ಲೇ ಅವಳನ್ನು ನಿರಾಕರಿಸಿಬಿಟ್ಟರೆ ಸಮಾನ ಪದಾಧಿಕಾರಗಳಿಗೆ, ದುಡಿಮೆಗಳಿಗೆ, ಪ್ರವೇಶವನ್ನು ನಿರಾಕರಿಸುವುದು ತೀರಾ ಸುಲಭ. ಪ್ರಬಲವಾದೊಂದು ನೆಪ ಸಿದ್ಧಗೊಂಡು ಬಿಡುತ್ತದೆ.

ಮೂರನೆಯದಾಗಿ ಲೈಂಗಿಕ ವರ್ತನೆಗಳ ಬಗೆಗೆ ಗಂಡು ಹೆಣ್ಣುಗಳಿಗೆ ಸಮಾನವಾಗಿ ಅನ್ವಯವಾಗುವ ಕಾನೂನು ನಿಯಮಗಳಿಗಾಗಿ ಹೋರಾಡಬೇಕಾಗಿದೆ. ಲೈಂಗಿಕ ಅಪರಾಧಗಳನ್ನು ಕುರಿತಂತೆ ಇರಬಹುದು ಅಥವಾ ವಿವಾಹ, ವಿಚ್ಛೇದನೆಗಳಂತಹ ಸಾಮಾಜಿಕ ರಚನೆಗಳನ್ನು ಕುರಿತಂತೆ ಇರಬಹುದು - ಕಾನೂನು ನಿಯಮಗಳು ಸಮಾನವಾಗಿ ಅನ್ವಯವಾಗಬೇಕೆಂಬುದನ್ನು ಮಂಡಿಸಬೇಕು.

ನಾಲ್ಕನೆಯದಾಗಿ ಸಂತತಿ ಸಂರಕ್ಷಣೆಯ ಜವಾಬ್ದಾರಿಯನ್ನು ಏಕಪಕ್ಷೀಯವಾಗಿ ಹೆಣ್ಣಿನ ಮೇಲೆ ಹೊರಿಸಿ ಬಿಟ್ಟಿರುವುದರ ವಿರುದ್ಧ ಹೋರಾಡಬೇಕು. ಕ್ರಮಬದ್ಧ ಸಂಸಾರಗಳಲ್ಲಿನ ದಿನನಿತ್ಯದ ಹೊಣೆಗಳಿಗೆ ಮಾತ್ರವೇ ಇದು ಅನ್ವಯಿಸುವುದಿಲ್ಲ. ಬದಲಿಗೆ ಕಾನೂನು ಬಾಹಿರ ಸಂಬಂಧಗಳಿಂದ ಹುಟ್ಟುವ ಮಕ್ಕಳು, ಗಂಡನ ಮರಣ ಅಥವಾ ವಿವಾಹ ವಿಚ್ಛೇದನಗಳಂತಹ ಸಂದರ್ಭಗಳಲ್ಲಿ ಏಕಾಕಿಯಾಗಿ ಮಕ್ಕಳ ಹೊಣೆಯನ್ನು ಹೊರಬೇಕಾಗಿ ಬರುವ ಹೆಣ್ಣಿನ ಸಂದರ್ಭಗಳು-ಇಂಥವನ್ನು ಪರಿಗಣಿಸಿ ಈ ಸಮಾಜ ರಚನೆಯು ನಿರ್ದೇಶನಗಳನ್ನು ನೀಡಬೇಕೆಂಬ ಬಗ್ಗೆ ಒತ್ತಾಯವನ್ನು ತರಬೇಕು. 'ಸಂತತಿ ಸಂರಕ್ಷಣೆ'ಯ ಹೊಣೆಗಾರಿಕೆಯನ್ನು ಗಂಡು ಹೆಣ್ಣುಗಳು ಸಮಾನವಾಗಿ ವಹಿಸಿಕೊಳ್ಳಬೇಕು ಎಂಬ ಮಾತನ್ನು ಜಾರಿಗೊಳಿಸುವುದು ತೀರಾ ಕಷ್ಟವೇ ಹೌದು. ಏಕೆಂದರೆ ಈ ಹೊಣೆಗೂ ಹೆಣ್ಣಿಗೂ ಇರುವ ಸಂಬಂಧವನ್ನು ನಿರೂಪಿಸುವಷ್ಟು ಸ್ಪಷ್ಟ ಗೋಚರವಾಗಿ, ಇದರೊಂದಿಗೆ

ಗಂಡಿಗಿರುವ ಸಂಬಂಧವನ್ನು ನಿರೂಪಿಸುವುದು ಕಷ್ಟ. ಇದು ಹೆಚ್ಚು ಸಂಕೀರ್ಣವೂ, ಅಗೋಚರವೂ ಆಗಿರುವುದೇ ಇಲ್ಲಿನ ಕಾರಣ. ಇದು ಒಂದು ಮೌಲ್ಯಾಧಾರಿತ ಚಿಂತನೆಯಾದ್ದರಿಂದ ಮಾನಸಿಕವಾಗಿ ಗಂಡು ಈ ಹೊಣೆಯ ನಿರ್ವಹಣೆಗೆ ಬದ್ಧನಾಗದ ಹೊರತು ಯಾವ ಬಗೆಯ ಹೇರಿಕೆಯೂ ನಿಷ್ಪ್ರಯೋಜಕವೇ. ಹಾಗಾಗಿ, ಈ ನೆಲೆಯಲ್ಲಂತೂ ಹೆಣ್ಣಿನ ಸ್ವಾತಂತ್ರ್ಯವೆಂಬುದು ಥಟ್ಟನೆ ಕಾರ್ಯಗತವಾಗಬಹುದಾದ ಕ್ರಾಂತಿಯಂತೂ ಆಗಲಾರದು. ಆದರೆ ಈ ದಿಸೆಯಲ್ಲಿ ನಡೆಯುವ ಸಾಮಾಜಿಕ ಚಿಂತನೆ ಅದ್ಭುತವಾದ ಒಂದು ಮಾನವೀಯ ಸಾಧನೆಯಂತೂ ಹೌದು. ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಸಮಾಜವು ತಲುಪಬಹುದಾದ ಒಂದು ಉನ್ನತ ಗುರಿ.

ಹೆಣ್ಣಿನ ಭಾಷೆ

ಭಾಷಾಶಾಸ್ತ್ರದ ಇತ್ತೀಚಿನ ಅಧ್ಯಯನಗಳಲ್ಲಿ ಸಮಾಜವನ್ನು ಅದು ಬಳಸುವ ಭಾಷೆಯ ಮೂಲಕ ಅರ್ಥಮಾಡಿಕೊಳ್ಳಬಹುದೆಂಬ ಒಂದು ಚಿಂತನೆ ರೂಪುಗೊಂಡು ಸಮಾಜೋ ಭಾಷಾಶಾಸ್ತ್ರ ಎಂಬ ಒಂದು ಪ್ರತ್ಯೇಕ ಅಧ್ಯಯನವಾಗಿ ಬೆಳೆದಿದೆ.

ಭಾಷೆಯ ಹುಟ್ಟು, ಬೆಳವಣಿಗೆ ಹಾಗೂ ವಿಕಾಸದ ಚರಿತ್ರೆಯಲ್ಲಿ ಭಾಷಾ ವಿಕಲ್ಪಗಳ ಅಧ್ಯಯನ ಅತ್ಯಂತ ಕುತೂಹಲಕಾರಿಯಾದದ್ದು. ಸಮುದಾಯಗಳು ವೈವಿಧ್ಯಗಳನ್ನು ಒಳಗೊಂಡಂತೆಲ್ಲಾ ಅವು ಬಳಸುವ ಭಾಷೆಯೂ ಅಷ್ಟೇ ವೈವಿಧ್ಯಮಯವಾಗುತ್ತದೆ. ಅಷ್ಟೇ ಏಕೆ, ಒಂದೇ ಸಮುದಾಯದಲ್ಲೂ ವಿವಿಧ ಕಾರಣಗಳಿಗಾಗಿ ಮತ್ತೆ ಹಲವು ಬಗೆಯ ಭಾಷಾ ವೈವಿಧ್ಯಗಳು ಕಾಣಿಸಿಕೊಳ್ಳುತ್ತವೆ. ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಭಾಷೆಯೊಂದರಲ್ಲಿ ಕಾಣಿಸಿಕೊಳ್ಳುವ ವಿಕಲ್ಪಗಳ ಅಧ್ಯಯನವು ಪರೋಕ್ಷವಾಗಿ ಆ ಸಾಮಾಜಿಕ ಸಂದರ್ಭಗಳ ಅಧ್ಯಯನದ ಒಂದು ಮುಖ್ಯ ಸಾಧನವೇ ಆಗಿದೆ.

ಒಂದು ಸಮುದಾಯದಲ್ಲಿ ಎಲ್ಲ ವ್ಯಕ್ತಿಗಳೂ ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಇನ್ನೂ ಮುಂದುವರೆದು ಹೇಳಬೇಕೆಂದರೆ ಒಬ್ಬನೇ ವ್ಯಕ್ತಿ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಅದೇ ಭಾಷೆಯನ್ನು ಒಂದೇ ರೀತಿಯಾಗಿ ಬಳಸುವುದಿಲ್ಲ. ಜಾತಿ, ವರ್ಗ, ಶೈಕ್ಷಣಿಕ ಸ್ಥಾನಮಾನ, ಪ್ರಾದೇಶಿಕತೆ ಹಾಗೂ ಲಿಂಗ ಭೇದಗಳಿಗನುಸಾರವಾಗಿ ಸಮುದಾಯದಲ್ಲಿ ಭಾಷಿಕ ವಿಕಲ್ಪಗಳು ಪ್ರಕಟಗೊಳ್ಳುತ್ತವೆ. ಭಾಷೆಯಲ್ಲಿ ತೋರಿ ಬರುವ ವಿಕಲ್ಪಗಳು ತಮ್ಮಷ್ಟಕ್ಕೇ ಸ್ಥಾನಮಾನಗಳನ್ನು ವಿಂಗಡಿಸುವ ಅಂಶಗಳಲ್ಲವಾದರೂ, ಸಮಾಜವು ವಿಭಿನ್ನ ಸಮುದಾಯಗಳ ಬಗೆಗೆ ಹೊಂದಿರುವ ಹಲವು ಪೂರ್ವ ನಿರ್ಧಾರಿತ ಕಲ್ಪನೆಗಳನ್ನೂ, ಆ ಸಮುದಾಯಗಳು ಸಮಾಜದಲ್ಲಿ ಹೊಂದಿರುವ ಸ್ಥಾನಮಾನಗಳನ್ನೂ, ಆ ಸಮುದಾಯಗಳನ್ನು ಸಮಾಜವು ನಿರ್ದೇಶಿಸಿ ನಿರ್ವಚಿಸುವ ಕ್ರಮವನ್ನೂ ಭಾಷಾ ವಿಕಲ್ಪಗಳು ವಿವರಿಸಬಲ್ಲವು.

ಭಾಷಾ ಲಕ್ಷಣಕ್ಕೆ ಇರುವ ಈ ಸಾಮರ್ಥ್ಯವನ್ನೂ ಆಧಾರ ಮಾಹಿತಿಯನ್ನಾಗಿ ಬಳಸಿ ಸಮಾಜದ ವಿವಿಧ ಸಮುದಾಯಗಳಲ್ಲಿನ ಅಸಮಾನತೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಬಹುದು. ಭಾಷೆಯನ್ನು ಅದರ ವಿವಿಧ ನೆಲೆಗಳಲ್ಲಿ ವಿವರವಾಗಿ

ಅಧ್ಯಯನ ಮಾಡುವುದು ಭಾಷಾಶಾಸ್ತ್ರದ ಆಸಕ್ತಿ. ಸಮಾಜವನ್ನು ಕುರಿತ ಅಧ್ಯಯನ ಸಮಾಜಶಾಸ್ತ್ರದ ಆಸಕ್ತಿ. ಆದರೆ ಸಮಾಜ ಶಾಸ್ತ್ರಜ್ಞನು ಭಾಷಾಶಾಸ್ತ್ರದ ನೆರವಿನಿಂದ ತನ್ನ ಅಧ್ಯಯನ ಕ್ಷೇತ್ರಕ್ಕೆ ಹೊಸದೊಂದು ಆಯಾಮವನ್ನು ಕಂಡು ಕೊಳ್ಳುವುದು ಸಾಧ್ಯ.

ಭಾಷಾ ವಿಕಲ್ಪಗಳು ಹುಟ್ಟಿಕೊಳ್ಳುವ ಸಂದರ್ಭಗಳ ವಿವರಗಳು ಆ ಸಮುದಾಯಗಳಲ್ಲಿ ಹುಟ್ಟಿಕೊಂಡಿರುವ ವಿಕಲ್ಪಗಳ ಸೂಚಕಗಳೇ ಆಗಿರುತ್ತವೆ. ಈ ಚಿಂತನೆಯನ್ನಾಧರಿಸಿ ಸಮಾಜದ ವಿವಿಧ ಸಮುದಾಯಗಳ ನಡುವೆ ಇರುವ ಅಸಮಾನತೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಅಧ್ಯಯನಗಳು ಸಾಕಷ್ಟು ನಡೆದಿವೆ. ಜಾತಿ, ವರ್ಗ, ಪ್ರಾದೇಶಿಕತೆ, ಶೈಕ್ಷಣಿಕ ಸ್ಥಾನಮಾನ ಹಾಗೂ ಲಿಂಗ ಭೇದಗಳಿಗನುಸಾರವಾಗಿ ಒಂದೇ ಭಾಷೆಯಲ್ಲಿ ಹಲವು ವಿಕಲ್ಪಗಳು ತೋರಿಬರುವ ಬಗ್ಗೆ ಒಟ್ಟಾರೆಯಾಗಿ ಹಲವು ಸೈದ್ಧಾಂತಿಕ ವಿಚಾರಗಳನ್ನೂ ನಿದರ್ಶನ ಸಹಿತವಾಗಿ ನಿರೂಪಿಸುವ ಕ್ಷೇತ್ರಾಧ್ಯಯನಗಳು ಹಲವಾರು ನಡೆದಿವೆ. ಈ ಪೈಕಿಯ ಸಣ್ಣದೊಂದು ಎಳೆಯನ್ನು ವಿಸ್ತರಿಸಿಕೊಳ್ಳುವ ಮೂಲಕ, ನಮ್ಮ ಸಮಾಜದಲ್ಲಿ ಹೆಣ್ಣು ಮತ್ತು ಗಂಡುಗಳ ಬಗ್ಗೆ ಇರುವ ಕೆಲವು ಅಭಿಪ್ರಾಯಗಳು, ಅವರಿಗೆ ಸಮಾಜವು ನೀಡುವ ಹಲವು ನಿರ್ದೇಶನಗಳು ಹಾಗೂ ಅವರನ್ನು ಕುರಿತು ಸಮಾಜವು ವ್ಯಕ್ತ ಮಾಡುವ ನಿರ್ವಚನಗಳು ನಮ್ಮ ಭಾಷೆಯಲ್ಲಿ ಪಡೆದುಕೊಂಡಿರುವ ಆಕಾರಗಳನ್ನು ನೋಡ ಬಹುದಾಗಿದೆ. ಹಾಗೆಯೇ ಈ ಅಭಿಪ್ರಾಯ, ನಿರ್ದೇಶನ, ನಿರ್ವಚನಗಳನ್ನು ಹೆಣ್ಣು ಗಂಡುಗಳು ಹೇಗೆ ಸ್ವೀಕರಿಸಿದ್ದಾರೆಂಬುದಕ್ಕೆ ಅವರು ಬಳಸುವ ಭಾಷೆಯಲ್ಲಿ ದೊರಕುವ ಹಲವು ಸೂಚನೆಗಳನ್ನು ಗುರುತಿಸಬಹುದಾಗಿದೆ.

ಭಾಷಿಕ ಅಧ್ಯಯನಗಳಿಗಾಗಿ ಮಾಹಿತಿಗಳನ್ನು ಕಲೆ ಹಾಕುವಾಗ ಸಮಾಜದ ಎಲ್ಲ ಸ್ತರಗಳಿಂದಲೂ ಮಾದರಿಗಳನ್ನು ಪಡೆಯಲಾಗಿದ್ದು, ಭಾಷಿಕ ವಿಕಲ್ಪಗಳಿಗೂ ಸಾಮಾಜಿಕ ವಿಕಲ್ಪಗಳಿಗೂ ಇರುವ ಗಾಢವಾದ ಸಂಬಂಧಗಳನ್ನು ಗುರುತಿಸಲಾಗಿದೆ. ಆದರೂ ಈ ವಿಕಲ್ಪಗಳ ಬಗೆಗಳು ಹೆಣ್ಣು ಗಂಡುಗಳ ಭಾಷೆಯ ಬಳಕೆಯಲ್ಲಿ ಹೇಗೆ ವ್ಯಕ್ತವಾಗಿವೆ ಎಂಬ ಅಧ್ಯಯನ ತೀರಾ ಇತ್ತೀಚಿನದು. ಗಂಡು ಹೆಣ್ಣುಗಳಲ್ಲಿ ಅಸಮಾನತೆ ಇರುವುದನ್ನು ವಿರೋಧಿಸಿ ಚಿಂತನೆಗಳೂ, ಚಳುವಳಿಗಳೂ ನಡೆಯುತ್ತಿವೆ. ಇವುಗಳಿಗೆ ಒಂದು ಅರ್ಥಪೂರ್ಣ ಚಾಲನೆ ದೊರಕಬೇಕೆಂದರೆ ಬಲವಾದ ಸೈದ್ಧಾಂತಿಕ ಚೌಕಟ್ಟಿನ ನಿರ್ಮಾಣದ ತೀವ್ರ ಅಗತ್ಯವಿದೆ. ಅಸಮಾನತೆಯ ಸ್ವರೂಪದ ಎಲ್ಲ ಆಯಾಮಗಳನ್ನೂ ಅರ್ಥ ಮಾಡಿ ಕೊಳ್ಳುವುದು ಬಲವಾದ ಸಿದ್ಧಾಂತವನ್ನು ರೂಪಿಸಿಕೊಳ್ಳಲು ಮುಖ್ಯ ಆಧಾರದ ಸಂಗತಿ. ಸಮಾಜದ ಹೆಣ್ಣು ಗಂಡುಗಳು ಒಂದೇ ಭಾಷೆಯನ್ನು ಹೇಗೆ ವಿಭಿನ್ನವಾಗಿ ಬಳಸುತ್ತಾರೆ ಎಂಬುದನ್ನು ಗಮನಿಸುವುದು ಈ ದೃಷ್ಟಿಯಿಂದ ಕುತೂಹಲಕರ. ಈ ವಿಭಿನ್ನ ರೀತಿಯ ಭಾಷಾ ಬಳಕೆಯು ಸಮಾಜದ ಯಾವ ನಿಲುವುಗಳನ್ನೂ, ಯಾವ ಮೌಲ್ಯಗಳನ್ನು ಸೂಚಿಸುತ್ತದೆ ಎಂಬುದರ ಅಧ್ಯಯನ ಕೂಡ ಅಷ್ಟೇ ಕುತೂಹಲಕರ.

ಮೊದಲಿಗೆ ಒಂದು ಸಮುದಾಯದಲ್ಲಿ ವ್ಯಕ್ತಿಗಳು ತಮ್ಮನ್ನು ಹೇಗೆ ಗುರುತಿಸಿಕೊಳ್ಳುತ್ತಾರೆ ಎಂಬುದನ್ನು ನೋಡೋಣ. ಗುರುತಿಸಿಕೊಳ್ಳುವ ಮೊದಲ ಹಂತವೆಂದರೆ ತಮ್ಮ ಸಮುದಾಯುವನ್ನು ಸಮಾಜದ ಇತರ ಸಮುದಾಯುಗಳೊಂದಿಗೆ ಇಟ್ಟು ಹೋಲಿಸಿ ಕೊಳ್ಳುವುದು. ಇಂಥಾ ಹೋಲಿಕೆಯ ಅಭಿಲಾಷೆ ಕೀಳರಿಮೆ ಇರುವಲ್ಲಿ ಹೆಚ್ಚಾಗಿರುತ್ತದೆ. ಅಂದರೆ ಜಾತಿ, ವರ್ಗ, ಶಿಕ್ಷಣ, ಲಿಂಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಮಾಜವು ಕೆಲವು ನಿಶ್ಚಿತ ಅಭಿಪ್ರಾಯುಗಳನ್ನು ಹೇಳುತ್ತದೆ. ಒಂದು ಸಮುದಾಯ 'ಕೀಳು' ಎಂಬ ಅಭಿಪ್ರಾಯವಿದೆ ಎನ್ನಿ ಆ 'ಕೀಳಾದ' ಸಮುದಾಯ ಸಮಾಜದ ಈ ಅಭಿಪ್ರಾಯಕ್ಕೆ ಎರಡು ರೀತಿಗಳಲ್ಲಿ ಪ್ರತಿಕ್ರಿಯಿಸಬಹುದು. ಒಂದೋ ಈ ಪರಿಗಣನೆಯನ್ನು ಒಪ್ಪಿಕೊಂಡು ಬಿಡಬಹುದು. ಅಥವಾ ಈ ಪರಿಗಣನೆಯನ್ನು ತಿರಸ್ಕರಿಸಬಹುದು.

ಸಮುದಾಯುವೊಂದು ಸಮಾಜವು ತನ್ನ ಬಗೆಗೆ ನೀಡಿದ ಅಭಿಪ್ರಾಯುವನ್ನು ಒಪ್ಪಿಕೊಂಡಿದೆ ಎಂಬುದಕ್ಕೆ ಅದು ಕೆಲವು ಕುರುಹುಗಳನ್ನು ತೋರುತ್ತದೆ. ವ್ಯಕ್ತಿಯು ತನ್ನದೇ ಗುಂಪಿನ ಇತರರೊಂದಿಗೆ ತನ್ನನ್ನು ಹೋಲಿಸಿಕೊಳ್ಳುವುದು. ಉದಾಹರಣೆಗೆ ಮಹಿಳೆಯು ಇತರ ಮಹಿಳೆಯರೊಂದಿಗೆ ಹೋಲಿಸಿಕೊಂಡು ತನ್ನ ಮೇಲ್ಮೆಯನ್ನು ತೋರಲು ಪ್ರಯತ್ನಿಸುತ್ತಾಳೆ. ಸಮಾಜವು ಅಡಿಗೆ, ಹೊಲಿಗೆ, ಹಾಡು, ನರ್ತನ, ಗೃಹಾಲಂಕಾರದಂತಹವುಗಳು ಮಹಿಳೆಯ ಕಾರ್ಯಕ್ಷೇತ್ರಗಳೆಂದು ನಿರ್ದೇಶಿಸಿದೆ. ಮಹಿಳೆ ಈ ನಿರ್ದೇಶನವನ್ನು ಪಾಲಿಸುತ್ತಲೇ ಈ ಪಾಲನೆಯಲ್ಲಿ ತನ್ನ ಸಾಧನೆಯೇ ಉತ್ತಮವಾದದ್ದೆಂದು ನಿರೂಪಿಸಲು ಹೆಣಗುತ್ತಾಳೆ. ಈ ಹೆಣಗುವಿಕೆ ಆಕೆಯ ಸಮಾಜವು ಹೆಣ್ಣಿನ ಕ್ಷೇತ್ರವನ್ನು ಗುರುತಿಸಿದ್ದನ್ನು ವಿಧೇಯಳಾಗಿ ಒಪ್ಪಿದ ಒಂದು ಕುರುಹು. ತಾನು 'ಕೀಳು' ಎಂಬುದನ್ನು ಒಪ್ಪಿದ ಕುರುಹು ಇನ್ನೊಂದು ಬಗೆಯುಲ್ಲೂ ಕಾಣಿಸಿಕೊಳ್ಳಬಹುದು. ಮೇಲು ಗುಂಪಿನೊಂದಿಗೆ ಸಾಂಕೇತಿಕವಾಗಿಯಾದರೂ ಸೇರಿಕೊಳ್ಳಲು ಪ್ರಯತ್ನಿಸುವುದರ ಮೂಲಕ ತನಗಿಂತ ಆ ಗುಂಪು 'ಮೇಲು' ಎಂಬುದನ್ನು ಒಪ್ಪುವುದು. ಉದಾಹರಣೆಗೆ ಮಹಿಳೆಯು ಗಂಡಸು ಮಾಡುವ ಕೆಲಸಗಳನ್ನು ತಾನೂ ಮಾಡಿ ತೋರಿಸಲು ಹೆಣಗುವುದು. ಮಾತುಕತೆ, ವೇಷಭೂಷಣ, ವೃತ್ತಿ ಮೊದಲಾದವುಗಳಲ್ಲಿ ಆಕೆ ಗಂಡಿನ ರೀತಿಯನ್ನು ಅನುಕರಿಸುತ್ತಾಳೆ. ಪ್ಯಾಂಟು ಶರ್ಟುಗಳನ್ನು ತೊಡುವುದು, ಕ್ರಾಪ್‌ಕಟ್ ಮಾಡಿಕೊಳ್ಳುವುದು ಮಾತ್ರವಲ್ಲದೆ ತನ್ನ ನಡಿಗೆಯ ವಿಧಾನ, ಮಾತಿನ ರೀತಿ ನೀತಿ, ಧ್ವನಿಗಳಲ್ಲೂ ಗಂಡಸಿನ ಮಾದರಿಯನ್ನು ಅನುಕರಿಸಬಹುದು. ರಾಜಕೀಯ, ಕ್ರೀಡೆ ಮೊದಲಾದವುಗಳನ್ನು ಮಾತಿನ ವಸ್ತುವಾಗಿ ಆಯ್ಕೆಮಾಡಿ ಆಳವಾದ ಗಂಭೀರ ಧ್ವನಿಯಲ್ಲಿ ಚರ್ಚೆಗಿಳಿಯುವ ರೂಢಿ ಮಾಡಿ ಕೊಳ್ಳಬಹುದು. ಮನೆ, ಮಕ್ಕಳು, ಅಡಿಗೆಗಳಂತಹ ವಸ್ತುಗಳೆಂದರೆ ಹರಟೆಗಳೆಂದು ಲಘುವಾಗಿ ಕಂಡು ದೂರವಿರುವುದು, ಯಾವುದನ್ನೇ ಹೇಳಲು ಖಡಾಖಂಡಿತವಾದ ಭಾಷೆಯನ್ನು ಬಳಸುವುದು-ಇಂಥವು ಕೂಡ ಗಂಡಸರ ಮಾದರಿ ಎಂಬುದರಿಂದಾಗಿ ಅವಳಲ್ಲಿ ಮೆಚ್ಚುಗೆಯನ್ನು ಪಡೆಯುತ್ತವೆ.

ಅದೇ ಸಮಾಜ ಪರಿಗಣನೆಯನ್ನು ತಾನು ಲಕ್ಷಿಸುವುದಿಲ್ಲ ಎಂಬುದನ್ನು ತೋರುವ ಕುರುಹುಗಳು ಸ್ವಲ್ಪ ವಿಭಿನ್ನವಾಗಿರುತ್ತವೆ. ಮೇಲು ಗುಂಪಿನವರನ್ನು ಅನುಕರಿಸುವ ಬದಲು ಇಲ್ಲಿ ಸಮಾನತೆಯ ಹಕ್ಕನ್ನು ಸಾಧಿಸುವ ಯತ್ನ ಕಾಣುತ್ತದೆ. ಯಾವ ತನ್ನ ಗುಣಗಳನ್ನೂ ಸಮಾಜವು 'ಕೀಳು' ಎಂದು ಪಟ್ಟಿ ಮಾಡಿತೋ ಆ ಗುಣಗಳನ್ನೇ ಮರು ನಿರ್ವಚನ ಮಾಡಿ ಉನ್ನತವಾದವೆಂದು ನಿರೂಪಿಸುವ ಯತ್ನವೂ ನಡೆಯುತ್ತದೆ. ಉದಾಹರಣೆಗೆ ಮಹಿಳೆಯು ತಾನು ಕೂಡ ಈ ಸಮಾಜದಲ್ಲಿ ಗಂಡಸಿಗೆ ಸಮಾನಳು. ತನ್ನನ್ನು ಎರಡನೆಯ ದರ್ಜೆಗೆ ಇಳಿಸಿ ನೋಡುವ ಸಮಾಜದ ದೃಷ್ಟಿಯನ್ನು ತಾನು ನಿರಾಕರಿಸುತ್ತೇನೆ. ಸಮಾಜವು ಹೇಳುವಂತೆ ತನ್ನ ನಿರ್ವಹಣೆಯ ಕಾರ್ಯಕ್ಷೇತ್ರಗಳು ಯಾವ ಕಾರಣಕ್ಕೂ ಎರಡನೆಯ ದರ್ಜೆಯವಲ್ಲ. ಅವೂ ಕೂಡ ಗಂಡಸಿನ ಕಾರ್ಯಗಳಷ್ಟೇ ಪ್ರಮುಖವಾದವು ಎಂಬುದನ್ನು ಗಟ್ಟಿಯಾಗಿ ಹೇಳಲು ಇಂಥಾ ಮಹಿಳೆ ಪ್ರಯತ್ನಿಸುತ್ತಾಳೆ. ಸಮಾಜವು ಈವರೆಗೆ ಬಳಸಿದ ಹೋಲಿಕೆಗಳಿಗೆ ತನಗೆ ಉಪಯುಕ್ತವೂ ಸಮಂಜಸವೂ ಎನಿಸುವ ಹೊಸ ಆಯಾಮಗಳನ್ನು ಕಲ್ಪಿಸಲು ಈ ಮಹಿಳೆ ತೊಡಗುತ್ತಾಳೆ.

ಈ ಬಗೆಯ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಭಾಷೆಯೂ ಹೊಸ ಸಂವಹನಾ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ, ಸಮಾಜದ ಹೆಣ್ಣು ಗಂಡುಗಳು ಬಳಸುವ ಭಾಷೆಯು ಆ ಸಾಮಾಜಿಕ ಸಂದರ್ಭಗಳನ್ನು ವಿವರಿಸುವ ಮುಖ್ಯ ಸಾಧನವೂ ಆಗುತ್ತದೆ. ವಿವಿಧ ವರ್ಗ, ಜಾತಿ, ಶಿಕ್ಷಣ ಇತ್ಯಾದಿ ಸಂದರ್ಭಗಳಲ್ಲಿ ಹೆಣ್ಣು ಗಂಡುಗಳ ಭಾಷಾ ಬಳಕೆಯು ವಿಭಿನ್ನವಾಗಿರುತ್ತವೆನ್ನುವುದು ಹೌದಾದರೂ, ವ್ಯಕ್ತಿಯು ಹೆಣ್ಣು ಅಥವಾ ಗಂಡು ಎಂಬುದರಿಂದಾಗಿಯೇ ವ್ಯಕ್ತವಾಗುವ ವಿಶಿಷ್ಟ ಭಾಷಾ ವೈವಿಧ್ಯಗಳೂ ಕಾಣಬರುತ್ತವೆ.

ಸಮಾಜದಲ್ಲಿ ಗಂಡು ಹೆಣ್ಣುಗಳು ಪ್ರತ್ಯೇಕವಾದ ಎರಡು ಸಮುದಾಯಗಳೆನ್ನಬಹುದು. ಜಾತಿ, ವರ್ಗ, ಪ್ರಾದೇಶಿಕತೆ, ಶಿಕ್ಷಣಗಳಂತಹವುಗಳಿಗೆ ಸಂಬಂಧಿಸಿದಂತೆಯೂ ಸಮುದಾಯ ಹಂತಗಳಿವೆ. ಈ ಹಂತಗಳು ಪರಸ್ಪರ ಎಷ್ಟು ಭಿನ್ನ ಎಂಬುದು ಸ್ಪಷ್ಟ ಗೋಚರ. ಅವು ಪ್ರತ್ಯೇಕ ಎಂಬುದರ ಜೊತೆಗೆ ಅವು ಪ್ರತ್ಯೇಕವಾಗಿಯೇ ಬಾಳುವ ಸಾಧ್ಯತೆ ಇದೆ ಮತ್ತು ಹಾಗೆಯೇ ಬಾಳುತ್ತವೆ. ಆದರೆ ಗಂಡು ಹೆಣ್ಣುಗಳೆಂಬ ಸಮುದಾಯಗಳು ಪ್ರತ್ಯೇಕವಾದವು ಎಂಬುದು ಹೌದಾದರೂ ಅವೆರಡೂ ಪ್ರತ್ಯೇಕವಾಗಿ ಬಾಳದೆ ಒಂದೇ ಕಡೆ ಬಾಳಬೇಕಾದ ಸಂದರ್ಭವಿದೆ. ಈ ದೃಷ್ಟಿಯಿಂದ ಇಲ್ಲಿನ ಪ್ರತ್ಯೇಕತೆ ಮತ್ತು ಪೈಪೋಟಿ ವಿಚಿತ್ರ ರೀತಿಯದು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕೀಳು ಎಂದು ಪರಿಗಣಿಸಲಾಗಿದೆ. ಅಷ್ಟೇ ಅಲ್ಲ ಅವಳು ನಿರಂತರವಾಗಿ ಅಧೀನಳಾಗಿಯೇ ಉಳಿಯಬೇಕೆಂಬ ಬಗ್ಗೆ ಬಗೆ ಬಗೆಯ ಹುನ್ನಾರಗಳು ಸತತವಾಗಿ ನಡೆಯುತ್ತಿವೆ. ಜಾಗೃತಗೊಂಡಿರುವ ಮಹಿಳೆ ಈಗೀಗ ತನ್ನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ತೀವ್ರವಾಗಿ ಹೆಣಗುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜವು ಹೆಣ್ಣಿನ ಬಗೆಗೆ ತಳೆದಿರುವ ಧೋರಣೆಗಳು ಮತ್ತು ಅವುಗಳನ್ನು ಜಾರಿಗೊಳಿಸಲು ನಡೆಸಿರುವ

ಹುನ್ನಾರಗಳನ್ನು ಅರ್ಥಮಾಡಿಕೊಳ್ಳುವಲ್ಲಿ, ಇಂತಹ ಹುನ್ನಾರಗಳು ಭಾಷೆಯ ಬಳಕೆಯ ಸಂದರ್ಭದಲ್ಲಿ ವ್ಯಕ್ತಗೊಂಡಿರುವ ಬಗೆಗಳು ಸೂಚಕಗಳಾಗಿ ನೆರವಾಗುತ್ತವೆ.

ಹೆಣ್ಣಿನ ಬಗೆಗಿನ ಸಮಾಜದ ಅಭಿಪ್ರಾಯಗಳನ್ನು ಭಾಷೆಯು ಗಾದೆಗಳಲ್ಲಿ, ನುಡಿಗಟ್ಟುಗಳಲ್ಲಿ, ಬೈಗುಳಗಳಲ್ಲಿ ಹಿಡಿದಿಟ್ಟಿದೆ. ಇಂಥಾ ಗಾದೆ, ನುಡಿಗಟ್ಟು, ಬೈಗುಳಗಳ ಪಟ್ಟಿ ದೊಡ್ಡದಿದೆ. ಇಲ್ಲೆಲ್ಲಾ ಸಮಾಜವು ಹೆಣ್ಣಿಗೆ ಬುದ್ಧಿ ಸಾಮರ್ಥ್ಯ ತುಂಬಾ ಕಡಿಮೆ, ಅವಳು ತುಂಬಾ ದುರ್ಬಲಳು ಎಂಬಂತಹ ಅವಳ ದೋಷಗಳನ್ನು, ಹಾಗಾಗಿ ಅವಳು ಗಂಡಿನ ಭೋಗವಸ್ತುವಾಗಿ ಮಾತ್ರ ಇರಲು ಅರ್ಹಳು ಎಂಬ ನಿರ್ಧಾರಗಳನ್ನೂ ಹೇಳುತ್ತದೆ. ಅಲ್ಲದೆ ತನ್ನ ಈ ನಿರ್ದೇಶನಗಳನ್ನೂ ಮೀರಿ ಎದುರು ಬಿದ್ದವಳು ನೀಚಳೂ ಸಮಾಜ ವಿರೋಧಿಯೂ ಎನಿಸುತ್ತಾಳೆಂದೂ, ಇವಕ್ಕೆ ತಲೆಬಾಗಿ ನಡೆಯುವವಳಿಗೆ ಮಾತ್ರವೇ ಸಾಮಾಜಿಕ ಮನ್ನಣೆ ದೊರೆಯುತ್ತದೆಂದೂ ಬೆದರಿಕೆಯನ್ನು ಹಾಕುತ್ತದೆ. ಇವೆಲ್ಲವನ್ನೂ ಅಭಿವ್ಯಕ್ತಿಸುವ ಗಾದೆ, ನುಡಿಗಟ್ಟು, ಬೈಗುಳಗಳು ಯಾವ ಪ್ರಮಾಣದ ಅಶ್ಲೀಲತೆಗೂ ಹೇಸದ ಭಾಷಾ ರೂಪಗಳನ್ನು ಪಡೆಯುತ್ತದೆ.

ಭಾಷೆಯ ಬಳಕೆಯ ವಿಧಾನದಲ್ಲೂ ಸಮಾಜವು ಹೆಣ್ಣು ಗಂಡುಗಳಿಗೆ ನೀಡಿರುವ ನಿರ್ದೇಶನಗಳ ಸ್ಪಷ್ಟ ಕುರುಹುಗಳಿವೆ. ಗಂಡಸಿಗೆ ವಿಶೇಷ ಸವಲತ್ತುಗಳನ್ನೂ, ಹೆಂಗಸಿಗೆ ಅನೇಕ ನಿಬಂಧನೆಗಳನ್ನೂ ಸಮಾಜವು ವಿಧಿಸುತ್ತದೆ. ಉದಾಹರಣೆಗೆ ಏರುಧ್ವನಿ, ಅಶ್ಲೀಲ ವಸ್ತು ಹಾಗೂ ಪದಗಳ ಬಳಕೆ, ಅನುನಯವಿಲ್ಲದ ಮಾತುಗಾರಿಕೆಗಳು ಹೆಣ್ಣಿನ ಭಾಷೆಯ ದೋಷಗಳೆನ್ನಿಸದರೆ, ಇವೇ ಗಂಡಿನ ಭಾಷೆಯ ಗುಣಾತ್ಮಕ ಅಂಶಗಳೆನಿಸುತ್ತವೆ.

ಭಾಷೆಯು ಈಗ ಬಳಕೆಯಾಗುತ್ತಿರುವ ಆಕಾರವನ್ನು ಪಡೆಯಲು ಮಾನವ ಚರಿತ್ರೆಯಲ್ಲಿ ಕಾರಣಗಳಿವೆ. ಪುರುಷನು ಮಹಿಳೆಯ ಮೇಲೆ ಸಾಧಿಸಿದ ಆಕ್ರಮಣದ ಕುರುಹುಗಳನ್ನು ಅವನೇ ನಿರ್ಮಿಸಿ ಬಳಕೆಗೆ ತಂದ ಭಾಷೆಯಲ್ಲಿ ಕಾಣುವುದು ಸಾಧ್ಯ. ಪುರುಷನು ಮಹಿಳೆಗೆ ಮಾತನಾಡುವ ಹಕ್ಕನ್ನೇ ನಿರಾಕರಿಸಿದ ಘಟ್ಟವೂ ಇದೆ. ಈಗೀಗಷ್ಟೇ ನಿಧಾನವಾಗಿ ಭಾಷೆಯಲ್ಲಿ ತನ್ನ ಸಂವಹನಾ ಸಾಮರ್ಥ್ಯವನ್ನು ಕಂಡುಕೊಳ್ಳಲು ತೊಡಗಿರುವ ಹೆಣ್ಣಿಗೆ ತನ್ನದೇ ಭಾಷೆಯೊಂದನ್ನು ರೂಪಿಸಿಕೊಳ್ಳಬೇಕಾದ ಅಗತ್ಯ ಇನ್ನೂ ಸಾಧಿತವಾಗಿಲ್ಲ. ಪುರುಷ ನಿರ್ಮಿತ ಭಾಷೆಯನ್ನೇ ತನ್ನದೆಂದು ಭ್ರಮಿಸಿ ಬಳಸತೊಡಗಿ, ತನ್ನೊಳಗಿನದನ್ನು ಸರಿಯಾಗಿ ಸಂವಹನ ಮಾಡಲು ಸಾಧ್ಯವಾಗದೆ ತೊಳಲುತ್ತಿದ್ದಾಳೆ. ಇದರ ಒಂದು ಸೂಚನೆಯನ್ನು ನಮ್ಮ ಮಹಿಳಾ ಸಾಹಿತ್ಯದಲ್ಲಿ ಕಾಣಬಹುದು. ಸಾಹಿತ್ಯದ ಕೆಲವೇ ಪ್ರಕಾರಗಳಿಗೆ ಅವಳ ಸೃಜನ ಸಾಮರ್ಥ್ಯ ಮಿತಿಗೊಂಡಿದೆ, ಕೆಲವು ಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯ ಸಾಧನೆ ಏನೇನೂ ಇಲ್ಲ. ಈ ಮಿತಿಯಾದ ಅವಳ ಪ್ರಯತ್ನವೂ ಗಂಡಸಿನ ಸಾಧನೆಗೆ ಸಮನಾಗಲು ಸಾಧ್ಯವೇ ಇಲ್ಲವೆಂಬಂಥದು ಎಂಬ ಅಭಿಪ್ರಾಯಗಳು ಧಾರಾಕಾರವಾಗಿ ಸುರಿದು ವಿಮರ್ಶೆಗಳು ಬರುತ್ತಿವೆ. ಈಗೀಗ ಈ ಅಭಿಪ್ರಾಯಗಳನ್ನು

ವಿಶ್ಲೇಷಿಸುವ ಪ್ರಯತ್ನಗಳು ಮೊದಲಾಗಿವೆ. ಸ್ತ್ರೀ ಹಾಗೂ ಪುರುಷರ ಸಾಹಿತ್ಯಗಳ ಮೌಲ್ಯಮಾಪನಗಳಲ್ಲಿ ಸೂಕ್ತ ಮಾನದಂಡಗಳು ಬಳಕೆಯಾಗುತ್ತಿಲ್ಲವೆಂಬ ಪ್ರತಿರೋಧವೂ ಬರುತ್ತಿದೆ. ಈ ಪ್ರತಿರೋಧದ ಹಿನ್ನೆಲೆಯಲ್ಲಿ ಸ್ತ್ರೀ ಪುರುಷರ ಸೃಜನಶೀಲ ಅಭಿವ್ಯಕ್ತಿಗಳಿಗೆ ಒದಗಿರುವ ಭಾಷೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕೆಂಬ ಒತ್ತಾಯವೇ ಇದೆ ಎಂಬುದು ಗಮನಾರ್ಹ.

ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಣಾಯಕವಾಗಿಸುವ ಪ್ರಮುಖ ಸಂಗತಿಗಳಿಗೂ ವಿವಾಹವೆಂಬ ಸಂಸ್ಥೆಗೂ ತುಂಬಾ ನಿಕಟವಾದ ಸಂಬಂಧವಿದೆ. ವಿವಾಹವು ಹೆಣ್ಣಿಗೆ ವಿಧಿಸಿರುವಷ್ಟು ನಿಬಂಧನೆಗಳನ್ನೂ, ನಿಷ್ಠುರ ನಿಯಮಗಳನ್ನೂ ಗಂಡಿಗೆ ವಿಧಿಸಿಲ್ಲ. ಅವನಿಗೆ ರಿಯಾಯಿತಿಗಳು ಅಸಂಖ್ಯವಾಗಿ ಲಭ್ಯವಾಗಿವೆಯಾದರೆ ಅವಳಿಗೆ ನಿಷೇಧಗಳನ್ನು ಹೇರಲಾಗಿದೆ. ಸಮಾಜವು ಹೆಣ್ಣು ಗಂಡುಗಳ ವೈವಾಹಿಕ ಸ್ಥಿತಿಯ ಬಗ್ಗೆ ತಾರತಮ್ಯಗಳನ್ನು ತೋರಿರುವ ಅಂಶ ವ್ಯಕ್ತಿಯ ಹೆಸರುಗಳನ್ನು ಹೇಳುವಾಗ ಆಗುವ ಭಾಷೆಯ ಬಳಕೆಯಲ್ಲಿ ಸ್ಪಷ್ಟವಾಗಿ ಸೂಚಿತವಾಗುತ್ತದೆ./ ಮದುವೆಯಾದ ಗಂಡ ಹೆಂಡತಿಯರ ಹೆಸರುಗಳನ್ನು ಹೇಳಬೇಕೆಂದರೆ ಶ್ರೀ ಮತ್ತು ಶ್ರೀಮತಿ ಎಂಬುದರೊಂದಿಗೆ ಗಂಡನ ಹೆಸರು ಹೇಳಿದರೆ ಸಾಕು. ಅವಳ ಹೆಸರನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರತ್ಯೇಕವಾಗಿ ಅವಳ ಹೆಸರನ್ನಷ್ಟೇ ಹೇಳಬೇಕಾದಾಗಲೂ ಅವಳು ಮದುವೆಯಾದವಳೇ ಇಲ್ಲವೇ ಎಂಬುದನ್ನು ಸೂಚಿಸಬೇಕು. ಕುಮಾರಿ / ಶ್ರೀಮತಿ ಇಂಥವರು ಎಂದು. ಇದು ಆಕೆಯ ವೈವಾಹಿಕ ಸ್ಥಿತಿಯನ್ನು ಮಾತ್ರ ಹೇಳುವುದಿಲ್ಲ. ಜೊತೆಗೆ ಟೀಕೆ ಟಿಪ್ಪಣಿಯನ್ನೂ ಸೇರಿಸುತ್ತದೆ. ಉದಾಹರಣೆಗೆ ಮದುವೆಯ ವಯಸ್ಸು ದಾಟಿದವಳಿಗೆ 'ಕುಮಾರಿ' ಎಂದು ಸೇರಿಸಿದಾಗ ನಗೆಪಾಟಲಿನ ವಿಷಯವೆನಿಸುತ್ತದೆ. ಕುಮಾರಿ ಜಯಲಲಿತ ಎಂದಾಗ ಉಕ್ಕುವ ಹಾಸ್ಯ ಕಳಂಕ ಸೂಚಕವಾದದ್ದು. ಆದರೆ ಗಂಡು ಹಾಗೆ ಅವಿವಾಹಿತನಾಗಿ ಉಳಿದುಬಿಟ್ಟಿದ್ದರೆ ಅದು ಕಳಂಕ ಸೂಚಕವೂ ಅಲ್ಲ, ಭಾಷೆಯಲ್ಲಿ ಆ ಸಂಗತಿ ದಾಖಲಾಗುವುದೂ ಇಲ್ಲ.

ಸಮಾಜದಲ್ಲಿ ಗಂಡಸಿಗೆ ಸಮಾನವಾದ ಹಕ್ಕನ್ನು ಪಡೆಯುವಲ್ಲಿ ಹೆಣ್ಣು ಹೊಸ ಎಚ್ಚರವನ್ನು ಪಡೆಯುತ್ತಿದ್ದಾಳೆ ಮತ್ತು ಆ ದಿಸೆಯಲ್ಲಿ ಕಾರ್ಯಪ್ರವೃತ್ತಳಾಗುತ್ತಿದ್ದಾಳೆ ಎಂಬ ಅಂಶವನ್ನು ಭಾಷೆಯಲ್ಲಿ ಹೊಸದಾಗಿ ಚಲಾವಣೆ ಪಡೆದುಕೊಳ್ಳುತ್ತಿರುವ ಪದಕೋಶವು ಸೂಚಿಸುತ್ತದೆ. ಆದರೆ ಈ ಪದಕೋಶವು ಸಮಾಜವು ಪರಿವರ್ತನೆಗೊಳ್ಳುತ್ತಿದೆ ಎಂಬುದರ ಸೂಚನೆಯೆಂದು ಭ್ರಮೆಗೆ ಒಳಗಾಗಬೇಕಾಗಿಲ್ಲ. ಸ್ತ್ರೀವಾದಿ ಚಿಂತನೆಯು ವ್ಯಕ್ತಪಡಿಸಿರುವ ಆಶಯ ಮಾತ್ರ ಎಂದು ಭಾವಿಸಿ ಇದನ್ನು ನೋಡಬೇಕು. ವಾಕ್ಯ ರಚನೆಯಲ್ಲಿ ಕರ್ತೃಪದದ ಲಿಂಗ ನಿಶ್ಚಿತವಿಲ್ಲದಾಗ ಬಳಸಬೇಕಾದ ಪದ ಸ್ವರೂಪದ ಬಗೆಗೆ ಈ ಚಿಂತನೆಗಳು ಹೊಸ ನಿಲುವುಗಳನ್ನು ತಳೆದಿವೆ ಎಂಬುದರ ಸೂಚಕವಾಗಿ ಈವರೆಗೆ ಚಾಲ್ತಿಯಲ್ಲಿದ್ದ ಕೇವಲ ಪುರುಷಸೂಚಿ ಪದಗಳಿಗೆ ಬದಲು ವ್ಯಕ್ತಿಸೂಚಿ ಪದಗಳು ಚಾಲ್ತಿಗೆ

ಬಂದಿವೆ. ಉದಾಹರಣೆಗೆ ಇಂಗ್ಲಿಶ್‌ನ Chair person, post carrier ಎಂಬಂಥವು. ಕೆಲವು ವಿಶಿಷ್ಟ ಸಾಮಾಜಿಕ ಸಂದರ್ಭ ಸೂಚಕಗಳಾಗಿ ಸ್ತ್ರೀ ಚಳುವಳಿ, ಸ್ತ್ರೀ ವಿಮೋಚನೆ, ಸ್ತ್ರೀ ಸಮಾನತೆ, ವಿಧವಾ ವಿವಾಹ ಇತ್ಯಾದಿ ಪದಗಳು ಭಾಷೆಯ ಪದಕೋಶದಲ್ಲಿ ಹೊಸದಾಗಿ ಸ್ಥಾನವನ್ನು ಪಡೆದುಕೊಂಡಿವೆ. ಭಾಷೆಯಲ್ಲಿನ ಈ ಬೆಳವಣಿಗೆಯನ್ನು ಕುರಿತೇ ದೀರ್ಘವಾಗಿ ಪ್ರತ್ಯೇಕ ಅಧ್ಯಯನವನ್ನು ನಡೆಸಬಹುದಾಗಿದೆ.

ಭಾಷಿಕ ರಚನೆಯಲ್ಲೇ ಇರುವ ನಿಯಮಗಳು ಹಾಗೂ ರೂಢಿಗಳು ಹೆಣ್ಣು ಹಾಗೂ ಗಂಡಿನ ಸಂದರ್ಭಗಳಲ್ಲಿ ತೋರುವ ವಿಕಲ್ಪಗಳ ಬಗೆಗಳನ್ನು ಗಮನಿಸಬಹುದು.

(ಅ) ಭಾಷೆಯು ಪುರುಷನಿಂದ ನಿರ್ಮಿತವಾಗಿ, ಅವನ ಮೇಲ್ಮೆಯನ್ನು ತೋರುವ ಮತ್ತು ಸ್ತ್ರೀಯನ್ನು ಯಾವುದೇ ಲೆಕ್ಕಕ್ಕೂ ಇಡದಿರುವ ಸೂಚಕವಾಗಿದೆ ಎಂಬುದನ್ನು ಕಾಣಲು ನೆರವಾಗುವ ವಾಕ್ಯರಚನಾ ನಿಯಮವೊಂದನ್ನು ನೋಡಿ :

ಯಾವುದೇ ಸಂದರ್ಭದ ಒಂದು ವಿವರಣೆ ಪುರುಷನಿಗೆ ಅನ್ವಯವಾಗುವಂತೆ ಮಾತ್ರ ವಾಕ್ಯದಲ್ಲಿರುತ್ತದೆ. ವಿಶೇಷ ಅಗತ್ಯದಲ್ಲಿ ಮಾತ್ರ ವಿವರಣೆಯ ನಂತರದ ವಿಸ್ತರಣೆಯಾಗಿ ಸ್ತ್ರೀಯ ಪ್ರಸ್ತಾಪ ಬರುತ್ತದೆ.

ಉದಾಹರಣೆಗೆ - ಮಾನವ ಪ್ರಗತಿ ಪಥದಲ್ಲಿದ್ದಾನೆ
ಮಗು ಬೆಳೆಯುತ್ತಾನೆ.
ವಿಜ್ಞಾನಿ ಸಂಶೋಧಿಸುತ್ತಾನೆ.
ಈಜುಗಾರನ ಸಾಮರ್ಥ್ಯ
ಸಂಗೀತಗಾರನ ಲಹರಿ
ಸಾಹಿತಿಯಾದವನ ನಿಲುವು
ರೋಗಿಷ್ಠನಾದ ವ್ಯಕ್ತಿ ...... ಇತ್ಯಾದಿ.

ಇಲ್ಲಿನ ಕರ್ತೃಪದಗಳು ಪುರುಷ ಸೂಚಿಗಳೇ ಎಂಬುದಕ್ಕೆ ಆ ಸಂದರ್ಭಗಳು ಕಾರಣಗಳನ್ನೊದಗಿಸಿಲ್ಲ. ಆದರೆ 'ಪುರುಷನು ಮಾತ್ರವೇ ಗಣನೆಗೆ ಬರುವವನು' ಎಂಬ ಸಾಮಾಜಿಕ ಚಿಂತನೆಗೆ ಈ ನಿಯಮ ದ್ಯೋತಕವಾಗಿದೆಯಷ್ಟೆ. 'ಆ ಮಹತ್ವದ ಸಭೆಯಲ್ಲಿ ಮಹಿಳೆಯರೂ ಉಪಸ್ಥಿತರಿದ್ದರು', 'ಸತ್ತವರ ಪೈಕಿ ಐವರು ಮಹಿಳೆಯರೂ ಸೇರಿದ್ದಾರೆ' ಎಂಬಂತಹ ವಾಕ್ಯಗಳು ವಿವರಣೆಯ ವಿಸ್ತರಣೆಯಾಗಿ ಮಹಿಳೆಯನ್ನು ಒಳಗೊಳ್ಳುತ್ತವೆ.

(ಆ) ಇಂತಿಂಥಾ ವೃತ್ತಿ, ಕಸಬುಗಳಲ್ಲಿ ಹೆಂಗಸರು, ಗಂಡಸರು ಪ್ರವೃತ್ತರಾಗುವುದೇ ಸಹಜ ಎಂಬುದು ಸಮಾಜದಲ್ಲಿ ಗೃಹೀತವಾಗಿದೆ. ಭಾಷೆಯಲ್ಲಿ ಆಯಾ ವೃತ್ತಿನಿರತ ವ್ಯಕ್ತಿಯನ್ನು ಸೂಚಿಸುವ ಲಿಂಗಸೂಚಿ ಪದಗಳಿಗೆ ಪರ್ಯಾಯ ಲಿಂಗಸೂಚಿ ಪದಗಳಿಲ್ಲ

ಎಂಬುದು ಈ ಗ್ರಹಿಕೆಯ ಸೂಚಕವಾಗಿದೆ. ಉದಾಹರಣೆಗೆ ಡಾಕ್ಟರ್, ಡ್ರೈವರ್, ಪೋಸ್ಟ್‌ಮ್ಯಾನ್, ಕಂಡಕ್ಟರ್, ರೈತ, ಅಕ್ಕಸಾಲಿಗ, ವೀರ, ಯೋಧ, ಸೈನಿಕ -ಇಂತಹವು ಯಾವಾಗಲೂ ಪುಲ್ಲಿಂಗ ಸೂಚಿಗಳೇ ಆದರೆ, ಟೀಚರ್, ನರ್ಸ್, ಸೂಳೆ, ದೇವದಾಸಿ ಎಂಬಂತಹವು ಸದಾ ಸ್ತ್ರೀಲಿಂಗಗಳು.

ವೃತ್ತಿ ಕಸಬುಗಳಿಗೆ ಸಂಬಂಧಿಸಿದಂತೆ ಕೆಲವು ಸಾಮಾಜಿಕ ಪರಿವರ್ತನೆಗಳಾಗುತ್ತಿವೆ ಎಂಬುದರ ಸೂಚಕವಾಗಿ ಲೇಡಿ, ವುಮನ್, ಮೇಲ್, ಸ್ತ್ರೀ, ಮಹಿಳಾ ಎಂದು ವಿವರಗಳನ್ನು ಹಚ್ಚಲಾಗುತ್ತಿದೆ. ಅಥವಾ ಮಂತ್ರಿಣಿ, ಅಧ್ಯಕ್ಷೆ, ಸರದಾರಿಣಿ ಎಂಬಂತಹ ಹೊಸ ರೂಪಗಳನ್ನು ಸೃಷ್ಟಿಸಲಾಗುತ್ತಿದೆ. ಕೆಲವೊಮ್ಮೆ ಪುರುಷ ಲಿಂಗ ಸೂಚಕ ಪದಗಳನ್ನು ಇಡಿಯಾಗಿಯೇ ಬದಲಿಸಿ ವ್ಯಕ್ತಿ ಸೂಚಕ ಪದಗಳನ್ನು ಚಲಾವಣೆಗೆ ತರಲು ಪ್ರಯತ್ನಿಸಲಾಗುತ್ತಿದೆ. Chair person ನಂತಹವು. ಇವು ಸಾಮಾಜಿಕ ಪರಿವರ್ತನೆಗಳ ಸೂಚಕಗಳಾಗಿರದೆ, ಸಾಮಾಜಿಕ ಚಿಂತನೆಗಳ ಆಶಯಗಳು ಮಾತ್ರವೇ ಆಗಿವೆ ಎಂಬುದರ ಸೂಚನೆ. ಎಂದರೆ ಯಾವ ಭಾಷಿಕ ಸಮುದಾಯಗಳಲ್ಲಿ ಈ ಸಂಬಂಧದ ಚಿಂತನೆಗಳು ತೀವ್ರವಾಗಿ ಪ್ರತಿಪಾದಿತವಾಗುತ್ತಿವೆಯೋ ಆ ಭಾಷೆಗಳಲ್ಲಿ ಇವುಗಳ ನಿದರ್ಶನಗಳು ದೊರಕುತ್ತವೆ. ಬೇರೆ ಭಾಷೆಗಳಲ್ಲಿ ಚಿಂತನೆಗಳು ಪ್ರವೇಶಪಡೆದಂತೆ ನಿದರ್ಶನಗಳು ದೊರಕಲಾರಂಭವಾಗಬಹುದು.

(ಇ) ಪರಸ್ಪರ ಸಂಬೋಧನೆಗಳಲ್ಲಿ ಹಾಗೂ ಸ್ತ್ರೀ ಅಥವಾ ಪುರುಷರ ಬಗೆಗಿನ ಮಾತುಗಳಲ್ಲಿ 'ವಚನ' ಪ್ರಯೋಗವನ್ನು ಗಮನಿಸಿ. ಪುರುಷನು ತನ್ನ ಹೆಂಡತಿ, ತಾಯಿ, ಸೊಸೆ, ಮಗಳು-ಯಾರನ್ನೇ ಆದರೂ ವಯಸ್ಸಿನ ಅಂತರದ ಪರಿವೆಗೆ ಒಳಗಾಗದೆ ಏಕವಚನದಲ್ಲಿ ಸಂಬೋಧಿಸಬಹುದು. ಆದರೆ ಮಹಿಳೆ ಮಾತ್ರ ಗಂಡ, ತಂದೆ, ಮಾವ, ಅಳಿಯ-ಎಲ್ಲರನ್ನೂ ವಯಸ್ಸಿನ ಕಾರಣವಲ್ಲದೆಯೂ ಬಹುವಚನದಲ್ಲೇ ಸಂಬೋಧಿಸುತ್ತಾಳೆ. 'ನನ್ನ ಹೆಂಡತಿ' ಎಂದು ಪುರುಷನು ಹೇಳುವಷ್ಟು ನಿರಾಳವಾಗಿ ಹೆಂಗಸು 'ನನ್ನ ಗಂಡ' ಎಂದು ಹೇಳಿದರೆ ಅದು ಅಸಹಜ, ಅಸಾಧು ಎನಿಸಿಬಿಡುತ್ತದೆ. ಆಕೆ 'ನಮ್ಮ ಯಜಮಾನರು' ಎನ್ನಬೇಕು. ಗಂಡಸು ಹೀಗೊಮ್ಮೆ 'ನಮ್ಮ ಯಜಮಾನಿತಿ' ಎಂದರೂ ಅದು ಹಾಸ್ಯ ಅಥವಾ ಲಘುವಾದ ಸಂದರ್ಭಗಳಿಗೆ ಮಾತ್ರ ಅನ್ವಯವಾಗುವಂಥದು.

(ಈ) ಲಿಂಗ ಸೂಚಕ ಪದಗಳಲ್ಲಿ ಮೊದಲಿಗೆ ಪುಲ್ಲಿಂಗ ಸೂಚಕವು ಸೃಷ್ಟಿಯಾಗುತ್ತದೆ. ಆ ನಂತರದಲ್ಲಿ ಆ ಪದಕ್ಕೆ ಧ್ವನಿಮಾವೊಂದನ್ನು ಹಚ್ಚುವ ಮೂಲಕ ಅದರ ಸ್ತ್ರೀಲಿಂಗ ರೂಪವನ್ನು ಪಡೆಯಲಾಗುತ್ತದೆ ಎಂದು ಭಾಷಾಶಾಸ್ತ್ರಜ್ಞರು ತಮ್ಮ ಕೆಲವು ಅಧ್ಯಯನಗಳಿಂದ ತೀರ್ಮಾನಿಸಿದ್ದರು. ಬಹುತೇಕ ಭಾಷೆಗಳಿಗೆ ಅನ್ವಯಿಸಿ ಈ ಮಾತು ನಿಜವಾದರೂ ಪ್ರಪಂಚದ ಎಷ್ಟೋ ಭಾಷೆಗಳಿಗೆ ಇದು ಹೊಂದಿಕೆಯಾಗುವುದಿಲ್ಲವೆಂಬ ಕಾರಣಕ್ಕಾಗಿ ಈ ಸಂಶೋಧನಾ ತೀರ್ಮಾನವನ್ನು ವಿವಾದಾಸ್ಪದವೆಂದು ಪರಿಗಣಿಸುತ್ತಾರೆ.

ಆದರೂ ಕನ್ನಡಕ್ಕೆ ಇದು ಬಹುಮಟ್ಟಿಗೆ ಅನ್ವಯುವಾಗುತ್ತದೆಂಬುದನ್ನು ಹಲವು ಉದಾಹರಣೆಗಳಲ್ಲಿ ನೋಡಬಹುದು. ಓಟಗಾರ-ಓಟಗಾರ್ತಿ, ಹಾಡುಗಾರ-ಹಾಡುಗಾರ್ತಿ, ಹೂವಾಡಿಗ-ಹೂವಾಡಗಿತ್ತಿ, ಗಟ್ಟಿಗ-ಗಟ್ಟಿಗಿತ್ತಿ ಇತ್ಯಾದಿ.

ಮೇಲಿನ ಕೆಲವು ಮಾದರಿಗಳು ಭಾಷೆಯ ಬಳಕೆಯ ಸಂದರ್ಭದಲ್ಲಿ ಸಮಾಜವು ವ್ಯಕ್ತಗೊಳಿಸುವ ಸ್ತ್ರೀ ಪುರುಷರ ಬಗೆಗಿನ ಪರ ವಿರೋಧ ದೃಷ್ಟಿಕೋನಗಳ ಮತ್ತು ಅಭಿಪ್ರಾಯಗಳ ಸೂಚಕಗಳಾಗಿವೆ. ಇನ್ನು ಮುಂದೆ ಸಮಾಜದ ಈ ದೃಷ್ಟಿಕೋನ ಹಾಗೂ ಅಭಿಪ್ರಾಯಗಳನ್ನು ಆ ಸಮಾಜದ ಸ್ತ್ರೀ ಪುರುಷರು ಒಪ್ಪಿರುವ, ವಿರೋಧಿಸಿರುವ, ನಿರಾಕರಿಸಿರುವ ಅಂಶಗಳಿಗೆ ಸೂಚನೆಗಳು ಭಾಷೆಯಲ್ಲಿ ದೊರಕಬಹುದೇ ಎಂಬುದಕ್ಕೆ ಕೆಲವು ಮಾದರಿಗಳನ್ನು ಅಧ್ಯಯನ ಮಾಡಬಹುದು. ಇದಕ್ಕಾಗಿ ಸ್ತ್ರೀ ಪುರುಷರು ಭಾಷೆಯ ಬಳಕೆಯಲ್ಲಿ ಪದಕೋಶದ ಆಯ್ಕೆ, ವಾಕ್ಯರಚನಾ ವಿಧಾನ ಮುಂತಾದವನ್ನು ನಿರ್ವಹಿಸುವ ಬಗೆಯನ್ನು ಪರಿಶೀಲಿಸಬಹುದು. ಅಲ್ಲದೆ ಅವರ ಧ್ವನಿಯ ಏರಿಳಿತ, ಸಂಭಾಷಣೆಯ ಅಂಗವಾಗಿ ತೋರುವ ಹಾವಭಾವಗಳು ಇವುಗಳು ಕೂಡ ಪೂರಕ ಸೂಚನೆಗಳನ್ನು ನೀಡಬಲ್ಲವು. ಈ ಅಧ್ಯಯನವು ನಮ್ಮ ಸಮಾಜವು ಹೆಣ್ಣನ್ನು ತಾನು ಕೀಳಾಗಿ ಕಾಣುವುದಷ್ಟೇ ಅಲ್ಲದೆ ಸ್ವತಃ ಅವಳೂ ಕೂಡ ಕೀಳರಿಮೆಗೆ ಪಕ್ಕಾಗುವಂತೆ ಮಾಡಿಟ್ಟಿದೆ ಎಂಬುದನ್ನು ತೋರಿಸುತ್ತದೆ. ತಮ್ಮ ಮಾತುಕತೆಗಳಲ್ಲಿ ಸ್ತ್ರೀ ಪುರುಷರು ಮಾಡುವ ಪದಗಳ ಆಯ್ಕೆ, ಸಂಭಾಷಣೆಯ ವಿಧಾನ, ವಸ್ತುವಿನ ಆಯ್ಕೆ, ವಾಕ್ಯರಚನಾ ವಿಧಾನವೇ ಮೊದಲಾಗಿ ಎಲ್ಲ ವಿವರಗಳಲ್ಲೂ ಈ ಸಂಗತಿ ಸ್ಪಷ್ಟಗೊಳ್ಳುತ್ತದೆ.

ಸಂಭಾಷಣೆಯು ಹೆಣ್ಣು-ಹೆಣ್ಣು, ಗಂಡು-ಗಂಡು, ಅಥವಾ ಹೆಣ್ಣು-ಗಂಡುಗಳಲ್ಲಿ ನಡೆಯುವಾಗ ಬೇರೆ ಬೇರೆ ಸ್ವಭಾವಗಳನ್ನೇ ತೋರುತ್ತದೆ. ವ್ಯಕ್ತಿ ವ್ಯಕ್ತಿಗಳಲ್ಲಿ ಅಥವಾ ಸಮೂಹಗಳಲ್ಲಿ ನಡೆಯುವ ಸಂಭಾಷಣೆಗಳೂ ವಿಶಿಷ್ಟ ಲಕ್ಷಣಗಳನ್ನು ಪಡೆಯುತ್ತವೆ. ಈ ಅಧ್ಯಯನವನ್ನು ಜಾತಿ, ವರ್ಗ, ಶಿಕ್ಷಣ ಮುಂತಾದವುಗಳಿಗೆ ಅನ್ವಯಿಸಿಯೂ ನಡೆಸಬಹುದು. ಇಲ್ಲಿ ಸ್ತ್ರೀ-ಪುರುಷ ತಾರತಮ್ಯಗಳಿಗೆ ಅನ್ವಯಿಸಿ ಕೆಲವು ನಿದರ್ಶನಗಳನ್ನು ಗಮನಿಸೋಣ.

೧. ಮಾತು ಮಾತಿನ ಮುಂದುವರಿಕೆ : ಮಾತು ಪರಸ್ಪರದಲ್ಲಿ ಹೇಗೆ ಬೆಳವಣಿಗೆಯನ್ನು ಪಡೆಯುತ್ತದೆನ್ನುವುದು ಆ ಮಾತಿನಲ್ಲಿ ತೊಡಗಿರುವವರು ಪರಸ್ಪರ ಸ್ಪಂದಿಸುವ ವಿಧಾನವನ್ನು ಅವಲಂಬಿಸಿರುತ್ತದೆ. ಸಂವಹನವೇ ಮುಖ್ಯವಾದಾಗ ಈ ಸ್ಪಂದನವು ಸಹಜವಾಗಿಯೂ ಸುಲಲಿತವಾಗಿಯೂ ಇರುತ್ತದೆ. ಇಲ್ಲಿನ ಯಾರೂ ಕೂಡ ತನ್ನದು ಮೇಲುಗೈಯಾಗಬೇಕು, ತನ್ನ ನಿಯಂತ್ರಣದಲ್ಲಿರಬೇಕು ಎಂಬ ಪ್ರಯತ್ನ ಆ ಮಾತುಕತೆಯಲ್ಲಿ ಮಾಡುತ್ತಿರುವುದಿಲ್ಲ. ಬದಲಿಗೆ ಮಾತಿನ ಮಧ್ಯೆ ಬಾಯಿ ಹಾಕುವುದು, ತನ್ನಿಚ್ಛೆಯಂತೆ ಮಾತು ಬೆಳೆಯಬೇಕೆಂದು ಹವಣಿಸುವುದು, ಎದುರಿನವರ ಮಾತಿಗೆ ತಡೆ

ಹಾಕುವುದು, ಅವರ ಮಾತು ನಿರುಪಯುಕ್ತ ಎಂದು ಸೂಚಿಸಲು ಊಗುಡುವುದನ್ನೂ ನಿಲ್ಲಿಸಿಬಿಡುವುದು-ಇಂತಹ ವರ್ತನೆಗಳು ಮೇಲುಗೈ ಸಾಧನೆ ಹಾಗೂ ನಿಯಂತ್ರಣದ ಸಾಧನೆಯ ಸೂಚಕಗಳು. ಸೂಕ್ತವಾಗಿ ಊಗುಡುವುದು, ಪೂರಕವಾಗಿ ಮಾತನ್ನು ಅಲ್ಲಿ ಇಲ್ಲಿ ಬೆರೆಸುವುದು-ಇಂಥವು ಸಂಭಾಷಣೆಯು ಸಹಜವಾಗಿ ಮುಂದುವರೆಯಲು ನೆರವಾಗುವ ವರ್ತನೆಗಳು.

ಹೆಣ್ಣು-ಹೆಣ್ಣುಗಳ ಸಂಭಾಷಣೆಯಲ್ಲಿ ಸಂಭಾಷಣೆಯ ಸಹಜ ನಿಯಮವು ಜಾರಿಯಲ್ಲಿರುತ್ತದಾದರೆ, ಗಂಡು-ಗಂಡುಗಳ ಸಂಭಾಷಣೆಯಲ್ಲಿ ಕೂಡ ಇತರ ಸಂಗತಿಗಳ ಸಮಾನತೆಯನ್ನವಲಂಬಿಸಿ, ಹೆಚ್ಚೂ ಕಡಿಮೆ ಈ ನಿಯಮದ ಪಾಲನೆ ನಡೆಯುತ್ತದೆ. ಆದರೆ ಹೆಣ್ಣು-ಗಂಡುಗಳ ಸಂಭಾಷಣೆಯಲ್ಲಿ ಮಾತ್ರ ಗಂಡು ಮಾತಿನ ನಡುವೆ ತಡೆಗಳನ್ನೊಡ್ಡುತ್ತಲೇ ಇರುತ್ತಾನೆ. ಈ ಮೂಲಕ ಮಾತನಾಡುವ ಅವಳ ಹಕ್ಕನ್ನು, ಕೊನೆಗೆ ಹೇಳ ಹೊರಟ ಮಾತನ್ನು ಮುಗಿಸುವ ಹಕ್ಕನ್ನು ಮೊಟಕುಗೊಳಿಸುವ ಹುನ್ನಾರವನ್ನು ನಡೆಸುತ್ತಾನೆ. ಅಥವಾ ಅವಳು ಮಾತನಾಡುತ್ತಲೇ ಇದ್ದರೂ ಅವಳ ಮಾತು ಕೇವಲ ನಿರುಪಯುಕ್ತ ಎಂಬುದನ್ನು ಸೂಚಿಸುವಂತ ಸಂಭಾಷಣೆಯ ಸಹಜ ನಿಯಮವಾದ ಊಗುಡುವಿಕೆಯನ್ನು ನಿಲ್ಲಿಸಿ ಬಿಡುತ್ತಾನೆ. ಎತ್ತಲೋ ನೋಡುತ್ತಾ ನಿರ್ಲಕ್ಷ್ಯದಲ್ಲಿ ಪೇಪರನ್ನು ಮುಖಕ್ಕೆ ಹಿಡಿದೋ ಅಥವಾ ಇನ್ನೆಂಥದೋ ಅರ್ಥಹೀನ ಕೆಲಸದ ಕಡೆ ಗಮನ ಹರಿಸಿಯೋ ಅವಳು ಮಾತನಾಡುವಷ್ಟು ಹೊತ್ತೂ ತಿರುಗಿದ್ದು, ನಂತರ ನಿಧಾನವಾಗಿ 'ಮುಗಿಯಿತೋ' ಎಂಬ ವ್ಯಂಗ್ಯವನ್ನು ಸೂಚಿಸಬಹುದು. ಇದೆಲ್ಲವೂ ಅವಳ ಬಾಯಿ ಮುಚ್ಚಿಸುವ ಹುನ್ನಾರಗಳೇ. ಆದರೆ ಹೆಣ್ಣು ಮಾತ್ರ ಇದರ ತದ್ವಿರುದ್ಧವಾಗಿ ನಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ. ಬೇಕಾದ ಬೇಡದ ಯಾವುದೇ ಮಾತನ್ನು ಅವನು ಆಡುತ್ತಿದ್ದರೂ ಗಮನವಿಟ್ಟು ಕೇಳಬೇಕು. ಮಧ್ಯೆ ಬಾಯಿ ಹಾಕಲು ಪ್ರಯತ್ನಿಸದೆ ಹೂಂಗುಡುತ್ತಾ ಅವನ ಮಾತು ನಿರಂತರವಾಗಿ ಸಾಗಲು ನೆರವಾಗಬೇಕು. ಇನ್ನೂ ಮುಂದುವರೆದು ಮೂರ್ಖತನದ ಪ್ರಶ್ನೆಗಳನ್ನೂ, ಅದೇ ಮುಖಭಾವವನ್ನೂ ಪ್ರದರ್ಶಿಸುತ್ತಾ ಇದ್ದರೆ ಇನ್ನೂ ಒಳ್ಳೆಯದು.

೨. ಗಂಡು, ಹೆಣ್ಣುಗಳು ತಮ್ಮ ಮಾತುಕತೆಗಳಿಗೆ ಆಯ್ಕೆ ಮಾಡುವ ವಿಷಯಗಳನ್ನೇ ಮಹತ್ವ, ಉಪಯುಕ್ತ ಅಥವಾ ಅಮುಖ್ಯ, ನಿರುಪಯುಕ್ತ ಎಂದು ವಿಂಗಡಿಸಿ ಬಿಡಲಾಗಿದೆ. ಹೆಂಗಸರು ಆಯ್ದುಕೊಳ್ಳುವ ಅಡಿಗೆ, ಮನೆ, ಮಕ್ಕಳು, ಸಂಬಂಧಗಳು-ಎಂಬಂತಹ ಸಂಗತಿಗಳಿಂದಾಗಿ ಅವರ ಸಂಭಾಷಣೆಗಳು ನಿರುಪಯುಕ್ತ ಹರಟೆಗಳೆಂಬ ಹಣೆಪಟ್ಟಿಯನ್ನು ಕಟ್ಟಿಕೊಳ್ಳುತ್ತವೆ. ಇವೆಲ್ಲವೂ ಜೀವನದ ಅತ್ಯಗತ್ಯ ವಿಷಯಗಳೇ ಹೌದಾದರೂ ಮಾತುಕತೆಯ ವಸ್ತುಗಳಾಗಿಬಿಟ್ಟರೆ ವ್ಯಂಗ್ಯ ವಿಡಂಬನೆಗಳಿಗೆ ಪಕ್ಕಾಗಿ ಬಿಡುತ್ತವೆ. ಆದರೆ ಪುರುಷರು ರಾಜಕೀಯ, ಕ್ರೀಡೆಗಳು, ವ್ಯಾಪಾರ ವ್ಯವಹಾರ-ಇತ್ಯಾದಿಗಳನ್ನು ಕುರಿತು

ನಡೆಸುವ ಮಾತುಕತೆಗಳು ಗಂಭೀರ ಹಾಗೂ ಉಪಯುಕ್ತ ಚಟುವಟಿಕೆಗಳೆನಿಸುತ್ತವೆ. ಇವುಗಳಲ್ಲಿ ನೇರವಾಗಿ ಜೀವನಕ್ಕೆ ಉಪಯುಕ್ತವಾಗದೆ ಹೋಗುವ ಸಂಗತಿಗಳು ಎಷ್ಟೋ ಸೇರಿದ್ದರೂ ಅವು ಪುರುಷನ ಸಾಮರ್ಥ್ಯದ ದ್ಯೋತಕಗಳೆನಿಸಿ ಮನ್ನಣೆಯನ್ನು ಗಳಿಸುತ್ತವೆ.

ಈಚೆಗಿನ ಚಿಂತನೆಗಳ ಫಲವಾಗಿ ಮಹಿಳೆಯು ಸಮಾನತೆಯನ್ನು ಸಾಧಿಸಲು ಯತ್ನಿಸುತ್ತಾ, ಗಂಡನ್ನು ಅನುಕರಿಸಲು ಹೊರಟು, ಅವನ ಆಯ್ಕೆಯ ವಿಷಯಗಳನ್ನೇ ತನ್ನದೆಂದು ಭ್ರಮಿಸಿದಾಗ ಗೊಂದಲಗಳಿಗೆ ಒಳಗಾಗಿ ಸೂಕ್ತ ಸಂವಹನಾ ಸಾಮರ್ಥ್ಯವನ್ನೇ ದಕ್ಕಿಸಿಕೊಳ್ಳಲಾಗದೆ ತೊಳಲುವುದನ್ನು ಗಮನಿಸಿದಾಗ, ಸಮಸ್ಯೆಯ ಮೂಲವೆಲ್ಲಿದೆ ಎಂಬುದನ್ನು ಗ್ರಹಿಸಲು ವಿಫಲರಾದ ಇಂಥಾ ಮಹಿಳೆಯರ ಸ್ಥಿತಿ ಅರ್ಥವಾಗುತ್ತದೆ.

೩. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಅವಕಾಶಗಳಿಲ್ಲ ಎಂಬ ಸಾಮಾಜಿಕ ನಿರ್ದೇಶನ ಅಲ್ಲಿನ ಭಾಷೆಯಲ್ಲಿ ಆಕಾರ ತಳೆದಿರುತ್ತದೆ. ಹೆಣ್ಣಿನ ಮಾತಿನ ಧಾಟಿಯನ್ನು, ಗಂಡಿನ ಮಾತಿನ ಧಾಟಿಯನ್ನು ಗಮನಿಸಿ. ಉದಾಹರಣೆಗೆ ಹೆಂಗಸರು ಹೇಳಿಕೆಯೊಂದನ್ನು ನೀಡಿದ ಮೇಲೆ, ಅದರ ಹಿಂದೆಯೇ ಅಲ್ಲವಾ, ಹೌದಲ್ಲವಾ ಎಂಬ ಪ್ರಶ್ನೆಗಳನ್ನು ಸೇರಿಸುತ್ತಾರೆ. ತಮ್ಮ ಹೇಳಿಕೆಯ ಸಮರ್ಥನೆಯನ್ನು ಎದುರಿನವರ ಮಾತಿನಲ್ಲಿ ನಿರೀಕ್ಷಿಸುತ್ತಾರೆ. ಹಾಗೆಯೇ ಅದೇ ಮತ್ತೆ ನಾನೂ ಹಾಗೆಯೇ ಅಂದುಕೊಂಡಿದ್ದೆ ಎಂಬಂತಹ ಪ್ರತಿಕ್ರಿಯೆಗಳಲ್ಲಿ ಹಿಂಜರಿಕೆಯೇ ಪ್ರಧಾನವಾದ ಮಂಡನೆಯನ್ನು ಗುರುತಿಸಬಹುದು. ಈ ಮಾದರಿಗಳು ಗಂಡಸಿನ ಮಾತಿನಲ್ಲಿ ಬಂದರೆ ಅವು ಅನಿಶ್ಚಿತತೆಯ ಸಂದರ್ಭಗಳಲ್ಲಿ ಮಾತ್ರ ಬರುತ್ತವೆ. ಸಮರ್ಥನೆಯನ್ನು ನಿರೀಕ್ಷಿಸುವ ಅಥವಾ ಹಿಂಜರಿಕೆಯ ಕಾರಣಗಳು ಅಲ್ಲಿ ಇರುವುದಿಲ್ಲ.

೪. ನಿರ್ದೇಶಕ /ಆದೇಶಕಗಳನ್ನು ಬಳಸುವಾಗ ಹೆಣ್ಣಿನ ಭಾಷೆಯಲ್ಲಿ 'ಹೀಗೆ ಮಾಡಿದ್ದರೆ ಆಗುತ್ತಿತ್ತು', 'ಹಾಗೆ ಮಾಡಿದರೆ ಸರಿಯಾಗದೇ' ಎಂಬ ರೀತಿಯ ಅನುನಯ ಕಂಡುಬರುತ್ತದೆ. ಆದರೆ ಗಂಡಿನ ಭಾಷೆಯಲ್ಲಿ ಇದು ಖಡಾಖಂಡಿತವಾಗಿ ವ್ಯಕ್ತವಾಗುತ್ತದೆ.

ಈ ಮಾತುಗಳು ಆಯಾ ಗಂಡು ಹೆಣ್ಣುಗಳು ಸ್ವಭಾವದಿಂದ ಅನುನಯ ಪರರೋ, ಸಂಕೋಚ ದಾಕ್ಷಿಣ್ಯ ಪರರೋ ಎಂಬುದನ್ನೇನೂ ಹೇಳುತ್ತವೆಂದಲ್ಲ. ಆದರೆ ಅವರು ಬಳಸುವ ಭಾಷೆಯಲ್ಲಿ ಸಮಾಜವು ಅವರು ಹೀಗಿರಬೇಕು ಎಂದು ನಿರೀಕ್ಷಿಸುತ್ತದೆ ಎಂಬುದು ವ್ಯಕ್ತವಾಗುತ್ತದೆ. ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸುವಾಗಿನ ಸಂಭಾಷಣೆಗಳಲ್ಲಿ ಇದು ಚೆನ್ನಾಗಿ ನಿರೂಪಿತವಾಗುತ್ತದೆ. ಗಯ್ಯಾಳಿ ಎನಿಸಿದ ಹೆಂಡತಿಯು ಗಂಡನನ್ನು ಏನ್ರಿ, ಬನ್ರಿ ಎನ್ನುತ್ತಲೇ ದಬಾಯಿಸುವುದನ್ನು, ಅವನು ಹೋಗೇ, ಬಾರೇ ಎನ್ನುತ್ತಲೇ ದೈನ್ಯಾವಸ್ಥೆಗೆ ಇಳಿಯುವುದನ್ನು ಚಿತ್ರಿಸಲಾಗುತ್ತದೆ.

ಸಮಾಜದ ನಿರೀಕ್ಷೆಯು ವ್ಯಕ್ತವಾಗುವ ಭಾಷೆಯ ಈ ಗುಣವನ್ನೇ ಪರಿಗಣಿಸಿ 'ಹೆಣ್ಣಿನ ಭಾಷೆ' ಹಾಗೂ 'ಗಂಡಿನ ಭಾಷೆ' ಎಂದು ವಿಶೇಷಣವನ್ನು ಹಚ್ಚಲಾಗುವುದು. ಹೆಣ್ಣು 'ಗಂಡಿನ ಭಾಷೆ'ಯನ್ನು, ಗಂಡು 'ಹೆಣ್ಣಿನ ಭಾಷೆ' ಯನ್ನು ಬಳಸಬಾರದು. ಪದಗಳ ಆಯ್ಕೆ, ವಾಕ್ಯರಚನಾ ವಿಧಾನ, ಧ್ವನಿಯ ಏರಿಳಿತ, ವಿಷಯದ ಆಯ್ಕೆ -ಹೀಗೆ ಪ್ರತಿಯೊಂದರಲ್ಲೂ 'ಗಂಡಿನ ಭಾಷೆ'ಯ ಗುಣ ಮತ್ತು 'ಹೆಣ್ಣಿನ ಭಾಷೆ' ಯ ಗುಣ ಪ್ರತ್ಯೇಕದ್ದಾಗಿರುತ್ತದೆ. ಮಾತು ಕಲಿಯಲು ತೊಡಗಿದ ಹಂತದಿಂದಲೇ ಮಗುವಿಗೆ ಈ ಬಗ್ಗೆ ಸೂಕ್ತ ತರಬೇತಿ ದೊರೆಯಲಾರಂಭವಾಗುತ್ತದೆ. ಮನೆಯಲ್ಲಿ ತಂದೆ, ತಾಯಿ, ಮೊದಲಾದ ಸದಸ್ಯರಿಂದ ಮೊದಲಾಗಿ, ಮುಂದೆ ಮಗು ಬೆಳೆದಂತೆ ತೆರೆದುಕೊಳ್ಳುವ ಅಕ್ಕ ಪಕ್ಕದವರಿರಬಹುದು, ಶಾಲೆ ಇರಬಹುದು, ಸಂಪರ್ಕಕ್ಕೆ ಬರುವ ಇನ್ನಾರೋ ಇರಬಹುದು-ಅವ್ಯಾಹತವಾಗಿ ಈ ತರಬೇತಿ ಜಾರಿಯಲ್ಲಿರುತ್ತದೆ. ಗಂಡು, ಹೆಣ್ಣು ಮಕ್ಕಳು ಬುದ್ಧಿ ತಿಳಿಯುವ ಮೊದಲೇ ತಮ್ಮ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ದಿಗ್ಬಂಧನದೊಳಗೆ ಸಿಲುಕಿ ಹೋಗುತ್ತಾರೆ. ಆಟ ಪಾಟಗಳಲ್ಲೇ ತಮ್ಮ ಅಪ್ಪ ಅಮ್ಮಂದಿರು ಪರಸ್ಪರ ಬಳಸುವ ಭಾಷೆಯನ್ನು ಅನುಕರಿಸುತ್ತಾ ತಮ್ಮ ಮಾದರಿಗಳನ್ನು ಕಂಡುಕೊಳ್ಳುತ್ತಾರೆ. ಭಾಷೆಯನ್ನು ಕಲಿಯುತ್ತಲೇ ಮಗು ತನ್ನ ಸಂಸ್ಕೃತಿಯಲ್ಲಿ ಹೆಣ್ಣಾಗಿ, ಗಂಡಾಗಿ ತನಗೆ ದೊರೆತಿರುವ ಪಾತ್ರವೇನು ಎಂಬುದನ್ನೂ ಕಲಿಯುತ್ತದೆ. ಲಿಂಗಭೇದಾನುಸಾರವಾಗಿ ಭಾಷೆಯಲ್ಲಿ ತೋರಿಬರುವ ವಿಕಲ್ಪಗಳು ವಿನಾಕಾರಣದ ಸೃಷ್ಟಿಗಳಲ್ಲ. ಸಾಮಾಜಿಕ ವಿಕಲ್ಪಗಳ ಹುಟ್ಟಿನೊಂದಿಗೆ ಅತ್ಯಂತ ಸಂಕೀರ್ಣ ರೀತಿಯಲ್ಲಿ ವರ್ತಿಸುತ್ತಾ ಭಾಷಾ ವಿಕಲ್ಪಗಳೂ ಸೃಷ್ಟಿಯಾಗುತ್ತವೆ. ಭಾಷೆಯ ವಿಕಲ್ಪಗಳು ಸಮಾಜದ ವಿಕಲ್ಪಗಳ ಸ್ಪಷ್ಟ ಸೂಚಕಗಳು. ಹೆಣ್ಣಿನ ಭಾಷೆ, ಗಂಡಿನ ಭಾಷೆ ಎಂಬ ವಿಕಲ್ಪಗಳಿವೆ ಎಂದರೆ, ಅದು ಆ ಸಮಾಜದಲ್ಲಿ ಗಂಡು, ಹೆಣ್ಣುಗಳಿಗಿರುವ ಪಾತ್ರಗಳ ವಿಕಲ್ಪಗಳ ಸೂಚನೆಯೇ ಆಗಿರುತ್ತದೆ.

ಹೆಣ್ಣು ಮತ್ತು ಅವಳ ಸಾಮರ್ಥ್ಯ ಮಾಪನ

ಪ್ರಸ್ತುತ ಸಮಾಜ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ ಆದರ್ಶಗಳು, ಅವುಗಳ ದೃಷ್ಟಿಕೋನಗಳು, ಉದ್ದೇಶಗಳು ಮತ್ತು ಅವುಗಳು ಸಾಮಾಜಿಕರಿಂದ ನಿರೀಕ್ಷಿಸುವ ಫಲಿತಾಂಶಗಳು-ಇವುಗಳನ್ನೆಲ್ಲ ಸೂಕ್ಷ್ಮ ಅಧ್ಯಯನಗಳಿಗೆ ಒಳಪಡಿಸುವ ಅಗತ್ಯ ಇಂದು ನಮಗಿದೆ. ಏಕೆಂದರೆ, ಈ ಆದರ್ಶಗಳು ಒಟ್ಟಾರೆಯಲ್ಲಿ ಸಮಾಜದ ಒಳಿತಿಗಾಗಿಯೇ ರೂಪಗೊಂಡಂಥವು ಎಂಬಂತೆ ಪ್ರಶ್ನಾತೀತವಾಗಿ ಪ್ರಚಾರದಲ್ಲಿವೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಬದಲಿಗೆ ಈ ಕಲ್ಪಿತ ಆದರ್ಶಗಳು ಏಕಪಕ್ಷೀಯವಾಗಿದ್ದು, ಪುರುಷನ ಹಿತವನ್ನು ಕಾಯುವ ಮತ್ತು ಮಹಿಳೆಯ ಮೇಲೆ ಕ್ರೂರವಾದ ದಾಳಿಯನ್ನು ನಡೆಸುವ ಸ್ವರೂಪದ ವಾಗಿವೆ. ಇದರ ಇನ್ನೊಂದು ಅಪಾಯಕಾರಿ ಮುಖವೆಂದರೆ ಇದು ನಯ ವಂಚನೆಯ ಸೋಗಿನ ಸ್ವರೂಪದ್ದೂ ಆಗಿದೆ. ಈ ಸೋಗಿನ ಮುಸುಕನ್ನೆಳೆದು ನಿಜರೂಪವನ್ನು ತೋರುವ ಅವೆಷ್ಟೋ ಸೂಕ್ಷ್ಮ ಅಧ್ಯಯನಗಳನ್ನು ಈಚೆಗೆ ಸ್ತ್ರೀವಾದಿಗಳು ನಡೆಸುತ್ತಿದ್ದಾರೆ. ಪ್ರಸ್ತುತದ ಆದರ್ಶಗಳನ್ನು ನಾವಿನ್ನು ಹೊತ್ತು ಬದುಕಲಾರೆವು ಎಂಬ ಪ್ರತಿಭಟನೆಯನ್ನು ಈ ಅಧ್ಯಯನಗಳು ಸ್ಪಷ್ಟಪಡಿಸುತ್ತಿವೆ.

ವಿವಿಧ ಸಾಮಾಜಿಕ ಅಂಗಗಳಲ್ಲಿನ ಬೇರೆ ಬೇರೆ ನೆಲೆಗಳಲ್ಲಿ ಭಾಗವಹಿಸುತ್ತಿರುವ ಸ್ತ್ರೀ ಪುರುಷರೆಲ್ಲರಿಗೂ ಸಮಾನವಾಗಿ ಮತ್ತು ನ್ಯಾಯಯುತವಾಗಿ ಅನ್ವಯವಾಗುತ್ತವೆ ಎಂಬ ಸೋಗಿನ ನಿಯಮಾವಳಿಗಳು, ಆದರ್ಶಗಳು ಈ ಸಮಾಜ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ರಚನೆಗೊಳ್ಳುತ್ತಾ, ಜಾರಿಗೊಳ್ಳುತ್ತಾ ಇರುತ್ತವೆ. ಈ ರಚನೆಗಳು ಹುಟ್ಟು ಹಾಕುವ ಒತ್ತಡಗಳು ಇವುಗಳನ್ನು ಅನುಸರಿಸುವ ವಿಚಾರದಲ್ಲಿ ಯಾರಿಗೂ ಆಯ್ಕೆಯನ್ನೇನೂ ಉಳಿಸುವುದಿಲ್ಲ. ಹೀಗಾಗಿ, ಇವು ಪುರುಷಪರವಾಗಿಯೂ, ಸ್ತ್ರೀ ವಿರೋಧಿಯಾಗಿಯೂ ಇವೆ ಎಂಬುದು ಅನುಭವಕ್ಕೆ ಬರುತ್ತಿದ್ದರೂ ಮಹಿಳೆಯರು ಅಸಹಾಯಕರಾಗಿಯೇ ಉಳಿಯುತ್ತಾ ಬಂದಿದ್ದಾರೆ. ಆದರೀಗ ಮಹಿಳೆಯು ಜಾಗೃತಳಾಗುತ್ತಿದ್ದಾಳೆ ಮತ್ತು ತನಗಾಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ಸಮಾಜವನ್ನು ಒತ್ತಾಯಿಸುತ್ತಿದ್ದಾಳೆ. ಮೂರ್ತ ಸ್ವರೂಪದ ಸಮಸ್ಯೆಗಳನ್ನು ಎದುರಿಸುವುದಕ್ಕೂ, ಅಮೂರ್ತ ಸಮಸ್ಯೆಗಳನ್ನು ಎದುರಿಸುವುದಕ್ಕೂ ಬೇರೆ ಬೇರೆ ದಾರಿಗಳನ್ನೇ ಹುಡುಕಬೇಕಾಗಿದೆ. ಈ ದಿಸೆಯಲ್ಲಿ

ವಸ್ತುಸ್ಥಿತಿಯನ್ನು ವಿಶದ ಪಡಿಸುವ ಸೂಕ್ಷ್ಮ ಅಧ್ಯಯನಗಳು ತುಂಬಾ ಉಪಯುಕ್ತವಾಗುತ್ತವೆ. ಅಂತಹ ಒಂದು ಪ್ರಯತ್ನವಾಗಿ ಹೆಣ್ಣಿನ ಸಾಮರ್ಥ್ಯದ ಪ್ರಶ್ನೆಯನ್ನು ಕುರಿತಂತೆ ಈ ಟಿಪ್ಪಣಿಯನ್ನು ಮಾಡಲಾಗಿದೆ.

ಹೆಣ್ಣು/ಗಂಡುಗಳ ಸಾಮರ್ಥ್ಯವನ್ನು ಈ ಸಮಾಜದಲ್ಲಿ ಈಗಾಗಲೇ ಮಾಪನ ಮಾಡಿಡಲಾಗಿದೆ. ಕೆಲವು ನಿರ್ದಿಷ್ಟವೆಂಬಂತಹ ತೀರ್ಮಾನಗಳನ್ನೂ ತಲುಪಲಾಗಿದೆ. ಆದರೆ ಈ ಮಾಪನ, ತೀರ್ಮಾನಗಳನ್ನು ಪ್ರಶ್ನಿಸುವ ಅಗತ್ಯವಿದೆ. ಮಾನವ ಪೀಳಿಗೆಗೆ ಸಂಬಂಧಿಸಿದಂತೆ ಬೌದ್ಧಿಕ, ಭಾವನಾತ್ಮಕ ಸ್ಥಿತಿಗತಿಗಳಲ್ಲಿ ಹೆಣ್ಣಿನದು/ಗಂಡಿನದು ಎಂದು ಗುರುತಿಸಬಲ್ಲ ಸಾಮರ್ಥ್ಯದ ಸ್ಪಷ್ಟ ನೆಲೆಗಳಿವೆ ಎಂಬ ತೀರ್ಮಾನವನ್ನು ಮೊದಲು ಪ್ರಶ್ನೆಗೆ ಗುರಿ ಮಾಡಬೇಕು. 'ಮಾನವ ಮಿದುಳಿನಲ್ಲಿ gender ಇದೆ. ಹಾಗಾಗಿ ಮಿದುಳಿನಿಂದ ಉತ್ಪನ್ನವಾಗುವ ಎಲ್ಲ ಸಂಗತಿಗಳನ್ನು ಪುರುಷನದು/ಸ್ತ್ರೀಯದು ಎಂದು ಗುರುತಿಸಲು ಸಾಧ್ಯ' ಎಂಬುದು ಅತಿ ದೃಢವಾಗಿ ಮಂಡನೆಗೊಳ್ಳುತ್ತಾ ಬಂದಿರುವ ವಾದ.

ಸ್ತ್ರೀವಾದಿ ಚಿಂತನೆಗಳೂ ಒಂದು ಹಂತದಲ್ಲಿ ಈ ವಾದವನ್ನೇ ಒಪ್ಪಿ, ಈ ದಾರಿಯಲ್ಲೇ ನಡೆದು, ಹಾಗಾದರೆ ಸ್ತ್ರೀ ವಿಶೇಷತೆಗಳು ಯಾವುವು ಎಂಬ ಹುಡುಕಾಟದಲ್ಲಿ ತೊಡಗಿ, ಕೆಲವನ್ನು 'ಇವು' ಎಂದು ಗುರುತಿಸುತ್ತಾ ತಮ್ಮ ಸಮರ್ಥನೆಗೆ ತೊಡಗಿದ್ದೂ ಇದೆ. ಈ ಹಂತದ ಸ್ತ್ರೀವಾದಿ ಚಿಂತನೆಗಳು ಮಹಿಳೆಯು ಈ ವಿಶೇಷತೆಗಳ ಸಂಗೋಪನೆಯನ್ನು ಮಾಡಿಕೊಂಡರೆ ಸಾಕು ಎಂಬಂತೆ, ಇದಕ್ಕೆ ಸಮಾಜವು ತಡೆಯೊಡ್ಡದೆ ನೆರವಿಗೆ ನಿಂತರೆ ಸಾಕು ಎಂಬಂತೆಯೇ ಸಾಗಿದವು. ಮಹಿಳೆಯು ತನ್ನ ವಿಶೇಷತೆಗಳನ್ನು ಹೀಗೆ ಗುರುತಿಸಿಕೊಳ್ಳುವುದು ಅವಳ ಐಡಂಟಿಟಿಯ ಪ್ರಶ್ನೆ ಎಂಬುದಕ್ಕಾಗಿ ಉಪಯುಕ್ತವೇ ಹೌದು. ಆದರೆ ಇದೇ ಅವಳೆದುರು ಮಿತಿಗಳನ್ನು ನಿರ್ಮಿಸಿಬಿಡುವ ಸಂಗತಿಯೂ ಆಗಿಬಿಡಬಹುದು ಎಂದಾಗ, ಈ ಅಪಾಯದ ಬಗೆಗೆ ಎಚ್ಚರವೂ ತುಂಬಾ ಅಗತ್ಯ. ಮುಂದಿನ ಸ್ತ್ರೀವಾದಿ ಚಿಂತನೆಗಳು ತಾವು ನಡೆಯುತ್ತಿರುವ ದಾರಿಯಲ್ಲಿನ ಈ ಅಪಾಯವನ್ನು ಗ್ರಹಿಸಲು ಸಮರ್ಥವಾದವು. ಏಕೆಂದರೆ, ಸ್ತ್ರೀ ವಿಶೇಷತೆಯನ್ನು ಪ್ರತ್ಯೇಕಿಸಿ ಗುರುತಿಸಿ ಹೊರಟ ಚಿಂತನೆ ಪುರುಷ ಚಿಂತನೆಗೆ ಪೋಷಕವಾದದ್ದೇ ಆಗಿದೆ ಮತ್ತು ಮಹಿಳೆಯನ್ನು ಸುಲಭವಾಗಿ ಸಿಲುಕಿಸಬಹುದಾದ ಬಲೆಯೂ ಆಗಿದೆ. ಕುಟುಂಬ, ವಿವಾಹಗಳಂತಹ ಭಾವನಾತ್ಮಕ ವಲಯಗಳಲ್ಲಿ ದಾಂಪತ್ಯ, ತಾಯ್ತನಗಳಂತಹ ಹಲವು ಬಲೆಗಳಿವೆ. ಹಲವೊಮ್ಮೆ ಅನಿವಾರ್ಯವಾಗಿ, ಕೆಲವೊಮ್ಮೆ ಪ್ರಿಯವೂ ಆಪ್ತವೂ ಆಗುವುದರಿಂದಾಗಿ ಈ ಬಲೆಗಳಲ್ಲಿ ಮಹಿಳೆ ಸಿಲುಕಿಯೂ ಬಿಡುತ್ತಾಳೆ. ಮಹಿಳೆಯನ್ನು ಸಮಾಜವು ಭಾವನಾಸ್ತ್ರದಲ್ಲಿ ಬ್ಲಾಕ್ ಮೇಲ್ ಮಾಡುತ್ತದೆ.

ಮುಂದೆ ತನ್ನ ಜಾಗೃತಿಯ ಹಾದಿಯನ್ನು ಮಹಿಳೆ ಇನ್ನಷ್ಟು ಸ್ಪಷ್ಟವಾಗಿ ಕಾಣತೊಡಗಿದ ಮೇಲೆ ಈ ಕುತಂತ್ರವನ್ನು ಅರ್ಥಮಾಡಿಕೊಳ್ಳಲು ಆರಂಭಿಸಿದ್ದಾಳೆ. ತನ್ನ ಸಾಮರ್ಥ್ಯವನ್ನು ಪುರುಷನ ಸಾಮರ್ಥ್ಯಕ್ಕಿಂತ ಕೆಳದರ್ಜೆಯದೆಂದು ಗುರುತಿಸಲಾಗುತ್ತಿದೆ ಎಂಬ ಬಗೆಗೆ

ಚಿಂತಿತಳಾದದ್ದಿದೆ. ಸ್ತ್ರೀ/ ಪುರುಷರು ನಿರ್ವಹಿಸಬಹುದಾದ ವೃತ್ತಿಗಳನ್ನು ಸಮಾಜವು ವಿಂಗಡಿಸಿ ಇಟ್ಟಿದೆ. ಅವರು ತೊಡಗಿಕೊಳ್ಳಬಹುದಾದ ಕೆಲಸ ಕಾರ್ಯಗಳು, ಶಿಕ್ಷಣ, ಕಲೆ, ವಿಜ್ಞಾನ, ಸಂಶೋಧನೆ ಎಲ್ಲವನ್ನೂ ನಿಗದಿ ಮಾಡಿ ಇಡಲಾಗಿದೆ. ಒಂದೇ ವೃತ್ತಿ, ಒಂದೇ ಬಗೆಯ ಕೆಲಸ ಕಾರ್ಯಗಳಲ್ಲಿ ತೊಡಗುವ ಸ್ತ್ರೀ/ಪುರುಷರನ್ನು ನಿರ್ದೇಶಿಸುವಾಗ ಭಾಷೆಯೂ ಕೂಡ ಪುರುಷನಿಗಷ್ಟೇ ವೃತ್ತಿಸೂಚಕ ಪದಗಳನ್ನು ಸೃಷ್ಟಿಸುತ್ತದೆ. ಸ್ತ್ರೀಯರ ಭಾಗವಹಿಸುವಿಕೆ ಅಲ್ಲಿ ದಾಖಲಾಗುವುದು ಒಂದು ಅನುಬಂಧವಾಗಿ ಮಾತ್ರವೇ. ಕೆಲವೊಮ್ಮೆ ಅಷ್ಟು ಕೂಡ ಇಲ್ಲ. ರೈತ, ಸೈನಿಕಗಳಲ್ಲಷ್ಟೇ ಅಲ್ಲ ಮಾನವ ಎಂದರೂ ಗಂಡು ತಾನೇ? ಡಾಕ್ಟರು, ಇಂಜಿನಿಯರು, ಸಾಹಿತಿ, ಮಂತ್ರಿ-ಇಂಥಲ್ಲಿ ಮಹಿಳೆಯನ್ನು ಸೂಚಿಸಬೇಕಾದ ಒತ್ತಾಯ ಬಂದಾಗ ಪದದ ಹಿಂದೆ 'ಮಹಿಳೆ' ಎಂಬುದನ್ನು ಸೂಚಿಸಿ ಕೈ ಬಿಡಲಾಗುತ್ತದೆ. ಈ ಮಾತನ್ನು ಎಷ್ಟೂ ಮುಂದುವರೆಸಬಹುದು.

ಸದ್ಯಕ್ಕೆ ಮಿದುಳಿನಲ್ಲಿ gender ವಿಂಗಡಣೆ ಇದೆ ಎಂಬ ಮಾತಿಗೆ ಬರೋಣ. ಇದಕ್ಕೆ ನೀಡಲಾಗಿರುವ ವೈಜ್ಞಾನಿಕ ಆಧಾರಗಳಾವುವೂ ಬಲವಾದವಲ್ಲ. ಆದರೂ ಪುರುಷ ಚಿಂತನೆಗೆ ಅನುಕೂಲವಾಗಿ ಇದನ್ನು ಸಾಮಾಜಿಕವಾಗಿ ಬಲಪಡಿಸಿ ಪ್ರಚಾರಕ್ಕಂತೂ ಬಿಡಲಾಗಿದೆ. ಸ್ತ್ರೀವಾದಿ ಚಿಂತನೆಯಲ್ಲಿ ಈ ವಿಂಗಡಣೆಯಲ್ಲಿನ ರಾಜಕಾರಣವನ್ನು ಮುಖ್ಯವಾಗಿ ಗುರುತಿಸಲಾಗುತ್ತದೆ. ಈ ವಿಂಗಡಣೆಯು ಮೊದಲಿಗೆ ಮಿದುಳಿನಲ್ಲೇ ಸ್ತ್ರೀ/ ಪುರುಷ ವಿಶಿಷ್ಟ ಸಾಮರ್ಥ್ಯಗಳಿವೆ ಎಂಬುದನ್ನು ಹೇಳುತ್ತದೆ. ಮುಂದುವರೆದು ಆ ಪೈಕಿ ಪುರುಷನ ಸಾಮರ್ಥ್ಯವನ್ನು ಶ್ರೇಷ್ಠವೆಂದೂ, ಸ್ತ್ರೀ ಸಾಮರ್ಥ್ಯವನ್ನು ಎರಡನೆಯ ದರ್ಜೆಯದೆಂದೂ ಒಪ್ಪಿಸತೊಡಗುತ್ತದೆ. ಈ ಚಿಂತನೆಯನ್ನು ಪ್ರತಿಷ್ಠಾಪಿಸಿ ಬೆಳೆಸುತ್ತಾ ಬಂದಿರುವವನು ಪುರುಷನೇ ಎಂಬುದನ್ನೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಮಹಿಳೆಯು ಇಂತಹ ಸಿದ್ಧಾಂತಗಳನ್ನು ನಿರಸನಗೊಳಿಸಬೇಕಾಗಿದೆ. ಅವರಂದುಕೊಂಡರೆ ನಮಗೇನು, ಅದರಿಂದ ನಮ್ಮ ಸಾಮರ್ಥ್ಯವೇನೂ ಧಕ್ಕೆಗೊಳ್ಳಲಾರದು ಎಂಬಂತಹ ಹುಂಬ ಧೈರ್ಯವನ್ನು ವಹಿಸಲಾಗದು. ಏಕೆಂದರೆ ಮಹಿಳೆಯ ಬದುಕು, ಅವಳ ಸಮಸ್ಯೆಗಳು, ಮತ್ತವುಗಳ ಪರಿಹಾರಗಳು-ಎಲ್ಲವೂ ಎಲ್ಲ ನೆಲೆಗಳಲ್ಲೂ ಪುರುಷನೊಂದಿಗೆ ತಳುಕುಹಾಕಿಕೊಂಡೇ ಇರುವಂಥವು. ತನ್ನ ಪಾಡಿಗೆ ತಾನು ಎಂಬ ನಿಲುವು ಅರ್ಥಹೀನ. ಅವನ ಹುನ್ನಾರಗಳ ರಾಜಕಾರಣವನ್ನು ಅರ್ಥ ಮಾಡಿಕೊಂಡು ನಡೆದಾಗಲಷ್ಟೇ ಅವನನ್ನು ಎದುರಿಸುವುದು ಸಾಧ್ಯವಾಗಬಹುದು.

ಮಾನವ ಪೀಳಿಗೆಯ ಸ್ವಭಾವ-ಗುಣಾವಗುಣ, ಸಾಮರ್ಥ್ಯ, ದೌರ್ಬಲ್ಯ ಎಲ್ಲವೂ-ಗಂಡು ಹೆಣ್ಣುಗಳೆಂಬ ಭೇಧವಿಲ್ಲದೆ, ಮೂಲಭೂತವಾಗಿ ಒಂದೇ ಆಗಿರುತ್ತದೆ. ವ್ಯಕ್ತಿ ವ್ಯಕ್ತಿಗಳ ವಿಶೇಷಗಳಾಗಿ ವೈವಿಧ್ಯಗಳು ಕಾಣಬಹುದೇ ಹೊರತು ಲಿಂಗವ್ಯತ್ಯಾಸ ದಿಂದಾಗೇನೂ ಕಾಣುವುದಿಲ್ಲ. ಚರಿತ್ರೆಯ ಯಾವುದೋ ಒಂದು ಹಂತದಲ್ಲಿ ಪುರುಷನು

ಹೆಣ್ಣಿನ ಮೇಲೆ ನಿಯಂತ್ರಣವನ್ನು ಸಾಧಿಸಿ, ಮುಂದೆ ನಿರಂತರವಾಗಿ ಆ ಹತೋಟಿಯನ್ನು ಮುಂದುವರೆಸುವಲ್ಲಿ ಅವನು ಹಲವು ಹುನ್ನಾರಗಳನ್ನು ನಡೆಸುತ್ತಾ ಬಂದಿದ್ದಾನೆ. ಇದರಲ್ಲಿ ಬಹುಮುಖ್ಯವಾದದ್ದು ಹೆಣ್ಣಿನ ಬದುಕಿನ ಪರಿಸರವನ್ನು ಎಲ್ಲ ನೆಲೆಗಳಲ್ಲೂ ಅನನುಕೂಲಕರವಾಗಿ ಪರಿವರ್ತಿಸುವುದು. ಈ ಮೂಲಕ ಅವಳು ಏನನ್ನೂ ಸಾಧಿಸ ಲಾಗದಂತೆ ಮಾಡಿ ಅವಳ ಆತ್ಮವಿಶ್ವಾಸವನ್ನು ನಾಶಮಾಡುವುದು. ಅನನುಕೂಲ ಪರಿಸ್ಥಿತಿಗಳಿಂದಾಗಿ ಬದುಕಿನ ವಿವಿಧ ರಂಗಗಳಲ್ಲಿ ಅವಳು ಅನುಭವಿಸುವ ಸೋಲನ್ನು ಅವಳ ಅಸಾಮರ್ಥ್ಯವೆಂದು ವ್ಯಾಖ್ಯಾನಿಸುವುದು ಮುಂದಿನ ತಂತ್ರ. ಅಸಹಾಯಕತೆಯಿಂದ ಅವಳು ಈ ವ್ಯಾಖ್ಯಾನವನ್ನು ಒಪ್ಪುವ ಹಂತವೂ ಸಹಜವೇ.

ಈ ಕುತಂತ್ರ ದೀರ್ಘಕಾಲದಿಂದ ಸುಲಲಿತವಾಗಿ ನಡೆಯುತ್ತಾ ಬಂದಿದೆ. ನಮ್ಮ ಸಾಮಾಜಿಕ ಪರಿಸರಗಳಲ್ಲಿ ಹೆಣ್ಣಿನ ಅಸಾಮರ್ಥ್ಯದ ನಿದರ್ಶನಗಳು ಎಲ್ಲೆಲ್ಲೂ ದೊರೆಯುವಂತಿವೆ. ಅಬಲೆ, ದಡ್ಡಿ, ಪರಾವಲಂಬಿ, ಆತ್ಮವಿಶ್ವಾಸವಿಲ್ಲದವಳು-ಎಂಬ ವಿಶೇಷಣಗಳನ್ನು ಎಲ್ಲ ಮಹಿಳೆಯರಿಗೂ ಸಾರಾಸಗಟಾಗಿ ಹಚ್ಚಿ ಬಿಡುವುದೂ ಸುಲಭ. ಹಾಗಲ್ಲದ ಹೆಣ್ಣು ಇದ್ದರೆ ಅದೊಂದು ಎಕ್ಸೆಪ್ಷನ್ ಎಂದಷ್ಟೇ ಗುರುತಿಸುವುದು. ಮುಂದುವರೆದು ವಿಪರೀತ, ಅಸಹಜ, ಹಾಸ್ಯಾಸ್ಪದ ಎಂದೂ ಬ್ರಾಂಡ್ ಮಾಡಬಹುದು. ಇಷ್ಟು ಢಾಳಾದ ನಿದರ್ಶನಗಳೆದುರು ಮಹಿಳೆಯ ಸಾಮರ್ಥ್ಯ ಎಂಬುದು ಪುರುಷನಿಗೆ ಸಮಾನವಾದುದು, ಆದರೆ ಅವಳ ಸಾಮರ್ಥ್ಯವನ್ನು ತುಳಿದು ಹಿಡಿದಿಡಲಾಗಿದೆಯಷ್ಟೇ ಎಂದು ಸ್ಥಾಪಿಸಬೇಕಾದರೆ ಅದೇನೂ ಸುಲಭದ ಮಾತಲ್ಲ. ಏಕೆಂದರೆ ಹೆಣ್ಣಿನ ಅಸಾಮರ್ಥ್ಯವನ್ನು ಅನುಮಾನಕ್ಕೆ ಆಸ್ಪದವೇ ಇಲ್ಲವೆನ್ನುವಷ್ಟು ನಿದರ್ಶನಗಳೊಂದಿಗೆ, ಅದೊಂದು ಸಿದ್ಧಾಂತವೇ ಎಂಬಷ್ಟು ನಿಖರತೆಯೊಂದಿಗೆ ಪ್ರಬಲವಾಗಿ ನಿರೂಪಿಸಲು ಎಲ್ಲ ಜ್ಞಾನಕ್ಷೇತ್ರಗಳೂ ಪೈಪೋಟಿಯನ್ನೇ ನಡೆಸಿವೆ. ತತ್ತ್ವಜ್ಞಾನ, ಸಮಾಜಶಾಸ್ತ್ರ, ಮನೋವಿಜ್ಞಾನಗಳಿಂದ ಹಿಡಿದು ವೈವಿಧ್ಯಮಯ ವಿಜ್ಞಾನ ತಂತ್ರಜ್ಞಾನಗಳವರೆಗೆ ಎಲ್ಲಾ ಪಾರಂಪರಿಕ ಹಾಗೂ ಆಧುನಿಕ ಚಿಂತನೆಗಳೂ ಈ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಈ ಚಿಂತನೆಗಳಲ್ಲಿ ಹೆಣ್ಣನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಾದರೂ ಎಲ್ಲಿದೆ ಎನ್ನುವವರೆಗೂ ಈ ಅವಗಣನೆ ಬೆಳೆದುಬಿಟ್ಟಿದೆ. ಈ ಪರಿಸ್ಥಿತಿಗೆ ಕಾರಣವನ್ನು ಹುಡುಕುತ್ತಾ ಎಲ್ಲೂ ಅಲೆಯಬೇಕಾಗಿಲ್ಲ. ಇವೆಲ್ಲವುಗಳ ಹಿಂದೆಯೂ ಪುರುಷ ಚಿಂತನೆಯೇ ಇದೆ ಎಂಬುದೇ ಎಲ್ಲವನ್ನೂ ವಿವರಿಸುತ್ತದೆ.

ಪುರುಷನು ಹೇರಿರುವ ಈ ಭ್ರಮೆಯ ಒತ್ತಡದಲ್ಲಿ ಸಿಲುಕಿಹಾಕಿಕೊಂಡಿರುವ ಮಹಿಳೆಗೆ ಈ ಭ್ರಮೆಯನ್ನೇ ವಾಸ್ತವವೆಂದು ಒಪ್ಪಿ ಬಿಡುವಷ್ಟು ಮಂಕು ಕವಿದುಬಿಟ್ಟಿದೆ. ಇದು ಅವಳ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿಟ್ಟಿದೆ. ತನ್ನನ್ನು ತಾನು ಅರಿಯುವ ಅಗತ್ಯವಿರುವ ಈ ನೆಲೆಯಲ್ಲಿ ಮಹಿಳೆಗೆ ಸ್ತ್ರೀವಾದಿ ಚಿಂತನೆಗಳು ಒತ್ತಾಸೆಯಾಗಿ

ನಿಲ್ಲಬೇಕಾಗಿದೆ. ಅವಳ ಎಲ್ಲ ಸಮಸ್ಯೆಗಳ ಮೂಲವಾದ ಈ ಭ್ರಮೆಯನ್ನು ನಿರಸನಗೊಳಿಸಿ ಅವಳಲ್ಲಿ ಆತ್ಮವಿಶ್ವಾಸವನ್ನು ತುಂಬ ಬೇಕಾಗಿದೆ. ಮಹಿಳೆಯು ತನ್ನ ಸಾಮರ್ಥ್ಯವನ್ನು ಗುರುತಿಸಿಕೊಳ್ಳುವಲ್ಲಿ ನೆರವಾಗುವ ಸೂಕ್ಷ್ಮ ಅಧ್ಯಯನಗಳು ಈ ದಿಸೆಯಲ್ಲಿ ತುಂಬಾ ಉಪಯುಕ್ತವಾಗಿವೆ. ಈ ಸೂಕ್ಷ್ಮ ಅಧ್ಯಯನಗಳು ನಮ್ಮ ಸಮಾಜವು ಹೆಣ್ಣಿನ ಸಾಮರ್ಥ್ಯವನ್ನು ಕುರಿತಂತೆ ಹೇಳುವ ತೀರ್ಮಾನರೂಪದ ಹೇಳಿಕೆಗಳನ್ನು ಪರೀಕ್ಷೆಗೊಳಪಡಿಸಿವೆ. ಇವುಗಳ ಫಲಿತಾಂಶಗಳು ಪುರುಷ ಸಮಾಜವು ನಿರ್ಮಿಸಿರುವ ಹಲವಾರು ಭ್ರಮೆಗಳನ್ನು ನಿರಸನಗೊಳಿಸುವಲ್ಲಿಯೂ ಸಫಲವಾಗಿವೆ. ಅಂತಹ ಕೆಲವು ಮಾದರಿ ಅಧ್ಯಯನಗಳನ್ನಿಲ್ಲಿ ಗಮನಿಸಬಹುದು.

ಶಾಲಾ ತರಗತಿಗಳಲ್ಲಿ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಬುದ್ಧಿ ಮಟ್ಟವನ್ನು ಕುರಿತಂತೆ ಇರುವ ಭ್ರಮಾತ್ಮಕ ತೀರ್ಮಾನಗಳಲ್ಲಿ ಮುಖ್ಯವಾದದ್ದು ಹುಡುಗಿಯರು ಕೆಲವು ಕ್ಷೇತ್ರಗಳಲ್ಲಿ ಮಾತ್ರವೇ ಚುರುಕಾಗಿರುತ್ತಾರೆ, ಬಹುಮಟ್ಟಿಗೆ ಈ ಸೂಚಕ ಕ್ಷೇತ್ರಗಳು ಭಾವನಾತ್ಮಕ ತೊಡಗುವಿಕೆಯನ್ನು ಅಪೇಕ್ಷಿಸುವಂಥವು, ಬೌದ್ಧಿಕ ಸಾಮರ್ಥ್ಯವನ್ನು ಅಪೇಕ್ಷಿಸುವ ತತ್ವಜ್ಞಾನ, ವಿಜ್ಞಾನ ತಂತ್ರಜ್ಞಾನ, ವಿಚಾರ ವಿಮರ್ಶೆಗಳಂತಹ ಜ್ಞಾನ ಕ್ಷೇತ್ರಗಳಲ್ಲಿ ಹುಡುಗಿಯರು ಹುಡುಗರೊಂದಿಗೆ ಪೈಪೋಟಿಗೆ ನಿಲ್ಲಲಾರರು-ಎಂಬ ಮಾತು. ಇದಕ್ಕೆ ಪೂರಕವೋ ಎಂಬಂತೆ ಈ ಕ್ಷೇತ್ರಗಳಲ್ಲಿ ಮಹಿಳೆಯ ಸಾಧನೆಗಳನ್ನು ತೋರಿಸುವ ನಿದರ್ಶನಗಳೂ ದೊರೆಯುವುದು ಕಷ್ಟ. ಅಪರೂಪಕ್ಕೆ ಅಂತಹ ಸಾಧನೆಯನ್ನು ತೋರಿದ ಮಹಿಳೆಯ ಪ್ರಸ್ತಾಪ ಬಂದರೆ, ಆಕೆಯ ಸಾಧನೆಯನ್ನು ದರ್ಜೆ ಇಳಿಸಿಯೋ, ಅದರ ಹಿಂದೆ ಪುರುಷನ ನೆರವು ಇದ್ದದ್ದರಿಂದ ಮಾತ್ರ ಅದು ಸಾಧ್ಯವಾಯಿತೆಂದೋ ವ್ಯಾಖ್ಯಾನಿಸಲಾಗುತ್ತದೆ. ಅಂದರೆ, ಮಹಿಳೆಯರಿಗೆ ದೊರೆತ ಅವಕಾಶಗಳ ಕೊರತೆ ಒಂದು ಸಮಸ್ಯೆಯಾದರೆ, ಅವಳ ಸಾಧನೆಯನ್ನು ಮೌಲ್ಯಮಾಪನ ಮಾಡುವ ವ್ಯಾಖ್ಯಾನ ವಿಧಾನ ಇನ್ನೊಂದು ಸಮಸ್ಯೆಯಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿನ ಮಹಿಳಾ ಸಾಹಿತ್ಯದ ವಿಮರ್ಶೆ, ಸ್ತ್ರೀವಾದಿ ವಿಮರ್ಶೆಯಂತಹ ಮಾತುಗಳನ್ನು ಗಮನಿಸಿ.

ವಾಸ್ತವದಲ್ಲಿ ಹುಡುಗ ಹುಡುಗಿಯರಲ್ಲಿ ಬೇರೆ ಬೇರೆ ದರ್ಜೆಯ ಸಾಮರ್ಥ್ಯ ಎಂದೇನೂ ಇರುವುದಿಲ್ಲ ಎಂಬುದನ್ನು ನಿರೂಪಿಸುವ ಸೂಕ್ಷ್ಮ ಅಧ್ಯಯನಗಳು ಸಾಕಷ್ಟು ಬಂದಿವೆ. ಸುಮಾರು ಹೈಸ್ಕೂಲು ಹಂತದವರೆಗೆ ಹೆಣ್ಣು / ಗಂಡು ಮಕ್ಕಳು ಒಂದೇ ಬಗೆಯ ಸಾಮರ್ಥ್ಯವನ್ನು ತೋರುತ್ತಾರೆ. ಕೆಲವೊಮ್ಮೆ ಹೆಣ್ಣು ಮಕ್ಕಳೇ ಹೆಚ್ಚಿನ ಸಾಮರ್ಥ್ಯವನ್ನು ತೋರುತ್ತಾರೇನೋ ಎಂಬ ಪ್ರಸಂಗಗಳೂ ಕಾಣುತ್ತವೆ. ಇರಲಿ. ಈ ಹಂತದಲ್ಲಿ ಸಮಾಜವು ಸ್ತ್ರೀ/ಪುರುಷರಿಗೆಂದು ಪ್ರತ್ಯೇಕ ನಿರ್ದೇಶನಗಳನ್ನು ನೀಡುತ್ತದೆಂಬ ಬಗ್ಗೆ ಮಕ್ಕಳಿಗಿನ್ನೂ ಅರಿವು ಮೂಡಿರುವುದಿಲ್ಲ. ಮಕ್ಕಳು ಬೆಳೆದಂತೆ, ಸಮಾಜದ ನಿರ್ದೇಶನಗಳನ್ನು ಒಪ್ಪುತ್ತಾ, ಒತ್ತಡಗಳಿಗೆ ಒಳಗಾಗುತ್ತಾ ಹೆಣ್ಣು / ಗಂಡು ಮಕ್ಕಳ ಸಾಮರ್ಥ್ಯಗಳಲ್ಲೂ ಏರುಪೇರುಗಳು

ಬರತೊಡಗುತ್ತವೆ. ಒಂದು ಲೇಖನವನ್ನೋ, ಪ್ರಬಂಧವನ್ನೋ, ಅದರ ಬರಹ ರೂಪದಲ್ಲಿ ನೋಡಿ ಇದು ಹೆಣ್ಣಿನದು, ಇದು ಗಂಡಿನದು ಎಂದು ಗುರುತಿಸಿ ಬಿಡಬಹುದು ಎಂಬ ಒಂದು ಮಿಥ್ ಇದೆ. ಭಾಷೆ, ನಿರೂಪಣೆ, ವಾದ ಮಂಡನೆ-ಮುಂತಾದವುಗಳಲ್ಲಿ ಇದನ್ನು ಗಮನಿಸ ಬಹುದು ಎಂಬ ಮಾತು ಇದೆ. ಆದರೆ, ಇದನ್ನು ಪರೀಕ್ಷಿಸಲೆಂದೇ ನಡೆಸಿದ ಪ್ರಯೋಗಗಳು ಇಂತಹ ಮಾತುಗಳು ಸುಳ್ಳು ಎನ್ನುತ್ತವೆ.

ಇನ್ನು, ಒಂದೇ ಬಗೆಯ ನೌಕರಿಗಳಲ್ಲಿ ತೊಡಗಿಕೊಂಡಿರುವ ಹೆಂಗಸರ/ಗಂಡಸರ ಸಾಮರ್ಥ್ಯಗಳನ್ನು ಕುರಿತಂತೆಯೂ ಸಾಮರ್ಥ್ಯದ ಕುರುಹುಗಳನ್ನು ಲಿಂಗಾಧಾರಿತ ನೆಲೆಗಳಲ್ಲೇ ಕಾಣಬಹುದು ಎಂಬ ವಾದವೂ ಬಂದಿದೆ. ಗುಣ-ಅವಗುಣ, ಬಲ-ದೌರ್ಬಲ್ಯಗಳು ಹೆಣ್ಣು / ಗಂಡುಗಳಲ್ಲಿ ಸಮಾನವಾಗಿಯೇ ಇರುತ್ತವೆ. ಆದರೆ ಆಯಾ ಸಂದರ್ಭಗಳಲ್ಲಿ ದೊರೆಯುವ ಅವಕಾಶಗಳು ಮತ್ತು ಪರಿಸರದ ಅನುಕೂಲ-ಅನಾನುಕೂಲಗಳನ್ನೂ ಅವಲಂಬಿಸಿ ಸೋಲು ಗೆಲುವುಗಳು ಪ್ರಕಟಗೊಳ್ಳುತ್ತವೆ. ಬಹುತೇಕವಾಗಿ ಪುರುಷ ಪ್ರಧಾನತೆಯೇ ಆಳುವ ಕ್ಷೇತ್ರಗಳಿವೆ ಎಂದ ಮೇಲೆ ಪುರುಷನ ಸಾಮರ್ಥ್ಯವೂ ಮಹಿಳೆಯ ಅಸಾಮರ್ಥ್ಯವೂ ಸಾಬೀತುಗೊಳ್ಳುವಲ್ಲಿ ಕಷ್ಟವೇನೂ ಆಗಲಾರದು.

ಎಲ್ಲೋ ಕೆಲವು ಅಪರೂಪದ ಪ್ರಸಂಗಗಳನ್ನು ಹೊರತು ಪಡಿಸಿದರೆ ಉದ್ಯೋಗ ಕ್ಷೇತ್ರದಲ್ಲಿ ಹೆಣ್ಣಿಗೆ ದೊರೆಯುವುದು ಅಧೀನ ದರ್ಜೆಯ ಅವಕಾಶಗಳೇ. ಈ ಸಂದರ್ಭಗಳಲ್ಲಿ ಅವಳು ಎದುರಿಸಬೇಕಾಗಿ ಬರುವ ದಾರುಣ ಸಮಸ್ಯೆಗಳನ್ನು ಎಷ್ಟೆಷ್ಟು ವಿವರಿಸಿದರೂ ಮುಗಿಯುವುದಿಲ್ಲ. ಇನ್ನು ಒಂದು ವೇಳೆ ಮಹಿಳೆಯು ಮೇಲಧಿಕಾರಿ ಯಾಗುವ, ಅವಳ ಕೈಕೆಳಗೆ ಪುರುಷನು ನೌಕರಿ ಮಾಡಬೇಕಾಗುವ ಸಂದರ್ಭ ಬಂದಾಗಲೂ ಹೆಣ್ಣಿನ ಸ್ಥಿತಿ ನಿರಾಳವಾದುದೆಂದೇನಿರುವುದಿಲ್ಲ. ಆ ಮೇಲಧಿಕಾರಿ ಹೆಣ್ಣು ಎಂತೆಂತಹ ಸಂಕೀರ್ಣ ರೂಪದ ದೌರ್ಜನ್ಯಗಳನ್ನು, ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ ಎಂಬುದೂ ವರ್ಣನಾತೀತವೇ. ಆ ಹೆಣ್ಣು ಇಲ್ಲವೇ ಸೋಲನ್ನು ಒಪ್ಪಬೇಕಾಗುತ್ತದೆ, ಅಥವಾ ಅನಗತ್ಯವಾಗಿ ಕಠೋರತೆಯನ್ನು ಆರೋಪಿಸಿಕೊಂಡು ಜನವಿರೋಧಿಯಾಗುವ ಜೊತೆಗೆ ನಗೆಪಾಟಲಿಗೂ ಒಳಗಾಗಬೇಕಾಗುತ್ತದೆ.

ಪ್ರಸ್ತುತದಲ್ಲಿ ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಅಧ್ಯಕ್ಷ ಉಪಾಧ್ಯಕ್ಷರುಗಳಾಗಿ ಬರುವ ಮಹಿಳೆಯರ ಬಗ್ಗೆ ಬರುವ ಟೀಕೆ ಟಿಪ್ಪಣಿಗಳನ್ನಿಲ್ಲಿ ಗಮನಿಸಬಹುದು. ಈ ಬಗೆಯ ಅಧಿಕಾರಿಗಳನ್ನಾಗಲೀ, ಮಹಿಳಾ ಮೀಸಲಾತಿ ಬಿಲ್‌ಗಳಂತಹ ಸಂಗತಿಗಳನ್ನಾಗಲೀ ಈ ಸಮಾಜವು ಪ್ರಸ್ತಾಪಿಸುತ್ತಿರುವುದರ ಹಿನ್ನೆಲೆಗಳೇನೂ ನೇರ, ಸರಳ ಹಾಗೂ ಪ್ರಾಮಾಣಿಕ ಸಂವೇದನೆಗಳ ಫಲಿತಗಳಲ್ಲ. ದೀರ್ಘಕಾಲದಿಂದ ಪುರುಷ ಚಿಂತನೆಯು ಹೆಣೆಯುತ್ತಾ ಬಂದಿರುವ ಸಂಕೋಲೆಗಳು ಹಲವಾರು ಒತ್ತಡಗಳಿಗೆ ಮಣಿದು ಅಲ್ಲಲ್ಲಿ

ಸಡಿಲಗೊಳ್ಳುತ್ತಿವೆ. ಇವನ್ನು ಭದ್ರ ಪಡಿಸುವ ಮತ್ತೆಷ್ಟೋ ಹುನ್ನಾರಗಳನ್ನು ಪುರುಷ ಚಿಂತನೆಯು ಒಡ್ಡುತ್ತಲೂ ಇದೆ. ಸಮಾಜದ ಹಲವು ಸ್ತರಗಳಲ್ಲಿ ಪ್ರಾತಿನಿಧ್ಯವನ್ನು ಪಡೆದುಕೊಳ್ಳುವಲ್ಲಿ ಹೆಣ್ಣು ಅಲ್ಪ ಸ್ವಲ್ಪ ಗೆಲುವನ್ನು ಸಾಧಿಸಿದರೂ ಪುರುಷ ಚಿಂತನೆಯು ತನ್ನಲ್ಲಿ ಈಗಾಗಲೇ ಸಂಚಿತವಾಗಿರುವ ಹಲವು ತಂತ್ರಗಳೊಂದಿಗೆ ಹೆಣ್ಣಿನ ಮೇಲೆ ದಾಳಿಯನ್ನು ಆರಂಭಿಸುತ್ತದೆ.

ಇದಕ್ಕೆ ಒಂದು ಸಣ್ಣ ನಿದರ್ಶನವಾಗಿ ಮಹಿಳಾ ಮೀಸಲಾತಿ ಮಸೂದೆಯ ಪ್ರಸ್ತಾಪವನ್ನು ಸುತ್ತುವರೆದಂತೆ ನಡೆದಿರುವ ನಮ್ಮ ರಾಜಕೀಯ ವಿದ್ಯಮಾನಗಳನ್ನು ಗಮನಿಸಬಹುದು. ನಮ್ಮ ರಾಜಕೀಯ ಪಕ್ಷಗಳು ಮೀಸಲಾತಿಯಂತಹ ಪ್ರಸ್ತಾಪಗಳನ್ನು ಜಾತಿ, ವರ್ಗಗಳಿಗೆ ಸಂಬಂಧಿಸಿದಂತೆ ಎತ್ತಿದಾಗಲಾಗಲೀ, ಈಗ ಮಹಿಳೆಯರನ್ನು ಕುರಿತಂತೆ ಹೇಳುತ್ತಿರುವಾಗಲಾಗಲೀ ಆಯಾ ಸಮುದಾಯದ ಹಿತಚಿಂತನೆಯನ್ನೇನೂ ಅವು ಪ್ರಧಾನವಾಗಿ ಪರಿಗಣಿಸಿಲ್ಲ. ಪ್ರಜಾಪ್ರಭುತ್ವದ ಆದರ್ಶಗಳು ಅಳಿವು ಉಳಿವಿನ ಪ್ರಶ್ನೆಗಳಾಗಿ ಅವುಗಳೆದುರು ನಿಂತಿವೆ. ಅಷ್ಟರಮಟ್ಟಿಗಾದರೂ ಪಕ್ಷಗಳಿಗೆ ಸೋಗನ್ನಾದರೂ ಹಾಕಲೇಬೇಕಾದ ಅನಿವಾರ್ಯವೂ ಇದೆ. ಈವರೆಗೆ ಇಂತಹ ಸೋಗಿನ ಮುಖವಾಡದ ಆದರ್ಶಗಳನ್ನು ಬಳಸಿ ಜಾತಿ, ವರ್ಗಗಳ ಭಂಡಾರಗಳನ್ನು ಸೂರೆ ಮಾಡಲಾಗುತ್ತಿದೆ. ಇದೀಗ ಅದು ಮಹಿಳಾ ಸಮುದಾಯವೆಂಬ ಭಂಡಾರಕ್ಕೆ ವಿಸ್ತರಣೆಗೊಂಡಿದೆಯಷ್ಟೆ. ದಶಕಗಳ ಕಾಲ ಮೀಸಲಾತಿ ಮಸೂದೆ ಜಾರಿಯಲ್ಲಿದ್ದರೂ ಹಿಂದುಳಿದ ಜಾತಿ, ವರ್ಗ, ಬುಡಕಟ್ಟು ಸಮುದಾಯಗಳು ತಮ್ಮ ಬವಣೆಗಳಿಂದ ಮುಕ್ತಗೊಳ್ಳಲು ಸಾಧ್ಯವೇ ಆಗಬಾರದೆಂಬಂತೆ ಹುನ್ನಾರಗಳು ಹೇಗೆ ಜಾರಿಯಲ್ಲಿವೆಯೋ, ಮಹಿಳಾ ಮೀಸಲಾತಿ ಎಂಬ ಈ ಮಸೂದೆಯ ವಿಚಾರಕ್ಕೂ ಆ ಹುನ್ನಾರಗಳ ದಾಳಿಯೇ ಮುಂದುವರೆದಿದೆ. ಕೊಟ್ಟಂತೆಯೂ ಆಗಬೇಕು, ದಕ್ಕಲೂ ಬಾರದು ಎಂಬ ತಂತ್ರ. ಜಾತಿ, ವರ್ಗಗಳ ಮೀಸಲಾತಿಯನ್ನು ಮಹಿಳಾ ಮೀಸಲಾತಿಯೊಂದಿಗೆ ಕಲಸು ಮೇಲೋಗರ ಮಾಡಿ ಗೊಂದಲಗೊಳಿಸುವ ಬೌದ್ಧಿಕ ಕಸರತ್ತುಗಳು ನಡೆಸುವ ಆಟಗಳು ನ್ಯಾಯದ ತೀರ್ಮಾನವನ್ನು ಮುಂದೂಡುವಷ್ಟಕ್ಕಾದರೂ ನೆರವಾಗುತ್ತಿವೆ. ಪ್ರಾಮಾಣಿಕತೆಯ ಕಿಂಚಿತ್ತು ಅಂಶವೂ ಈ ಢೋಂಗಿ ಸಾಮಾಜಿಕ ಚಿಂತನೆಯಲ್ಲಿ ಕಾಣಲಾರದು. ಏನೇ ಆದರೂ ನಯ ವಂಚನೆಯ ಈ ಆಟವನ್ನು ಇನ್ನಷ್ಟು ಮತ್ತಷ್ಟು ಮುಂದುವರೆಸಲು ಸಾಧ್ಯವಾಗಲಾರದೆಂಬ ಆತಂಕಗಳೂ ಈ ಹುನ್ನಾರಗಳೆದುರು ಇರುವುದು ನಿಜ. ಹಾಗಾಗಿ ಈಗ ಅವು ನಯದ ಭಾಗವನ್ನು ಕಳೆದುಕೊಂಡು ತಮ್ಮ ಮೂಲ ರೂಪಗಳಲ್ಲಿ ಕಾಣಲಾರಂಭಿಸಿವೆ. ಇದಕ್ಕೊಂದು ನಿದರ್ಶನವಾಗಿ ಸದ್ಯದ ಒಂದು ಪ್ರಸಂಗವನ್ನು ಗಮನಿಸಬಹುದು. ಮಹಿಳಾ ಮೀಸಲಾತಿಯ ಪ್ರಸ್ತಾಪಕ್ಕೆ ತೊಡಗಿದ ಮೊದಲ ರಾಜಕೀಯ ಪಕ್ಷಗಳಲ್ಲಿ ಜನತಾದಳ ಪ್ರಮುಖವಾದುದು. ತನ್ನ ಗದ್ದುಗೆಯನ್ನು ಉಳಿಸುವಲ್ಲಿ ಈ ಪ್ರಸ್ತಾಪ ನಿರ್ಣಾಯಕವಾದೀತು ಎಂಬ ಆಸೆ ಅಷ್ಟೇನೂ

ಫಲಕಾರಿಯಾಗಲಿಲ್ಲ. ಆದರೂ ತನ್ನ ಮಾತುಗಳಲ್ಲೇ ಸಿಲುಕಿಕೊಂಡಿರುವುದರಿಂದಾಗಿ ಸದ್ಯಕ್ಕೆ ನಿರಾಕರಿಸುವುದೂ ಸಾಧ್ಯವಿಲ್ಲ. ಪಾಲಿಸಲು ಇಷ್ಟವಿಲ್ಲ. ಈ ಎಲ್ಲ ಸಂಗತಿಗಳೂ ಈ ರಾಜಕೀಯ ಪ್ರಸಂಗದಲ್ಲಿ ಅನುಮಾನಕ್ಕೆ ಆಸ್ಪದವಿಲ್ಲದೆ ಮುಖ ತೋರಿಸಿಬಿಟ್ಟಿವೆ. ರಾಜ್ಯ ಜನತಾದಳವು ತನ್ನ ಕಾರ್ಯಕರ್ತರನ್ನು ತೃಪ್ತಿಗೊಳಿಸಲು ವಿವಿಧ ಮಂಡಳಿಗಳಲ್ಲಿ ಸಚಿವ ದರ್ಜೆಯ ಅಧ್ಯಕ್ಷ ಪದವಿಗಳನ್ನು ಸೃಷ್ಟಿಸಿತು. ಇವುಗಳಿಗೆ ನೇಮಕಾತಿಗಳನ್ನು ಮಾಡುವಾಗ ಕೇವಲ ನಾಲ್ಕಾರು ಮಹಿಳೆಯರಿಗಷ್ಟೇ ಅವಕಾಶವನ್ನು ನೀಡಲಾಯಿತು. ಈ ಪೈಕಿ ಮಹಿಳೆಗೆ ಮಾತ್ರವೇ ಕೊಡಬಹುದಾಗಿದ್ದ ಒಂದು ಸ್ಥಾನ, ಜಾತಿ ಮೀಸಲಾತಿಯ ಪರಿಧಿಯೊಳಗೆ ಸೇರಬೇಕಾಗಿದ್ದ ಒಂದು ಸ್ಥಾನಗಳೂ ಸೇರಿಹೋದವು. ಪಕ್ಷದ ಪ್ರಧಾನ ಉದ್ದೇಶವೆಂದು ಘೋಷಿಸಲಾದ ಮಹಿಳಾ ಮೀಸಲಾತಿಯ ಮಾತನ್ನು ಹೀಗೆ ಮೂಲೆಗೆ ತಳ್ಳಿ ಬಿಡಲಾಯಿತು. ಸಹಜವಾಗಿ ಈ ಬಗ್ಗೆ ಟೀಕೆಗಳು ಬಂದವು. ಪಕ್ಷದ ಅಧ್ಯಕ್ಷರಲ್ಲಿ ವಿವರಣೆಯನ್ನು ಪತ್ರಕರ್ತರು ಕೇಳಿದರು. ಆ ಅಧ್ಯಕ್ಷರು ನಿರಾಳವಾಗಿ 'ಪಕ್ಷದ ಇನ್ನಿತರ ಹಿರಿಯ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಬೇಕಾಗಿ ಬಂದದ್ದರಿಂದ ಹೀಗಾಯಿತು' ಎಂದು ವಿವರಿಸಿದರು. ಇಂಥಾ ವಿಷಾದನೀಯ ಮಾತುಗಳ ಬಗ್ಗೆ ಯಾವ ಸಂಕೋಚವೂ ಇಲ್ಲವೆಂದಾದರೆ ಪಕ್ಷವು ಮಹಿಳೆಯರ ಪರವಾಗಿ ತೋರಿದ್ದ ನಿಲುವಿನ ಅರ್ಥವನ್ನು ಹುಡುಕಬೇಕೆಂದಾಯಿತು. ಪುರುಷರಿಗೆ ಅಗತ್ಯವಿದೆ ಎನಿಸಿಬಿಟ್ಟರೆ, ಮಹಿಳೆಯರ ಪಾಲಿನದು ಎಂದು ಮೀಸಲಿಟ್ಟಿದ್ದನ್ನು ಕಿತ್ತು ಕೊಟ್ಟರಾಯಿತು ಎಂಬಂತಾಯಿತಲ್ಲ. ಹೀಗಾದದ್ದು ಈ ಒಂದು ಪ್ರಸಂಗದಲ್ಲಿ ಎಂದೇನಲ್ಲ. ಎಂದಿನಿಂದಲೂ ನಡೆಯುತ್ತಾ ಬಂದಿರುವುದೇ ಹೀಗೆ ಎಂಬುದು ಸ್ವಲ್ಪವೇ ಸೂಕ್ಷ್ಮವಾಗಿ ಗಮನಿಸಿದರೂ ಕಾಣುವಂಥದೇ. ಆದರೆ ಇಲ್ಲಿನ ಪ್ರಸಂಗದಲ್ಲಿ ಸೂಕ್ಷ್ಮ ಗೀಕ್ಷ್ಮಗಳೇನೂ ಇಲ್ಲ. ಧಾಣಾ ಧಂಗುರವಾಗಿ ಜಾರಿಗೊಳಿಸಲಾಯಿತು, ಸಾರ್ವಜನಿಕವಾಗಿ ಸಾರಲಾಯಿತು. ಈ ಪ್ರದರ್ಶನ ಆತಂಕಕಾರಿಯಾಗಿದೆ. ಇಡೀ ಪ್ರಸಂಗ ನಮಗೆ ಹಲವು ಸೂಚನೆಗಳನ್ನು ನೀಡುವಂತಹುದಾಗಿದೆ. ಮಹಿಳೆಯು ತನ್ನ ಹಕ್ಕುಗಳನ್ನು ಪಡೆಯಬೇಕೆಂದು ಹೋರಾಟಗಳನ್ನು ನಡೆಸುತ್ತಿದ್ದಾಳೆಂದಾಗ ಮೊದಲಿಗೆ ಅವಳನ್ನು 'ನೀನು ಇಂಥದ್ದಕ್ಕೆ ಲಾಯಕ್ಕು, ಇದನ್ನನುಸರಿಸುವುದರಲ್ಲಿ ನಿನ್ನ ಹಿತವಿದೆ' ಎಂಬಂತಹ ಅನುನಯದ ಬಗೆಯ ಧಮುಕಿಯನ್ನು ಹಾಕಲಾಗುತ್ತದೆ. ಮುಂದೆ ತರ್ಕ ವಿತರ್ಕಗಳ ಬೌದ್ಧಿಕ ಕಸರತ್ತುಗಳನ್ನು ಮಾಡಿ ಒಪ್ಪಿಸಲು ಪ್ರಯತ್ನಿಸಲಾಗುತ್ತದೆ. ಇಲ್ಲಿಯೂ ಬೆದರಿಕೆಯ ಅಂಶವು ಬೆರೆತೇ ಇರುತ್ತದೆ. ಈ ಯಾವುದಕ್ಕೂ ಬಗ್ಗದೆ ಹಕ್ಕಿಗಾಗಿ ಹಟತೊಟ್ಟು ನಿಂತರೆ ದಂಡದ ಪ್ರಯೋಗ ಇದ್ದೇ ಇದೆ. ಒಟ್ಟಿನಲ್ಲಿ ಮಹಿಳೆಯು ತನ್ನ ದನಿಯನ್ನು ಎತ್ತುವ ಎಲ್ಲ ಪ್ರಯತ್ನಗಳನ್ನೂ ಹತ್ತಿಕ್ಕಲಾಗುತ್ತದೆ. ದಾರಿ ಯಾವುದಾದರೂ ಸರಿ. ತನ್ನ ಸಾಮರ್ಥ್ಯವನ್ನು ನಿರೂಪಿಸಲೇ ಬೇಕೆಂದು ಹೆಣ್ಣು ಪ್ರಯತ್ನಿಸುವಾಗಿನ ಸಂದರ್ಭಗಳಂತೂ ದಯನೀಯವೆನಿಸಿಬಿಡುತ್ತದೆ. ಧರ್ಮಬೋಧನೆಯಲ್ಲಿ ನಿರತಳಾಗಿದ್ದ ಮಹಿಳೆಯೊಬ್ಬಳ ಉಪನ್ಯಾಸವನ್ನು ಕೇಳಿದ ಮಹನೀಯನೊಬ್ಬನಿಗೆ ಅವಳು 'ಹಿಂಗಾಲುಗಳ

ಮೇಲೆ ನಿಂತು ನರ್ತಿಸುತ್ತಿರುವ ನಾಯಿಯ ಹಾಗೆ' ಕಂಡಳಂತೆ. ಆಕೆಯ ಸಾಧನೆಯ ಮಟ್ಟವನ್ನು ಕಾಣುವ ಯತ್ನವಿರಲಿ, ಅವಳ ಮುಖಕ್ಕೆ ಇದೊಂದು ಬೇರೆಕೇಡು ಎಂಬ ತಿರಸ್ಕಾರದ ಈ ವ್ಯಾಖ್ಯಾನ ನಮ್ಮ ಸಮಾಜ ವ್ಯವಸ್ಥೆಗೆ ಹಿಡಿದ ಒಂದು ಕನ್ನಡಿಯೇ ಆಗಿದೆ. ನಮ್ಮ ದಿನನಿತ್ಯದ ಗೃಹ ಪರಿಸರಗಳಿಂದ ಹಿಡಿದು ಎಲ್ಲೆಡೆಯೂ ಮಹಿಳೆಗೆ ಈ ಸಮಸ್ಯೆ ಇದ್ದೇ ಇದೆ. ತನ್ನ ಸಮರ್ಥನೆಗೆಂದು ಅವಳು ಮಾಡುವ ಪ್ರಯತ್ನಗಳೆಲ್ಲವನ್ನು ಈ ಸಮಾಜವು ಅಲ್ಲಗಳೆಯುತ್ತಾ ಅವಳನ್ನು ವಿಡಂಬಿಸುತ್ತದೆ, ದೈನಾಸಿಯನ್ನಾಗಿ ಮಾಡಿಬಿಡಲು ಹವಣಿಸುತ್ತದೆ. ಸಮಾಜದ ಈ ಕಾಠಿಣ್ಯವನ್ನು, ಕ್ರೌರ್ಯವನ್ನು ಎದುರಿಸುವ ಸೂಕ್ತ ವಿಧಾನವೊಂದನ್ನು ಮಹಿಳೆ ಇನ್ನೂ ಕಂಡುಕೊಳ್ಳಬೇಕಾಗಿದೆ. ಹೆಂಡಂದಿರ ಕಾಟಕ್ಕೆ ಒಳಗಾದ ಪುರುಷರಿಗೇನೂ ಕಮ್ಮಿಯಿಲ್ಲ ಎಂಬುದನ್ನು ನಿರೂಪಿಸಲು ಯತ್ನಿಸುವ ಹತ್ತು ಹಲವು ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಅಭಿವ್ಯಕ್ತಿಗಳು ರೋಗ ಪೀಡಿತ ಪುರುಷ ಚಿಂತನೆಯ ಸಾಕಾರ ರೂಪಗಳಾಗಿವೆ. ಕೀಳು ಅಭಿರುಚಿಯ ಈ ಅಭಿವ್ಯಕ್ತಿಗಳು ಪುರುಷ ಚಿಂತನೆಯ ಕ್ರೌರ್ಯದ ಪರ್ಯಾಯ ರೂಪಗಳೂ ಹೌದು. ನಾಯಿಗಿಂತಲೂ ಕಡೆಯಾಗಿ ಹೆಣ್ಣನ್ನು ಪುರುಷನು ನಡೆಸಿಕೊಳ್ಳುತ್ತಾ ಬಂದಿರುವ ಈ ದೀರ್ಘ ಪ್ರಯಾಣದಲ್ಲಿ ರೋಸಿದಾಗೊಮ್ಮೆ ಆ ನಾಯಿ ತಿರುಗಿ ಬೀಳುವುದನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆನ್ನುವುದೂ ಆಶ್ಚರ್ಯದ ವಿಷಯವೂ ಅಲ್ಲ.

ಈ ಲೋಕವನ್ನು ತನ್ನಿಷ್ಟದಂತೆ ಅನುಭವಿಸುತ್ತಾ, ವ್ಯಾಖ್ಯಾನಿಸುತ್ತಾ, ತಾನೇ ಈ ಪ್ರಪಂಚದ ಕೇಂದ್ರವೆಂದು ಬೀಗುತ್ತಾ ಬಂದಿರುವ ಪುರುಷನಿಗೆ, ಹೆಣ್ಣಿಗೂ ಕೂಡ ಈ ಲೋಕವನ್ನು ಕುರಿತಂತೆ ಒಂದು ಅಭಿಪ್ರಾಯವಿರುವುದು ಸಾಧ್ಯ ಎಂಬ ಗುಮಾನಿಯೂ ಇದ್ದಂತಿಲ್ಲ. ಅವಳು ತಾನು ಕಂಡದ್ದನ್ನು ಅಭಿವ್ಯಕ್ತಿಸಲು ತೊಡಗುವುದಂತೂ ಅಸಾಧ್ಯವೇ ಆಗಿಬಿಡುತ್ತದೆ. ಹಾಗೊಮ್ಮೆ ಪ್ರಯತ್ನಿಸಿದರೂ ಅರ್ಥಹೀನವೆನಿಸಿಬಿಡುತ್ತದೆ. ಅಂಥದೊಂದು ಪ್ರಸಂಗವನ್ನು ಸಿಂಥಿಯಾ ಒಜಿಕ್ ಎಂಬಾಕೆ ನಿರೂಪಿಸುತ್ತಾಳೆ : 'ಹೆಣ್ಣಿಗೆ ಕಾಲೇಜು ಶಿಕ್ಷಣ ಬೇಕೇ?' ಎಂಬ ಒಂದು ಚರ್ಚಾಸ್ಪರ್ಧೆ. ಸಭಾಗೃಹ ಪ್ರೇಕ್ಷಕರಿಂದ ತುಂಬಿದೆ. ಆದರೆ ಮಾತನಾಡಲಿದ್ದವರು ಮೂವರು ಮಾತ್ರವೇ. ಮಾನವಶಾಸ್ತ್ರದ ಒಬ್ಬ ಪ್ರೊಫೆಸರ್. ಈಕೆ ಹೆಂಗಸು. ಒಬ್ಬ ಚರಿತ್ರೆ ಪ್ರೊಫೆಸರ್. ಒಬ್ಬ ಸೈಕಾಲಜಿ ಪ್ರೊಫೆಸರ್. ಇವರಿಬ್ಬರೂ ಗಂಡಸರು. ಲೇಡೀಸ್ ಫಸ್ಟ್ ಎನ್ನುವ ಸೋಗಿನ ನಾಗರಿಕತೆಗನುಸಾರವಾಗಿ ಆಕೆ ಮೊದಲು ಮಾತನಾಡಿದಳು. ವಿಷಯವನ್ನು ಕುರಿತಂತೆ ಉನ್ನತ ಶಿಕ್ಷಣದಲ್ಲಿ ಹೆಣ್ಣಿಗೆ ಇರುವ ಅವಕಾಶಗಳು, ಸಮಸ್ಯೆಗಳು, ಪರಿಹಾರೋಪಾಯಗಳು ಮೊದಲಾಗಿ ಒಬ್ಬ ಶಿಕ್ಷಿತ ಹೆಣ್ಣಾಗಿ ತನ್ನ ಅನುಭವಗಳೇನು ಎಂಬ ಹಿನ್ನೆಲೆಯಲ್ಲಿ ಮಾತನಾಡಿದಳು. ಸಹಜವಾಗಿ ಮನೆ, ಗಂಡ, ಮಕ್ಕಳು, ಅವರ ಲಾಲನೆ ಪಾಲನೆ, ಅತ್ತೆ ಮಾವ, ತಂದೆ ತಾಯಿ, ಮನೆಗೆಲಸ-ಎಲ್ಲ ಸಂಗತಿಗಳೂ ಬಂದವು. ಹೆಣ್ಣು ಇವೆಲ್ಲವನ್ನೂ ಸಂಭಾಳಿಸುತ್ತಾ ಸಾಮಾಜಿಕವಾಗಿ

ಉಪಯುಕ್ತಳೆನಿಸಬೇಕು ಎಂಬ ಅಗತ್ಯವನ್ನು ನಿರಾಕರಿಸದೆ, ಇವೆಲ್ಲದರ ನಡುವೆ ಅವಳ ಉನ್ನತ ಶಿಕ್ಷಣದ ಸಾಧ್ಯತೆಗಳನ್ನು ಕುರಿತು ಆಕೆ ಪ್ರಸ್ತಾಪಿಸಿದಳು. ವಾಸ್ತವವಾಗಿ ಈ ವಿಧಾನ ಅನುಭವವನ್ನು ಆಧರಿಸಿದ ಪ್ರಾಮಾಣಿಕ ರೀತಿಯದಾಗಿತ್ತು. ಆದರೆ ಇದಕ್ಕೆ ದೊರಕಿದ ಪ್ರತಿಕ್ರಿಯೆ ಮಾತ್ರ ಅತ್ಯಂತ ಉದಾಸೀನದ್ದಾಗಿತ್ತು. ಆಕೆಯನ್ನು ಯಾರೂ ಪ್ರಶ್ನಿಸಲೂ ಇಲ್ಲ, ವಿರೋಧಿಸಲೂ ಇಲ್ಲ: ಆದರೆ ಗಂಭೀರವಾದ ಮಾತೆಂದು ಪರಿಗಣಿಸಲೂ ಇಲ್ಲ. ಪ್ರೇಕ್ಷಕರ ನಡುವೆ ಎದ್ದ ಗುಸುಗುಸು ಪಿಸಪಿಸಗಳನ್ನು ಕೇಳುತ್ತಾ ಆಕೆ ತನ್ನ ಮಾತನ್ನು ಮುಗಿಸಿ ಕೂತಳು. ಆಮೇಲಿನ ಸರದಿ ಆ ಚರಿತ್ರೆ ಪ್ರೊಫೆಸರನದು ಮತ್ತು ಆ ಸೈಕಾಲಜಿ ಪ್ರೊಫೆಸರನದು. ಅವರಿಬ್ಬರೂ ಬಗೆಬಗೆಯ ಲಘುವಾದ ಜೋಕುಗಳನ್ನು ಹುಡಿ ಹಾರಿಸುತ್ತಾ ಆಕೆಯ ಉಪನ್ಯಾಸನವನ್ನು ವಿಡಂಬನೆ ಮಾಡಿಬಿಟ್ಟರು. ಸಾಲದೆಂಬಂತೆ 'ಹೆಂಗಸನ್ನು ಉನ್ನತ ಹುದ್ದೆಗೆ ಏರಿಸಿದರೆ ಹೀಗೇ ಆಗೋದು' ಅನ್ನುವ ವ್ಯಾಖ್ಯಾನ ಬೇರೆ. ಈಗಂತೂ ಪ್ರೇಕ್ಷಕರು ಈ ವ್ಯಾಖ್ಯಾನವನ್ನು ಅನುಮೋದಿಸಲೆಂಬಂತೆ ಹುಚ್ಚೆದ್ದು ಚಪ್ಪಾಳೆ ತಟ್ಟುತ್ತಾ ನಗೆಗಡಲಿನಲ್ಲಿ ಮುಳುಗಿದರು. ಡಿಬೇಟಿಗೆ ಒಡ್ಡಿದ್ದ ವಿಷಯವೇ ನಗೆ ಪಾಟಲಿಗೊಳಗಾಯಿತು. ಈ ಪ್ರಸಂಗದಲ್ಲಿ ಎರಡು ಸಂಗತಿಗಳು ಗಮನಾರ್ಹ. ಹೆಂಗಸನ್ನು ಕುರಿತದ್ದೇ ಆದ ಸಮಸ್ಯೆಯೊಂದನ್ನು ಎತ್ತಿಕೊಂಡಾಗಲೂ ಹೆಂಗಸಿನ ಅನುಭವದ ಮಾತುಗಳು ಗೇಲಿಗೊಳಗಾಯಿತೆಂಬದು : ಮತ್ತು ಈ ಬಗೆಗಿನ ಗಂಡಸಿನ ವ್ಯಾಖ್ಯಾನವು ಅನುಮೋದನೆಯನ್ನು ಪಡೆಯಿತು ಎಂಬುದು. ಜೊತೆಗೆ ವಿಷಯವನ್ನು ಸೂಕ್ಷ್ಮಗಳಲ್ಲಿ ಗ್ರಹಿಸುವ, ಮಂಡಿಸುವ ಸಾಮರ್ಥ್ಯವಿದ್ದ ವಿದ್ಯಾವಂತ ಹೆಣ್ಣು ಕೂಡ ಈ ಸಮಾಜವು ತೋರುವ ಬೌದ್ಧಿಕ ಕ್ರೌರ್ಯವನ್ನು ಎದುರಿಸಲು ವಿಫಲಳಾದಳೆಂಬುದು ಹೆಣ್ಣಿನ ಈ ಸಮಸ್ಯೆಯನ್ನು ಕುರಿತು ಎಷ್ಟೋ ಹೇಳುತ್ತದೆ. ಈ ಪ್ರಸಂಗವನ್ನು ನೆನೆದರಂತೂ ಈ ಸಮಾಜದಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ನಿರೂಪಿಸುವ ಅವಕಾಶವೆಂಬುದು ಸದ್ಯಕ್ಕಂತೂ ಬಗೆ ಹರಿಯುವ ಮಾತೆಂದು ತೋರುವುದಿಲ್ಲ.

ಅಶಿಕ್ಷಿತ ಹೆಣ್ಣಿನ ಮಾತಿರಲಿ, ಶಿಕ್ಷಿತಳಾದ ಹೆಣ್ಣಿನ ಪರಿಸ್ಥಿತಿಯೂ ಸದ್ಯಕ್ಕೆ ಆಶಾದಾಯಕವಾಗಿಲ್ಲ ಎಂಬುದಕ್ಕೆ ಯಾವುದೋ ದೇಶದಲ್ಲಿ ಯಾರೋ ಒಬ್ಬಾಕೆ ನಡೆಸಿದ ಈ ಅಧ್ಯಯನವನ್ನೇನೂ ಆಧರಿಸಬೇಕೆಂದಿಲ್ಲ. ಇಂತಹ ಚಿತ್ರವತ್ತಾದ ಹಲವಾರು ಪ್ರಸಂಗಗಳನ್ನೂ ನಮ್ಮ ಸುತ್ತ ಮುತ್ತಲಿನಲ್ಲೇ ಹೇರಳವಾಗಿ ಕಾಣಬಹುದು. ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಯಾವ ಕ್ಷೇತ್ರವೂ ಹೊರತಾಗಿ ನಿಲ್ಲಲಾರದು.

ಮಹಿಳೆಯ ಪ್ರಯತ್ನಗಳನ್ನು 'ಹಿಂಗಾಲಿನ ಮೇಲೆ ನಿಂತು ನರ್ತಿಸುತ್ತಾ ಒಲೈಸುವ ನಾಯಿಗೆ' ಹೋಲಿಸುತ್ತಾ ಅಹಂಕಾರದಿಂದ ಬೀಗುವ ಯಾವ ಪುರುಷನಿಗೂ, ಒಟ್ಟಾರೆ ಮಾನವ ಪೀಳಿಗೆಯ ವಾರಸುದಾರನೆಂಬಂತೆ ನಾಗರಿಕತೆ, ಸಂಸ್ಕೃತಿ, ಪ್ರಗತಿ ಎಂಬಂತಹ

ಮಾತುಗಳನ್ನಾಡುವ ಹಕ್ಕು ಇರುವುದಿಲ್ಲ. ಆದರೆ ಅವನು ಹಾಗೆ ಆಡದೆ ಉಳಿಯುವುದೂ ಇಲ್ಲ. ಇಂತಹ ಮಾತುಗಳನ್ನು ಅವನ ಭ್ರಮಾತ್ಮಕ ಬೌದ್ಧಿಕತೆಯ ಕುರುಹುಗಳೆಂದು ಮಾತ್ರ ಪರಿಗಣಿಸಿ ಅವಗಣನೆ ಮಾಡುವುದು ಇಂದಿನ ಮಹಿಳೆಯ ಎದುರು ಇರುವ ಒಂದು ದಾರಿ. ಈ ಆತ್ಮವಿಶ್ವಾಸದೊಂದಿಗೆ ಮಾತ್ರ ಅವಳಿಗೆ ತನ್ನ ಮುಂದಿನ ದಾರಿ ಕಾಣುವುದು ಸಾಧ್ಯವಾಗುತ್ತದೆ.

ಹೆಣ್ಣಿನ ಸಂವೇದನೆ-ಬಾಯಾರಿದ ಕುಡಿ

ಜಗತ್ತಿನ ಬಹುತೇಕ ಎಲ್ಲ ಸಮಾಜಗಳೂ ಪುರುಷ ಪ್ರಧಾನವೇ ಎಂಬ ಹಿನ್ನೆಲೆಯಲ್ಲಿಯೇ, ಒಟ್ಟಾರೆಯಾಗಿ ಜಗತ್ತಿನ ಎಲ್ಲ ಮಹಿಳೆಯರೂ ತಮ್ಮ ಹಕ್ಕುಬಾಧ್ಯತೆಗಳನ್ನು ದಕ್ಕಿಸಿಕೊಳ್ಳುವಲ್ಲಿ ಹೋರಾಟ ನಡೆಸಬೇಕೆಂಬ ಒಂದು ಅನಿವಾರ್ಯ ಸ್ಥಿತಿ ಇದೆ. ಹಲವು ಸಾಂಪ್ರದಾಯಿಕ ಸಂಸ್ಕೃತಿಗಳು ಮಹಿಳೆಗೆ ಗೌರವಯುತವಾದ ಸ್ಥಾನಗಳನ್ನುಕಲ್ಪಿಸಿವೆ ಎಂಬಂತೆ ಕಂಡು ಬರುವುದೂ ಉಂಟು. ತೀರಾ ವಿರಳವಾಗಿ ಕಂಡು ಬರುವ ಕೆಲವೇ ಮಾತೃಪ್ರಧಾನ ಸಮಾಜಗಳಲ್ಲಿ ಹೆಣ್ಣಿನ ಸ್ಥಿತಿಗತಿಯ ಬಗ್ಗೆ ಆಶಾದಾಯಕವಾಗಿ ಮಾತನಾಡುವ ಸಾಧ್ಯತೆಯೂ ಇರಬಹುದು. ವಾಸ್ತವವಾಗಿ ಇಂಥ ಅಪರೂಪ ಸಂದರ್ಭಗಳು ಸಹ ಕಾಲ ಗತಿಯಲ್ಲಿ ಸಿಲುಕಿ ಕ್ರಮೇಣ ಪಿತೃಪ್ರಧಾನ ವ್ಯವಸ್ಥೆಯ ಹುನ್ನಾರಗಳಿಗೆ ಶರಣಾಗುತ್ತಿವೆ. ಈ ಅಂಶವನ್ನು ಹಲವು ವಿಶ್ಲೇಷಣಾತ್ಮಕ ಅಧ್ಯಯನಗಳು ಸ್ಪಷ್ಟಪಡಿಸಿವೆ.

ಸಮಾಜವು ಮಹಿಳೆಯ ಬಗೆಗೆ ತೋರುವ ಈ ಅವಗಣನೆ ಜಗತ್ತಿನ ಎಲ್ಲೆಡೆಗೂ ಅನ್ವಯವಾಗುವ ಲಕ್ಷಣ. ಶ್ರೀಮಂತ ಹಾಗೂ ಬಡರಾಷ್ಟ್ರಗಳೆಂಬ ಭೇದವೇನಿಲ್ಲ. ಆದರೆ ಈ ಅವಗಣನೆಯ ಪರಿಣಾಮದ ಸ್ವರೂಪದಲ್ಲಿ ವ್ಯತ್ಯಾಸವಿದೆ ಎಂಬುದು ಗಮನಾರ್ಹ. ಶ್ರೀಮಂತ ರಾಷ್ಟ್ರಗಳ ಮಹಿಳೆಯರಿಗೆ ಇದು ಸಮಾನತೆಯ ಪ್ರಶ್ನೆಯಾದರೆ, ಬಡರಾಷ್ಟ್ರಗಳ ಮಹಿಳೆಗೆ ಇದು ಅಳಿವು ಉಳಿವಿನ ಪ್ರಶ್ನೆ. ಬಹುಶಃ ಈ ಕಾರಣದಿಂದ ಇವರಿಬ್ಬರೂ ನಡೆಸುವ ಹೋರಾಟವು ಭಿನ್ನ ಸ್ವರೂಪದ್ದಾಗಿರುತ್ತದೆ. ಮುಂದುವರಿದ ರಾಷ್ಟ್ರಗಳ ಮಹಿಳೆಯರ ಹೋರಾಟಕ್ಕೆ ಪ್ರಜ್ಞಾಪೂರ್ವಕವಾದ ಚಿಂತನೆ ಹಾಗೂ ಅದಕ್ಕೆ ಅನುಗುಣವಾಗಿ ಕಾರ್ಯಯೋಜನೆಗಳು ಸಾಧ್ಯ. ಜಾಗತಿಕ ನೆಲೆಯಲ್ಲಿ ಭೌದ್ಧಿಕ ಚರ್ಚೆಗಳನ್ನು ನಡೆಸುವ ಅವಕಾಶಗಳು ಸಹ ಈ ಹೋರಾಟಗಳಿಗೆ ದೊರೆಯುತ್ತವೆ. ಕೆಲವೊಮ್ಮೆ ಎಲ್ಲ ಅನುಕೂಲಗಳೂ ಇರುವ ಈ ಶ್ರೀಮಂತರ ಹೋರಾಟ ಹಾಸ್ಯಾಸ್ಪದವಾಗಿಯೋ ಅರ್ಥಹೀನವಾಗಿಯೋ ಕಂಡು ಬಿಡುವ ಸಾಧ್ಯತೆಯೂ ಇದೆ. ಆದರೆ ಇಂಥ ಹೋರಾಟಗಳಿಗೆ ಪುರುಷ ಚಾಲಿತ ಆಡಳಿತ, ಅಧಿಕಾರ, ಕಾಯಿದೆ, ಕಾನೂನುಗಳಂತಹ ರಾಜಕೀಯ ನೆಲೆಗಳನ್ನು ಎಟುಕಿಸಿಕೊಳ್ಳುವ ಸಾಮರ್ಥ್ಯವಿರುತ್ತದೆ. ಊಟ ವಸತಿಗಳಂತಹ ಮೂಲಭೂತ ಅಗತ್ಯಗಳಿಗೆ ಈ ಮಹಿಳೆಯರು ಪರದಾಡಬೇಕಾದ್ದಿಲ್ಲ. ತಮ್ಮ ಹಕ್ಕು ಬಾಧ್ಯತೆಗಳಿಗಾಗಿ, ಸ್ಥಾನಮಾನಗಳಿಗಾಗಿ ಹೋರಾಟ

ನಡೆಸಬಹುದು. ಜೀವಭಯವಿಲ್ಲವೆಂಬ ಒಂದೇ ಕಾರಣ ಅವರು ಧೈರ್ಯವಾಗಿ ನಿಲ್ಲಲು ಎಷ್ಟೋ ನೆರವಾಗುತ್ತದೆ.

ಮಹಿಳೆಯನ್ನು ಶೋಷಿಸುವ ಸಮಾಜದ ಧೋರಣೆ ಬಡರಾಷ್ಟ್ರಗಳಲ್ಲಿ ತೀವ್ರ ಪರಿಣಾಮ ಸ್ವರೂಪದ್ದು. ಹೊಟ್ಟೆ ಬಟ್ಟೆಗಿಲ್ಲದ ಅಳಿವು ಉಳಿವಿನ ಪ್ರಶ್ನೆ ಒಂದು ಕಡೆಯಾದರೆ, ಇದೇ ಬಡತನದ ಪರಿಣಾಮಗಳೇ ಆದ ಶಿಕ್ಷಣದ ಅಭಾವ, ರೋಗ-ರುಜಿನಗಳು, ನಿರುದ್ಯೋಗ, ಮಿತಿಯಿಲ್ಲದ ಸಂತಾನದಂತಹ ಸಮಾಜದ ಎಲ್ಲ ಸಾಮಾನ್ಯ ಸಮಸ್ಯೆಗಳೂ ಮಹಿಳೆಯ ತಲೆಯ ಮೇಲೆ ಹೆಚ್ಚಾಗಿ ಮಗುಚಿಕೊಳ್ಳುವ ಕಷ್ಟ ಇನ್ನೊಂದು ಕಡೆ. ಈ ಭೌತಿಕ ಕಷ್ಟಗಳು ಸಾಲದೆಂಬಂತೆ ಪುರುಷನ ಅವಗಣನೆಯನ್ನು ಎದುರಿಸಬೇಕಾದ ಅಥವಾ ಒಪ್ಪಿಕೊಳ್ಳಬೇಕಾದ ಹೀನಾಯಸ್ಥಿತಿ, ತನ್ನ ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅದರಿಂದ ಹೊರಬರಲು ಪ್ರಯತ್ನಿಸುವ ಬಗ್ಗೆ ಯೋಚಿಸಲು ಅವಳಿಗೆ ಸಮಯವೂ ಇಲ್ಲ. ಅವಕಾಶವೂ ಇಲ್ಲ. ಇದೇ ಪ್ರಕೃತಿ ನಿಯಮವೇನೋ ಎಂಬ ಭ್ರಮೆಗೆ ಒಳಗಾಗುವಷ್ಟು ಅಜ್ಞಾನದಲ್ಲಿ ಈ ಮಹಿಳೆ ಇದ್ದಾಳೆ.

ಈ ಮಧ್ಯೆ ಜಗತ್ತು ಆಧುನಿಕತೆಯತ್ತ ಧಾವಿಸುತ್ತಿದೆ. ಪಾರಂಪರಿಕ ಸಂಸ್ಕೃತಿಗಳು ಈ ಆಧುನಿಕತೆಯ ಹಲವು ಪರಿಣಾಮಗಳಿಗೆ ದಾರಿ ಮಾಡಿಕೊಡುತ್ತಿವೆ. ಆಧುನಿಕತೆಯು ಎಷ್ಟು ಒಳಿತನ್ನು ತರುತ್ತಿದೆ ಎಂಬುದು ಬೇರೆಯೇ ಪ್ರಶ್ನೆ. ಆದರೆ ಅದರ ದುಷ್ಪರಿಣಾಮಗಳಂತೂ ಸ್ಪಷ್ಟವಾಗಿ ಕಾಣುತ್ತಿವೆ. ಆ ಪೈಕಿ ಸ್ತ್ರೀಯ ಬಗೆಗಿನ ಅವಗಣನೆಯನ್ನು ಈ ಆಧುನಿಕತೆ ಪೋಷಿಸುತ್ತದೆ ಎಂಬ ಮಾತಿಗೆ ಬದುಕಿನ ಎಲ್ಲ ರಂಗಗಳಿಂದಲೂ ಪುರಾವೆಗಳನ್ನು ಒದಗಿಸಬಹುದು. ಅದರಲ್ಲೂ ಬಡರಾಷ್ಟ್ರಗಳಲ್ಲಂತೂ ಮಹಿಳೆಗೆ ಜೀವ ಹಿಡಿದು ಬದುಕುವುದೇ ದೊಡ್ಡ ಹೋರಾಟವಾಗಿ ಬಿಟ್ಟಿದೆ. ಕೃಷಿ, ವೈದ್ಯಕೀಯ, ವಿಜ್ಞಾನ-ತಂತ್ರಜ್ಞಾನಗಳಲ್ಲಿ ಜಗತ್ತು ಪ್ರಗತಿಯನ್ನು ಸಾಧಿಸುತ್ತಿರಬಹುದು. ಆದರೆ, ಈ ಪ್ರಗತಿ ಪುರುಷಪರವಾದದ್ದೇ ಹೊರತು ಇನ್ನೇನಲ್ಲ. ಇದು ಸ್ತ್ರೀಯನ್ನು ಅನುಲಕ್ಷಿಸಿಯೇ ಇಲ್ಲ. ಈ ಪ್ರಗತಿ ಅವಳ ಮೇಲೆ ಹೆಚ್ಚಿನ ಶೋಷಣೆಯನ್ನೇ ಮಾಡುತ್ತಿದೆ. ಈ ಮೊದಲು ಮನೆಯ ನಾಲ್ಕು ಗೋಡೆಗಳ ನಡುವೆಗಷ್ಟೇ ಸೀಮಿತವಾಗಿದ್ದ ಶೋಷಣೆ ಈಗ ಬಹುರೂಪಿಯಾಗಿದೆ. ನಾಲ್ಕು ಗೋಡೆಗಳಿಂದ ಬಿಡುಗಡೆಗೊಳಿಸುವ ಪ್ರಲೋಭನೆಯೊಡ್ಡಿದ ಈ ಪ್ರಗತಿ, ಮಹಿಳೆ ಮನೆಯಲ್ಲಷ್ಟೇ ಅಲ್ಲದೆ ಹೊರಗಡೆಯೂ ಅವಗಣನೆಯ ಅವಮಾನಕ್ಕೆ ಪಕ್ಕಾಗುವಂತೆ ಮಾಡಿದೆ. ಆರ್ಥಿಕ ರಂಗದಲ್ಲಿ ಉದ್ಯೋಗ, ವೇತನ ಇತ್ಯಾದಿಗಳ ಅಸಮಾನತೆಯಂತೂ ತೀರಾ ಸ್ಪಷ್ಟವಾಗಿ ಕಾಣಿಸುವಂಥವೇ. ವಿವರಗಳೇ ಬೇಕಿಲ್ಲ. ಆರ್ಥಿಕ ರಂಗವಂತೂ ಮಹಿಳೆಯನ್ನು ನಿರ್ದಯವಾಗಿ ದುಡಿಸಿಕೊಳ್ಳುತ್ತಿದೆ. ಈ ವಿಷಯದಲ್ಲಿ ಶ್ರೀಮಂತ ರಾಷ್ಟ್ರ ಬಡರಾಷ್ಟ್ರ ಎಂಬ ವಿನಾಯಿತಿಯೇನೂ ಇಲ್ಲ.

ಜಗತ್ತು ಆಧುನಿಕತೆಯತ್ತ ಚಲಿಸಿದಂತೆಲ್ಲ ಮಹಿಳೆಯ ಬಗೆಗಿನ ಅವಗಣನೆ ಹೊಸ ಹೊಸ ಅವತಾರಗಳನ್ನು ಪಡೆದುಕೊಳ್ಳುತ್ತಿದೆ. ಈಗ ಮಹಿಳೆ ಹೆಚ್ಚಿನ ಕಷ್ಟ ಪರಂಪರೆಗಳನ್ನು ಹೊರಬೇಕಾಗಿದೆ. ಮನೆಯ ಮಟ್ಟಿಗಷ್ಟೇ ಸೀಮಿತವಾಗಿದ್ದ ಶೋಷಣೆ ಸಾರ್ವಜನಿಕವಾಗಿ ಬೆಳೆದಿದೆ. ಪುರುಷ ಹೊಸ ಹೊಸ ಪ್ರಗತಿ ಮಾರ್ಗಗಳನ್ನು ಅರಸಿ ಧಾವಿಸುತ್ತಿದ್ದರೆ, ಮಹಿಳೆ ಅವನು ಹಿಂದೆ ಬಿಟ್ಟುಹೋಗುವ ಎಲ್ಲ ಕೌಟುಂಬಿಕ ಸಮಸ್ಯೆಗಳಿಗೂ ಒಬ್ಬಳೇ ತಲೆ ಯೊಡ್ಡುತ್ತಾಳೆ. ಆದರೆ ಅವಳ ಈ ಪರಿಶ್ರಮಕ್ಕೆ ಯಾವ ಗೌರವವೂ ಇಲ್ಲ. ಸಂಬಳವಿಲ್ಲದ ಕೂಲಿಯಂತೆ ಬದುಕು ಸವೆಸುತ್ತಾಳೆ. ಒಂದು ವೇಳೆ ಉದ್ಯೋಗದ ಅವಕಾಶವನ್ನು ಅರಸಿ ಹೊರಟರೆ ಅವಳಿಗೆ ದೊರಕುವುದು ಪುರುಷನು ತ್ಯಜಿಸಿದ ಕ್ಷೇತ್ರಗಳು ಮಾತ್ರ. ಏಕತಾನದ ಬೇಸರದ ಕೆಲಸಗಳು. ಸಂಬಳವೂ ಕಡಿಮೆ. ಕೆಲವು ಕ್ಷೇತ್ರಗಳಲ್ಲಿ ಒಂದಿಷ್ಟು ಹೆಚ್ಚು ಹಣ ದೊರೆತರೆ ಅದು ಸ್ತ್ರೀ ಶೋಷಣೆಯ ಬೇರೆ ಅವತಾರದ ಕಾರಣದಿಂದ. ಪ್ರವಾಸೋದ್ಯಮ, ಜಾಹೀರಾತು ಮೊದಲಾದ ಪ್ರದರ್ಶನ ವ್ಯಾಪಾರಗಳು-ಹೀಗೆ. ಅಂದರೆ ಆಧುನಿಕತೆಯ ಕಾರಣವಾಗಿ ಮಹಿಳೆಗೆ ಸ್ವಾತಂತ್ರ್ಯ, ಸಮಾನತೆಗಳು ದೊರಕಿದೆ ಎಂಬುದು ಕಂಡರೆ, ಅವು ತೋರಿಕೆಯವು ಮಾತ್ರ.

ಇಂಥ ಮಹಿಳಾ ಜಗತ್ತು ಹೊಂದಿರುವ ಸಂವೇದನೆಗಳ ಸ್ವರೂಪ ಅತ್ಯಂತ ಸಂಕೀರ್ಣ ವಾದದ್ದು. ಈ ಸಂವೇದನೆಗಳ ಅಭಿವ್ಯಕ್ತಿಗೆ ಸಮಾಜವು ಅವಕಾಶ ಕೊಟ್ಟಿದ್ದೂ ಇಲ್ಲ. ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ದೊರಕುವ ಸ್ಥಾನಮಾನ, ಬಹುಮಟ್ಟಿಗೆ ಉಳಿದ ರಂಗಗಳಲ್ಲಿ ದೊರೆಯಬಹುದಾದ ಸ್ಥಾನಮಾನಗಳ ಸ್ವರೂಪವನ್ನು ನಿರ್ದೇಶಿಸುತ್ತದೆ. ಆರ್ಥಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಸ್ವಲ್ಪ ಭದ್ರತೆಯನ್ನು ಸಾಧಿಸಿದ ಮಹಿಳೆಯರು ಮುಂದೆ ನಿಂತು ಜಗತ್ತಿನ ಎಲ್ಲ ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳಲು ಮಾರ್ಗಗಳನ್ನು ಹುಡುಕಬೇಕಾಗಿದೆ. ಬದುಕಿನ ಮೂಲಭೂತ ಅಗತ್ಯಗಳ ಪೂರೈಕೆಗಳ ಜೊತೆ ಜೊತೆಗೆ ಶಿಕ್ಷಣ, ಆರೋಗ್ಯ, ಸಾಮಾನ್ಯ ತಿಳುವಳಿಕೆಗಳ ವಿಷಯದಲ್ಲಿ ಮಹಿಳೆ ಜಾಗೃತ ಳಾಗುವುದು ಮೊದಲ ಹಂತ. ಇದು ಬಹುಮಟ್ಟಿಗೆ ಅವಳ ಮುಂದಿನ ಸಮಸ್ಯೆಗಳನ್ನು ಕ್ರಮೇಣ ನಿವಾರಿಸುತ್ತದೆ. ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ತನ್ನ ಸ್ಥಾನಮಾನಗಳನ್ನು ಭದ್ರ ಪಡಿಸಿಕೊಂಡಾಗ ಮಹಿಳೆ ಹೆಚ್ಚಿನ ಆತ್ಮ ವಿಶ್ವಾಸದಿಂದ ಮುಂದೆ ಸಾಗಲು ಸಾಧ್ಯವಾಗುತ್ತದೆ. ಮಹಿಳೆಯ ಸಂವೇದನೆಗಳೂ, ಬದುಕಿನ ಅಳಿವು ಉಳಿವುಗಳನ್ನು ನಿರ್ಧರಿಸುವ ಈ ಕ್ಷೇತ್ರಗಳಲ್ಲಿ, ಮೊದಲು ಕ್ರಿಯಾಶೀಲ ಹಂತಗಳಲ್ಲಿಯೇ ಅಭಿವ್ಯಕ್ತಗೊಳ್ಳಬೇಕು. ಆ ನಂತರದಲ್ಲಿ ಮಾತ್ರವೇ ಅವಳ ಸಂವೇದನೆಗಳು ಸೂಕ್ಷ್ಮ ಹಾಗೂ ಕಲಾತ್ಮಕ ಅಭಿವ್ಯಕ್ತಿ ಮಾರ್ಗಗಳನ್ನು ಹುಡುಕಬಹುದು. ಏಕೆಂದರೆ ಸದ್ಯ ಇರುವ ಕಲಾ ಮಾಧ್ಯಮದ ಬಹುತೇಕ ಸಾಧನಗಳು ಪುರುಷನಿಂದ, ಅವನಿಗೆ ಮಾತ್ರವೇ ಅನುಕೂಲಕರವಾಗುವಂತೆ ನಿರ್ಮಾಣಗೊಂಡಂಥವು. ಮಹಿಳೆ ಅವನ ಈ ಸಾಧನೆಗಳನ್ನೇ ತನ್ನದೆಂಬಂತೆ ಬಳಸಿ ಅಭಿವ್ಯಕ್ತಿಯನ್ನು ಸಾಧಿಸ ಹೊರಟಾಗ ಅಭಾಸಗಳಾಗುತ್ತವೆ. ಹೆಚ್ಚಿನ

ಸೋಲು ಅವಮಾನಗಳಿಗೆ ಗುರಿಯಾಗುತ್ತಾಳೆ. ಭಾಷೆಯನ್ನು ಬಳಸಬೇಕಾದ ಸಾಹಿತ್ಯ ನಿರ್ಮಾಣ ಕಲೆ ಇದಕ್ಕೊಂದು ನಿದರ್ಶನ. ಮಹಿಳೆಯು ತನ್ನ ಸಂವೇದನೆಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಲು ಸಮರ್ಥಳಾಗಿಲ್ಲ ಎಂಬುದು ಅವಳ ಅಸಾಮರ್ಥ್ಯದ ಕುರುಹಲ್ಲ. ಅವಳು ಬಳಸಿದ ಅಭಿವ್ಯಕ್ತಿ ಸಾಧನ ಅವಳದ್ದಲ್ಲ ಎಂಬುದೇ ಕಾರಣ. ಅವಳ ಬದುಕಿನ ಸಂವೇದನೆಗಳನ್ನು ಅವಳೇ ಕಂಡುಕೊಂಡ ಮಾಧ್ಯಮದಲ್ಲಿ ಮಾತ್ರವೇ ಅಭಿವ್ಯಕ್ತಿಸಲು ಅವಳಿಗೆ ಸಾಧ್ಯ.

ಇರಲಿ, ಈ ಚರ್ಚೆ ಬಹಳ ದೀರ್ಘವಾಗಿ ಸಾಗಲು ಸಾಧ್ಯ. ಆದರೆ ಈ ಸಣ್ಣ ಟಿಪ್ಪಣಿಯಲ್ಲಿ ನಾನು, ಅವಳ ಸಂವೇದನೆಗಳ ಸ್ವರೂಪವನ್ನು ನಿರ್ಧರಿಸುವ ಮುಖ್ಯವಾದ ಕೆಲವು ಕಾರಣಗಳನ್ನು ಗುರುತಿಸಲು ಮಾತ್ರ ಪ್ರಯತ್ನಿಸಿದ್ದೇನೆ. ತನ್ನ ಈ ಸಂವೇದನೆಗಳ ಬಗೆಗೆ ಪ್ರಜ್ಞಾಪೂರ್ವಕವಾಗಿ ಚಿಂತಿಸುವ, ಅಂತಹ ಚಿಂತನೆಗೆ ಅಭಿವ್ಯಕ್ತಿಯ ಒಂದು ಮಾರ್ಗವನ್ನು ರೂಪಿಸಿಕೊಳ್ಳುವ ಬಗೆಗೆ ಮಹಿಳೆ ನಡೆಯಬೇಕಾದ ಹಾದಿ ಸಾಕಷ್ಟು ಪರಿಶ್ರಮ, ಸಾಧನೆ ಹಾಗೂ ಕಾಲವನ್ನು ಬೇಡುವಂಥದಾಗಿದೆ.

ಹೆಣ್ಣಿನ ಸ್ವಭಾವವನ್ನು ಕುರಿತ ವೈಜ್ಞಾನಿಕ ಅಧ್ಯಯನಗಳು

ಮನೋವಿಜ್ಞಾನ, ಜೀವವಿಜ್ಞಾನಗಳಂತಹ ಮಾನವ ಕೇಂದ್ರಿತ ವಿಜ್ಞಾನಗಳು ಮನುಷ್ಯ ಸ್ವಭಾವವನ್ನು ಕುರಿತ ಹಲವು ಸಿದ್ಧಾಂತಗಳನ್ನೂ ತೀವ್ರ ಉತ್ಸಾಹದಿಂದಲೂ, ಆತ್ಯಂತಿಕ ನಿಷ್ಕೃಷ್ಟತೆಯಿಂದಲೂ ಮಂಡಿಸಿವೆ. ಹೆಣ್ಣು ಜಾತಿಯ ಸ್ವಭಾವವನ್ನು ಕುರಿತ ಇಂತಹ ಹಲವು ತೀರ್ಮಾನಗಳನ್ನು ಸೂಕ್ಷ್ಮವಾದ ಪರಿಶೀಲನೆಗೆ ಒಳಪಡಿಸಬೇಕಾದ ಅಗತ್ಯವಿದೆ. ನೋಮಿ ವೀಸ್ಸನ್ ಎಂಬಾಕೆ ಅಮೇರಿಕದ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಮನಃಶಾಸ್ತ್ರದ ಪ್ರೊಫೆಸರಳಾಗಿ ಪ್ರತಿಭೆ, ಪ್ರಜ್ಞೆಗಳಂತಹ ಕ್ಷೇತ್ರಗಳಲ್ಲಿ ಸಂಶೋಧನೆಗಳಲ್ಲಿ ನಿರತಳಾದಳು. ಮನೋವಿಜ್ಞಾನದಲ್ಲಿ ತಜ್ಞಳೆನಿಸುತ್ತಾ ಹೋದಂತೆಲ್ಲಾ ಆಕೆಗೆ ಆ ಜ್ಞಾನಕ್ಷೇತ್ರವು ಈವರೆಗೆ ನಡೆಸಿರುವ ಹಲವು ಮುಖ್ಯ ಚಿಂತನೆಗಳು ಸಾಕ್ಷ್ಯಾಧಾರಗಳೇ ಇಲ್ಲದ ಪೊಳ್ಳು ಭ್ರಮೆಗಳು ಎಂಬುದು ಹೊಳೆಯತೊಡಗಿತು. ಅದರಲ್ಲೂ ವ್ಯಕ್ತಿಯ ವರ್ತನೆಗಳನ್ನು ಅಧ್ಯಯನ ಮಾಡುವ ಮೂಲಕ ಆ ವ್ಯಕ್ತಿಯ ಮೂಲ ಸ್ವಭಾವಗಳನ್ನು ಗ್ರಹಿಸಬಹುದು ಎಂಬ ಚಿಂತನೆಯಂತೂ ಅದೆಷ್ಟು ಭ್ರಮಾತ್ಮಕವಾದುದು ಎಂಬುದರ ಅರಿವಿನೊಂದಿಗೆ, ಈ ಚಿಂತನೆಯು ಹೆಣ್ಣಿಗೆ ಮಾಡಿರುವ ತೀವ್ರ ಅನ್ಯಾಯವೂ ಸ್ಪಷ್ಟವಾಗಿ ಕಾಣತೊಡಗಿತು. ಸ್ತ್ರೀವಾದಿ ಕಾರ್ಯಕರ್ತರಿಗೆ ನೋಮಿ ವೀಸ್ಟನ್ ಈ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಸೂಚಿಸಿದಳು. ಮನೋವಿಜ್ಞಾನದಂತೆಯೇ ಜೀವವಿಜ್ಞಾನವೂ ಸ್ತ್ರೀಯ ಬಗ್ಗೆ ಭ್ರಮಾತ್ಮಕ ಸಿದ್ಧಾಂತಗಳನ್ನು ಹರಡಿ ಅನ್ಯಾಯವನ್ನೆಸಗಿದೆ ಎಂಬುದನ್ನೂ ಆಕೆ ಸೂಕ್ಷ್ಮ ವಿವರಗಳಲ್ಲಿ ವಿವರಿಸಿದಳು. ಈವರೆಗಿನ ಅಂತಹ 'ವೈಜ್ಞಾನಿಕ ಚಿಂತನೆ'ಗಳನ್ನೂ ಮತ್ತು ಅವುಗಳು ಸೃಷ್ಟಿಸಿರುವ ಭ್ರಮೆಗಳನ್ನೂ ಆತ್ಮವಿಶ್ವಾಸದಿಂದ ಪ್ರತಿರೋಧಿಸಬೇಕಾದ ಅಗತ್ಯವನ್ನು ನಿರೂಪಿಸುವ ಸಲುವಾಗಿ ಈ 'ವೈಜ್ಞಾನಿಕ ಚಿಂತನೆ'ಗಳನ್ನು ಆಕೆ ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಿದ್ದಾಳೆ.

'ವೈಜ್ಞಾನಿಕ ಚಿಂತನೆ' ಎಂದರೆ ಸ್ಪಷ್ಟ ನಿಖರತೆ, ಸಾಕ್ಷಿ ಪುರಾವೆಗಳ ಆಧಾರಗಳಿಂದೊಡಗೂಡಿದ 'ಆತ್ಯಂತಿಕ ಸತ್ಯ' ಎಂಬ ಭ್ರಮೆಗೆ ಒಳಗಾಗಿ ಬಿಡುತ್ತೇವೆ. ವಿಜ್ಞಾನವು ಜೀವಜಗತ್ತನ್ನು ಕುರಿತ ಸತ್ಯಗಳನ್ನು ಹೇಳುತ್ತೇನೆನ್ನುತ್ತದೆ. ಹಾಗೆಯೇ ಭೌತಿಕ ಜಗತ್ತನ್ನು ಕುರಿತು ಸಹ 'ಸತ್ಯ'ಗಳನ್ನು ಕಾಣಿಸುತ್ತೇನೆನ್ನುತ್ತದೆ.

ಭೌತಿಕ ಜಗತ್ತನ್ನು ಕುರಿತ ವಿಜ್ಞಾನದ ಚಿಂತನೆಗಳು ಬಹುಮಟ್ಟಿಗೆ ಅನ್ವಯಿಕತೆಗೆ ಒಳಗಾಗದ ಜ್ಞಾನಕ್ಕೆ ಸಂಬಂಧಿಸಿದವು. ಈ ಅರ್ಥದಲ್ಲಿ ಈ ಜ್ಞಾನಶಾಖೆಯ ಉಪಯುಕ್ತತೆಯೇ ಪ್ರಶ್ನಾರ್ಹ. ಆದರೆ ಇವು ಮಾನವನ ಬೌದ್ಧಿಕ ಸಾಮರ್ಥ್ಯದ ದ್ಯೋತಕಗಳಾದ್ದರಿಂದ ಅವನ ಅಹಂ ಅನ್ನು ತಣಿಸಿ ತೃಪ್ತಿಯನ್ನು ತರುತ್ತದೆ. ಅಷ್ಟೇ ಹೊರತು ಈ ಜ್ಞಾನವು ಮಾನವ ಬದುಕಿನಲ್ಲಿ ಯಾವುದೇ ಮೂಲಭೂತ ವ್ಯತ್ಯಾಸಗಳನ್ನೇನೂ ತರಲಾರವು. ಆದರೆ ಜೀವಜಗತ್ತಿಗೆ ಸಂಬಂಧಿಸಿದಂತೆ ವಿಜ್ಞಾನವು ನಡೆಸುವ ಚಿಂತನೆಗಳು ತತ್‌ಕ್ಷಣದ ಬದುಕಿನ ಮೇಲೆ ಪರಿಣಾಮಗಳನ್ನು ತರಬಲ್ಲವು. ವ್ಯಕ್ತಿಗಳಿಗಷ್ಟೇ ಅಲ್ಲದೆ ವಿವಿಧ ಸಾಮಾಜಿಕ ಸ್ಥರಗಳಲ್ಲೂ ಇವು ಪರಿಣಾಮಗಳನ್ನು ಉಂಟುಮಾಡಬಲ್ಲವು. ಹಲವೊಮ್ಮೆ ಈ ಚಿಂತನೆಗಳ ಹಿನ್ನೆಲೆಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳು ಪೂರ್ವಭಾವಿಯಾಗಿಯೇ ಇರುತ್ತವೆ ಎಂಬ ಸಂಗತಿಯನ್ನು ಚರಿತ್ರೆಯ ಹಲವು ಸಂದರ್ಭಗಳು ಸಾಬೀತುಪಡಿಸುತ್ತವೆ. ಪುರುಷ ಸ್ವಾಮ್ಯದ ಈ ಸಮಾಜದಲ್ಲಿ ವಿಜ್ಞಾನ ಚಿಂತನೆಯೂ ಪುರುಷನ ಪರವಾಗಿ ಮಾತ್ರವೇ ಕೆಲಸ ಮಾಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಮನೋವಿಜ್ಞಾನ ಮತ್ತು ಜೀವವಿಜ್ಞಾನಗಳು ನಡೆಸುವ ಸಂಶೋಧನೆಗಳನ್ನೂ, ಅವುಗಳನ್ನಾಧರಿಸಿ ಅವು ಮಂಡಿಸುವ ಸಿದ್ಧಾಂತ ಚಿಂತನೆಗಳನ್ನೂ ವಿಶೇಷ ಎಚ್ಚರದಿಂದ ಅಧ್ಯಯನ ಮಾಡಬೇಕು.

ಮಹಿಳೆಯ ಸ್ವಭಾವವನ್ನು ವಿವರಿಸುವ ಕೆಲವು ಪ್ರಸಿದ್ಧ ಮನೋವೈಜ್ಞಾನಿಕ ಚಿಂತನೆಗಳನ್ನು ಗಮನಿಸಿ. ಯಾವ ವಾದ ವಿವಾದಗಳಿಗೂ ಎಡೆ ಇಲ್ಲವೆಂಬಂತಹ ಅವುಗಳ ಖಚಿತತೆ ಬೆರಗುಗೊಳಿಸುವಂಥದು. ಬ್ರುನೋ ಬೆತ್ಲ್‌ಹೀಮ್ (೧೯೬೫) ಎಂಬ ಮನೋವಿಜ್ಞಾನಿಯು ಮಹಿಳೆಯ ಸ್ವಭಾವವನ್ನು ಹೀಗೆ ವಿವರಿಸುತ್ತಾನೆ: "ಮಹಿಳೆಯರಲ್ಲೂ ಕೂಡ ಒಳ್ಳೆಯ ವಿಜ್ಞಾನಿಗಳೆನಿಸಿ, ಸಮರ್ಥ ಇಂಜಿನಿಯರುಗಳೆನಿಸಿ ಜಯಶೀಲರಾಗಬೇಕೆಂಬ ಕನಸುಗಳು, ಅರ್ಹತೆಗಳು ಇರುವುದಿಲ್ಲವೆಂದಲ್ಲ. ಆದರೆ ಇವುಗಳನ್ನೂ ಮೀರಿ ಅವರಲ್ಲಿ ಒಳ್ಳೆಯ ಹೆಂಡತಿಯರೆನಿಸಿ, ಅಪ್ರತಿಮ ತಾಯಂದಿರೆನಿಸಿ ಬದುಕುವ ಇಚ್ಛೆಯೂ ಕನಸುಗಳೂ ಅದಮ್ಯವಾದ ಪ್ರಥಮ ಆದ್ಯತೆಗಳಾಗಿ ಇರುತ್ತವೆ". ತನ್ನ ಇಚ್ಛೆ ಕನಸುಗಳ ಬಗೆಗೆ ಸ್ವತಃ ಹೆಣ್ಣಿಗೇ ಇಷ್ಟೊಂದು ಸ್ಪಷ್ಟತೆ ಇರಲಾರದು! ಎರಿಕ್ ಎರಿಕ್‌ಸನ್ ಎಂಬ ಮನೋವಿಜ್ಞಾನಿಯಂತೂ 'ಹೆಣ್ಣು ಮಕ್ಕಳು ತಾವು ಮದುವೆಯಾಗುವುದು ಯಾರನ್ನು ಮತ್ತು ತಾವು ಯಾರಿಗಾಗಿ ಮನೆಯನ್ನು ನಡೆಸಬೇಕಾಗಿದೆ ಎಂಬುದು ತಿಳಿಯುವವರೆಗೂ ಸ್ವಂತ ಅಸ್ತಿತ್ವವೇ ಇಲ್ಲದವರಂತೆ ಪರದಾಡುತ್ತಾರೆ' ಎನ್ನುತ್ತಾನೆ. ಆದರೂ ತರುಣಿಯೊಬ್ಬಳು ಎಂತಹ ವರನನ್ನು ಪಡೆಯಬಹುದು ಎಂಬ ಸಂಗತಿ ಅವಳೆಷ್ಟು ಆಕರ್ಷಣೆಯನ್ನು ತಳೆದಿದ್ದಾಳೆ ಎಂಬುದರ ಮೇಲೆ ಬಹುಮಟ್ಟಿಗೆ ನಿರ್ಧಾರಿತವೇ ಆಗಿರುತ್ತದೆಯಂತೆ ! ಈ ಆಕರ್ಷಣೆಯನ್ನು ಮಹಿಳೆಯು ಹೇಗೆ ಗಳಿಸುತ್ತಾಳೆ ಎಂಬುದರ ವ್ಯಾಖ್ಯಾನವಂತೂ ಇನ್ನೂ ಗಮ್ಮತ್ತಾಗಿದೆ. 'ತನ್ನ ಪಾಲಿಗೆ ದೊರೆತ ಪುರುಷನ ಅಂಶವನ್ನು

ತನ್ನೊಳಗೆ ಧಾರಣೆ ಮಾಡಿ, ಅದಕ್ಕೆ ಸೂಕ್ತ ಪೋಷಣೆ ನೀಡಿ ಸಂತಾನವನ್ನು ಈ ಭೂಮಿಗೆ ತರುವ ಅವಳ ಅಂತಃ ಸಾಮರ್ಥ್ಯ ಮತ್ತು ಆನಂತರದಲ್ಲಿ ಆ ಸಂತಾನವನ್ನು ಸೂಕ್ತವಾಗಿ ಸಂಗೋಪನ ಮಾಡುವಲ್ಲಿ ಅವಳು ತೋರುವ ದೈಹಿಕ, ಮಾನಸಿಕ, ನೈತಿಕ ಸಾಮರ್ಥ್ಯಗಳು ಅವಳಿಗೆ ಪ್ರೌಢ ಬದುಕಿನ ಸಾರ್ಥಕತೆಯ ಭಾವವನ್ನು ನೀಡುತ್ತವೆ. ಇದು ಅವಳಿಗೆ ಆಕರ್ಷಣೆಯ ವ್ಯಕ್ತಿತ್ವವನ್ನು ಒದಗಿಸುವ ಮುಖ್ಯ ಸಂಗತಿಯಾಗುತ್ತದೆ'.

ಇಂತಹ ವಾದಗಳನ್ನು ಕೇಳಿ ಹೆಣ್ಣಿನ ಮೇಲೆ ಇಂತಹ ನಿರ್ದೇಶನಗಳನ್ನು ಒತ್ತಾಯವಾಗಿ ಹೇರಲಾಗುತ್ತಿದೆ ಎಂದು ನೀವು ಆರೋಪಿಸುವಿರಾದರೆ, ಮನೋವಿಜ್ಞಾನಿಗಳು ಸೂಕ್ತ ವಿವರಣೆಯನ್ನು ನೀಡಿ ಈ ಆರೋಪವನ್ನು ನಿರಾಕರಿಸುತ್ತಾರೆ. 'ಹೆಣ್ಣು ಅಂತರ್ಗತವಾಗಿ ಈ ಪಾತ್ರವನ್ನು ಸ್ವಂತ ಇಚ್ಛೆಯಿಂದ ಒಪ್ಪಿ ಆಯ್ಕೆ ಮಾಡಿದ್ದಾಳೆ' ಎಂಬ ತೀರ್ಮಾನವನ್ನು, 'ಇದರಿಂದಾಗಿ ಬಹುಮಟ್ಟಿನ ಎಲ್ಲ ಸಾಮಾಜಿಕ ಸಮಸ್ಯೆಗಳೂ ಸುರುಳೀತವಾಗಿ ಪರಿಹಾರಗೊಂಡಿವೆ' ಎಂಬ ಆನಂದವನ್ನೂ ವ್ಯಕ್ತಪಡಿಸುತ್ತಾರೆ. ಜೊತೆಗೆ ಈ ಮಾತನ್ನು ಸಹಜವಾಗಿ ಸ್ವೀಕರಿಸಿದರೆ ಹೆಣ್ಣಿಗೇ ಒಳ್ಳೆಯದು ಎಂಬುದನ್ನು ಸೂಚಿಸಿ 'ಹೆಣ್ಣೊಬ್ಬಳು ತಾನು ಒಡ್ಡಿಕೊಳ್ಳಬೇಕಾದ ದೈಹಿಕ ಕಷ್ಟಗಳಿಗೆ ಸ್ಥೈರ್ಯದಿಂದ ತಯಾರಾದರೆ, ಮಹಿಳೆಯಾಗಿ ಹುಟ್ಟಿದ್ದರಿಂದಾಗಿ ಈ ಸ್ಥಿತಿ ತನಗುಂಟಾಯಿತೇ ಎಂಬ ಅಸಹಜವಾದ ಚಿಂತನೆಯನ್ನು ದೂರವಿರಿಸಿದರೆ ಆಕೆಗೇ ಸುಖ. ಹೆಣ್ಣಾಗಿ ತನಗೆ ಸಿಗುವ ತಾಯ್ತನದ ಸುಖವನ್ನು ಅವಳು ಸಾರ್ಥಕ ಭಾವದಿಂದ ಅನುಭವಿಸುತ್ತಾಳೆ. ಆಗ ಅವಳ ಬದುಕು ಈ ಲೋಕದಲ್ಲಿ ಬಹು ಸುಂದರವೆನಿಸುತ್ತದೆ.' ಎಂಬ ಪ್ರೀತಿಯ ಉಪದೇಶವನ್ನು ಕೂಡ ಕೊಡುತ್ತಾರೆ.

ತಮ್ಮ ತಮ್ಮ ಜ್ಞಾನಕ್ಷೇತ್ರಗಳಲ್ಲಿ ಗಣ್ಯರೆನಿಸಿದ ಚಿಂತಕರೆಲ್ಲರೂ ಹೆಣ್ಣಿನ ಬದುಕಿನ ಸಾರ್ಥಕತೆಯ ಗುಟ್ಟು ಅವಳ ಆಕರ್ಷಣೆಯೇ ಆಗಿದೆ ಎನ್ನುತ್ತಾರೆ. ಅವಳ ಆಕರ್ಷಣೆ ಎಂದರೆ ತನ್ನ ಗಂಡನ ಅಂಶವನ್ನು ಧಾರಣೆ ಮಾಡುವ, ಪೋಷಿಸುವ ಅವಳ ಸಾಮರ್ಥ್ಯ. ಇದೇ ಆಕರ್ಷಣೆಯೇ ಅವಳಿಗೆ ಅರ್ಹವಾದೊಂದು ಮನೆಯನ್ನು ದೊರಕಿಸಿ ಕೊಡುವ, ತನ್ನಲ್ಲಿನ ಪೋಷಕ ಗುಣವನ್ನು ಮೆರೆಯಲು ಅವಕಾಶವನ್ನೂ ಕಲ್ಪಿಸಿಕೊಡುವ ಮೂಲ ಬಂಡವಾಳವೂ ಹೌದು ಎನ್ನುತ್ತಾರವರು.

ಅಂದರೆ ಹೆಣ್ಣು ಈಗ ಈ ಆಕರ್ಷಣೆಯನ್ನು ಕೂಡಿಸಿಕೊಳ್ಳಲು ಸದಾ ನಿರತಳಾಗಬೇಕು. ಇದಕ್ಕೆ ನೆರವಾಗಿ ವ್ಯವಹಾರ ಪ್ರಪಂಚವು ಕಾದು ನಿಂತಿದೆ. ಬಟ್ಟೆ ಬರೆ, ವೇಷ, ಭೂಷಣ, ಸೌದರ್ಯ ಸಾಧನಗಳು, ಗೃಹಾಲಂಕಾರ ಸಾಮಗ್ರಿಗಳು-ಈ ಎಲ್ಲವೂ ದೊಡ್ಡ ಉದ್ಯಮಗಳಾಗಿ ಬೆಳೆದು ಹೆಣ್ಣಿಗೆ ಅವಳ ಸಾಮರ್ಥ್ಯವನ್ನು ಪೋಷಿಸಿ ಬೆಳೆಸಿಕೊಳ್ಳಲು ಒತ್ತಾಸೆಯನ್ನು ನೀಡುತ್ತಿವೆ. ಮನೋವಿಜ್ಞಾನಿಗಳು ವಿಶೇಷ ಅಧ್ಯಯನಗಳಲ್ಲಿ ತೊಡಗಿ ಹೆಣ್ಣಿನ ಸಹಜ ಸ್ವಭಾವವನ್ನು ಕುರಿತು ಮಂಡಿಸಿದ 'ವೈಜ್ಞಾನಿಕ ಚಿಂತನೆಗಳು' ಈಗಾಗಲೇ

ಸಮಾಜದಲ್ಲಿ ವ್ಯಾಪಕವಾಗಿ ಬೇರುಬಿಟ್ಟಿರುವ ಅಭಿಪ್ರಾಯಗಳೇ ಆಗಿವೆ ಮತ್ತು ಅವು ವ್ಯಾಪಾರ ವ್ಯವಹಾರ ಉದ್ಯಮಗಳಿಗೆ ಎಷ್ಟೊಂದು ಅನುಕೂಲಕರವಾಗಿವೆ ಎಂಬ ಸಂಗತಿಗಳು ತುಂಬಾ ಕುತೂಹಲಕರ ಕಾಕತಾಳೀಯಗಳು.

ಆದರೆ ಈ 'ವೈಜ್ಞಾನಿಕ ಚಿಂತನೆಗಳು' ವ್ಯಕ್ತಿಯ ಸ್ವಭಾವ ಸಹಜ ಗುಣಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಎಳ್ಳಷ್ಟೂ ಉಪಯುಕ್ತವಲ್ಲ ಎಂಬುದನ್ನು ನಿರೂಪಿಸಲು ಹೆಚ್ಚೇನೂ ಕಷ್ಟಪಡಬೇಕಾಗಿಲ್ಲ. ಒಂದಿಷ್ಟು ತೆರೆದ ಮನಸ್ಸಿನ ಅಗತ್ಯವಿದೆ ಅಷ್ಟೇ. ಈಗಾಗಲೇ ವಾಡಿಕೆಯಲ್ಲಿರುವ ಪುರುಷ ಪ್ರಧಾನ ಸಾಮಾಜಿಕ ನಿರ್ದೇಶನಗಳನ್ನೂ, ವರ್ತನೆಗಳನ್ನೂ ಈ ವೈಜ್ಞಾನಿಕ ಸಂಗತಿಗಳು ಸಮರ್ಥಿಸಲು ಬದ್ಧವಾಗಿ ನಿಂತಿರುತ್ತವೆಂಬುದನ್ನು ಕಾಣಬಹುದು. ಅಷ್ಟೇ ಅಲ್ಲದೆ ವೈಜ್ಞಾನಿಕ ಅಧ್ಯಯನ, ಚಿಂತನೆ ಎಂಬ ಗಾಂಭೀರ್ಯದ ಭ್ರಮೆಗಳನ್ನು ಬೇರೆ ಸೃಷ್ಟಿಸುತ್ತಾ ಅನಾಗರಿಕ ವರ್ತನೆಗಳಿಗೆ ಪುಷ್ಟಿಯನ್ನು ಕೊಡುತ್ತದೆ.

ಹಾಗಾಗಿ ಈ ಭ್ರಮೆಗಳನ್ನು ಒಡೆಯುವ ಅಧ್ಯಯನಗಳೂ, ಚಿಂತನೆಗಳೂ ನಡೆಯುವ ಅಗತ್ಯವನ್ನು ಮನಗಾಣಬೇಕಾಗಿದೆ. 'ವೈಜ್ಞಾನಿಕ' ಎಂಬ ಹೆಸರಿನಲ್ಲಿ ನಡೆಯುವ ಇಂತಹ ಸಂಶೋಧನೆಗಳು ಅನುಸರಿಸುವ ವಿಧಿ ವಿಧಾನಗಳೇ ದೋಷಪೂರಿತವಾಗಿವೆ. ಹಾಗೆ ವೈಜ್ಞಾನಿಕವಾದದ್ದೇನೂ ಇವುಗಳ ಹಿನ್ನೆಲೆಗಿಲ್ಲ. ಫ್ರಾಯ್ಡ್ ಮತ್ತು ನಂತರದ ಅವನ ನಿಷ್ಠ ಅನುಯಾಯಿಗಳೆಲ್ಲರೂ 'ಮನೋರೋಗಿ'ಗಳ ಪರಿಶೀಲನೆ ಮತ್ತು ಚಿಕಿತ್ಸೆಗಳಲ್ಲಿ ತೊಡಗಿದ್ದ ಡಾಕ್ಟರುಗಳು. ಮನೋವೈಕಲ್ಯಗಳಿಂದ ಬಳಲುವ ಅಸಂಖ್ಯ ರೋಗಿಗಳೊಂದಿಗಿನ ದಶಕಗಳ ದೀರ್ಘ ಅನುಭವದಿಂದಾಗಿ ತಮಗೆ ಮನುಷ್ಯನ 'ಮನಸ್ಸನ್ನು' ಅರಿಯುವ ಅರ್ಹತೆ ಉಂಟಾಗಿದೆ ಎಂಬ ಭ್ರಮೆಗೆ ಒಳಗಾಗಿದ್ದ ಈ ಡಾಕ್ಟರುಗಳು ತಮ್ಮ ಡಾಕ್ಟರಿಕೆಯ ಅನುಭವವನ್ನೇ ಸಂಶೋಧನಾ ಮಾಹಿತಿಗಳನ್ನಾಗಿ ಬಳಸಿದರು. ಇವುಗಳನ್ನಾಧರಿಸಿ ಚಿಂತನೆಗಳನ್ನೂ ಮಂಡಿಸಿದರು. ಅಂದರೆ ತಮ್ಮ ರೋಗಿಗಳ ವರ್ತನೆಗಳು ಅವರವರ ವ್ಯಕ್ತಿಗತ ಸಹಜ ಸ್ವಭಾವಗಳ ಲಕ್ಷಣಗಳೆಂದು ತೀರ್ಮಾನಿಸಿದರು. ಈ 'ಮೂಲ ಸ್ವಭಾವ'ಗಳು ಆಯಾ ವ್ಯಕ್ತಿಯ ಬಾಲ್ಯದಲ್ಲೇ ನಿರ್ಧಾರಿತವಾಗಿರುವಂಥವು, ವ್ಯಕ್ತಿಯು ಗಂಡು ಅಥವಾ ಹೆಣ್ಣು ಎಂಬುದರಿಂದಾಗಿಯೂ ಈ ವೈವಿಧ್ಯಗಳು ರೂಪುಗೊಳ್ಳುತ್ತವೆ, ಆಗಲೇ ಇವು ವ್ಯಕ್ತಿಯ 'ಪ್ರಜ್ಞೆ'ಯಲ್ಲಿ ಸ್ಥಿರಗೊಂಡು ಬಿಟ್ಟಿರುತ್ತವೆ ಎಂಬಂತಹ ತೀರ್ಮಾನಗಳನ್ನೂ ಹೇಳಿಬಿಟ್ಟರು.

ವ್ಯಕ್ತಿ ಕೇಂದ್ರಿತವಾದ ಈ ಚಿಂತನೆಗಳು ಸತ್ಯಗಳನ್ನು ಹೇಳುವ ಬದಲು ಭ್ರಮೆಗಳನ್ನು ಸೃಷ್ಟಿಸಿ ಸ್ಥಾಪಿಸಿಬಿಟ್ಟಿವೆ ಎಂಬುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿಕೊಟ್ಟಿವೆ. 'ವ್ಯಕ್ತಿತ್ವ ಮನೋವಿಜ್ಞಾನ'ವು ಈವರೆಗೂ ರೋಗಿಗಳನ್ನೇ ತಮ್ಮ ಪ್ರಯೋಗಾಲಯಗಳೆಂದು ಪರಿಗಣಿಸಿಬಿಟ್ಟಿತ್ತು. ಈ ಡಾಕ್ಟರುಗಳು ತಮ್ಮ ರೋಗಿಗಳ ವರ್ತನೆಗಳನ್ನೇ ಆಧರಿಸಿ

ಚಿಂತನೆಗಳನ್ನೂ ರೂಪಿಸಿಬಿಟ್ಟರು. ಆದರೆ ರೋಗಿಗಳು ತೋರಿದ ಆ ವರ್ತನೆಗಳಿಗೆ ವ್ಯಕ್ತಿಯ ಪರಿಸರದಲ್ಲಿಯೂ ಕಾರಣಗಳಿರಬಹುದು ಎಂಬುದನ್ನು ಈ ಸಂಶೋಧನೆಗಳು ಗಮನಕ್ಕೆ ತಂದುಕೊಳ್ಳಲಿಲ್ಲ. ವ್ಯಕ್ತಿಯ ಸಾಮಾಜಿಕ ಸಂದರ್ಭಗಳು ಅವನ ಮೇಲೆ ಬೀರುವ ಪರಿಣಾಮಗಳನ್ನು ಪರಿಗಣಿಸದೆ ಹೋದ ಈ ಚಿಂತನೆಗಳು ತಮ್ಮ ಸಮರ್ಥನೆಗಾಗಿ ಒದಗಿಸಿದ ಸಾಕ್ಷಿ ಪುರಾವೆಗಳು ಸಹಜವಾಗಿಯೇ ತೀರಾ ದುರ್ಬಲವೆನಿಸಿದವು. ಒಂದಿಷ್ಟೇ ವ್ಯತ್ಯಯಗೊಂಡ ಸಂದರ್ಭಗಳಲ್ಲೂ ಸಮರ್ಥನೆಯನ್ನು ಮಾಡಿಕೊಳ್ಳಲಾರದೆ ಸೋತುಹೋದವು. ಈ ಸೋಲಿಗೆ ಮುಖ್ಯ ಕಾರಣವೆಂದರೆ, 'ವೈಜ್ಞಾನಿಕ'ವೆಂದು ನಿರೂಪಿಸಲು ಹೊರಟ ಈ ಸಂಶೋಧನೆಗಳು ಪ್ರತಿಭೆ, ಅಂತರ್‌ದೃಷ್ಟಿ, ಕಲ್ಪನೆ, ಸೂಕ್ಷ್ಮಜ್ಞತೆ ಎಂಬ ಅಮೂರ್ತ ಸಂಶೋಧನಾ ಸಾಮರ್ಥ್ಯಗಳನ್ನೇ ಆಧರಿಸಿದವು. ಹಾಗಾಗಿ ಮರು ಪರೀಕ್ಷೆಗೆ ಒಳಪಟ್ಟಾಗ ನಿಶ್ಚಿತವಾಗಿ ಸಮರ್ಥನೆ ದೊರಕುತ್ತದೆಂಬ ಸಾಧ್ಯತೆ ದೂರವೇ ಉಳಿಯಿತು.

ಫ್ರಾಯ್ಡ್ ನಿರೂಪಿಸಿದ ಅನೇಕ ಸಂಗತಿಗಳು ಕಾಲ ಕಳೆದಂತೆ ಸಮರ್ಥನೆಯನ್ನು ಕಳೆದುಕೊಳ್ಳುತ್ತಲೇ ಇವೆ. 'ಮಕ್ಕಳಲ್ಲಿ ಲೈಂಗಿಕ ಜಾಗೃತಿ'ಯನ್ನು ಕುರಿತಂತೆ, 'ಹೆಂಗಸರು ದ್ವಿಲಿಂಗಿಗಳಾಗಿರುತ್ತಾರೆ' ಎಂಬುದನ್ನು ಕುರಿತಂತೆ ಇರುವ ಅವನ ಚಿಂತನೆಗಳು ಆಧಾರ ರಹಿತವಾದವೆಂದು ಸಾಬೀತಾಗಿವೆ. ಹೀಗೆ ತಪ್ಪು ಮಾಹಿತಿಗಳನ್ನೇ ಆಧರಿಸಿದ ಆತನ 'ವ್ಯಕ್ತಿತ್ವ ಮತ್ತು ವರ್ತನಾ ಮನೋವಿಜ್ಞಾನ'ದ ಬಗೆಗಿನ ಚಿಂತನೆಗಳು ಬಹು ದೀರ್ಘಕಾಲದವರೆಗೂ ಸಮಾಜವನ್ನು ತಪ್ಪು ದಾರಿಯಲ್ಲಿ ನಡೆಸಿದವು. ಪುರುಷ ಚಿಂತನೆಯ ಈ ಸಮಾಜಕ್ಕೆ ಅವು ಸಮರ್ಥನೆಯನ್ನೇ ಒದಗಿಸಿದವೆಂಬ ಅಂಶವೂ ಈ ಚಿಂತನೆ ದೀರ್ಘಕಾಲ ಅಭ್ಯಾಸದಲ್ಲಿ ಉಳಿಯಲು ನೆರವಾಗಿರಬಹುದು. ಹಾಗಲ್ಲದಿದ್ದರೆ ಇಂತಹ ಸಂಶೋಧನೆಗಳು ಅನುಸರಿಸಿದ ವಿಧಿವಿಧಾನಗಳಲ್ಲಿನ ಲೋಪದೋಷಗಳು ಬೆಳಕಿಗೆ ಬರಲು ಇಷ್ಟುಕಾಲ ಬೇಕಾಗಿರಲಿಲ್ಲ.

ಸೂಕ್ಷ್ಮವಾದ ಸ್ತ್ರೀವಾದಿ ಚಿಂತನೆಗಳ ದೃಷ್ಟಿಗೆ ಈಗ ಈ ಭ್ರಮಾಸೃಷ್ಟಿಗಳ ಪರಿಚಯವಾಗತೊಡಗಿದೆ. ವ್ಯಕ್ತಿಯ ವರ್ತನೆಗಳ ಬಗ್ಗೆ ಊಹೆ ಮಾಡಲು ತೊಡಗುವ ಈ ಸಂಶೋಧಕರು ಮಾತ್ರೆ ಗುಳಿಗೆಗಳ ನೆರವನ್ನೋ, ಪ್ರಶ್ನಾವಳಿ ಚಿತ್ರ ರಚನೆ ಮೊದಲಾದವುಗಳ ನೆರವನ್ನೋ ತಮ್ಮ ಪ್ರಯೋಗದಲ್ಲಿ ಅಳವಡಿಸಿಕೊಳ್ಳುವುದು ರೂಢಿ. ಪರಿಶೀಲನೆಗೆ ಒಳಗು ಮಾಡುವ ತಂಡಕ್ಕೆ ಯಾವುದೋ ಒಂದು ನಿರ್ದಿಷ್ಟ ಗುಳಿಗೆಯನ್ನು, ಕೆಲವು ನಿರ್ದಿಷ್ಟ ಪರಿಣಾಮಗಳನ್ನು ನಿರೀಕ್ಷಿಸಿ ಕೊಡಲಾಯಿತೆನ್ನಿ. ಪರೀಕ್ಷಕನಿಗೆ ಗುಳಿಗೆಗಳನ್ನು ಯಾರಿಗೆ ಕೊಡಲಾಯಿತೆಂಬ ಬಗ್ಗೆ ಮುಂಚಿತವಾಗಿಯೇ ಮಾಹಿತಿ ಇದ್ದರೆ ನಿರೀಕ್ಷೆಯ ಪರಿಣಾಮಗಳೇ ಅವನ ಕಣ್ಣಿಗೆ ಕಾಣುತ್ತಾ ಹೋಗಬಹುದು. ಈ ಮಾಹಿತಿ ಇಲ್ಲವಾದರೆ ಏನೋ ಒಂದನ್ನು ಊಹೆ ಮಾಡುವುದು. ಅನಿವಾರ್ಯವಾಗಿ ತಪ್ಪುಗಳಾಗುವ ಸಾಧ್ಯತೆಗಳಿರಬಹುದು. ಇನ್ನು ಪ್ರಶ್ನಾವಳಿ, ಚಿತ್ರ ರಚನೆಗಳಿಂದ ಪಡೆಯುವ ಉತ್ತರಗಳು ಭ್ರಮೆಗಳನ್ನಲ್ಲದೆ ಸತ್ಯಗಳನ್ನು

ಸೃಷ್ಟಿಸಲಾರವು. ಹಾಗಾಗಿಯೇ ತಜ್ಞರೆನಿಸಿದ ಮನೋವಿಜ್ಞಾನಿಗಳ ಸಂಶೋಧನಾ ಫಲಿತಗಳಲ್ಲೂ ಸುಸಂಗತವಲ್ಲದ, ಸಂಗತಿಗಳು ತೂರಿ ಬಂದಿರುವುದು ಕಾಣುತ್ತವೆ.

ಯಾವುದಾದರೂ ಬರವಣಿಗೆಯನ್ನು ಗಮನಿಸಿ ಇದನ್ನು ಬರೆದವರು ಗಂಡಸರೋ, ಹೆಂಗಸರೋ ಎಂಬುದನ್ನು ನಿರ್ಧರಿಸಬಹುದು ಎಂದು 'ವ್ಯಕ್ತಿತ್ವ ಮನೋವಿಜ್ಞಾನ' ಹೇಳುತ್ತವೆ. ಆದರೆ ಪ್ರಯೋಗಗಳು ಇದಕ್ಕೆ ಸಮರ್ಥನೆಯನ್ನು ಒದಗಿಸುವುದಿಲ್ಲ. ಮನೋವಿಶ್ಲೇಷಣೆ, ಮನೋಚಿಕಿತ್ಸೆ ಎಂಬ 'ವೈಜ್ಞಾನಿಕ ಚಿಂತನೆ'ಗಳನ್ನು 'ಮನೋರೋಗ ತಜ್ಞ'ರು ಬಳಸುತ್ತಿದ್ದಾರೆ. ಆದರೆ ಈ ಕೇಸುಗಳಲ್ಲಿ ಆ ಡಾಕ್ಟರುಗಳು ತಾವು ನಿರೀಕ್ಷಿಸಿದ ಅಥವಾ ಅಪೇಕ್ಷಿಸಿದ ಫಲಿತಾಂಶಗಳನ್ನು ಪಡೆಯುವುದು ಅಪರೂಪ. ಎಷ್ಟೋ ವೇಳೆ ಪ್ರತಿಕೂಲ ಫಲಿತಾಂಶಗಳು ಕೂಡ ಎದುರಾಗಿ ಬಿಡುವುದುಂಟು. ಇದು ಆ ಡಾಕ್ಟರುಗಳಿಗೆ ತಿಳಿದಿರುವ ಅಂತರಂಗದ ಸತ್ಯ. ಆದರೂ ಇಂತಹ ಫಲಿತಾಂಶಗಳನ್ನು ಮರೆತಂತೆ ಪಕ್ಕಕ್ಕಿಡುತ್ತಾರೆ. ಹಾಗೂ ಇದು ಹೊರಗೆ ಸುದ್ದಿಯಾಗದಂತೆ ಎಚ್ಚರವಹಿಸುತ್ತಾರೆ. ಈ ಡಾಕ್ಟರುಗಳಿಗೆ ತಮ್ಮ ರೋಗಿಗಳು ಪ್ರಯೋಗಾಲಯಗಳಾಗಿಯಷ್ಟೇ ಕಂಡು ಬರುತ್ತಾರೆ. ವ್ಯಕ್ತಿತ್ವ ಪರೀಕ್ಷೆಯ ಫಲಿತಾಂಶಗಳು ಎಂದೂ ನಿಗದಿತ ಸುಸಂಗತಿಯನ್ನು ನೀಡುವುದಿಲ್ಲ ಎಂದು ಬ್ಲಾಕ್ (೧೯೬೮) ಎಂಬ ಮನೋವಿಜ್ಞಾನಿ ಒಪ್ಪಿದ್ದಾನೆ. ಎಷ್ಟೋ ತಜ್ಞರ ಅನುಭವವು ಇದೇ ಆಗಿದೆ. ಹಾಗಾದರೆ ಇಷ್ಟು ದಿನಗಳ ಸಂಶೋಧನೆಗಳಲ್ಲಿ ದೋಷವು ಎಲ್ಲಿ ಅಡಗಿತ್ತು ಎಂಬ ಬಗ್ಗೆ ಪ್ರಾಮಾಣಿಕ ಸಂಶೋಧಕರು ಅರಸಲು ತೊಡಗಿದ್ದಾರೆ. ಭ್ರಮೆಗಳಿಂದ ಹೊರ ಬರಲು ಪ್ರಯತ್ನಿಸತೊಡಗಿದ್ದಾರೆ. ಇದರ ಫಲಿತವೆಂದರೆ 'ವ್ಯಕ್ತಿತ್ವ ಮನೋವಿಜ್ಞಾನವು' ಈವರೆಗೂ ವ್ಯಕ್ತಿಯ ವರ್ತನೆಗಳಿಗೆ ವ್ಯಕ್ತಿಯಲ್ಲೇ ಕಾರಣಗಳನ್ನು ಹುಡುಕುತ್ತಿದ್ದುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ. ವ್ಯಕ್ತಿಯ ವರ್ತನೆಯ ಕಾರಣಗಳು ವ್ಯಕ್ತಿಯ ಪರಿಸರದಲ್ಲೇ ಹೆಚ್ಚಾಗಿ ಇರುತ್ತವೆ ಎಂದೂ, ಇವುಗಳ ಪರಿಶೀಲನೆ ಅತ್ಯಂತ ಮುಖ್ಯವಾದುದೆಂದೂ ಅವರೀಗ ಒಪ್ಪಿಕೊಳ್ಳುತ್ತಿದ್ದಾರೆ.

ರೋಸೆನ್‌ಥಾಲ್ ಮತ್ತು ಸಂಗಡಿಗರು ಈ ಬಗ್ಗೆ ನಿರಂತರ ಸಂಶೋಧನೆಗಳನ್ನು ನಡೆಸಿ ಮುಖ್ಯವಾದ ಇನ್ನೊಂದು ಸಂಗತಿಯನ್ನು ಗಮನಿಸಿದ್ದಾರೆ. ವ್ಯಕ್ತಿತ್ವ ಪರೀಕ್ಷೆಯ ಪ್ರಯೋಗಗಳಲ್ಲಿ ತೊಡಗುವವರು ತಾವು ರೂಪಿಸಿಕೊಂಡ ಹೈಪಾಥೀಸಿಸ್‌ಗೆ ಅನುಗುಣವಾಗಿಯೇ, ತಾವು ನಿರೀಕ್ಷಿಸಿದ ಫಲಿತಾಂಶಗಳನ್ನೇ ಪಡೆಯುತ್ತಾರೆ ಮತ್ತು ಇವರ ನಿರೀಕ್ಷೆಗಳು ಸಾಧಾರಣವಾಗಿ ಸಮಾಜದಲ್ಲಿ ಚಾಲ್ತಿಯಲ್ಲಿರುವ 'ಸಾಮಾಜಿಕ ನಿರೀಕ್ಷೆ'ಗಳೇ ಆಗಿರುತ್ತವೆ ಎಂಬ ಅವರ ತೀರ್ಮಾನ ತುಂಬಾ ಮೌಲಿಕವಾದುದು. ಅಂದರೆ, ಬ್ರೂನೋ ಬೆತ್‌ಲ್ಹೀಂನಂತಹವರು 'ಹೆಂಗಸರು ಒಳ್ಳೆಯ ಹೆಂಡತಿಯರೆನಿಸಿ, ಅಪ್ರತಿಮ ತಾಯಂದಿರೆನಿಸಿ ಬದುಕಬೇಕೆಂಬುದಕ್ಕೆ ಆದ್ಯತೆಯನ್ನು ಕೊಡುತ್ತಾರೆ' ಎಂದು ಮಂಡಿಸುವ ಚಿಂತನೆಯು ವಾಸ್ತವದಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ರೂಢಿಯೇ ಆಗಿರುತ್ತದೆ.

ಮನೋವಿಜ್ಞಾನಿಯೊಬ್ಬನು ನಡೆಸುವ ವಿಪರೀತದ ಒಂದು ಪ್ರಯೋಗದಲ್ಲಿ ರೋಗಿಯನ್ನು ಅತಿ ವಿಧೇಯನನ್ನಾಗಿ ಮಾರ್ಪಡಿಸಬಹುದು. ಶಾಕ್‌ನಿಂದ ಅಥವಾ ಉತ್ತೇಜಕ ಔಷಧಗಳಿಂದ ವ್ಯಕ್ತಿಯನ್ನು ಕೊಲೆಗೂ ಪ್ರೇರೇಪಿಸಬಹುದು. ಸಾಮಾನ್ಯ ಪರಿಸ್ಥಿತಿಯಲ್ಲಿ ಆ ವ್ಯಕ್ತಿ ಈ ಕೆಲಸವನ್ನು ಮಾಡಲು ನಿರಾಕರಿಸಬಹುದು. ನಿರ್ದಿಷ್ಟ ಸಂದರ್ಭಗಳನ್ನು ಸೃಷ್ಟಿಸಿ ವ್ಯಕ್ತಿಗಳನ್ನಷ್ಟೇ ಏಕೆ, ಇಲಿಯಿಂದ ಹುಲಿಯವರೆಗೆ ಪ್ರಾಣಿಗಳನ್ನೂ ನಿಯಂತ್ರಿಸಿ ಅವುಗಳಲ್ಲಿ ನಿರೀಕ್ಷಿತ ವರ್ತನೆಗಳನ್ನು ತರಬಹುದು ಎಂಬುದನ್ನು ಪ್ರಯೋಗಗಳು ತೋರಿಸಿವೆ. ಈ ಅಂಶವನ್ನು ಪರಿಗಣಿಸಿ ಸಾಮಾಜಿಕ ಸಂದರ್ಭಗಳು ವ್ಯಕ್ತಿಗಳ ವರ್ತನೆಗಳನ್ನು ನಿಯಂತ್ರಿಸುತ್ತವೆಂಬುದನ್ನು ಒಪ್ಪಲೇ ಬೇಕಾಗುತ್ತದೆ. ಈಗ 'ಹೆಣ್ಣಿನ ಸಹಜ ಸ್ವಭಾವಗಳು' ಅಥವಾ 'ಗಂಡಿನ ಹುಟ್ಟುಗುಣಗಳು' ಎಂದರೇನು ಎಂಬುದು ಸುಲಭಗ್ರಾಹ್ಯವಾಗುತ್ತದೆ.

ಇನ್ನು ಜೀವವಿಜ್ಞಾನವು ಹೆಣ್ಣು ಗಂಡುಗಳು 'ಸಹಜ ಸ್ವಭಾವ'ಗಳ ನಿರೂಪಣೆಗೆ ತೊಡಗುವ ವಿಧಾನವನ್ನು ಪರಿಶೀಲಿಸಬಹುದು. ಈ ವಿಜ್ಞಾನವು ಮೂರ್ತವಾದ ಸಾಕ್ಷಿ ಆಧಾರಗಳ ಸಮೇತ ವಿವರಣೆಗಳನ್ನು ನೀಡುತ್ತೇನೆಂದು ಹೊರಡುತ್ತದೆ. ಅಂಥಾ ಒಂದು ಮುಖ್ಯವಾದ ವಿವರಣೆ ಹಾರ್ಮೋನುಗಳ ಪ್ರಸ್ತಾಪಕ್ಕೆ ಸಂಬಂಧಿಸಿದೆ. ಸೆಕ್ಸ್ ಹಾರ್ಮೋನುಗಳು ಮಿದುಳನ್ನು ಪ್ರವೇಶಿಸುತ್ತವಾದ್ದರಿಂದ ಇವು ಹೆಣ್ಣು ಗಂಡುಗಳ ಸ್ವಭಾವ ವರ್ತನೆಗಳಲ್ಲಿ ವ್ಯತ್ಯಾಸವನ್ನು ತರುತ್ತವೆ ಎನ್ನುತ್ತಾರೆ. ಆದರೆ ದೈಹಿಕ ಸ್ಥಿತಿಯೊಂದನ್ನು ವಿವರಿಸುವ ಈ ಸಂಗತಿಯು ಸ್ವಭಾವ ವರ್ತನೆಗಳಿಗೆ ಕಾರಣವಾಗುವ ಸಂಗತಿಯೂ ಹೌದು ಎಂಬುದಕ್ಕೆ ಇಲ್ಲಿ ವಿವರಣೆಯೇನೂ ದೊರಕುವುದಿಲ್ಲ. ಹಾಗೆ ಸಾಬೀತು ಪಡಿಸುವ ಅಂಶ ಈ ಸಂಗತಿಯಲ್ಲಿ ಇಲ್ಲ. ಉದಾಹರಣೆಗೆ ಟೆಸ್ಟೋಸ್ಟೆರೋನ್ ನ ಅಂಶ ಒಂದು ನಿರ್ದಿಷ್ಟ ವಯಸ್ಸಿನಲ್ಲಿ ಹೆಂಗಸರಿಗಿಂತಲೂ ಗಂಡಸರಲ್ಲಿ ಹೆಚ್ಚಾಗಿರುತ್ತದೆಂಬುದು ನಿರೂಪಿಸ ಬಹುದಾದ ವಾಸ್ತವ. ಆದರೆ ಈ ಕಾರಣದಿಂದ 'ಗಂಡು ಆಗ 'ಪುರುಷಸಿಂಹ' ನಾಗುತ್ತಾನೆ ಮತ್ತು ಧಾಳಿ, ಸ್ಪರ್ಧೆ, ದಬ್ಬಾಳಿಕೆ, ಆಕ್ರಮಣ, ಬೇಟೆಯ ಗುಣ, ಸಾರ್ವಜನಿಕ ನಿಯಂತ್ರಣಗಳಂತಹ ಹಲವು ಲಕ್ಷಣಗಳನ್ನು ಮೆರೆಯುತ್ತಾನೆ' ಎಂಬ ಹೇಳಿಕೆಯು ನಿಕಷಕ್ಕೆ ಒಳಗಾದಾಗ ದೃಢವಾಗಿ ನಿಲ್ಲಲಾರದೆ ಹೋಗುತ್ತದೆ. ವಾಸ್ತವದಲ್ಲಿ ಎಲ್ಲ ಸಸ್ತನಿ ಪ್ರಾಣಿಗಳಲ್ಲೂ ಸಂತಾನೋತ್ಪತ್ತಿಯ ವಯಸ್ಸಿನ ಪುರುಷ ಪ್ರಾಣಿಯಲ್ಲಿ ಟೆಸ್ಟೋಸ್ಟೆರೋನ್ ಅಂಶ ಅಧಿಕವಾಗಿ ಇರುತ್ತದೇನೋ ಹೌದು. ಆದರೆ ಈ ಸಮಯದಲ್ಲಿ ಎಲ್ಲ ಪ್ರಾಣಿಗಳೂ ಧಾಳಿ ದಬ್ಬಾಳಿಕೆಗಳನ್ನೇ ಮೆರೆಯುತ್ತವೆಂದೇನಿಲ್ಲ. ಸಿಂಹ, ಹುಲಿ, ಚಿರತೆಗಳಂತಹ ಪ್ರಾಣಿವರ್ಗಗಳಲ್ಲಿ ಹೆಣ್ಣೇ ಈ 'ಪುರುಷಗುಣ'ಗಳನ್ನು ಮೆರೆಯುತ್ತದೆಂಬುದು ಗಮನಾರ್ಹ. ಅಂದರೆ ಟೆಸ್ಟೋಸ್ಟೆರೋನ್ ಅಂಶಕ್ಕೂ 'ಹೆಣ್ಣುತನ' ಅಥವಾ 'ಗಂಡುತನ' ಮೆರೆಯುವುದಕ್ಕೂ ಇರುವ ಸಂಬಂಧವನ್ನು ನಿರೂಪಿಸುವುದು ಕಷ್ಟ. ಲಿಂಗ ಹಾರ್ಮೋನುಗಳ ವ್ಯತ್ಯಾಸದಿಂದಾಗಿ ಹೆಣ್ಣು ಗಂಡುಗಳ ಸಹಜ ಸ್ವಭಾವ ವರ್ತನೆಗಳಲ್ಲಿ ವ್ಯತ್ಯಾಸಗಳುಂಟಾಗುತ್ತವೆ ಎಂಬುದನ್ನು ಸಾಬೀತು ಪಡಿಸಲಾಗದು.

ಮಾನವನ ವರ್ತನೆಗಳಿಗೂ, ಅವನ ಪೂರ್ವಜ ಪ್ರಾಣಿ ಸಂತತಿಗಳು ತೋರುವ ವರ್ತನೆಗಳಿಗೂ ಸಂಬಂಧವನ್ನು ಕಲ್ಪಿಸಿ ಅಧ್ಯಯನ ಮಾಡುವ ಚಿಂತನೆಯೊಂದಿದೆ. ಉದಾಹರಣೆಗೆ, ಗಂಡು ಚಿಂಪಾಂಜಿಯ ಸಹವಾಸದಲ್ಲಿ ಮರಿಗಳನ್ನು ದೀರ್ಘಕಾಲವೇ ಬಿಟ್ಟರೂ ಆ ಗಂಡು ಮಾತ್ರ ಸಂಗೋಪನೆಯಲ್ಲಿ ಕಣದಷ್ಟೂ ಆಸಕ್ತಿಯನ್ನು ವಹಿಸುವುದಿಲ್ಲ ಎಂಬ ಅಂಶವನ್ನು ಹಿಡಿದು, ಹಾಗೆಯೇ ಮಾನವ ಗಂಡಿಗೆ ಕೂಡ ಈ ಸಂಗೋಪನೆ ಸಹಜ ಪ್ರವೃತ್ತಿಯಲ್ಲ, ಅದೇನಿದ್ದರೂ ಹೆಣ್ಣಿನ ಕಾರ್ಯಕ್ಷೇತ್ರವೇ ಸರಿ ಎಂಬ ತೀರ್ಮಾನವನ್ನು ಮಾಡಿಡುವುದು. ಇದೇ ತರ್ಕವನ್ನು ಹಿಡಿದು ಹೊರಟರೆ ಚಿಂಪಾಂಜಿಗಳಿಗೆ ಮಾತು ಕಲಿಸಲು ಹೊರಡುವುದು ನಿರುಪಯುಕ್ತವಾದ್ದರಿಂದ, ಮಾನವ ಮಕ್ಕಳಿಗೂ ಈ ಪ್ರಯತ್ನ ನಿರುಪಯುಕ್ತ ಎನ್ನಬೇಕಾಗುತ್ತದೆ.

ಎಂದಮೇಲೆ, ಪೂರ್ವಜ ಪ್ರಾಣಿ ಸಂತತಿಗಳಲ್ಲಿ ಹೆಣ್ಣು ಗಂಡುಗಳ ವರ್ತನೆಯನ್ನು ಗಮನಿಸಿ ಮಾನವ ಗಂಡು ಹೆಣ್ಣುಗಳ ವರ್ತನೆಗಳ ಬಗ್ಗೆ ತೀರ್ಮಾನಗಳನ್ನು ಹೇಳಿಬಿಡುವುದು ಹೇಗೆ ಸೂಕ್ತವಾದೀತು? ಎಲ್ಲೋ ಕೆಲವು ನಿದರ್ಶನಗಳಲ್ಲಿ, ಕೆಲವೇ ಮಿತಿಗಳಲ್ಲಷ್ಟೇ ಹಲ ಕೆಲವು ಲಿಂಗ ನಿರ್ಧಾರಿತವೆನ್ನಬಹುದಾದ ಲಕ್ಷಣಗಳನ್ನು ನಿರೂಪಿಸಲು ಸಾಧ್ಯವಾಗ ಬಹುದು. ಇದನ್ನೇ ಹಿಡಿದು ಆತ್ಯಂತಿಕ ತೀರ್ಮಾನಗಳನ್ನು ತಲುಪುವುದು ಯಾವ ದೃಷ್ಟಿ ಯಿಂದಲೂ 'ವೈಜ್ಞಾನಿಕ'ವೆನಿಸಲಾರದು.

ಮಾನವ ಪ್ರಾಣಿ ಮತ್ತು ಇತರ ಪ್ರಾಣಿಗಳಲ್ಲಿ ಸಾಮ್ಯ ವ್ಯತ್ಯಾಸಗಳನ್ನು ಗುರುತಿಸಲು ಹೊರಡುವ ಈ ಪ್ರಯೋಗಗಳಿಗೆ ತುಂಬಾ ಮಿತಿಗಳಿವೆ. ಮಾನವ ಹೆಣ್ಣು ತನ್ನ ಸಂತಾನವನ್ನು ಹೊತ್ತು ಹೆತ್ತು ಮಾಡುವುದಲ್ಲದೆ ಅದರ ಸಂಗೋಪನೆಯ ಹೊಣೆಯನ್ನೂ ನಿರ್ವಹಿಸುತ್ತದೆ. ಈ ನಿರ್ವಹಣೆಗಳ ಪೈಕಿ ಪ್ರಕೃತಿಯಿಂದ ಬಂದ ಅನಿವಾರ್ಯ ಪ್ರಸಂಗದ ಭಾಗವಿರುವಂತೆಯೇ ಸಮಾಜದಿಂದ ಆರೋಪಿತವಾದ ಭಾಗವೂ ಇದೆ. ಸಂತಾನ ನಿರ್ವಹಣೆಯ ಈ ಸ್ವರೂಪವನ್ನು ಉಳಿದ ಪ್ರಾಣಿವರ್ಗಗಳಿಗೂ ಸಮಾನವಾಗಿ ಅನ್ವಯಿಸ ಲಾಗದು ಎಂಬುದನ್ನು ಗಮನಿಸಿ. ಸಂತಾನವು ಭೂಮಿಗೆ ಬಂದ ನಂತರದ ಸಂಗೋಪನಾ ಭಾಗದ ಪೂರ್ಣ ಹೊಣೆಯನ್ನು ತಾನು ಹೊರುವ ಮೂಲಕ ಗಂಡು 'ತಾಯಿಯ ಪಾತ್ರ' ವನ್ನು ನಿರ್ವಹಿಸುವ ಪ್ರಾಣಿವರ್ಗಗಳೂ ಇವೆ.

ಅಂದರೆ ಮೇಲೆ ಹೇಳಿದ ವೈಜ್ಞಾನಿಕ ಸಂಶೋಧನೆ, ಪರಿಶೀಲನೆಗಳಲ್ಲಿ ಗಮನಾರ್ಹವಾದ ಸಂಗತಿಯೊಂದಿದೆ. ಅಂತಹ ಶೋಧಗಳಲ್ಲಿ ತೊಡಗಿದ ಎಲ್ಲರೂ ಈಗಾಗಲೇ ಪ್ರಚಲಿತ ವಿರುವ ಪುರುಷಪರ ಸಾಮಾಜಿಕ ಚಿಂತನೆಗಳನ್ನು ದೃಢೀಕರಿಸುವ ನಿದರ್ಶನಗಳನ್ನಷ್ಟೇ ಆಯ್ದುಕೊಳ್ಳುತ್ತಿದ್ದಾರೆ 'ಹೆಣ್ಣು' ಎಂದರೆ ದುರ್ಬಲಳು, ಪರಾಧೀನೆ ಎಂಬುದನ್ನು ನಿರೂಪಿಸಬೇಕೆಂದರೆ ಈ ಗುಣಗಳನ್ನೇ ತೋರುವ ಬಬೂನ್ ಕೋತಿಗಳ ನಿದರ್ಶನವನ್ನೇ ಆಯ್ದುಕೊಳ್ಳಲಾಗುತ್ತದೆ. ಈ ಕೋತಿಗಳಲ್ಲಿ ಗಂಡುಗಳು ದರ್ಪ, ದಬ್ಬಾಳಿಕೆ,

ಒರಟುತನಗಳನ್ನೇ ತೋರಿದರೆ ಹೆಣ್ಣುಗಳು ದೌರ್ಬಲ್ಯಗಳನ್ನು ತೋರುತ್ತವೆ. ಆದರೆ ಇತರ ಹಲವು ಪ್ರಾಣಿವರ್ಗಗಳಲ್ಲಿ ಇದಕ್ಕೆ ಭಿನ್ನವಾದ ಗುಣಗಳು ಪ್ರಕಟಗೊಳ್ಳುವುದೂ ಇದೆ ಎಂಬುದನ್ನು ಈ ಪ್ರಯೋಗಗಳು ಗಮನಿಸಲು ಹೋಗುವುದಿಲ್ಲ. ಹಲವಾರು ಹೆಣ್ಣುಗಳ ಗುಂಪಿಗೆ ಸರದಾರನಾಗಿ ಮೆರೆಯುವ ಬಬೂನ್ ಕುಟುಂಬದ ನಿದರ್ಶನದ ಬದಲು ಹಲವು ಗಂಡುಗಳ ಗುಂಪಿನ ನಾಯಕಿಯಾಗಿ ಸಂಸಾರವನ್ನು ನಡೆಸುವ ಗಿಬ್ಬನ್ ವರ್ಗದ ನಿದರ್ಶನವನ್ನು ಮರೆಮಾಚಲಾಗುತ್ತದೆ.

ಒಟ್ಟಿನಲ್ಲಿ ಇಂತಹ ಪ್ರಯೋಗಗಳು ಹಾಗೂ ಮಾನವ ಗುಣ ಸ್ವಭಾವಗಳನ್ನು ಗ್ರಹಿಸುವಲ್ಲಿ ಇವುಗಳ ಮೂಲಕ ತಲುಪುವ ನಿರ್ಧಾರಗಳು ಎಷ್ಟೊಂದು ಅರ್ಥ ಹೀನವೆಂಬುದನ್ನೂ, ಪೂರ್ವಗ್ರಹಪೀಡಿತವೆಂಬುದನ್ನೂ ಗ್ರಹಿಸಬೇಕು. ಚಾಲ್ತಿಯಲ್ಲಿರುವ ಈ 'ವೈಜ್ಞಾನಿಕ ಚಿಂತನೆಗಳು' ಹೆಣ್ಣಿನ ಬಗೆಗೆ ಸಾರಾಸಗಟಾದ ತೀರ್ಮಾನಗಳನ್ನೇನೋ ಹೇಳಿಬಿಟ್ಟಿವೆ. ಪುರುಷ ಪ್ರಧಾನ ಸಾಮಾಜಿಕ ಚಿಂತನೆಯಲ್ಲಿ ಈ ತೀರ್ಮಾನಗಳು ಮನ್ನಣೆಯನ್ನು ಪಡೆದುಕೊಂಡು ಬಿಟ್ಟಿವೆ. ಆದರೆ ಒಂದಿಷ್ಟು ತೆರೆದ ಮನಸ್ಸಿದ್ದರೆ ಹೀಗೇಕಾಗುತ್ತದೆ ಎಂಬುದನ್ನು ಗ್ರಹಿಸುವುದು ಕಷ್ಟದ ಮಾತೇನಲ್ಲ.

ನಮ್ಮ ಸಂಸ್ಕೃತಿಯಲ್ಲಿ, ನಮ್ಮ ಸಮಾಜದ ಮನೋಭಿತ್ತಿಯಲ್ಲಿ ಮಹಿಳೆಯ ಸಹಜ ಸ್ವಭಾವ ಗುಣಗಳನ್ನು ಕುರಿತಂತೆ ಹಲವು ರೂಢಿಗತ ಗ್ರಹಿಕೆಗಳು ನೆಲೆಗೊಂಡುಬಿಟ್ಟಿವೆ. ಮಹಿಳೆ ಚಂಚಲೆ, ದುರ್ಬಲ ಹಾಗೂ ಅಸ್ಥಿರ ಮನಸ್ಕಳು, ಆತ್ಮವಿಶ್ವಾಸದ ಕೊರತೆಯಿಂದ ಬಳಲುವವಳು, ಅಶಕ್ತಳು. ಅವಳಲ್ಲಿ ಉತ್ಪಾದನಾ ಸಾಮರ್ಥ್ಯಕ್ಕಿಂತ ಪಾಲನಾ ಸಾಮರ್ಥ್ಯವೇ ಸಹಜ ಗುಣವಾಗಿದೆ. ಅವಳಲ್ಲಿ ಕಾಮನ್‌ಸೆನ್ಸ್ ಮತ್ತು ಕಲ್ಪನಾ ಪ್ರತಿಭೆಗಳು ಚುರುಕಾಗಿರುತ್ತವೆಯೇ ಹೊರತು ಬುದ್ಧಿ ಶಕ್ತಿ ಕಡಿಮೆಯೇ. ಅಷ್ಟಿಷ್ಟು ಓಡುವ ಬುದ್ಧಿ ಶಕ್ತಿ ಮನೆ, ಕುಟುಂಬ, ಮಕ್ಕಳು ಎಂಬ ದಿಸೆಯಲ್ಲಷ್ಟೇ ಓಡುವಂಥದಾಗಿದೆ-ಹೀಗೆ ಅವಳ ಸಾಮರ್ಥ್ಯವೆಲ್ಲವನ್ನೂ ಎರಡನೆಯ ದರ್ಜೆಯದೆಂದೇ ಪಟ್ಟಿಮಾಡಿ ಬಿಡಲಾಗಿದೆ. ಹಾಗಾಗಿಯೇ ಮನೆಯೇ ತಮ್ಮ ಸರ್ವಸ್ವ ಎಂದು ಒಪ್ಪಿ ಬಾಳುವ ಹೆಂಗಸರು ಅತ್ಯಂತ ಮುಗ್ಧರೂ, ಸಂತೋಷ ಚಿತ್ತರೂ, ಪ್ರೀತಿಪಾತ್ರರೂ ಎಂದು ಪರಿಗಣಿತರಾಗುತ್ತಾರೆ. ಇಂತಹ ಹೆಂಗಸರಿಗೆ ಸಮಾಜವು ಪ್ರೀತಿ, ಗೌರವ, ಮನ್ನಣೆಗಳನ್ನು ಸಲ್ಲಿಸುವ ನಾಟಕವನ್ನು ಮಾಡುತ್ತದೆ. ಮಹಿಳೆಗೆ ನಮ್ಮ ಸಮಾಜದಲ್ಲಿ ಉನ್ನತ ಸ್ಥಾನವನ್ನು ನೀಡಲಾಗಿದೆ ಎಂದು ಹೇಳುವಾಗಲೆಲ್ಲಾ ಇವರನ್ನೇ ನಿದರ್ಶನವನ್ನಾಗಿ ತೋರಿಸಲಾಗುತ್ತದೆ. ಆದರೆ ವಾಸ್ತವದಲ್ಲಿ ಇದು ವಿಧೇಯ ಆಳಿಗೆ ನೀಡುವ ಪ್ರೋತ್ಸಾಹಕರ ಬಹುಮಾನದ ರೀತಿಯೇ ಹೊರತು ಖಂಡಿತವಾಗಿಯೂ ಮನ್ನಣೆಯಲ್ಲ.

ಎಲೀನರ್ ಮ್ಯಾಕೋಬಿ (Eleanor Mackoby) ಎಂಬಾಕೆ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಬೌದ್ಧಿಕ ಮಟ್ಟದ ವ್ಯತ್ಯಾಸಗಳಿರುತ್ತವೆ ಎಂಬ ಮಾತನ್ನು ಪರೀಕ್ಷಿಸಲು ದೀರ್ಘ ಅಧ್ಯಯನವೊಂದನ್ನು ಕೈಗೊಂಡಳು. ಸುಮಾರು ಹೈಸ್ಕೂಲು ಹಂತದವರೆಗೂ ಅಂಥಾ

ಯಾವ ವ್ಯತ್ಯಾಸಗಳೂ ಗಮನಕ್ಕೆ ಬರಲಿಲ್ಲ. ಹಾಗೆ ನೋಡಿದರೆ ಹೆಣ್ಣು ಮಕ್ಕಳ ಬುದ್ಧಿಮಟ್ಟವೇ ಒಂದಿಷ್ಟು ಮೇಲಿನದೆನಿಸುವಂತಿತ್ತು. ಆದರೆ ಈ ಹಂತದಿಂದ ಮುಂದಕ್ಕೆ ಇದ್ದಕ್ಕಿದ್ದಂತೆ ಹೆಣ್ಣುಮಕ್ಕಳ ಬುದ್ಧಿಮಟ್ಟ ಕುಸಿಯುವುದು ಕಂಡು ಬಂದಿತು. ಅದರಲ್ಲೂ ಬೌದ್ಧಿಕ ಸಾಮರ್ಥ್ಯಗಳನ್ನೇ ಆಧರಿಸುವ ಗಣಿತದಂತಹ ಕೆಲವು ಕ್ಷೇತ್ರಗಳಲ್ಲಿ ಈ ಕುಸಿತ ತೀವ್ರ ಸ್ವರೂಪದ್ದಾಗಿತ್ತು. ಹಾಗೆಯೇ ಬೌದ್ಧಿಕ ನೆಲೆಯದಲ್ಲದ ಕೆಲವು ಪರೀಕ್ಷೆಗಳೂ ಹೀಗೆ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ವ್ಯತ್ಯಾಸವಿರುವುದನ್ನೇ ತೋರಿದವು. ಸಾಧಾರಣವಾಗಿ ಈ ಪರೀಕ್ಷೆಗಳಲ್ಲಿ ಹೆಣ್ಣುಮಕ್ಕಳು ಗಂಡು ಮಕ್ಕಳಿಗಿಂತ ಕಡಿಮೆ ದರ್ಜೆಯನ್ನು ಪಡೆದರು. ಆದರೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಹೈಸ್ಕೂಲು ಹಂತದ ನಂತರದಲ್ಲಷ್ಟೇ ಹೆಣ್ಣು ಮಕ್ಕಳು ಕೆಳ ದರ್ಜೆಯವರಾಗತೊಡಗುತ್ತಾರೆ. ಆ ಮುಂಚೆ ಅಲ್ಲ. ಸಾಮಾಜಿಕ ನಿರೀಕ್ಷೆಗಳಿಗನುಗುಣವಾಗಿಯೇ ಎಲ್ಲ ಪರೀಕ್ಷೆಗಳಲ್ಲೂ ಗಂಡು ಮಕ್ಕಳು ಒಳ್ಳೆಯ ಗುಣಮಟ್ಟವನ್ನೂ, ಹೆಣ್ಣು ಮಕ್ಕಳು ಕೆಳಗುಣಮಟ್ಟವನ್ನೂ ಪ್ರದರ್ಶಿಸುತ್ತಾರೆ. ಆದರೆ ಪುಟ್ಟ ಮಕ್ಕಳಿಗೆ ಈ ಸಾಮಾಜಿಕ ನಿರೀಕ್ಷೆಗಳ ಪಾಠ ಇನ್ನೂ ಮನದಟ್ಟಾಗಿರುವುದಿಲ್ಲವಾಗಿ ಇವರು ಈ ನಿರೀಕ್ಷೆಗಳಿಗಿಂತ ಭಿನ್ನವಾದ ಫಲಿತಾಂಶಗಳನ್ನೂ ತೋರುತ್ತಾರೆ. ಬಹುಮಟ್ಟಿಗೆ ಹೈಸ್ಕೂಲ್ ವೇಳೆಗೆ ಹುಡುಗರೂ ಹುಡುಗಿಯರೂ ಸಾಮಾಜಿಕ ನಿರೀಕ್ಷೆಗಳನ್ನು ಒಪ್ಪಿ ನಡೆಯುವುದನ್ನೂ ಕಲಿಯುತ್ತಾರೆ. ಎಲ್ಲೋ ಕೆಲವು ಮಕ್ಕಳು ಈ ಸಾಮಾಜಿಕ ನಿರೀಕ್ಷೆಗಳನ್ನು ಪ್ರತಿರೋಧಿಸಿ ಸ್ವಂತಿಕೆಯನ್ನು ತೋರುತ್ತಾರೆ. ಅಂತಹ ಮಕ್ಕಳು ಹೆಣ್ಣಿಗ ರಾಮರೆಂದೋ, ಗಂಡು ಬೀರಿಯರೆಂದೋ ಅಭಿಧಾನಗಳನ್ನು ಪಡೆಯುತ್ತಾರೆ.

ಅಂದರೆ ಹುಟ್ಟಿದ ಮಕ್ಕಳು ಪ್ರೌಢರಾಗುವ ವೇಳೆಗೆ ಅವರ ಸಹಜ ಸ್ವಭಾವ ಗುಣ ಸಾಮರ್ಥ್ಯಗಳ ಮೇಲೆ ಈ ಸಮಾಜವು ತನಗೆ ಬೇಕಾದಂತೆ ಮಿತಿಗಳನ್ನು ಹೇರಿ ಅವರ ಸಹಜ ಬೆಳವಣಿಗೆಯನ್ನು ತಡೆಯುತ್ತದೆ. ಎಲ್ಲಿಯವರೆಗೆ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರ ಬಗ್ಗೆಯೂ ಸಮಾಜವು ಸಮಾನವಾದ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಇಬ್ಬರ ಬಗ್ಗೆಯೂ ಸಮಾನವಾದ ನಿರೀಕ್ಷೆಗಳನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಪ್ರೌಢ ವಯಸ್ಸಿಗೆ ಬರುವ ಯಾವ ಮಗುವೂ ತನ್ನ ಸಹಜ ಗುಣ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲಾರದು. ಅಂದರೆ ಈಗಿನವರೆಗೂ ಹೆಣ್ಣು ಗಂಡುಗಳ ನಡುವೆ ಈ ಸಮಾಜವು ಅಸಮಾನತೆಯನ್ನೇ ಪೋಷಿಸಿಕೊಂಡು ಬಂದಿದೆ ಎಂದರೆ, ಸ್ತ್ರೀ ಪುರುಷರನ್ನು ಸಮಾನ ಗೌರವದಿಂದ ಕಾಣುತ್ತಾ ಬಂದಿಲ್ಲವೆಂದರೆ, ಮುಂದೆ ಬರುವ ಜನಾಂಗವೂ ಇದೇ ತರಬೇತಿಯನ್ನು ಪಡೆಯುತ್ತಾ ಸಮಾಜದ ಈ ನಿರೀಕ್ಷೆಯನ್ನು ಪೂರೈಸುವ ಪ್ರಯತ್ನದಲ್ಲೇ ಉಳಿದು ಬಿಡುತ್ತದೆ. ಸಾಮಾಜಿಕ ನಿರೀಕ್ಷೆಗಳಲ್ಲಿ ಆರೋಗ್ಯದಾಯಕ ಪರಿವರ್ತನೆಗಳಾಗಬೇಕೆಂಬ ದಿಸೆಯಲ್ಲಿ ನಮ್ಮ ಚಿಂತನೆಗಳು ಬೆಳೆಯಬೇಕಾದ ಅಗತ್ಯವನ್ನು ಈ ಅಂಶವು ಹೇಳುತ್ತದೆ.

ಹೆಸರಿಲ್ಲದ ಒಂದು ಸಮಸ್ಯೆ ಅಥವಾ ಹೌಸ್‌ವೈಫ್ ಸಿಂಡ್ರೋಂ

ಸುಸಜ್ಜಿತವಾದ ಸುಂದರ ಬಂಗಲೆ, ಕೈ ತುಂಬಾ ಗಳಿಸಿ ತರುವ ಪತಿ, ಮುದ್ದಾದ ಮಕ್ಕಳು- ಒಂದು ಹೆಣ್ಣು ಇನ್ನಾವ ಸುಖವನ್ನು ಕಲ್ಪಿಸಬಹುದು? ಮನೆ, ಪತಿ, ಮಕ್ಕಳನ್ನು ಸಂಭಾಳಿಸುತ್ತಾ ಕಳೆಯುವ ಅವಳ ದಿನಗಳು ಸ್ವರ್ಗ ಸಮಾನವೇ ಇರಬೇಕಲ್ಲವೇ? ಬೇಸರದ ಕ್ಷಣಗಳಿಗಾಗಲೀ, ಶೂನ್ಯ ಭಾವಕ್ಕಾಗಲೀ ಅವಳಿಗೆ ಪುರುಸೊತ್ತು ತಾನೇ ಎಲ್ಲಿದೆ? ಮನೆಯ ಕೆಲಸ, ಗಂಡನ ಮತ್ತು ಮಕ್ಕಳ ಕೆಲಸ, ತನ್ನ ಶೃಂಗಾರಗಳಷ್ಟೇ ಅಲ್ಲದೆ ಇವೆಲ್ಲಕ್ಕೂ ಕಲಶವಿಟ್ಟಂತೆ ಕುಟುಂಬವು ಸಮಾಜದ ಸದಸ್ಯರೊಂದಿಗೆ ಹಲವು ನೆಲೆಗಳಲ್ಲಿ ಸಾಧಿಸಬೇಕಾದ ಸೌಹಾರ್ದಕ್ಕಾಗಿ ವಹಿಸಬೇಕಾದ ಎಚ್ಚರಗಳು- ಎಷ್ಟೊಂದು ಬಿಡುವಿಲ್ಲದ ಜೀವನ ಚಟುವಟಿಕೆಗಳು ! ಬೆಳಿಗ್ಗೆ ಹಾಸಿಗೆಯಿಂದ ಎದ್ದ ಗಳಿಗೆಯಿಂದ ರಾತ್ರಿ ಗಂಡನ ಪಕ್ಕಕ್ಕೆ ಮಲಗುವವರೆಗೂ ಒಂದು ಕ್ಷಣವೂ ಬಿಡುವಿಲ್ಲದೆ ಓಡುವ ದಿನಗಳು! ಇನ್ನೇನು ಭಾಗ್ಯ ತಾನೇ ಬೇಕು?

ಆದರೂ ಹೆಣ್ಣಿನ ಅಂತರಂಗದ ಯಾವುದೋ ಆಳದಿಂದ, ಹೀಗೆಲ್ಲಾ ಕೇಳಬಹುದೇ ಎಂಬ ಅಂಜಿಕೆಯ ದನಿಯಲ್ಲಿ, 'ಬದುಕೆಂದರೆ ಇಷ್ಟೇ ಏನು?' ಎಂಬ ಒಂದು ಪ್ರಶ್ನೆ ಮುಲು ಗುಟ್ಟುತ್ತದೇಕೆ? ಈ ದನಿ ತನ್ನೊಳಗಿನಿಂದಲೇ ಬರುತ್ತಿದೆ ಎಂಬುದನ್ನು ಗುರುತಿಸಿದರೂ, ಹೌದೆಂದು ನಂಬಲು ಮತ್ತು ಅದರ ಸ್ವರೂಪವನ್ನು ಅರಿಯುವ ಪ್ರಯತ್ನಕ್ಕೆ ತೊಡಗಲು ಹೆಣ್ಣು ಹೆದರುತ್ತಾಳೆ. ಇದೇಕೆ ಹೀಗೆ? ಇದಾವ ಭಾವ?

ಹೆಣ್ಣಿನ ಸೌಖ್ಯವೆಂದರೆ ಅವಳಿಗೆ ಹೆಂಡತಿಯಾಗಿ ತಾಯಿಯಾಗಿ ತೃಪ್ತಿಯನ್ನು ಪಡೆಯುವ ಸದವಕಾಶ ಬಾಳಿನಲ್ಲಿ ಒದಗಿ ಬರಬೇಕು ಎಂಬುದನ್ನೇ ಎಲ್ಲ ಸಾಂಪ್ರದಾಯಿಕ ಚಿಂತನೆಗಳೂ ಹೇಳುತ್ತಾ ಬಂದಿವೆ. ಇದೇ ಸತ್ಯ ಎಂದು ಅವಳನ್ನು ನಂಬಿಸಿಕೊಂಡೇ ಬರಲಾಗಿದೆ. ಫ್ರಾಯ್ಡ್ ಮನೋವಿಜ್ಞಾನದಂತಹ ಆಧುನಿಕ ಚಿಂತನೆಗಳೂ ಈ ಸತ್ಯದಲ್ಲಿಯೇ ಹೆಣ್ಣಿನ ಬದುಕಿನ ಪರಮೋಚ್ಚ ಸಾಧನೆಯೂ, ಅವಳ ಜೀವನ ತೃಪ್ತಿಯೂ ಅಡಗಿದೆ ಎಂದೇ ಹೇಳುತ್ತವೆ. ಹೆಣ್ಣು ಈ ಸಾರ್ಥಕ ಗುರಿಯನ್ನು ಸಾಧಿಸುವಲ್ಲಿ ನೆರವಾಗುವ

ಸಂಗತಿಗಳಾವುವು ಎಂಬ ಬಗ್ಗೆ ಈ ತಜ್ಞರು ಪರಿಪರಿಯ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ಸಂಸಾರದ ಸೌಖ್ಯದಲ್ಲಿ ಯಾವ ಅಡೆತಡೆಗಳೂ ಬಾರದಿರಬೇಕಾದರೆ ಹೆಣ್ಣು ಯಾವ ಎಚ್ಚರಗಳನ್ನು ವಹಿಸಬೇಕು ಎಂಬ ಬಗ್ಗೆ ಉಪದೇಶಗಳನ್ನು ನೀಡದೆ ಇರುವ ಯಾವ ವಲಯವೂ ಸಮಾಜದಲ್ಲಿಲ್ಲ. ಗಂಡನು ತನ್ನಲ್ಲಿ ಆಕರ್ಷಣೆಯನ್ನು ಕಳೆದುಕೊಳ್ಳದಂತೆ ಸೌಂದರ್ಯ, ಯೌವನಗಳನ್ನು ರಕ್ಷಿಸಿಕೊಳ್ಳುವುದು ಹೇಗೆ, ಕಾಲಕಾಲಕ್ಕೆ ಅವನಿಗೆ ತಾಯಿಯಾಗಿ, ಸಖಿಯಾಗಿ, ಮಂತ್ರಿಯಾಗಿ, ವೈಶ್ಯೆಯಾಗಿ, ಸೇವಕಿಯಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸುವ ಚಾತುರ್ಯವನ್ನು ಮೆರೆಯುವುದು ಹೇಗೆ. ಸಂಸಾರದಲ್ಲಿ ತನ್ನ ವಿವೇಚನೆ, ಸಹನೆ, ತ್ಯಾಗ, ಸ್ನೇಹಗಳಿಗೆ ಸವಾಲುಗಳಾಗಿ ಬರುವ ಸಂದರ್ಭಗಳನ್ನು ನಿಭಾಯಿಸುವುದು ಹೇಗೆ- ಎಂಬಂತಹ ಸಂಗತಿಗಳಿಂದ ಮೊದಲುಗೊಂಡು ಮಕ್ಕಳ ಲಾಲನೆ ಪಾಲನೆ, ಮನೆಯ ಅಂದ ಚಂದ, ಮನೆಯ ಖರ್ಚು ವೆಚ್ಚಗಳ ನಿರ್ವಹಣೆ, ತೋಟಗಾರಿಕೆ, ಅಡಿಗೆ, ಹೊಸ ರುಚಿ, ಗೃಹವೈದ್ಯ, ಪಾರ್ಟಿಗಳು, ಹೊಲಿಗೆ ಕಸೂತಿ, ಗೃಹೋಪಕರಣಗಳ ರಿಪೇರಿಗಳವರೆಗೆ ಈ ಸಾಹಿತ್ಯದ ವಿಸ್ತಾರ ಅಡೆತಡೆ ಇಲ್ಲದೆ ಬೆಳೆದಿದೆ. ಹೆಂಗಸಿಗೆ ಇದೇ ಅತ್ಯಂತ ಸೂಕ್ತವಾದ ಮತ್ತು ಅರ್ಹವಾದ ಸಾಹಿತ್ಯ ಎಂದು ನಂಬಿಸಲು ಯತ್ನಿಸಲಾಗಿದೆ. ಇದಕ್ಕಿಂತಲೂ ಮುಖ್ಯವಾಗಿ ಹೆಣ್ಣು ತನ್ನ 'ಹೆಣ್ಣುತನ'ವನ್ನು ಕಾಯ್ದುಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳುವ ಉಪದೇಶಗಳು ಹೇರಳವಾಗಿವೆ. ದಿನನಿತ್ಯದ ವರ್ತನೆ ನಡವಳಿಕೆಗಳಿಂದ ಹಿಡಿದು ವಿವಾಹ, ಶಿಕ್ಷಣ, ಉದ್ಯೋಗ, ವೃತ್ತಿ, ಹವ್ಯಾಸ, ಅಭಿರುಚಿಗಳಂತಹ ವ್ಯಕ್ತಿಗತ ಆಪ್ತ ವಿಚಾರಗಳವರೆಗೆ ಹೆಣ್ಣೊಬ್ಬಳು ತಳೆಯಬೇಕಾದ ನಿಲುವುಗಳ ಬಗೆಗೆ ಖಚಿತವಾದ ನಿರ್ದೇಶನಗಳನ್ನು ನೀಡಲಾಗಿದೆ. ಹೆಣ್ಣಿನ ಸೌಖ್ಯದ 'ಗುಟ್ಟು' ಕುಟುಂಬದ ಸೌಖ್ಯದಲ್ಲೇ ವಿಲೀನಗೊಂಡಿದೆ. ಅಂದರೆ ಕುಟುಂಬದ ಸೌಖ್ಯದ ಪ್ರಶ್ನೆಯ ಮುಂದೆ ಅವಳು ಇನ್ನಾವುದನ್ನೂ ಮುಖ್ಯವಾಗಿ ಪರಿಗಣಿಸುವಂತಿಲ್ಲ. ವ್ಯಕ್ತಿಗತವಾದ ಅನಿಸಿಕೆಗಳಿಗೆ ಅವಳ ಜೀವನದಲ್ಲಿ ಎಲ್ಲೂ ಸ್ಥಾನವೇ ಇಲ್ಲ. ಹೀಗೆಲ್ಲಾ ಹೇಳುವುದು ಅವಳಿಗೆ ಅನ್ಯಾಯ ಮಾಡಿದಂತೇನೂ ಅಲ್ಲ. ಏಕೆಂದರೆ ಅವಳ ಬದುಕಿನ ಸಾರ್ಥಕತೆಯ ಅಂಶವಿರುವುದೇ ಇಲ್ಲಿ. ಉನ್ನತ ಶಿಕ್ಷಣ, ಉದ್ಯೋಗಾವಕಾಶ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳು-ಎಂಬಂತಹ ಹೋರಾಟಗಳಲ್ಲಿ ತೊಡಗಿದ ಸ್ತ್ರೀವಾದಿಗಳು ಬದುಕಿನಲ್ಲಿ ಏಷ್ಟೊಂದನ್ನು ಕಳೆದುಕೊಳ್ಳಬೇಕಾಗಿ ಬರುತ್ತಿದೆ ಎಂಬ ಬಗ್ಗೆ ಆಧುನಿಕ ಚಿಂತನೆಗಳು ಹೊಸ ಹೊಸ ವಿಶ್ಲೇಷಣೆಗಳನ್ನು ಮಂಡಿಸುತ್ತಿವೆ. ವಿವಾಹ, ಕುಟುಂಬ, ಮನೆ, ಗಂಡ, ಮಕ್ಕಳು- ಎಂಬ ಆವರಣವನ್ನು ಪ್ರಶ್ನಿಸುವ ಮಹಿಳೆ ಸ್ವಂತ ಬದುಕನ್ನು ಜಟಿಲಗೊಳಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ಅವಳಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನಗಳೂ ನಡೆಯುತ್ತಿವೆ.

ಈ ಚಿಂತನೆಗಳನ್ನು ಪ್ರತಿಪಾದಿಸುವಲ್ಲಿ ಪುರಾವೆಗಳನ್ನು ನೀಡಲು ಶ್ರಮಪಡಲೇಬೇಕಾಗಿಲ್ಲ. ಬಾಲ್ಯವಿವಾಹಗಳು ನಡೆಯುತ್ತಿದ್ದ ಕಾಲದಲ್ಲಿ ಮಹಿಳೆಗೆ

ಎದುರಾಗುತ್ತಿದ್ದ ಸಮಸ್ಯೆಗಳ ಸ್ವರೂಪ ಒಂದು ರೀತಿಯದಾದರೆ, ಸುಧಾರಣೆಯ ಹೆಸರಿನಲ್ಲಿ ವಿವಾಹದ ವಯಸ್ಸನ್ನು ಮುಂದೂಡಿದ್ದರ ಫಲವಾಗಿ ಕೂಡ ಹೆಣ್ಣಿನ ಎದುರು ಸಮಸ್ಯೆಗಳು ನಿಂತವು. ಅವಳಿಗೆ ಶಿಕ್ಷಣ, ಉದ್ಯೋಗಗಳಲ್ಲಿ ಅವಕಾಶಗಳನ್ನು ಕಲ್ಪಿಸಲು ಸಮಾಜವೇನೂ ಆಸಕ್ತಿಯನ್ನು ತೋರಲಿಲ್ಲ. ಇನ್ನು ಕುಟುಂಬವೆಂಬ ಸಂಸ್ಥೆಯಂತೂ ಹೆಣ್ಣು ಮಗುವನ್ನು ಹುಟ್ಟಿದ ದಿನದಿಂದಲೇ ಗಂಡನ ಮನೆಗೆ ಸೂಕ್ತವಾಗಿ ಹೊಂದಿಕೊಳ್ಳಲಿ ಎಂಬ ದೃಷ್ಟಿಯಲ್ಲೇ ಬೆಳೆಸುತ್ತದೆ. ಗಂಡನ ಮನೆಗೆ ಅವಳು ಹೊರಡಬೇಕಾದ ದಿನಗಳು ಮುಂದೆ ಹೋದಂತೆಲ್ಲ ಕುಟುಂಬವು ಈ ಮಗಳು ತನಗೆ ಬೇಡದ ಹೊರೆ ಎಂಬುದನ್ನು ವ್ಯಕ್ತ ಪಡಿಸುತ್ತಾ ಅವಳಲ್ಲಿ ಚಡಪಡಿಕೆಯನ್ನು ಹೆಚ್ಚಿಸುತ್ತದೆ. ಗಂಡನನ್ನು ಪಡೆಯುವ ಒಂದೇ ಅದೃಷ್ಟಕ್ಕಾಗಿ ಎದುರು ನೋಡುತ್ತಾ ಕಾಯುವುದು ಅವಳಿಗೆ ಅನಿವಾರ್ಯವಾಗುತ್ತದೆ. ಈ ನಿರೀಕ್ಷೆಯ ಕಾಲಾವಧಿಯ ನಿರ್ವಹಣೆ ಎಂಬಂತೆ ಅವಳಿಗೆ ಶಿಕ್ಷಣ, ಉದ್ಯೋಗ, ಹವ್ಯಾಸಗಳ ಅವಕಾಶಗಳು ಸ್ವಲ್ಪ ತೆರೆದುಕೊಂಡದ್ದೂ ಹೌದು. ಆದರೆ ಇದಾವುದೂ ಎಲ್ಲೂ ಗಂಡನ ಅಹಂಗೆ ಧಕ್ಕೆ ಬಾರದ ರೀತಿಯಲ್ಲಷ್ಟೇ ನಿಲ್ಲಬೇಕೆಂಬುದು ಸಮಾಜವು ನೀಡಿರುವ ನಿರ್ದೇಶನ. ಮದುವೆಯಾಗುವ ಗಂಡಿನ ಅರ್ಹತೆಗಳಿಗೆ ಇವಳ ಈ ಅರ್ಹತೆಗಳು ಎಂದೂ ಮೀರುವಂತಿಲ್ಲ. ಗಂಡಿಗಿಂತ ಯಾವ ರೀತಿಯಲ್ಲೂ ಅವಳು ಎತ್ತರವಿರಬಾರದು. ಈಡು ಜೋಡು ಸರಿಯಾಗುವುದಿಲ್ಲ. ಮದುವೆಯ ನಂತರದಲ್ಲೂ ಅವನ ಇಚ್ಛೆಗೆ, ಅನುಕೂಲಕ್ಕೆ ಒಪ್ಪಿಗೆಯಾಗಲಿಲ್ಲವೆಂದರೆ ಇವಳ ಶಿಕ್ಷಣ, ಉದ್ಯೋಗಗಳಷ್ಟೇ ಏಕೆ ವೇಷಭೂಷಣ, ಸಂಗೀತ ಸಾಹಿತ್ಯಗಳಂತಹ ಸ್ವಂತ ಅಭಿರುಚಿಗಳು ಕೂಡ ಕೊನೆಗೊಂಡು ಬಿಡುವುದು ಅನಿವಾರ್ಯ. ಇದರೆದುರು ಸವಾಲೆಸೆದು ನಿಂತ ಹೆಣ್ಣು ಎದುರಿಸಬೇಕಾಗಿ ಬರುವ ಸಮಸ್ಯೆಗಳು ಎಷ್ಟೊಂದು ಅಗಾಧವಾಗಿರುತ್ತವೆಂದರೆ, ಈವರೆಗೂ ಹೇಗೋ ರೂಢಿಯಿಂದ ಅನುಭವಿಸುತ್ತಾ ಬಂದಿರುವ ವಿವಾಹದ ಸಮಸ್ಯೆಯೇ ವಾಸಿ ಎನಿಸಿಬಿಡುತ್ತದೆ. ಈ ಮಾತಿನ ಸತ್ಯವನ್ನು ಕಾಣಲು ಬೇಕಷ್ಟು ಪುರಾವೆಗಳಿವೆ. ಬಾಲ್ಯ ವಿವಾಹದ ಸಮಸ್ಯೆಯಿಂದ ಈಗೀಗಷ್ಟೇ ಹೊರಬರಲು ತೊಡಗಿದ್ದ ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳು ಶಿಕ್ಷಣ, ಉದ್ಯೋಗ, ಹವ್ಯಾಸಗಳ ಅವಕಾಶಗಳನ್ನು ಅರಸುತ್ತಾ ಮೊದಲ ಹೆಜ್ಜೆಗಳನ್ನಿಡಲು ಆರಂಭಿಸಿದ್ದರು. ಸುಮಾರು ೭೦-೮೦ರ ದಶಕಗಳಲ್ಲಿ ಹೀಗೆ ಮುನ್ನಡೆದ ಮಹಿಳೆಯರು ವಿವಾಹದ ವಯಸ್ಸನ್ನು ಮೀರಿ, ವಿವಾಹದ ಅವಕಾಶವನ್ನೇ ಕಳೆದುಕೊಂಡು ಉಳಿದು ಬಿಡಬೇಕಾಗಿ ಬಂದ ಸಂದರ್ಭಗಳು ಹೆಚ್ಚಾಗಿ ಕಾಣತೊಡಗಿದವು. ವಿವಾಹವಿಲ್ಲದೆ ಉಳಿದ ಹೆಣ್ಣುಗಳು ಈ ಸಮಾಜದಲ್ಲಿ ಅನುಭವಿಸಬೇಕಾಗಿ ಬಂದ ಸಮಸ್ಯೆಗಳು ಈಗಿನ ತರುಣಿಯರಲ್ಲಿ ಭಯವನ್ನು ಬಿತ್ತಿ ಬಿಟ್ಟಿವೆ. ಈಗ ಮತ್ತೆ ಇಪ್ಪತ್ತರ ಆಸುಪಾಸಿನಲ್ಲಿ ಹೇಗಾದರೂ ಮದುವೆಯಾಗಿಬಿಟ್ಟರೆ ಸಾಕು ಎಂಬ ಆತಂಕವೇ ಅವಳನ್ನು ಆವರಿಸಿದೆ. ತನ್ನ ಸ್ವಂತದ ಎಲ್ಲ ಆಸಕ್ತಿ, ಅಭಿರುಚಿಗಳನ್ನೂ ಒತ್ತೆ ಇಟ್ಟು 'ಸೂಕ್ತ' ವರನನ್ನು ಆಕರ್ಷಿಸುವ ಅರ್ಹತೆಗಳನ್ನು ಗಳಿಸುವತ್ತಲೇ ಅವಳ ಗಮನವೆಲ್ಲವೂ ಕೇಂದ್ರೀಕೃತವಾಗುತ್ತಿದೆ. ಈಗ

'ಸೂಕ್ತವರ' ನೆಂದರೆ ಯಾರು, ತನ್ನ ಬದುಕಿನ 'ಸುಖ' ವೆಂದರೆ ಏನು, ಎಂಬ ಪ್ರಶ್ನೆಗಳಿಗೆ ಐಹಿಕ ಸುಖಭೋಗಗಳಾಚೆಗೆ ಉತ್ತರಗಳನ್ನು ಹುಡುಕುವ ಸಾಧ್ಯತೆಗಳೇ ಮುಚ್ಚಿ ಹೋಗುವುದು ಅನಿವಾರ್ಯ. ಅಂದರೆ 'ವಿವಾಹ'ವೆನ್ನುವುದು ವ್ಯವಹಾರ ಕುದುರಬೇಕಾದ ಒಂದು ಸಂಗತಿಯಾಗಿ ಹೋಗುತ್ತದೆ. ಈ ವ್ಯವಹಾರ ಯಾವುದೋ ಊಹಾಕಲ್ಪನೆಯ ಲೆಕ್ಕಾಚಾರಗಳಿಂದ ನಡೆಯುತ್ತದೆ. ಹಾಗಾಗಿ ಈ ಲೆಕ್ಕಾಚಾರಗಳು ತಳಬುಡಗಳಿಲ್ಲದೆ ಕುಸಿದು ಹೋಗುವ ಸಂದರ್ಭಗಳ ಆತಂಕದಲ್ಲೇ ವಿವಾಹ ಜೀವನಕ್ಕೆ ಕಾಲಿಡಬೇಕಾಗುತ್ತದೆ. ಈ ಆತಂಕವೇ ನಿಜವಾಗಿ ಬಿಟ್ಟರಂತೂ ಅವಳ ಬದುಕು ನಿರಂತರವಾದ ಒಂದು ಅತಂತ್ರಸ್ಥಿತಿಗೆ ಸಿಲುಕಿಕೊಂಡು ಬಿಡುತ್ತದೆ. ಗಂಡನನ್ನು ಪಡೆಯುವ ಒಂದೇ ಉದ್ದೇಶದಿಂದ ಸಾಗಿ ಬಂದ ಈವರೆಗಿನ ದಿನಗಳು ಮುಂದೆ ದಾರಿಯೇ ಕಾಣದೆ ಸ್ಥಗಿತಗೊಂಡು ಬಿಡುತ್ತವೆ. ಅವಳಿಗೀಗ ಆ ಗಂಡನನ್ನೇ ಸಾಧ್ಯವಾದಷ್ಟೂ ಆಶ್ರಯಿಸಿ ಹೇಗೋ ಬದುಕುಳಿಯುವ ಮಾರ್ಗವಷ್ಟೇ ಉಳಿಯುತ್ತದೆ. ಒಂದಿಷ್ಟಾದರೂ ಆತ್ಮಾಭಿಮಾನವನ್ನು ರಕ್ಷಿಸಿಕೊಳ್ಳಬೇಕೆಂದರೆ ಉಳಿಯುವ ಇನ್ನೊಂದೇ ಮಾರ್ಗವೆಂದರೆ ಬಂದದ್ದೆಲ್ಲಾ ಬರಲಿ ಎಂದು ಅವನನ್ನು ನಿರಾಕರಿಸಿ ದೂರ ಸರಿಯುವುದು. ಮೊದಲಿನದು ಆತ್ಮಹತ್ಯೆಯಾದರೆ, ಎರಡನೆಯದು ಬರಿಯ ಕಲ್ಲು ಮುಳ್ಳುಗಳಿಂದ ತುಂಬಿದ ಅಸಹನೀಯ ಬದುಕಿನ ಆಯ್ಕೆ. 'ಗಂಡ' ಎಂಬ ಕೇಂದ್ರದಿಂದ ಭಿನ್ನವಾಗಿ ನಿಲ್ಲುವ ಯಾವ ಕನಸನ್ನೂ ಈವರೆಗೆ ಕಂಡೇ ಇಲ್ಲದ ಬದುಕಿನಲ್ಲಿ ಈಗ ಹೊಸಕೇಂದ್ರವೊಂದನ್ನು ಕಂಡುಕೊಳ್ಳುವ ಪ್ರಯತ್ನ ಮೊದಲಾಗಬೇಕು. ಆದರೆ ಈ ಪ್ರಯತ್ನ ಸಫಲಗೊಳ್ಳುವುದು ತೀರಾ ಕಷ್ಟ. ಸಮಾಜವು ಈ ವಿಚಾರದಲ್ಲಿ ಸಹಾನುಭೂತಿಯನ್ನಾಗಲೀ, ನೆರವನ್ನಾಗಲೀ ನೀಡುವುದಿಲ್ಲ.

ವಿವಾಹದ ವೈಫಲ್ಯದ ಈ ಸಂದರ್ಭದ ಕಷ್ಟ ಸ್ಪಷ್ಟ ಗೋಚರ ಸ್ವರೂಪದ್ದು. ಹಾಗಾಗಿ ತುಂಬಾ ಕಷ್ಟದಾಯಕವೇ ಆದರೂ ಈ ಸಂದರ್ಭವನ್ನು ಅಷ್ಟಿಷ್ಟಾದರೂ ಸಹನೀಯವಾಗಿ ಪರಿವರ್ತಿಸಿಕೊಳ್ಳಲು ಒಂದಿಷ್ಟು ಪ್ರಯತ್ನಗಳನ್ನು ಮಾಡಬಹುದು. ಕೊನೆಯ ಪಕ್ಷ ಈ ಪ್ರಯತ್ನವೇ ಆ ಹೆಣ್ಣಿಗೆ ಮುಂದಿನ ಬದುಕಿನ ಗುರಿಯಾಗಿ, ಸಾಧನೆಯಾಗಿ ಕಂಡುಬಂದು ಬದುಕಿ ನಿಲ್ಲಬೇಕೆಂಬುದಕ್ಕೆ ಒಂದು ಕಾರಣವನ್ನಾದರೂ ರೂಪಿಸಿಕೊಡುತ್ತದೆ.

ಆದರೆ ನಾನು ಈ ಮೊದಲು ಪ್ರಸ್ತಾಪಿಸಿದ ಹೆಣ್ಣಿನದು ವಿಭಿನ್ನ ಸಮಸ್ಯೆ. 'ಸೂಕ್ತವರ' ನನ್ನು ಪಡೆದು 'ಸುಖೀ ಸಂಸಾರದ ಸದಸ್ಯೆ'ಯಾಗುವ ಸೌಭಾಗ್ಯವತಿಯೂ ಅಂತರಂಗದಲ್ಲಿ ದುಃಖಿಯಾಗಿಯೇ ಉಳಿಯುತ್ತಾಳೇಕೆ ಎಂಬ ಸಮಸ್ಯೆ. ಈ ಹೆಣ್ಣಿಗೆ ತನ್ನೊಳಗಿನ ಈ ಕಷ್ಟವನ್ನು ವಿವರಿಸಲು ಆಗುತ್ತಿಲ್ಲ. ಅಷ್ಟೇಕೆ ಅದನ್ನು ಹೆಸರಿಸಬೇಕೆಂದರೂ ಹೇಗೆಂದು ಅವಳಿಗೆ ಹೊಳೆಯುತ್ತಿಲ್ಲ. ತನಗೇನೋ ಸಂಕಟವಾಗುತ್ತಿದೆ ಎಂಬುದರ ಅನುಭವ ಸತ್ಯವಾದರೂ ಹೀಗೆಂದು ಹೇಳಿಕೊಳ್ಳಲು ಸಾಧ್ಯವೇ ಆಗುತ್ತಿಲ್ಲವೆಂಬ ಚಡಪಡಿಕೆ ಅವಳನ್ನಾವರಿಸಿದೆ. ಇನ್ನು ಸಮಾಜದ ಕಣ್ಣಿಗಂತೂ ಅವಳ ಈ ಅವಸ್ಥೆ ನಗೆಪಾಟಲಿನ

ಸಂಗತಿಯಾಗಷ್ಟೇ ತೋರುತ್ತದೆ. ಸಹಾನುಭೂತಿಯ ಮಾತನ್ನಂತೂ ನಿರೀಕ್ಷಿಸಲೂ ಸಾಧ್ಯವಿಲ್ಲ. ಬದಲಿಗೆ ಈ ಹೆಣ್ಣಿನದು ಸದಾ ಅತೃಪ್ತವಾದ, ಅನಾರೋಗ್ಯದ, ವಿಕೃತವಾದ ಮನಸ್ಸು ಎಂಬ ದೋಷಾರೋಪಣೆಯನ್ನಷ್ಟೇ ಅವಳು ಎದುರಿಸಬೇಕಾಗುತ್ತದೆ. ಅವಳೀಗ ತನ್ನ ಈ ಸಮಸ್ಯೆಯ ಕಾರಣಗಣಗಳು ಹೊರಗೆ ಇರಬಹುದು ಎಂಬ ಅನುಮಾನವನ್ನೂ ಕೂಡ ವ್ಯಕ್ತಪಡಿಸಲು ಹಿಂಜರಿಯುತ್ತಾಳೆ. ತಾನೇ, ತಾನೊಬ್ಬಳೇ ಇದಕ್ಕೆ ಕಾರಣ ಎಂಬ ಭ್ರಮೆಗೆ ಭದ್ರವಾಗಿ ಅಂಟಿಕೊಳ್ಳುತ್ತಾಳೆ. ಸುತ್ತಲಿನವರೂ ಹಾಗೆಯೇ ಸಮರ್ಥಿಸುತ್ತಾರೆ. ಅವಳೀಗ ತನ್ನ ಅಂತರಂಗದ ವಿಶ್ಲೇಷಣೆಯ ಈ ಭ್ರಮೆಯಲ್ಲೇ ತೊಡಗಿ ಹೆಣಗುತ್ತಾಳೆ. ಮನೆಯ ಅಲಂಕಾರದಲ್ಲಿ, ಅಡಿಗೆ ಕೋಣೆಯಲ್ಲಿ, ಮಲಗುವ ಕೋಣೆಯಲ್ಲಿ, ಮಕ್ಕಳ ಲಾಲನೆ ಪಾಲನೆಯಲ್ಲಿ ಈಗಾಗಲೇ ಅವಳು ಬಿಡುವೇ ಇಲ್ಲದಂತೆ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಕರ್ತವ್ಯ ಲೋಪಗಳೇ ಇಲ್ಲದ ಅವಳ ಸೇವೆಗೆ ಒಳ್ಳೆಯ ಸಾಮಾಜಿಕ ಮನ್ನಣೆ ದೊರೆತಿದೆ. ಒಳ್ಳೆಯ ಹೆಂಡತಿ, ಒಳ್ಳೆಯ ತಾಯಿ ಎಂಬ ಗೌರವ ತನಗೆ ಸಲ್ಲಬೇಕೆಂದರೆ ಅಂಥಾ ಕಷ್ಟವೇನಲ್ಲ. ಗಂಡ, ಮನೆ, ಮಕ್ಕಳ ಬಗ್ಗೆ ಮನಸ್ಸಿಟ್ಟು ಕಾರ್ಯನಿರತವಾದರಷ್ಟೇ ಸಾಕು. ತನ್ನ ಕುಟುಂಬದ ಎಲ್ಲ ಸದಸ್ಯರೂ ತನ್ನನ್ನು ಮೆಚ್ಚಿ ಹೊಗಳುತ್ತಾರೆ. ಗಂಡನೂ ಮಕ್ಕಳೂ ಆರಾಧಿಸುತ್ತಾರೆ. ಇದಕ್ಕಾಗಿ ಹೆಣ್ಣು ವಿಶೇಷವಾದ ಯಾವ ಅರ್ಹತೆಯನ್ನೂ ಗಳಿಸಬೇಕಾದ್ದಿಲ್ಲ. ಸಂಪೂರ್ಣವಾಗಿ ತನ್ನನ್ನು ಕೊಟ್ಟುಕೊಂಡು ಬಿಡುವ ಮನಸ್ಸೊಂದಿದ್ದು ಬಿಟ್ಟರೆ ಸಾಕು.

ಆದರೆ ತನ್ನಿಂದ ನಿರೀಕ್ಷಿಸಲಾಗುವ ಈ ಕೆಲಸಗಳಲ್ಲಿ ತನ್ನ ಮನಸ್ಸು ತೊಡಗಿಕೊಳ್ಳಲು ಉತ್ಸುಕತೆಯನ್ನು ತೋರುತ್ತಿಲ್ಲ. ಈ ಎಲ್ಲ ಕೆಲಸಗಳನ್ನೂ ಲೋಪವಿಲ್ಲದೆ ನಿರ್ವಹಿಸಿದ ಮೇಲೂ ಸಾರ್ಥಕವಾಗಿ ದಿನ ಕಳೆಯಿತು ಎಂಬ ತೃಪ್ತಿಯ ಬದಲು 'ಬದುಕೆಂದರೆ ಇದೇ ಏನು?' ಎಂಬ ನಿಟ್ಟುಸಿರು ಹೊರಬೀಳುತ್ತದೆ. 'ನಾಳೆಯೂ ಇಷ್ಟೇ ತಾನೇ?' ಎಂಬ ನಿರಾಶೆಯ ಚಿಂತೆ ಹತ್ತುತ್ತದೆ. ಗಂಡ, ಮನೆ, ಮಕ್ಕಳ ನಿರ್ವಹಣೆಯಲ್ಲಿ ಮಾನ್ಯತೆಯನ್ನು ಗಳಿಸಿರುವ ಹೆಂಗಸರೆಲ್ಲರೂ ಸದಾ ಮುಗುಳು ನಗುತ್ತಾ ನಡೆದಾಡುವುದು ಕಾಣುತ್ತದೆ. ಪ್ರತಿಯೊಬ್ಬಳೂ ತನ್ನೊಳಗೇ ತಾನು ಹೊರಗೆ ತೋರಿಸಲೂ ಸಾಧ್ಯವಿಲ್ಲದ ಒಂದು ತೆರನ ಶೂನ್ಯಭಾವವನ್ನು ಅನುಭವಿಸುತ್ತಾ, ಹೊರಗೆ ಮಾತ್ರ ನಗು ಮುಖವನ್ನು ಧರಿಸಿ ಓಡಾಡುತ್ತಾಳೆ. ಹಾಗೆಯೇ 'ತಾನೊಬ್ಬಳೇ ಅಪವಾದವಾಗಿ ಶೂನ್ಯಭಾವವನ್ನು ಅನುಭವಿಸುತ್ತಿರುವ ಪಾಪಿ' ಎಂಬ ತೀರ್ಮಾನಕ್ಕೆ ಬಂದು ಅದೊಂದು ಬಗೆಯ ಅಪರಾಧೀ ಭಾವಕ್ಕೂ ಪಕ್ಕಾಗುತ್ತಾಳೆ.

ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕೆಂದರೆ 'ಸುಖೀ ಸಂಸಾರ' ಗಳ ಹೆಂಗಸರೊಂದಿಗೆ ಅಂತರಂಗದ ಮಾತುಕತೆಗಳಿಗೆ ತೊಡಗಬೇಕು. ಸೂಕ್ಷ್ಮಗ್ರಹಿಕೆಗೆ ಮಾತ್ರ ದಕ್ಕುವ, ಪರೋಕ್ಷವಾಗಿಯಷ್ಟೇ ಅನುಭವಕ್ಕೆ ಬರುವ ಸತ್ಯ ಸಂಗತಿಗಳು ಈ ಹರಟೆಯ

ಹಂದರಗಳಲ್ಲಿ ಇರುತ್ತವೆ. 'ಏನೆಂದು ಹೇಳಲಿ' ನನಗೆ ಇಂಥಾ ಕಷ್ಟ ಎಂದು ಎಲ್ಲಿ ತಾನೇ ಬೆರಳು ತೋರಿಸಲಿ? ನನಗೇನು ತಾನೇ ಕಡಿಮೆಯಾಗಿದೆ' ಎಂಬ ಮಾತುಗಳೊಂದಿಗೇ 'ನನಗೇ ತಲೆ ಸರಿ ಇಲ್ಲ ಅಷ್ಟೇ-ಆದರೂ ಏಕೋ ಬೇಜಾರು. ನಾನು ಯಾಕೆ ಹೀಗಾಗಿದೀನೋ ಏನೋ' ಎಂಬ ನೋವಿನ ಮಾತುಗಳೂ ಬರುತ್ತವೆ.

ಹೀಗೆ ಸಮಸ್ಯೆಯೇ ಅಲ್ಲದ ಸಮಸ್ಯೆಯನ್ನು ಹೊಟ್ಟೆಯೊಳಗೇ ಇಟ್ಟುಕೊಂಡು ಬವಣೆಪಡುವ ಈ ಹೆಣ್ಣು 'ಹಾಗೊಂದು ಸಮಸ್ಯೆ ಇದೆಯೆಂಬುದೇ ನನ್ನ ಭ್ರಮೆ. ನಿಜಕ್ಕೂ ಸಮಸ್ಯೆ ಇಲ್ಲ. ಈ ನಂಬಿಕೆಯನ್ನು ನಾನು ಧೃಡ ಮಾಡಿಕೊಳ್ಳಬೇಕಾಗಿದೆ ಅಷ್ಟೇ ' ಎಂದು ತನ್ನನ್ನು ತಾನು ಸಮಾಧಾನಪಡಿಸಿಕೊಳ್ಳಲು ಬುದ್ಧಿಪೂರ್ವಕವಾಗಿ ಪ್ರಯತ್ನಗಳನ್ನೂ ನಡೆಸಬಹುದು. ಮನೋವಿಜ್ಞಾನಿಗಳ ನೆರವನ್ನೂ ಪಡೆಯಬಹುದು. 'ಬೇಸರ'ವನ್ನು ಮರೆಯಲು ಹಲವು ದೊಂಬರಾಟಗಳನ್ನು ನಡೆಸಬಹುದು. ಅಲಂಕಾರ, ಪ್ರವಾಸ, ವಿಶ್ರಾಂತಿ, ಪಾರ್ಟಿಗಳು, ಹವ್ಯಾಸಗಳು-ಇಂಥವುಗಳಲ್ಲಿ ಈ ಶೂನ್ಯಭಾವವನ್ನು ಮರೆಸಿಬಿಡಲು ಯತ್ನಿಸಬಹುದು. ಆದರೆ ಇಂತಹ ಬಹುತೇಕ ಪ್ರಯತ್ನಗಳು ದೀರ್ಘಕಾಲದ ಯಾವ ಪರಿಹಾರವನ್ನೂ ನೀಡಲಾರದೆ ಹೋಗುತ್ತದೆ. ಅಂದಂದಿಗೆ ಒಂದಿಷ್ಟು ಉಪಶಮನಗಳಂತೆ ನೆರವಾಗಬಹುದಷ್ಟೇ. ಅಥವಾ ಅವೇ ಒಂದು ಗೀಳಿನಂತೆ, ಹುಚ್ಚಿನಂತೆ ಅಂಟಿಕೊಂಡು ಮನೋವಿಕಾರದ ಪ್ರದರ್ಶನಗಳಾಗಿ ಬಿಡಬಹುದು. ಇವೆರಡರಲ್ಲಿ ಯಾವ ಪರಿಣಾಮ ವಾದರೂ ಆ ಹೆಂಗಸಿನ ಬದುಕು ಮಾತ್ರ ಘನತೆಯನ್ನು ಕಳೆದುಕೊಂಡು ನಗೆಪಾಟಲಿನದಾಗಿ ಬಿಡುತ್ತದೆ.

ಹೆಸರೇ ಇಲ್ಲದ ಈ ಸಮಸ್ಯೆಯ ಸ್ವರೂಪವನ್ನು ಗ್ರಹಿಸಲು ಇಂಥಾ 'ಸುಖೀ ಸಂಸಾರ'ದ ಹೆಂಗಸರ ಹರಟೆಗಳಿಗೆ ಕಿವಿ ಕೊಡಬೇಕು. ಮೈಮಾಟ, ವೇಷ ಭೂಷಣ, ವಸ್ತ್ರ ಅಲಂಕಾರ, ಪಾರ್ಟಿಗಳಂತಹ ಅರ್ಥಹೀನ ಹವ್ಯಾಸಗಳಲ್ಲಿ ತಮ್ಮ ಶೂನ್ಯಭಾವವನ್ನು ಮರೆಸಲೆತ್ನಿಸುವ ಹೆಣ್ಣುಗಳು ತಮ್ಮ ಹರಟೆಗಳಲ್ಲಿ ಈ ಅಂಶಗಳನ್ನೇ ಬದುಕಿನ ಬಹುದೊಡ್ಡ ಸಂಗತಿಗಳೆಂಬಂತೆ ಚರ್ಚಿಸುತ್ತಾ, ಅಹಂಭಾವವನ್ನೋ ಕೀಳರಿಮೆಯನ್ನೋ ಮೆರೆಯುತ್ತಾ ತಾವು 'ಸುಖಿ'ಗಳೆಂದು ಸಾಬೀತು ಪಡಿಸಲು ಹೆಣಗುತ್ತಿರುತ್ತಾರೆ. ಇನ್ನು ಒಳಗಿನ ಸಮಸ್ಯೆಯ ಸ್ವರೂಪವನ್ನು ಗ್ರಹಿಸಲು ತೀವ್ರವಾಗಿ ಪ್ರಯತ್ನಿಸುವ ಗಂಭೀರ ಸ್ವಭಾವದವರು 'ಏನೋ ಕಳೆದುಕೊಂಡ ಅನುಭವವಾಗತ್ತೆ', 'ನಾನು ಬದುಕಿದ್ದೀನಾ, ಬದುಕಿದ್ದರೆ ಯಾಕಾಗಿ ಬದುಕಿದ್ದೀನೋ ಏನೋ', 'ಯಾಕೋ ತುಂಬಾ ಸಾಕಾಗಿ ಬಿಟ್ಟಿದೆ', 'ವಿನಾಕಾರಣ ಮಕ್ಕಳ ಮೇಲೆ ರೇಗಾಡುವಂತೆ ಆಗುತ್ತದೆ', 'ಸುಮ್ಮ ಸುಮ್ಮನೇ ಅತ್ತುಬಿಡಬೇಕೆನಿಸುತ್ತದೆ', 'ಸದಾಕಾಲ ಬಿದ್ದುಕೊಂಡೇ ಇರಬೇಕೆಂಬ ಸುಸ್ತು', 'ನಿತ್ರಾಣ', 'ರೋಗವಿಲ್ಲ ರುಜಿನವಿಲ್ಲ'-ಎಂಬಂತಹ ನಿರಾಸೆಯ, ವೇದಾಂತದ ಮಾತುಗಳನ್ನಾಡುತ್ತಾರೆ. ಸ್ವಲ್ಪ ಮುಂದುವರೆದು, ಇದಕ್ಕೊಂದು ಪರಿಹಾರವನ್ನು ಹುಡುಕಿಯೇನು ಎಂಬ ಸ್ವಲ್ಪ ಮಟ್ಟಿನ ಆತ್ಮ ವಿಶ್ವಾಸದವರು

'ನಾನು ಮಾಡುವ ಕೆಲಸಗಳಲ್ಲಿ ಇಂತಹುದೊಂದು ಬದಲಾವಣೆಯನ್ನು ತಂದರೆ ಆದೀತೇನೋ' ಎಂಬಂತಹ ಮಾತಿನಿಂದ ತೊಡಗಿದರೂ 'ಜಾಗ ಬದಲಾವಣೆಯಾದರೆ ಒಳ್ಳೆಯದೇನೋ, ನಾಲ್ಕು ದಿನ ತವರಿಗೆ ಹೋಗಿ ಬಂದರೆ ಹೇಗೆ, ಮನೆ ಗಂಡ ಮಕ್ಕಳ ಕೆಲಸಗಳಲ್ಲಿ ಇನ್ನಷ್ಟು ಮನಸ್ಸಿಟ್ಟು ನಿಗಾ ವಹಿಸಲು ತೊಡಗಿದರೆ ಒಳ್ಳೆಯದೇನೋ' ಎಂಬಂತಹ ಮಾತುಗಳಲ್ಲಿ ಅದು ಮುಕ್ತಾಯವಾಗುತ್ತದೆ.

ಇಂತಹ ಕೇಸುಗಳನ್ನು ಗಮನಿಸುತ್ತಿದ್ದ ಮನೋರೋಗ ತಜ್ಞನೊಬ್ಬ ಈ ರೋಗವನ್ನು 'ಗೃಹಿಣೀ ಬಾಧೆ' (House Wife Syndrome) ಎಂದು ಹೆಸರಿಸಿದನಂತೆ. ನಮ್ಮಲ್ಲಂತೂ ಈ ಬಾಧೆಯನ್ನು ರೋಗವೆಂದು ಪರಿಗಣಿಸಿ ಡಾಕ್ಟರುಗಳಲ್ಲಿಗೆ ಹೋಗುವ ರೂಢಿ ಇನ್ನೂ ಬಂದಂತಿಲ್ಲ. ಮುಂದುವರೆದ ಸಮಾಜಗಳಲ್ಲಿ, ರಾಷ್ಟ್ರಗಳಲ್ಲಿ ಡಾಕ್ಟರುಗಳ ಬಳಿ ಪರಿಶೀಲನೆಗೆಂದು ಈ ರೋಗಿಗಳು ಹೋಗುತ್ತಾರಂತೆ. ಈ ರೋಗಗಳು ಕೆಲವೊಮ್ಮೆ ದೈಹಿಕ ಬಾಧೆ ಅಥವಾ ವರ್ತನೆಗಳ ರೂಪದಲ್ಲಿ ಬಾಹ್ಯ ಲಕ್ಷಣಗಳಾಗಿ ವ್ಯಕ್ತಗೊಳ್ಳುವುದೂ ಉಂಟು. ಹುಚ್ಚಿನದೆನಿಸುವ ಮಾತು ವರ್ತನೆಗಳು, ಆತ್ಮಹತ್ಯೆಯ ಪ್ರಯತ್ನಗಳು, ಗಂಡ ಮಕ್ಕಳನ್ನು ತರ್ಕರಹಿತವಾಗಿ ಶಿಕ್ಷೆ ಹಿಂಸೆಗಳಿಗೆ ಒಳಗು ಮಾಡುವುದು-ಇಂತಹ ಲಕ್ಷಣಗಳನ್ನೂ ಈ ಹೆಂಗಸರು ವ್ಯಕ್ತಪಡಿಸಬಹುದು. ಸರ್ವೇಸಾಮಾನ್ಯವಾಗಿ ಸರಿಯಾಗಿಯೇ ಇರುತ್ತಾ ಕೆಲವೊಮ್ಮೆ ಮಾತ್ರ ಹೀಗೆ ವರ್ತಿಸುವ ಇವರನ್ನು ಹುಚ್ಚರ ಪಟ್ಟಿಗೆ ಸೇರಿಸಲಾಗದು. ಮುಂದುವರೆದ ಸಮಾಜಗಳಲ್ಲಿ ಮನೋವಿಜ್ಞಾನಿಗಳ ನೆರವನ್ನು ಇಂತಹ ಸಂದರ್ಭಗಳಲ್ಲಿ ಪಡೆಯಲು ಯತ್ನಿಸಲಾಗುತ್ತದಾದರೆ, ಹಿಂದುಳಿದ ಸಮಾಜಗಳಲ್ಲಿ ಮಂತ್ರ, ಮಾಟ, ಮಾಯ, ದೇವರು, ದಿಂಡಿರು ಹರಕೆ-ಎಂಬ ಅಸಹಾಯಕ ಪ್ರಯತ್ನಗಳನ್ನು ನಡೆಸಲಾಗುತ್ತದೆ. ಯಾವುದರಲ್ಲೂ ಸಮಸ್ಯೆಯ ಪರಿಹಾರವಾಗುವ ಸಂದರ್ಭವಿಲ್ಲ. ಈ ರೋಗದ ಲಕ್ಷಣಗಳು ಕೆಲವೊಮ್ಮೆ ದೈಹಿಕ ಬಾಧೆಗಳಾಗಿ ಪ್ರಕಟಗೊಳ್ಳುವುದೂ ಉಂಟು. ದೇಹದ ಅಂಗಗಳಲ್ಲಿ ಉರಿ, ನೋವು, ಗಂದೆ ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಸಹಿಸಲಾಗದ ತಲೆನೋವಿನ ಲಕ್ಷಣವಂತೂ ಬಹುತೇಕ ಹೆಂಗಸರಲ್ಲಿ ಸರ್ವೇಸಾಮಾನ್ಯವಾಗಿ ಪ್ರಕಟಗೊಳ್ಳುವುದನ್ನು ಕಾಣುತ್ತೇವೆ.

ಈ ರೋಗ ಲಕ್ಷಣಗಳನ್ನು ನೋಡಿದ ಡಾಕ್ಟರು ಔಷಧಿ ಗುಳಿಗೆಗಳನ್ನೇನಾದರೂ ಕೊಟ್ಟರೆ ಅದು ದೈಹಿಕ ಉಪಶಮನಕ್ಕಷ್ಟೇ ನೆರವಾಗಬಹುದು. ಅದೂ ತಾತ್ಕಾಲಿಕವಾಗಿ ಮಾತ್ರ. ಈ ಸಮಸ್ಯೆಯ ಮೂಲವನ್ನು ಶೋಧಿಸುತ್ತೇವೆಂದು ಹೊರಟ ಆಧುನಿಕ ಮನೋವಿಜ್ಞಾನಿ ಡಾಕ್ಟರುಗಳೇನೂ ತಮ್ಮ ರೋಗಿಗಳಿಗೆ ಹೊಸ ಪರಿಹಾರಗಳನ್ನು ಸೂಚಿಸಲಿಲ್ಲ. ಬದಲಿಗೆ ಸ್ಥಳ ಬದಲಾವಣೆ, ಹೊಸ ಹವ್ಯಾಸಗಳು, ಹೊಂದಾಣಿಕೆ -ಎಂಬ ಮಾತುಗಳನ್ನೇ ಹೇಳಿದರು. 'ಸಾಮಾಜಿಕವಾದ ಹಲವು ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಿ' ಎಂಬ ಮಾತನ್ನು ಗಂಭೀರ ಚಿಂತಕರೆನಿಸಿದವರು ಹೇಳಿದರು. ಆದರೆ ಮೊದಲಿನದು ಪರಿಹಾರವೇ ಅಲ್ಲದ

ಕೇವಲ ಉಪಶಮನ ಮಾತ್ರದ ಉಪಾಯ. ಎರಡನೆಯ 'ಸಾಮಾಜಿಕ ಕೆಲಸ ಕಾರ್ಯ'ದ ಸ್ವರೂಪವೇ ಪ್ರಶ್ನಾರ್ಹ. 'ಸೇವಾಕಾರ್ಯ'ವನ್ನೇ ಮತ್ತೆ ಸೂಚಿಸುವ ಈ ಮಾತು ಅವಳಿಗೆ ಸ್ವಂತವನ್ನು ಮರೆತು ಬಿಡು ಎಂದು ಹೇಳುತ್ತಾ, ಅವಳ ನಿಜವಾದ ಸಮಸ್ಯೆಯನ್ನು ಪಕ್ಕಕ್ಕೆ ಸರಿಸಿಬಿಡುತ್ತದೆ.

'ಸುಖದಲ್ಲೇ ಉರುಳಾಡುತ್ತಿದ್ದರೂ ಕಷ್ಟ, ಸಂಕಟ ಎಂದು ಗೊಣಗಾಡುವ ಈ ಹೆಂಗಸರನ್ನು ಲಕ್ಷಿಸಲು ಹೋಗಲೇಬಾರದು. ಇವರ ಮುಖ್ಯ ಸಮಸ್ಯೆ ಇವರಿಗೆ ಹೆಚ್ಚಿನ ಅವಕಾಶ ಸವಲತ್ತುಗಳು ದೊರೆತಿದೆ ಎಂಬುದರಲ್ಲೇ ಇದೆ. ಮೊದಲು ಅವರನ್ನು ಎಲ್ಲಿಡ ಬೇಕೋ ಹೇಗಿಡಬೇಕೋ ಅಲ್ಲಿ ಹಾಗೆ ಇಡಿ. ಯಾವ ಸಮಸ್ಯೆಯೂ ಇರುವುದಿಲ್ಲ. ಬಾಯಿ ಬಿಡೋದಿಕ್ಕೆ ಅವಕಾಶ ಕೊಟ್ಟಿರುವುದೇ ಮೊದಲನೆಯ ತಪ್ಪು, ಇಲ್ಲದ್ದನ್ನೆಲ್ಲಾ ಸೃಷ್ಟಿಸುತ್ತಾ ಕೂರುತ್ತಾರೆ' ಎಂಬಂತಹ ಕುಹಕದ, ಸಿನಿಕತನದ ಅಭಿಪ್ರಾಯಗಳಿಗಂತೂ ಕೊರತೆಯೇ ಇಲ್ಲ.

ಬೆಟ್ಟಿ ಫ್ರೀಡನ್ (Betty Friedan) ಎಂಬ ಸ್ತ್ರೀವಾದಿ ಚಿಂತಕಿ ಈ ಸಮಸ್ಯೆಯನ್ನು ಕುರಿತು ವಿಶಾಲ ವ್ಯಾಪ್ತಿಯ ಸಂಶೋಧನೆಯನ್ನು ನಡೆಸಿದ್ದಾಳೆ. ಮುಖ್ಯವಾಗಿ ಹೆಂಗಸರನ್ನು ಪದೇ ಪದೇ ಸ್ವಂತ ಅನುಭವಗಳನ್ನು ಹೇಳಿಕೊಳ್ಳಲು ಪ್ರೇರೇಪಿಸುತ್ತಾ, ಆ ಅನುಭವಗಳ ಲೋಕದಿಂದಲೇ ಈ ಸಮಸ್ಯೆಯ ಸ್ವರೂಪವನ್ನು ಅರಿಯಲು ಪ್ರಯತ್ನಿಸಿದ್ದು ಈಕೆಯ ಸಂಶೋಧನೆಯಲ್ಲಿನ ವಿಶೇಷ.

'ದಿನವಿಡೀ ಪುರಸೊತ್ತಿಲ್ಲದಷ್ಟು ಕೆಲಸಗಳಿರುತ್ತವೆ. ಆದರೂ ಇಡೀ ದಿನ ಬೇಸರವೇ ತುಂಬಿರುತ್ತದೆ. ದಿನದ ಕೊನೆಯಲ್ಲೊಮ್ಮೆ ಈ ದಿನ ನಾನು ಏನೇನು ಮಾಡಿದೆ ಎಂದು ಲೆಕ್ಕಹಾಕಲು ಹೊರಟರೆ ಮಹತ್ವದ್ದೆನಿಸುವ ಏನೂ ಇರೊಲ್ಲ. ಮಾಡು, ತೊಳಿ, ಬಳಿ ಅನ್ನುವ ಚಕ್ರವೇ. ಬೆಳಿಗ್ಗೆಯಿಂದ ರಾತ್ರಿಯವರೆಗೂ ಒಂದು ನಿಮಿಷವೂ ಪುರಸೊತ್ತು ಸಿಗುವುದಿಲ್ಲ. ಇಡೀ ದಿನದಲ್ಲಿ ಒಂದೋ ಗಂಡನ ಕೆಲಸ, ಇಲ್ಲವೇ ಮಕ್ಕಳ ಕೆಲಸ, ಬಿಟ್ಟರೆ ಮನೆಯ ಕೆಲಸವಲ್ಲದೆ ಇನ್ನೇನು ತಾನೇ ಮಾಡುತ್ತೀನಿ? ದಿನನಿತ್ಯ ಬೆಳಿಗ್ಗೆ ಎದ್ದರೆ ರಾತ್ರಿಯಾದರೆ ಅದದೇ ಕೆಲಸ'-ಇದು ಹೆಚ್ಚಿನ ಓದು ಬರಹಗಳಿಲ್ಲದ ಗೃಹಿಣಿಯ ಗೊಣಗಾಟ. ಈ ಗೊಣಗಾಟದ ಮಧ್ಯೆಯೂ ಅವಳ ಕರ್ತವ್ಯಗಳು ಲೋಪವಿಲ್ಲದೆ ಸಾಗುತ್ತಿರುತ್ತವೆ ಎಂಬುದು ಗಮನಾರ್ಹ.

ಇನ್ನು ಓದು, ಉದ್ಯೋಗ ಎಂಬವುಗಳಿಗೆ ತೆರೆದುಕೊಂಡ ಗೃಹಿಣಿಯರ ಗೋಳು ಇದಕ್ಕಿಂತ ಕಡಿಮೆಯದಲ್ಲ. ತನ್ನ ಶಿಕ್ಷಣ, ಉದ್ಯೋಗಗಳಿಗೆ ಸಂಬಂಧಿಸಿದಂತೆ ತನ್ನ ಸಾಧನೆ ತೃಪ್ತಿಕರವಾಗಿಲ್ಲವೆಂಬ ನೋವು ಅವಮಾನಗಳು, ಮನೆಯಲ್ಲೂ ಹೊರಗೂ ದುಡಿಯಬೇಕಾದ ದುಸ್ಥಿತಿಗಳು ಅವಳನ್ನು ಸಾಕಷ್ಟು ಬಳಲಿಸುತ್ತವೆ. ಇವೆಲ್ಲದರ ಬಗ್ಗೆ ಮನಸ್ಸು ಜಾಗೃತಗೊಳ್ಳಲು ಒಂದಿಷ್ಟು ಅವಕಾಶ ನೀಡಿದರಂತೂ, ಮಾನಸಿಕ ವೇದನೆಯೂ

ಇದರೊಂದಿಗೆ ಕೂಡಿಕೊಳ್ಳುತ್ತದೆ. ಏಕೆಂದರೆ ಈ ತನ್ನ ಸಮಸ್ಯೆಯ ಕಾರಣಗಳು ಅವಳಿಗೆ ಹೊಳೆಯಲು ಆರಂಭವಾಗುತ್ತವೆ. ಮನೆ, ಗಂಡ, ಮಕ್ಕಳು ಎಂಬ ಸಮಸ್ಯೆಯನ್ನು ಈ ಸಮಾಜವು ತನ್ನೊಬ್ಬಳ ತಲೆಗೇ ಕಟ್ಟಿದೆ ಎಂಬ ಅರಿವೇನೋ ಅವಳಿಗೆ ಈಗ ಆಗಿದೆ. ಆದರೆ ಅದರಿಂದ ಹೊರ ಬರುವ ಯಾವ ಉಪಾಯವೂ ಕಾಣಿಸುತ್ತಿಲ್ಲ. ತನ್ನ ಸಮಸ್ಯೆಯನ್ನು ಗುರುತಿಸಿ, ಅದರ ನಿವಾರಣೆಗಾಗಿ ತನ್ನ ಅಸ್ತಿತ್ವಕ್ಕೊಂದು ಅರ್ಥ ಕಾಣಬೇಕೆಂಬುದು ಅವಳಿಗೆ ತೋರುತ್ತಿರುವ ದಾರಿ. ತನ್ನ ವ್ಯಕ್ತಿತ್ವಕ್ಕೊಂದು ಗುರುತನ್ನು ತೋರಬಹುದಾದ ಸಾಧ್ಯತೆ ಎಂದರೆ ತನ್ನ ವೈಯಕ್ತಿಕ ಸಾಧನೆ. ಈವರೆಗೆ ಇಂಥವರಿಗಾಗಿ ಎಂದಷ್ಟೇ ಇರುತ್ತಿದ್ದ ತನ್ನ ಕೆಲಸ ಕಾರ್ಯಗಳ ಸ್ವರೂಪದಲ್ಲಿ, ಇನ್ನು ಮುಂದಾದರೂ ತನಗಾಗಿ ಎಂಬ ಅಂಶವೂ ಸೇರಬೇಕು. ಈ ಸಾಧ್ಯತೆ ತನ್ನ ಶಿಕ್ಷಣ, ಉದ್ಯೋಗಗಳ ಕ್ಷೇತ್ರಗಳಲ್ಲಿ ಸಾಧ್ಯವಿದೆ. ಆದರೆ ಇದನ್ನು ಸಾಧಿಸುವಲ್ಲಿ ತನಗೆ ವಿವಾಹ, ಸಂಸಾರ, ಗಂಡ, ಮನೆ, ಮಕ್ಕಳು ಎಂಬ ಸಂಗತಿಗಳೇ ಸವಾಲುಗಳಾಗಿ ನಿಲ್ಲುತ್ತಿವೆ. ಈವರೆಗೂ ನಡೆದು ಬಂದ ಬದುಕಿನ ಪದ್ಧತಿಯಲ್ಲಿ ಈ ಸಂಗತಿಗಳನ್ನು ಸವಾಲುಗಳೆಂದು ಹೆಸರಿಸುವಷ್ಟು ಅವಕಾಶವೂ ತನಗೆ ಸಿಗಲಿಲ್ಲ. ಈಗಲೂ ಹಾಗೆ ಹೆಸರು ತೆಗೆಯುವ ಧೈರ್ಯ ಸಾಧ್ಯವಾಗುತ್ತಿಲ್ಲ.

ಮಹಿಳೆಯು ಶೂನ್ಯಭಾವದ ಈ ಕಾಯಿಲೆಯನ್ನು ಎಂದಿನಿಂದಲೂ ಅನುಭವಿಸುತ್ತಲೇ ಬಂದಿದ್ದಾಳೆ. ವಿವಾಹ, ಕುಟುಂಬ ಎಂಬುವೇ ಈ ಸಮಸ್ಯೆಯ ಕೇಂದ್ರಗಳೆಂಬುದು ನಿಜವಾದರೂ ಇದರ ನಿವಾರಣೆಗಾಗಿ ಈ ಸಂಸ್ಥೆಗಳನ್ನೇ ನಿರಾಕರಿಸಬೇಕೆಂಬ, ಎದುರು ಹಾಕಿಕೊಳ್ಳಬೇಕೆಂಬ ಅಗತ್ಯವೇನೂ ಇಲ್ಲ. ಏಕೆಂದರೆ ಈ ಬಗೆಯ ಪ್ರಯತ್ನದಿಂದ ಈಗಿರುವ ಸಮಸ್ಯೆಯ ನಿವಾರಣೆಯಂತೂ ಅಸಾಧ್ಯ. ಸಮಸ್ಯೆಯು ಹೊಸ ಹೊಸ ಆಕಾರಗಳನ್ನು, ಸ್ವರೂಪಗಳನ್ನೂ ಧರಿಸಿ ಧಾಳಿಯನ್ನು ಮುಂದುವರೆಸುವುದಕ್ಕೆ ಅವಕಾಶಗಳನ್ನು ಕಲ್ಪಿಸಿ ಯಾವ ಪ್ರಯೋಜನವೂ ಇಲ್ಲ.

ಕುಟುಂಬದ ಎಲ್ಲ ಸದಸ್ಯರೂ ಪರಸ್ಪರ ಸೌಹಾರ್ದದಿಂದ ನಡೆದಾಗ ಮಾತ್ರವೇ ಬದುಕು ಸಂತೋಷದಾಯಕವಾಗುತ್ತದೆ. ಕುಟುಂಬದ ಎಲ್ಲರೂ ಕರ್ತವ್ಯಗಳನ್ನೂ ಹಕ್ಕುಗಳನ್ನೂ ಹಂಚಿಕೊಂಡು ಬಾಳಬೇಕು. ಎಲ್ಲರೂ ಕುಟುಂಬಕ್ಕಾಗಿ ದುಡಿಯಬೇಕೆಂಬುದು ಎಷ್ಟು ಅಗತ್ಯವೋ, ಪ್ರತಿಯೊಬ್ಬರಿಗೂ ತಮ್ಮ ವ್ಯಕ್ತಿತ್ವ ವಿಶಿಷ್ಟತೆಯನ್ನು ಗುರುತಿಸಿ ಆನಂದಿಸುವ ಅವಕಾಶ ದೊರೆಯಬೇಕೆಂಬುದೂ ಅಷ್ಟೇ ಅಗತ್ಯ. ಜಗತ್ತಿನ ಪ್ರತಿಯೊಂದು ಅಣುವೂ ಪ್ರತ್ಯೇಕವೂ ಹೌದು, ಅದು ಜಗತ್ತಿನ ಅವಿಭಾಜ್ಯ ಅಂಗವೂ ಹೌದು. ಇದು ಪ್ರಕೃತಿ ನಿಯಮ. ಆದರೆ ಈ ಸಮಾಜ ರಚನೆಯಲ್ಲಿ ಹೆಣ್ಣಿಗೆ ತನ್ನನ್ನು ತಾನು ಗುರುತಿಸಿಕೊಂಡು ಆನಂದಿಸುವ ಅವಕಾಶವೇ ಇಲ್ಲ. ಸ್ತ್ರೀ ಪುರುಷರಲ್ಲಿ ಹಕ್ಕುಗಳೂ ಬಾಧ್ಯತೆಗಳೂ ಸಮಾನವಾಗಿ ಹಂಚಿಕೆಗೊಳ್ಳುವ ಬದಲು, ಹಕ್ಕುಗಳು ಪುರುಷನವು ಮತ್ತು ಎಲ್ಲ ಬಾಧ್ಯತೆಗಳೂ ಮಹಿಳೆಯವು ಎಂಬ ನಿಷ್ಠುರ ಹಂಚಿಕೆ ನಡೆದು ಹೋಗಿದೆ.

ಸಮಾಜವು ಈವರೆಗೂ ಹೆಣ್ಣನ್ನು ಕುರಿತು ನಿರ್ದೇಶನಗಳನ್ನಷ್ಟೇ ನೀಡುತ್ತಾ ಬಂದಿದೆ. ಅವಳ ಕರ್ತವ್ಯಗಳೇನು ಎಂಬ ಬಗ್ಗೆ ಒತ್ತಡಗಳನ್ನೇ ಹೇರುತ್ತಾ ಬಂದಿದೆ. ಅವಳ ಹಕ್ಕುಗಳ ಪ್ರಸ್ತಾಪಕ್ಕೆ ಅವಕಾಶಗಳನ್ನೆಲ್ಲಾ ಮರೆಸುತ್ತಾ ನಡೆದಿದೆ. ಈ ಆಕ್ರಮಣವನ್ನು ಎದುರಿಸಲೂ ಆಗದೆ, ಸಹಿಸಲೂ ಆಗದೆ ಹೆಣ್ಣು ಅಸಹಾಯಕಳಾಗಿ ಶೂನ್ಯಭಾವದ ರೋಗ ಲಕ್ಷಣಗಳನ್ನು ವ್ಯಕ್ತಪಡಿಸುತ್ತಾ ಬಳಲುತ್ತಿದ್ದಾಳೆ. ಈ ಸಮಸ್ಯೆ ನಾಗರಿಕತೆಯ ಬೆಳವಣಿಗೆಯ ಉದ್ದಕ್ಕೂ ಸಾಗಿಯೇ ಬಂದಿದೆ. ವಿವಾಹ, ಕುಟುಂಬಗಳೆಂಬ ವ್ಯವಸ್ಥೆಗಳ ಸಂಕೀರ್ಣತೆಗಳ ಎಲ್ಲ ಮೊತ್ತವೂ ಮಹಿಳೆಯ ಸಂಕೋಲೆಗಳನ್ನು ಬಿಗಿಗೊಳಿಸುತ್ತಲೇ ಬಂದಿವೆ. ಹಾಗಾಗಿ ಸಮಾಜದ ಯಾವ ಜಾತಿ, ವರ್ಗ, ಸಮುದಾಯಗಳಲ್ಲಿನ ಮಹಿಳೆಯರು ಈ ಸಮಸ್ಯೆಯನ್ನು ಎದುರಿಸುತ್ತಾರೆ ಅಥವಾ ಎದುರಿಸುವುದಿಲ್ಲ ಎಂಬ ಪ್ರಶ್ನೆಯೇ ಬರುವುದಿಲ್ಲ. ನಾಗರಿಕ ಸಮಾಜದ ಸಂಪರ್ಕದಿಂದ ದೂರವೇ ಉಳಿದಿರುವ ಬುಡಕಟ್ಟು ಸಮುದಾಯಗಳಲ್ಲಷ್ಟೇ ಹೆಣ್ಣು ಈ ಸಮಸ್ಯೆಯಿಂದ ಬಚಾವಾಗಿ ಉಳಿದಿದ್ದಾಳೆ ಎನ್ನಬಹುದು. ಉಳಿದಂತೆ ಎಲ್ಲ ಮಹಿಳೆಯರು ಈ ವ್ಯಾಧಿಗೆ ಪಕ್ಕಾಗಿಯೇ ಇರುತ್ತಾರೆ. ಬಹುಶಃ ರೋಗ ಲಕ್ಷಣಗಳು ವ್ಯಕ್ತವಾಗುವ ಬಗೆಗಳಲ್ಲಿ ಹಲವು ವ್ಯತ್ಯಾಸಗಳಿರಬಹುದಷ್ಟೇ. ಹಾಗೆಯೇ ಯಾವ ವಯಸ್ಸಿನ ಹೆಣ್ಣು ಈ ರೋಗದಿಂದ ಹೆಚ್ಚು ಬಳಲುತ್ತಾಳೆ ಎಂಬುದಕ್ಕೂ ಇದೇ ಉತ್ತರವೇ. ಹದಿ ಹರಯಕ್ಕೆ ಕಾಲಿಟ್ಟಾಗಿನಿಂದಲೂ ಮದುವೆ, ಗಂಡ, ಸಂಸಾರ ಎಂಬ ಕಲ್ಪನೆಗಳಿಗೆ ತೊಡಗುವ ಹೆಣ್ಣು ಮೊದಲೊಂದಷ್ಟು ಕಾಲ ಕನಸು, ಭ್ರಮೆಗಳಲ್ಲಿ ಪುಳಕಿತಳಾಗಬಹುದು. ಕ್ರಮೇಣ ತನ್ನ ಜೀವನದ ಕೇಂದ್ರಬಿಂದು ತಾನಲ್ಲ ಎಂಬ ಅರಿವಿನೊಂದಿಗೆ, ಗಂಡ ಮನೆ ಮಕ್ಕಳು ಎಂಬ ಬೇರೊಂದು ಕೇಂದ್ರದ ಸುತ್ತಲೂ ಪರಿಭ್ರಮಿಸುತ್ತಲೇ ತನ್ನ ಬದುಕು ಸಾಗಬೇಕು ಎಂಬ ಸತ್ಯ ಅವಳಿಗೆ ಎದುರಾಗುತ್ತದೆ. ಈ ಬಗ್ಗೆ ಆಕೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪ್ರತಿಕ್ರಿಯೆಗಳನ್ನು ತೋರಿಸತೊಡಗುತ್ತಾಳೆ. ಇದು ಯಾವ ವಯಸ್ಸಿನಲ್ಲೂ ತೀವ್ರ ಸ್ವರೂಪದ್ದಾಗಬಹುದು. ತನ್ನ ಬದುಕಿನಲ್ಲಿ ತನಗೇ ಪ್ರಾಮುಖ್ಯತೆ ಇಲ್ಲವೆಂಬ ಸಂಗತಿ ಹೊಳೆದು ಹೋದ ಕ್ಷಣದಲ್ಲಿ ಅವಳನ್ನು ಈ ಶೂನ್ಯಭಾವ ಆವರಿಸುತ್ತದೆ. ಋತುಚಕ್ರದ ಕೊನೆಯ ಹಂತದಲ್ಲಾಗುವ ಹಲವು ದೈಹಿಕ ವ್ಯತ್ಯಾಸಗಳಿಂದಾಗಿ ನಲವತ್ತರ ವಯಸ್ಸಿನ ಆಸುಪಾಸಿನಲ್ಲಿ ಹೆಣ್ಣಿನ ದೈಹಿಕ ಸಾಮರ್ಥ್ಯ ಇಳಿಮುಖವಾಗತೊಡಗುತ್ತದೆ. ಪ್ರಕೃತಿ ಸಹಜವಾದ ಈ ಹಂತವನ್ನು ಅಷ್ಟೇ ಸಹಜವಾಗಿ ಸ್ವೀಕರಿಸಲು ಹೆಣ್ಣಿಗೆ ಬಹುಮಟ್ಟಿಗೆ ಸಾಧ್ಯವಾಗದೆ ಹೋಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಪುರುಷ ಪರವಾದ ಸಮಾಜವು ಯೌವನದ ಆಕರ್ಷಣೆಯೇ ಹೆಣ್ಣಿನ ಉಳಿವಿನ ಪ್ರಮುಖ ಸಾಧನವೆಂದು ಅವಳನ್ನು ನಂಬಿಸಿದೆ. ಈಗ ತನ್ನ ಯೌವನವು ಕಳೆದು ಹೋಗುತ್ತಿರುವ ಬಗ್ಗೆ ಅವಳಲ್ಲಿ ದಟ್ಟವಾದ ಆತಂಕವೂ ಸೇರಿಕೊಳ್ಳುತ್ತದೆ. ಹೀಗಾಗಿ ಈ ವಯಸ್ಸಿನಲ್ಲಿ ಶೂನ್ಯಭಾವದ ರೋಗಲಕ್ಷಣಗಳು ಇನ್ನಷ್ಟು ತೀವ್ರವಾಗಿ ಕಾಣಿಸಿಕೊಳ್ಳಲೂಬಹುದು.

ಬದುಕಿನ ಬಗೆಗೆ ಬೇಸರಗೊಳ್ಳುವ ಸಂದರ್ಭ, ಹೆಂಡತಿ ಮಕ್ಕಳು ಸಂಸಾರಗಳ ಬಗ್ಗೆ ನಿರಸನಗೊಳ್ಳುವ ಸಂದರ್ಭ ಗಂಡಸರಿಗೆ ಬರುವುದಿಲ್ಲವೇ, ಹಾಗಾದಾಗ ಅವರೂ ಈ ರೋಗಲಕ್ಷಣಗಳನ್ನು ವ್ಯಕ್ತಪಡಿಸುತ್ತಾ ಕೂರುತ್ತಾರೆಯೇ ಎಂಬ ಪ್ರಶ್ನೆಯನ್ನು ಗಂಡಸರು ಕೇಳುವುದಿದೆ. ಹೆಣ್ಣಿನ ಸಮಸ್ಯೆಯ ಸ್ವರೂಪವನ್ನು ಗ್ರಹಿಸಿದರೆ ಈ ಪ್ರಶ್ನೆಗೆ ಉತ್ತರ ತಾನೇ ಕಾಣುತ್ತದೆ. ಈವರೆಗೆ ವಿವರಿಸಿದಂತೆ, ಸಮಾಜವು ಹೆಣ್ಣಿನ ಜೀವನ ಕೇಂದ್ರಗಳೆಂದರೆ ವಿವಾಹ ಮತ್ತು ಕುಟುಂಬಗಳೇ ಆಗಿವೆ ಎಂದು ತೀರಾ ನಿರ್ಬಂಧ ರೂಪದ ನಿರ್ದೇಶನವನ್ನು ನೀಡಿ ಬಿಟ್ಟಿದೆ. ಅವಳ ಬದುಕಿನ ಕೇಂದ್ರ ಅವಳಲ್ಲ. ಅವಳು ಇನ್ನೊಂದು ಕೇಂದ್ರದ ಸುತ್ತ ಪರಿಭ್ರಮಿಸುತ್ತಿರಬೇಕಾದ ಪರಾವಲಂಬಿ. ಆದರೆ ಗಂಡಿಗೆ ಈ ಸಮಾಜದಲ್ಲಿ ಇಂಥಾ ನಿರ್ಬಂಧವಿಲ್ಲ. ಅವನ ಬದುಕಿನ ಕೇಂದ್ರಬಿಂದು ಸ್ವತಃ ಅವನೇ. ಹಾಗಾಗಿ ವಿವಾಹ ಮತ್ತು ಕುಟುಂಬ ಎಂಬವು ಅವನ ಸೌಖ್ಯದ ಸಾಧನಗಳು ಮಾತ್ರ. ಒಂದು ವೇಳೆ ಇವು ಅವನೆದುರು ಸಮಸ್ಯೆಗಳೆನಿಸಿ ನಿಂತವೆಂದರೆ ಅವನು ಅವುಗಳನ್ನು ನಿರಾಕರಿಸಿ ಬೇರೊಂದು ಸಾಧನದ ಅನ್ವೇಷಣೆಗೆ ತೊಡಗಲು ಸ್ವತಂತ್ರನಿರುತ್ತಾನೆ. ವಿವಾಹ ಬಾಹಿರ ಸಂಬಂಧಗಳಿಂದ ಹಿಡಿದು ನೌಕರಿ, ಉದ್ಯೋಗ, ಹವ್ಯಾಸಗಳು ಮೊದಲಾದವುಗಳಲ್ಲಿನ ಸಾಧನೆಯವರೆಗೆ ಅವನು ಸ್ವಂತಿಕೆಯನ್ನು ಗುರುತಿಸಿಕೊಳ್ಳಲು ಯತ್ನಿಸಬಹುದು. ಪರ್ಯಾಯ ಮಾರ್ಗಗಳ ಆಯ್ಕೆಗೆ ಅವನಿಗೆ ಮುಕ್ತ ಅವಕಾಶಗಳಿರುತ್ತವೆ. ಹೀಗಾಗಿ ಅವನೆದುರು ಈ ಸಮಸ್ಯೆ ಬಂಡೆಗಲ್ಲಾಗಿಯಂತೂ ನಿಲ್ಲುವ ಸಾಧ್ಯತೆ ಇಲ್ಲ.

ಉದ್ಯಮ ಉದ್ಯೋಗಗಳ ಭರಾಟೆಯಲ್ಲಿ ಧಾವಿಸುತ್ತಿರುವ ಆಧುನಿಕ ಸಮಾಜವಂತೂ ನಿಯಂತ್ರಣಕ್ಕೆ ದಕ್ಕದೆ ಛಿದ್ರಗೊಳ್ಳುತ್ತಾ ನಡೆದಿರುವ ಕುಟುಂಬ ವ್ಯವಸ್ಥೆಯ ಕಾರಣದ ಹಲವು ನಕಾರಾತ್ಮಕ ಪರಿಣಾಮಗಳ ಸಮೇತ ಹೆಣ್ಣಿನ ಮೇಲಿನ ಆಕ್ರಮಣವನ್ನು ಇನ್ನಷ್ಟು ತೀವ್ರಗೊಳಿಸಿದೆ. ಈ ಸಂಕೀರ್ಣ ಸಂದರ್ಭದ ಬಗ್ಗೆ ಮಹಿಳೆಯು ಹಿಂದೆಂದಿಗಿಂತಲೂ ಈಗ ಹಲವು ಕಾರಣಗಳಿಂದಾಗಿ ಹೆಚ್ಚು ಜಾಗೃತಳೂ, ಸೂಕ್ಷ್ಮಜ್ಞಳೂ ಆಗುತ್ತಿದ್ದಾಳೆ. ಈ ಜಾಗೃತಿಯಿಂದಾಗಿ ಅವಳು ಮತ್ತಷ್ಟು ಸೂಕ್ಷ್ಮ ವೇದನೆಗಳಿಗೆ ಪಕ್ಕಾಗುತ್ತಿದ್ದಾಳೆ. ಏಕೆಂದರೆ ತನ್ನ ಸಮಸ್ಯೆಯ ಸ್ವರೂಪದ ಬಗ್ಗೆ ಮತ್ತು ಅದರ ಪರಿಹಾರದ ಬಗ್ಗೆ ಅವಳಿಗೀಗ ಸಾಕಷ್ಟು ಅರಿವು ಇದೆ. ಆದರೆ ಈ ಪರಿಹಾರ ಅವಳೊಬ್ಬಳ ಪ್ರಯತ್ನದಿಂದಾಗಿ ದೊರಕುವಂತಹುದಲ್ಲ. ಅವಳೀಗ ಈ ಸಮಾಜವನ್ನು ಒಪ್ಪಿಸಿಯೋ, ಒತ್ತಾಯಿಸಿಯೋ ತನಗೆ ಸೂಕ್ತವಾದ ಪರಿಸರವನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿದೆ.

ಇನ್ನು ಮುಂದಾದರೂ ಈ ಸಮಾಜದ ಅವಿಭಾಜ್ಯ ಅಂಶವಾಗಿ ಹುಟ್ಟಿ, ಪ್ರಕೃತಿಯು ತನಗೆ ವಹಿಸಿದ ಸಂತತಿ ಸೃಷ್ಟಿ ಹಾಗೂ ನಿರ್ವಹಣೆಯ ಸಂಕಷ್ಟದ ಹೊಣೆಯನ್ನು ಹೊತ್ತು ಮಾನವ ಜನಾಂಗಕ್ಕೆ ಮೂಲಭೂತ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಹೆಣ್ಣಿಗೆ ಈ ಸಮಾಜವು ಸಲ್ಲಿಸಬೇಕಾದ ಮನ್ನಣೆಯನ್ನು ಕುರಿತು ಸಹಾನುಭೂತಿಯಿಂದ ಪರಿಶೀಲಿಸ

ಬೇಕು. ನಮ್ಮ ಸಾಮಾಜಿಕ ಚಿಂತನೆಗಳು ಈ ಸಮಸ್ಯೆಯು ಮಾನವೀಯ ಘನತೆಗೆ ಸಂಬಂಧಿಸಿದ್ದಾಗಿದೆ ಎಂಬುದನ್ನು ಸಮಾಜಕ್ಕೆ ಮನಗಾಣಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾದ್ದು ಕೂಡ ತುಂಬಾ ಅಗತ್ಯವಾಗಿದೆ. ಈ ಜಗತ್ತಿನಲ್ಲಿ ತನಗೂ ಒಂದು ಸ್ವಂತ ವ್ಯಕ್ತಿತ್ವವಿದೆ ಎಂಬ ಭಾವವನ್ನು ಅನುಭವಿಸಿ ಬದುಕನ್ನು ಆನಂದಿಸುವ ಅವಕಾಶ ಹೆಣ್ಣಿಗೂ ಲಭ್ಯವಾಗಬೇಕು. ಹೆಣ್ಣಿನ ಈ ಅಗತ್ಯವನ್ನು ಸಮಾಜವು ಇನ್ನೂ ಇನ್ನೂ ಕಡೆಗಣಿಸುತ್ತಲೇ ನಡೆಯುವುದು ಮಾನವ ಜನಾಂಗದ ಸಂಸ್ಕೃತಿಗೆ ಘನತೆಯನ್ನು ಕೂಡಿಸುವ ಸಂಗತಿಯಾಗಲಾರದು.

ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗತಿಗಳು

ಮಾನವಶಾಸ್ತ್ರ, ಮನ:ಶಾಸ್ತ್ರ, ಜನಸಂಖ್ಯಾ ಶಾಸ್ತ್ರಗಳಂತಹ ಕ್ಷೇತ್ರಗಳು ಮಹಿಳೆಯ ಸ್ಥಿತಿಗತಿಗಳನ್ನು ಕುರಿತ ಅಧ್ಯಯನಗಳಲ್ಲಿ ಆಸಕ್ತಿಯನ್ನು ತಳೆಯುವುದು ಅನಿವಾರ್ಯ. ಸಮಾಜ ಶಾಸ್ತ್ರದ ಆಧುನಿಕ ಅಧ್ಯಯನಗಳು ಮಹಿಳೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವಷ್ಟಕ್ಕೆ ನಿಲ್ಲದೆ ಸಮಾಜದಲ್ಲಿ ಅವಳ ಪಾತ್ರದ ಮಹತ್ವವೇನು ಎಂದು ಗುರುತಿಸುವುದರ ಕಡೆಗೆ ಹಾಗೂ ಸ್ತ್ರೀ ಪುರುಷರಲ್ಲಿ ಸಮಾನತೆ ಸಾಧ್ಯವಾಗಬೇಕೆಂಬ ಬಗೆಗೆ ಹೆಚ್ಚು ಹೆಚ್ಚು ಆಸಕ್ತಿಯನ್ನು ತಳೆಯುತ್ತಿವೆ. ಇಂತಹ ಅಧ್ಯಯನಗಳು ಸ್ತ್ರೀವಾದಿ ಚಿಂತನೆಗೆ ಹೆಚ್ಚು ಉಪಯುಕ್ತವೆನಿಸುವ ಆಯಾಮಗಳನ್ನು ಒದಗಿಸುವ ಪರಿಕರಗಳೆನಿಸಿವೆ. ಮಹಿಳೆಯು ಸಮಾಜದಲ್ಲಿ ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು ಪಡೆಯ ಬೇಕೆಂಬ ಸ್ತ್ರೀವಾದಿ ಚಿಂತನೆಗಳು ಮೊದ ಮೊದಲಿಗೆ ಹೋರಾಟ ಮತ್ತು ಆಕ್ರಮಣಗಳ ಹಾದಿ ಅನಿವಾರ್ಯವೆಂಬಂತೆ ಸಾಗಿದವಾದರೂ ಕ್ರಮೇಣ ಅನುಸಂಧಾನದ ಹಾದಿಯು ಹೆಚ್ಚು ಆರೋಗ್ಯಕರವೂ, ಉಪಯುಕ್ತವೂ ಆಗಬಲ್ಲುದೆಂದು ಗುರುತಿಸಲು ತೊಡಗಿವೆ. ಅದಕ್ಕನುಗುಣವಾದ ಕಾರ್ಯವಿಧಾನಗಳನ್ನು, ನಿತ್ಯ ಬಳಕೆಗೆ ಅನುಕೂಲವಾದ ಹುನ್ನಾರಗಳನ್ನು ಕುರಿತು ಯೋಚಿಸಲಾರಂಭಿಸಿವೆ.

ನಮ್ಮ ನಾಡಿನ ಹಿರಿಯ ಸಮಾಜಶಾಸ್ತ್ರಜ್ಞರಾದ ಎಂ. ಎನ್. ಶ್ರೀನಿವಾಸ್ ಅವರು ನೀಡಿದ 'ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗತಿಗಳು' ಎಂಬ ಭಾಷಣವು ಅವರ ಲೇಖನ ಸಂಗ್ರಹವೊಂದರಲ್ಲಿದೆ. (Essays in Social Anthropology' 1996) ನಮ್ಮಲ್ಲಿ ಪ್ರಸ್ತುತ ನಡೆದಿರುವ ಸ್ತ್ರೀವಾದಿ ಚಿಂತನೆಗೆ ಹೊಸ ಆಯಾಮಗಳನ್ನು ಒದಗಿಸುವ ಹಲವಾರು ಅಂಶಗಳು ಈ ಲೇಖನದಲ್ಲಿವೆ. ಇಲ್ಲಿ ಆ ಅಂಶಗಳನ್ನು ಸಂಗ್ರಹಿಸಿ ಚರ್ಚಿಸ ಲಾಗಿದೆ. ಸುಮಾರು ಇಪ್ಪತ್ನಾಲ್ಕು ವರ್ಷಗಳಷ್ಟು ಹಿಂದೆ ಎಂ. ಎನ್. ಶ್ರೀನಿವಾಸ್ ಅವರು ಈ ಭಾಷಣವನ್ನು ಮಾಡಿದ್ದು. ಆದರೆ ಈ ಹೊತ್ತು ಕೂಡ ನಮ್ಮ ಸ್ತ್ರೀವಾದಿ ಚಿಂತನೆಗಳಿಗೆ, ಸಿದ್ಧಾಂತಗಳಿಗೆ ಹಾಗೂ ಕಾರ್ಯವಿಧಾನಗಳಿಗೆ ಪ್ರಸ್ತುತವೆನಿಸುವ ಮುಖ್ಯ ಅಂಶಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಭಾರತೀಯ ಮಹಿಳೆಯ ಸ್ಥಿತಿಗಳು ಎಂಬ ಮಾತು ಸರ್ವಸಾಮಾನ್ಯ ಎಂಬಂತೆ ಕಲ್ಪಿಸುವುದು ಅಸಾಧ್ಯವೆಂಬಷ್ಟು ಸಂಕೀರ್ಣವಾದುದು. ಜಾತಿ, ವರ್ಗ, ಧರ್ಮ, ಗ್ರಾಮ ನಗರಗಳೆಂಬ ಪ್ರಾದೇಶಿಕತೆಗಳಂತಹ ಹಲವು ಪದರಗಳಲ್ಲಿ ವ್ಯಾಪಿಸಿರುವ ಭಾರತೀಯತೆಯನ್ನು ಯಾವುದಾದರೊಂದು ಕೇಂದ್ರದಲ್ಲಿ ಗುರುತಿಸಲು ತೊಡಗುವುದು ಸುಲಭವಲ್ಲ. ಸ್ತ್ರೀಯರ ಸಾಕ್ಷರತೆ, ಶಿಕ್ಷಣ, ಸ್ತ್ರೀಪುರುಷರಲ್ಲಿನ ಸಂಖ್ಯಾ ಪ್ರಮಾಣ, ಹೆಣ್ಣುಮಕ್ಕಳ ವಿವಾಹದ ವಯಸ್ಸು, ಆರ್ಥಿಕ ಪ್ರಕ್ರಿಯೆಗಳಲ್ಲಿ ಮಹಿಳೆಯರ ಭಾಗ ವಹಿಸುವಿಕೆ-ಇಂತಹ ಸಂಗತಿಗಳ ವಿಚಾರಕ್ಕೆ ಬಂದರೆ ಅತ್ಯಂತ ವಿಸ್ತಾರವಾಗಿ ಉತ್ತರದಲ್ಲಿ ಹರಡಿರುವ ಹಿಂದೀ ಪ್ರದೇಶಗಳು ಹಿಂದುಳಿದವೆನ್ನಿಸಿಕೊಳ್ಳುತ್ತವೆ. ದಕ್ಷಿಣದ ಕೇರಳದಂತಹ ಪ್ರದೇಶಗಳನ್ನು ಪರಿಗಣಿಸಿದರೆ ಉತ್ತರದ ಮಹಿಳೆಯರ ಸಾಕ್ಷರತೆ ತೀರಾ ಹಿಂದುಳಿದದ್ದು. ಎಂ. ಎನ್. ಶ್ರೀನಿವಾಸ್ ಅವರು ೨೪ ವರ್ಷಗಳ ಹಿಂದಿನ ಅಂಕಿ ಅಂಶಗಳನ್ನು ನೀಡಿದ್ದಾರೆ. ಇಂದಿಗೆ ಅಕ್ಷರಸ್ಥರ ಸಂಖ್ಯೆಯಲ್ಲಿ ಏರಿಕೆ ಇರುವುದು ನಿಜವಾದರೂ ಶೇಕಡಾವಾರು ಪ್ರಮಾಣದಲ್ಲಿ ಅಂದಿನ ಏರುಪೇರುಗಳು ಮುಂದುವರೆದಿವೆ. ಉತ್ತರ -ದಕ್ಷಿಣ ಪ್ರದೇಶಗಳಲ್ಲಿನ ಈ ಏರುಪೇರುಗಳ ಗುಣ ಗ್ರಾಮ ನಗರಗಳ ವಿಚಾರದಲ್ಲೂ ನಿಜ. ಆಯಾ ಪ್ರದೇಶಗಳಲ್ಲಿ ಮತ್ತು ವಿವಿಧ ಜಾತಿ ಸಮುದಾಯಗಳಲ್ಲಿ ರೂಢಿಯಲ್ಲಿರುವ ಸಾಂಸ್ಥಿಕ ರೀತಿ ರಿವಾಜುಗಳು ಆಯಾ ಮಹಿಳೆಯರ ಜೀವಿತಗಳನ್ನು ಪ್ರಭಾವಿಸುತ್ತವೆ. ಅದು ಬಹುಪತ್ನಿತ್ವ, ವಿಧವಾ ವಿವಾಹಗಳಂತಹ ಸಂಗತಿಗಳಿಗೆ ಸಂಬಂಧಿಸಿರಬಹುದು ; ಅಥವಾ ಕೇರಳದಲ್ಲಿ ಮತ್ತು ಇತರ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಮಾತ್ರವೇ ವಿರಳವಾಗಿ ರೂಢಿಯಲ್ಲಿರುವ ಮಾತೃಪ್ರಧಾನ ಕುಟುಂಬ ವ್ಯವಸ್ಥೆಗೆ ಸಂಬಂಧಿಸಿರಬಹುದು.

ಪ್ರಾದೇಶಿಕತೆಗೆ ಅಥವಾ ಜಾತಿ ಸಮುದಾಯಗಳಿಗೆ ಸಂಬಂಧಿಸಿದ ಸಂಕೀರ್ಣತೆಗಳಾದರೂ ಸ್ವಲ್ಪ ಮಟ್ಟಿಗೆ ಗ್ರಹಿಕೆಗೆ ದಕ್ಕುತ್ತವೆ. ಪರಂಪರಾಗತವಾಗಿ ನಮ್ಮ ಚಾರಿತ್ರಿಕ ದಾಖಲೆಯೆನಿಸಿ ಹರಿದು ಬಂದಿರುವ ಪವಿತ್ರ ಸಾಹಿತ್ಯಗಳನ್ನಾಧರಿಸಿ ಹಲವು ಆದರ್ಶಗಳನ್ನು, ನೀತಿ ನಿಯಮಗಳನ್ನು ಸಮಾಜವು ರೂಪಿಸಿಕೊಂಡು ಬಳಕೆಗೆ ತರುತ್ತದೆ. ಭಾರತದಲ್ಲಿ ಹೀಗೆ ಸಾಮಾಜಿಕರ ನಡತೆ ಮತ್ತು ವರ್ತನೆಗಳ ಮೇಲೆ ನೀತಿ ನಿಯಮಗಳನ್ನು ಜಾರಿಗೊಳಿಸುವ ಬೌದ್ಧಿಕ ವರ್ಗವೆಂದರೆ ಸಂಸ್ಕೃತವನ್ನು ಸಾಧನವಾಗಿ ಬಳಸಿದ ಮೇಲುಜಾತಿಗಳವರು. ಈ ಗುಂಪಿಗೆ ನಮ್ಮ ಪರಂಪರಾಗತ ಸಾಹಿತ್ಯದ ತಿಳಿವು ಇದ್ದರೂ ಅದರ ಅಪಬಳಕೆಯಾದದ್ದೇ ಹೆಚ್ಚು. ಉದಾಹರಣೆಗೆ ಇಪ್ಪತ್ತರ ದಶಕದ ಮೈಸೂರಿನ ಬ್ರಾಹ್ಮಣರಿಗೂ ಅಂದಿನ ಸುಧಾರಣಾವಾದಿಗಳಿಗೂ ಒಂದು ಚರ್ಚೆ ಬಿತ್ತು. ಹೆಣ್ಣು ಋತುಮತಿಯಾಗುವ ವೇಳೆಗೆ ಮದುವೆಯಾಗದೆ ಉಳಿದಿದ್ದರೆ ಅದೊಂದು ಪಾಪ ಎಂಬುದು ಸಂಪ್ರದಾಯಸ್ಥರ ನಿಲುವು. (ಮದುವೆಯಾಗುವುದು, ನಿಷೇಕವಾಗುವುದು ಬೇರೆ ಬೇರೆ ಎಂಬುದನ್ನು ಗಮನಿಸಬೇಕು. ಬಾಲ್ಯದ ಯಾವುದೇ ವಯಸ್ಸಿನಲ್ಲಿ ಮದುವೆಯಾಗಿ, ಋತುಮತಿಯಾದ ಮೇಲೆ ನಿಷೇಕಕ್ಕೆ ಪ್ರತ್ಯೇಕ ಶುಭದಿನವನ್ನು ಗೊತ್ತು ಮಾಡಲಾಗುವುದು). ಅಂದಿನ ಸುಧಾರಣಾವಾದಿಗಳು

ವೇದಗಳನ್ನು ಆಧರಿಸಿಯೇ ಅವರ ನಿಲುವನ್ನು ವಿರೋಧಿಸಿದರು. ಆದರೆ ಬ್ರಾಹ್ಮಣರು ವೇದಗಳಿಗಿಂತ ತೀರಾ ಇತ್ತೀಚಿನವಾದ ಧರ್ಮ ಶಾಸ್ತ್ರಗಳಿಂದ ತಮ್ಮ ನಿಲುವನ್ನು ಸಮರ್ಥಿಸಿದರು. ಅಂದಂದಿಗೆ ಅನುಕೂಲ ವೆನಿಸಿದಂತೆ ಶಾಸ್ತ್ರ ಸಂಗತಿಗಳನ್ನು ತಿರುಚಿ ಬಳಸಿದ ಪ್ರಸಂಗಗಳಿಗೆ ಇಂತಹ ಬೇಕಾದಷ್ಟು ನಿದರ್ಶನಗಳು ದೂರೆಯುತ್ತವೆ. ಮದುವೆಯಾದ ಗಂಡು ಹೆಣ್ಣುಗಳ ಕರ್ತವ್ಯಗಳ ಬಗೆಗೆ ನಿರ್ದೇಶನಗಳನ್ನು ಜಾರಿಗೊಳಿಸಿದ ಸಂದರ್ಭಗಳು ಕಾಲಗತಿಯಲ್ಲಿ ಪುರುಷನಿಗೆ ಅನುಕೂಲ ಸಿಂಧುಗಳಾಗಿಯೇ ಹರಿದು ಬಂದಿವೆ. ಆದರೆ ತರ್ಕ ಬದ್ಧವಾದ ನಿಯಮಗಳೆಂಬ ಸೋಗನ್ನು ಮಾತ್ರ ತಪ್ಪದೆ ಧರಿಸಿವೆ.

ಹಾಗಾಗಿಯೇ ಕಾನೂನು ಮತ್ತು ವಾಸ್ತವ, ಸಿದ್ಧಾಂತ ಮತ್ತು ಅನ್ವಯ-ಇವುಗಳನ್ನು ಸ್ಪಷ್ಟವಾಗಿ ಗುರುತಿಸುವ ಅಗತ್ಯವಿದೆ. ಅಲ್ಲದೆ ಔಪಚಾರಿಕ ಮತ್ತು ಅನೌಪಚಾರಿಕ ಸಂಬಂಧಗಳನ್ನು ಕುರಿತಂತೆಯೂ ಈ ಸ್ಪಷ್ಟತೆಯ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಮಾತ್ರವೇ ಭಾರತೀಯ ಸಮಾಜದ ವಿವಿಧ ಪದರಗಳಲ್ಲಿ ಮಹಿಳೆಯ ಸ್ಥಿತಿಗತಿಗಳೇನು ಎಂಬುದನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ. ಈವರೆಗೂ ಮಹಿಳೆಯರ ಸ್ಥಾನಮಾನಗಳನ್ನು ಕಾನೂನು, ಸಿದ್ಧಾಂತ ಮತ್ತು ಔಪಚಾರಿಕ ಸಂಬಂಧಗಳಿಗೆ ಅನ್ವಯಿಸಿ ಮಾತ್ರವೇ ನೋಡುತ್ತಿದ್ದೇವೆ. ಸ್ತ್ರೀ-ಪುರುಷರ ವಾಸ್ತವ ಸಂಬಂಧಗಳ ಬಗ್ಗೆ ಮತ್ತು ಕಾಲಗತಿಯಲ್ಲಿ ಅವು ತೋರುತ್ತಿರುವ ವಿವಿಧ ಆಯಾಮಗಳ ಬಗ್ಗೆ ನಾವು ಅಷ್ಟಾಗಿ ಗಮನ ಹರಿಸುತ್ತಿಲ್ಲ. ಮೊದಲು ಹೇಳಿದ ಬಗೆಯ ಅಧ್ಯಯನಗಳು ಸೆನ್ಸಸ್ ಅಥವಾ ನ್ಯಾಷನಲ್ ಸ್ಯಾಂಪಲ್ ಸರ್ವೆಗಳಂತಹ ಮಾಹಿತಿಗಳನ್ನು ಆಧರಿಸಿ ಒಂದು ಹಂತದ ಚೌಕಟ್ಟನ್ನೇನೋ ರೂಪಿಸಬಲ್ಲವು. ಆದರೆ ಆಯಾ ನಗರ, ಗ್ರಾಮ, ಸಮುದಾಯಗಳ ವಿಭಿನ್ನ ಪರಿಸರಗಳಲ್ಲಿ ಸ್ತ್ರೀ ಪುರುಷ ಸಂಬಂಧ ಪ್ರಭಾವಗಳನ್ನು ಸೂಕ್ಷ್ಮ ಅಧ್ಯಯನಗಳು ಮಾತ್ರವೇ ಗ್ರಹಿಸ ಬಲ್ಲವು. ವಿವಿಧ ನೆಲೆಗಳಲ್ಲಿ ರೂಪು ತಳೆಯುವ ವಿಭಿನ್ನ ಸಾಮಾಜಿಕ, ಸಾಂಸ್ಕೃತಿಕ ಪ್ರಕ್ರಿಯೆ ಗಳನ್ನು ಅವುಗಳ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಗ್ರಹಿಕೆಗಳು ನೆರ ವಾಗುವುದು ಸಾಧ್ಯ. ಉದಾಹರಣೆಗೆ ಆಧುನಿಕತೆಯ ಒಂದು ಪ್ರಕ್ರಿಯೆ ನಗರೀಕರಣ. ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಆಶಯದ್ದು. ಸರ್ಕಾರ ಅಥವಾ ವಾಲಂಟರಿ ಸಂಸ್ಥೆಗಳ ಯಾವ ಕಾರ್ಯಕ್ರಮಗಳಿಂದಾಗಿ ಗ್ರಾಮಗಳಲ್ಲಿ ಈ ಬದಲಾವಣೆ ಕಾಣಲಾರಂಭಿಸಿತು, ಮಹಿಳೆಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮೇಲೆ ಈ-ಪ್ರಕ್ರಿಯೆಯ ನಿಜವಾದ ಪರಿಣಾಮ ಯಾವ ಬಗೆಯಲ್ಲಾಯಿತು, ಇಂತಹ ಪ್ರಶ್ನೆಗಳನ್ನು ಹಾಕಿಕೊಂಡು ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ಕ್ಷೇತ್ರಕಾರ್ಯಗಳು, ಮಾಹಿತಿ ಸಂಗ್ರಹಗಳು ಏನೂ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಿತಿಗತಿಗಳಲ್ಲಿ ಬದಲಾವಣೆಗಳಾಗುತ್ತಿವೆಯೇ, ಆಗುತ್ತಿದ್ದರೆ ಅದರ ಸ್ವರೂಪವೇನು, ಎಂಬಂತಹ ಚರ್ಚೆ ದೊಡ್ಡ ಸವಾಲೇ ಸರಿ. ಆದರೂ ಇಂಥದೊಂದು ಚರ್ಚೆಗೆ ತೊಡಗಬೇಕಾದ ಅಗತ್ಯವಂತೂ ಇದೆ. ಇಲ್ಲಿನ ಚರ್ಚೆಗಾಗಿ ಮುಖ್ಯವಾಗಿ ಹಿಂದೂ ಮಹಿಳೆಯರು ಎಂಬ ಮಾದರಿಯನ್ನಷ್ಟೇ ತೆಗೆದುಕೊಳ್ಳಲಾಗಿದೆ.

ಸಂಖ್ಯೆಯ ದೃಷ್ಟಿಯಿಂದ, ಸಂಕೀರ್ಣತೆಯ ದೃಷ್ಟಿಯಿಂದ ಸಾಕಷ್ಟು ವ್ಯಾಪ್ತಿಯುಳ್ಳದ್ದು ಎಂಬುದಕ್ಕೆ ಮಾತ್ರ ಈ ಮಾದರಿಯನ್ನು ಆಯ್ದುಕೊಳ್ಳಲಾಗಿದೆ. ಇನ್ನಷ್ಟು ವ್ಯಾಪ್ತಿಗೆ ಇಂತಹ ಅಧ್ಯಯನವನ್ನು ವಿಸ್ತರಿಸಬೇಕಾದ ಅಗತ್ಯ ಮತ್ತು ಸಾಧ್ಯತೆಗಳ ಬಗೆಗೆ ಪ್ರತ್ಯೇಕ ವಾಗಿಯೇನೂ ಹೇಳಬೇಕಾಗಿಲ್ಲ.

ಭಾರತ ಗ್ರಾಮೀಣದೇಶ. ಶೇಕಡ ಎಂಬತ್ತಾರು ಮಂದಿ ಕೃಷಿಯಲ್ಲಿ ತೊಡಗಿರುವವ ರಾಗಿದ್ದಾರೆ. ಇದೇ ಸಮಾನ ಪ್ರಮಾಣದಲ್ಲಿ ಮಹಿಳೆಯರೂ ವ್ಯವಸಾಯದಲ್ಲಿ ತೊಡಗಿರುವ ಶ್ರಮಿಕ ವರ್ಗದವರಾಗಿದ್ದಾರೆ. ಗ್ರಾಮವಾಸ ಮತ್ತು ವ್ಯವಸಾಯ ಎಂಬ ಸಂಗತಿಗಳು ಇಡೀ ಭಾರತಕ್ಕೆ ಸಮಗ್ರವಾಗಿ ಎಂಬಂತೆ ಅನ್ವಯವಾಗುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಪ್ರಮಾಣದಲ್ಲಿ ಅಷ್ಟಿಷ್ಟು ವ್ಯತ್ಯಾಸಗಳಿರಬಹುದಷ್ಟೆ. ಹಾಗಾದರೆ ಭಾರತದ ಗ್ರಾಮೀಣ ಮಹಿಳೆಯರನ್ನೇ ಪ್ರಧಾನವಾಗಿ ಪರಿಗಣಿಸಿ ಭಾರತದ ಮಹಿಳೆಯರ ಸ್ಥಿತಿಗತಿಗಳ ಸ್ವರೂಪವನ್ನು ಗ್ರಹಿಸಿ ಬಿಡಬಹುದಲ್ಲವೇ ಎನಿಸಬಹುದು. ಆದರೆ ಸಾರಾಸಗಟಾಗಿ ಒಂದೇ ಒಂದು ಮಾದರಿಯಲ್ಲಿ ಮಹಿಳೆಯರನ್ನು ಕೂಡಿಸುವುದು ಅಸಾಧ್ಯದ ಮಾತು. ಹಾಗೆಂದು ಕಸುಬು, ವ್ಯಾಪಾರ, ಸೇವಾಕ್ಷೇತ್ರದ ಜಾತಿಗಳೆಂದು ಪ್ರತ್ಯೇಕ ಪ್ರತ್ಯೇಕವಾಗಿ ಮಾದರಿಗಳನ್ನು ಇಟ್ಟುಕೊಳ್ಳುವುದೂ ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಮುಂದೆ ಅಧ್ಯಯನದ ಅನುಕೂಲಕ್ಕಾಗಿ ಮಾತ್ರ ವ್ಯವಸಾಯದ ಮಾದರಿಯನ್ನಷ್ಟೇ ಪರಿಗಣಿಸಲಾಗಿದೆ.

ಈ ಮಾದರಿಯಲ್ಲಿ ನಾಲ್ಕು ಬಗೆಗಳನ್ನು ಗುರುತಿಸಬಹುದು :

೧. ದೊಡ್ಡ ಜಮೀನುದಾರರು : ಇವರು ಕೂಲಿನಾಲಿಗಳನ್ನಿರಿಸಿಕೊಂಡು ವ್ಯವಸಾಯವನ್ನು ಸಾಗಿಸುತ್ತಾರೆ. ಸ್ವತಃ ಯಾವ ಹಂತದಲ್ಲೂ ದುಡಿಯುವುದಿಲ್ಲ.

೨. ಚಿಕ್ಕ ಜಮೀನುದಾರರು: ಸ್ವತಃ ಜಮೀನು ಮಾಡುತ್ತಾರೆ. ನಿರ್ದಿಷ್ಟ ಹಂತಗಳಲ್ಲಿ ಮಾತ್ರ ಕೂಲಿಗಳನ್ನಿರಿಸಿಕೊಳ್ಳುತ್ತಾರೆ. ಇವರು ದೊಡ್ಡ ಜಮೀನುದಾರರಿಂದ ಸ್ವಲ್ಪ ಭೂಮಿಯನ್ನು ಗುತ್ತಿಗೆಗೂ ಪಡೆದಿರಬಹುದು.

೩. ಗುತ್ತಿಗೆದಾರರು: ಜಮೀನನ್ನು ಗುತ್ತಿಗೆಗೆ ಪಡೆದು ದುಡಿಯುತ್ತಾರೆ. ಕೆಲವು ಸಮಯಗಳಲ್ಲಿ ಜಮೀನುದಾರರಲ್ಲಿ ತಾತ್ಕಾಲಿಕವಾಗಿ ಕೂಲಿಗಳಾಗಿಯೂ ದುಡಿಯುತ್ತಾರೆ.

೪. ಭೂವಿಹೀನ ಕೂಲಿಗಳು: ದಿನಗೂಲಿಗಳಾಗಿಯೋ, ನಿಶ್ಚಿತ ಹಂತಗಳಲ್ಲಿಯೋ ಜಮೀನುಗಳಲ್ಲಿ ಕೂಲಿಗಳಾಗಿ ದುಡಿಯುವವರು. (ಇಲ್ಲಿ ಜೀತಗಾರರನ್ನು ಪರಿಗಣಿಸಿಲ್ಲ). ಇಲ್ಲಿನ ಮೊದಲ ಮತ್ತು ನಾಲ್ಕನೆಯ ಗುಂಪುಗಳು ಮಾತ್ರ ನಿಶ್ಚಿತ ಗುಣದವು. ಮೂರು ಮತ್ತು ನಾಲ್ಕನೆಯ ಗುಂಪು ಪರಸ್ಪರ ಬೆರೆಯುತ್ತಲಿರುವಂಥವು.

ವ್ಯವಸಾಯ ಕ್ಷೇತ್ರದ ರೈತ ಸಮುದಾಯದಲ್ಲಿ ಸ್ತ್ರೀಪುರುಷರಿಗೆ ವಿಶಿಷ್ಟವೆಂದು ಗುರುತಿಸಲಾದ ಸ್ಪಷ್ಟ ಶ್ರಮ ವಿಭಜನೆ ಇದೆ. ಈ ವಿಭಜನೆ ಮನೆಯ ಒಳಗೂ ಮತ್ತು ಹೊರಗೂ ಅನ್ವಯವಾಗುತ್ತದೆ. ಎಲ್ಲ ಚಟುವಟಿಕೆಗಳೂ ಪರಸ್ಪರ ಪೂರಕವೆಂದು

ಪರಿಗಣಿತವಾಗುತ್ತವೆ. ವ್ಯವಸಾಯ ಒಟ್ಟಾರೆಯಾಗಿ ಒಂದು ಕುಟುಂಬದ ಚಟುವಟಿಕೆ ಎಂಬುದು ತುಂಬಾ ಗಮನಾರ್ಹವಾದ ಸಂಗತಿ. ಅಂದರೆ ರೈತನೊಬ್ಬ ಸ್ವತಃ ಮದುವೆಯಾದವನಿರಬೇಕು ಅಥವಾ ಅವನು ತನ್ನ ಮೂಲ ಕುಟುಂಬದ ಭಾಗವಾಗಿ ದುಡಿಯ ಬೇಕು. ಜಮೀನನ್ನು ಹೊಂದಿರುವ ಕುಟುಂಬವು, ಮನೆಯ ಮಗನು ಜಮೀನಿನಲ್ಲಿ ಬೇಸಾಯ ನಡೆಯುವ ಬಗ್ಗೆ, ಜಮೀನು ಕುಟುಂಬದ ಕೈಯಲ್ಲಿ ಭದ್ರವಾಗಿದೆ ಎಂಬ ಬಗ್ಗೆ ನಿಗಾ ವಹಿಸಬೇಕೆಂದು ನಿರೀಕ್ಷಿಸುತ್ತದೆ. ಕುಟುಂಬ ಮತ್ತು ಜಮೀನುಗಳ ಸಂಬಂಧ ಅತ್ಯಂತ ಗಾಢವಾದದ್ದು. ಕುಟುಂಬದ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳು ಅನಿವಾರ್ಯವಾಗಿ ಆದರ ಜಮೀನನ್ನೇ ಅವಲಂಬಿಸಿರುತ್ತದೆ. ಗ್ರಾಮದ ಸಂಪ್ರದಾಯಗಳು, ಪೂಜೆ ಪುನಸ್ಕಾರಗಳಂತಹ ಧಾರ್ಮಿಕ ವಲಯಗಳಿಗೂ ಈ ವರ್ಚಸ್ಸೇ ವ್ಯಾಪಿಸುವುದು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಇಡೀ ವ್ಯವಸಾಯ ವೃತ್ತಿ ಒಟ್ಟಾರೆಯಾಗಿ ಕುಟುಂಬದ ಚಟುವಟಿಕೆಯಾದ್ದರಿಂದ ಸ್ತ್ರೀ ಪುರುಷರಲ್ಲಿ ಅವಲಂಬನೆಎನ್ನುವುದು ಪರಸ್ಪರ ಅನಿವಾರ್ಯವಾಗುತ್ತದೆ. ವೃತ್ತಿಯಲ್ಲಿ ತೊಡಗುವುದೆಂದರೆ ಮದುವೆಯಾಗಲೇಬೇಕು ಎಂಬಂತಹ ಅನಿವಾರ್ಯ ಅಲ್ಲಿದೆ. ಗ್ರಾಮೀಣ ಭಾರತದಲ್ಲಿ ಗಂಡಸು ಸನ್ಯಾಸಿಯಾಗಿ ದೇಶಾಂತರ ಹೋಗಿಬಿಟ್ಟ ಹೊರತು ಅವಿವಾಹಿತನಾಗಿ ಉಳಿಯುವುದು ಅಸಾಧ್ಯ. ವಿಧುರನಾದವನೂ ತೀರಾ ಮುದುಕನೆನ್ನಿಸಿದ ಸಂದರ್ಭ ಬಿಟ್ಟು ಮರು ಮದುವೆ ಮಾಡಿಕೊಂಡೇ ಮಾಡಿಕೊಳ್ಳುತ್ತಾನೆ.

ಮೇಲಿನ ಎಲ್ಲ ವರ್ಗಗಳಲ್ಲೂ ಮಹಿಳೆಯ ಪಾಲಿನ ಕೆಲಸ ಮುಖ್ಯವಾಗಿ ಅಡಿಗೆ ಮಾಡುವುದು, ಬಡಿಸುವುದೇ ಆಗಿದೆ. ಅಡಿಗೆ ಕೆಲಸವೆಂದರೆ ಅದು ಕಾಳುಧಾನ್ಯಗಳನ್ನು ಚೊಕ್ಕ ಮಾಡುವುದು, ಕುಟ್ಟುವುದು, ಕೇರುವುದು, ಬೀಸುವುದು, ನೀರು ಹೊರುವುದು, ಉರುವಲು ಹೊಂದಿಸಿಕೊಳ್ಳುವುದು ಎಲ್ಲವನ್ನೂ ಒಳಗೊಳ್ಳುತ್ತದೆ. ಇನ್ನು ದನಕರು, ಮಕ್ಕಳುಮರಿ, ಅತಿಥಿ, ಅಭ್ಯಾಗತರು, ಆಳುಕಾಳುಗಳು, ಹಬ್ಬ ಹರಿದಿನಗಳು ಇಂತಹ ಬೇಕಾದಷ್ಟು ನಿರ್ವಹಣೆಗಳಂತೂ ಇದ್ದೇ ಇರುತ್ತವೆ. ಇವೆಲ್ಲದರ ಜೊತೆಗೆ ಜಮೀನಿನ ಕೆಲಸಗಳಿಗೂ ಅವಳು ಧಾವಿಸಬೇಕು. ಬಿತ್ತನೆ ಸಮಯಗಳಲ್ಲಿ ಅಪರಾತ್ರಿಯಲ್ಲೇ ಎದ್ದು ಮನೆಯ ಕೆಲಸಗಳನ್ನು ಮುಗಿಸಿಟ್ಟು, ನೀರಿನಲ್ಲಿ ಕಾಲುಗಳನ್ನು ಸತತವಾಗಿ ಮುಳುಗಿಸಿಕೊಂಡೇ ನಿಂತಿರಬೇಕಾದ ಬಿತ್ತನೆ ಕೆಲಸಕ್ಕೆ ತಯಾರಾಗಬೇಕು. ಸಂಜೆ ಮನೆಗೆ ಬಂದು ಮತ್ತೆ ಅಡಿಗೆ ಕೆಲಸಗಳಲ್ಲಿ ತೊಡಗಬೇಕು. ಬಿತ್ತನೆಯಂತೆಯೇ ಕಳೆ ಕೀಳುವ ಕೆಲಸವೂ ಮಹಿಳೆಯ ಪಾಲಿಗೇ ಬೀಳುವ ಕೆಲಸ. ಸುಗ್ಗಿಯ ಕಣದಲ್ಲಿ ಗಂಡಸರ ಜೊತೆ ಜೊತೆಯ ಕೆಲಸ. ಸುಗ್ಗಿ ಕಳೆಯಿತೆಂದರೆ ಭೂರಹಿತ ರೈತರಿಗಂತೂ ಬಿಡುವಿನ ವೇಳೆಯೆಂದೇನಿಲ್ಲ. ವಿವಿಧ ಕಾಮಗಾರಿಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಕೂಲಿ ಕೆಲಸ ಮಾಡಲು ಹೋಗುತ್ತಾರೆ.

ಮೇಲಿನ ವಿವರಣೆಯಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಕೃಷಿಯಲ್ಲಾಗಲೀ, ಇನ್ನಿತರ ಕೆಲಸಗಳಲ್ಲಾಗಲೀ ಒಳ ಮತ್ತು ಹೊರ ಕೆಲಸಗಳಲ್ಲಿ ಗಂಡಸು ಮತ್ತು ಹೆಂಗಸರಿಗೆ

ಅನ್ವಯವಾಗುವ ಶ್ರಮ ವಿಭಜನೆಯನ್ನು ನಿಯಂತ್ರಿಸುವ ಹಲವು ಸೂಕ್ಷ್ಮ ವಿಚಾರಗಳಿವೆ. ಗಂಡ ಹೆಂಡತಿಯರ ವರಮಾನಗಳಲ್ಲಿ ಇದು ನನ್ನದು, ಇದು ನಿನ್ನದು ಎಂಬ ಗೆರೆ ಸ್ಪಷ್ಟವಾಗಿದೆ. ಹೆಂಗಸಿಗೇ ಮೀಸಲಾದ ಉಪವೃತ್ತಿಗಳಿರುವಂತೆಯೇ ಅವುಗಳ ವರಮಾನವೂ ಅವಳಿಗೇ ಸೇರುವಂಥದ್ದು. ಉದಾಹರಣೆಗೆ ಕೋಳಿ ಸಾಕುವುದು, ಹಸು ಎಮ್ಮೆಗಳನ್ನು ಸಾಕುವುದಿರಬಹುದು. ಹೆಂಡತಿಯ ಹಣ, ಒಡವೆಗಳನ್ನು ಗಂಡನು ವಿಶೇಷ ಸಂದರ್ಭಗಳಲ್ಲಿ ಸಾಲದಂತೆ ಪಡೆದು ಬಳಸಿದರೂ, ಅದನ್ನು ಮತ್ತೆ ಅವಳಿಗೆ ಹಿಂತಿರುಗಿಸುವ ಹೊಣೆ ಅವನದಾಗಿರುತ್ತದೆ. ಅವಳ ಈ ಹಕ್ಕನ್ನು ಗ್ರಾಮೀಣ ಸಮಾಜವು ಸಮರ್ಥಿಸುತ್ತದೆ.

ಕೂಲಿನಾಲಿಗಳಲ್ಲಿ ಜಮೀನುದಾರ ಕುಟುಂಬದ ಹೆಂಗಸರು ತೊಡಗುವಂತಿಲ್ಲ. ಅಲ್ಲದೆ ಮೇಲು ಜಾತಿಯವರೂ ಕೂಡ ಎಂಥ ಕಷ್ಟಕಾಲದಲ್ಲೂ ಕೂಲಿಗೆ ಇಳಿಯುವಂತಿಲ್ಲ. ಜಮೀನುದಾರಿಕೆಯಿಂದಲೋ, ಜಾತಿಯಿಂದಲೋ ಮೇಲು ಸ್ತರಕ್ಕೆ ಸೇರಿದ ಕುಟುಂಬದ ಮಹಿಳೆಯರಿಗೆ ಸ್ವಂತ ಸಂಪಾದನೆ ಎಂಬುದು ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಇವರು ಕೆಲಸವಿಲ್ಲದೆ ಕುಳಿತ ಸೋಮಾರಿಗಳೆಂದೇನಲ್ಲ. ಇವರಿಗೆ ದುಡಿತವಿದೆ. ಸಂಪಾದನೆ ಇಲ್ಲ. ಕೆಳಸ್ತರದವರ ದುಡಿತಕ್ಕೆ ಸಂಪಾದನೆ ಇದೆ ಎಂದಷ್ಟೇ ಅರ್ಥ. ದೊಡ್ಡ ಜಮೀನುದಾರರು ಮತ್ತು ಅತ್ಯುಚ್ಚ ಜಾತಿಯವರಲ್ಲೇ ಒಟ್ಟು ಕುಟುಂಬಗಳ ಪರಿಪಾಠ ಹೆಚ್ಚು. ಈ ಕುಟುಂಬಗಳ ಹೆಂಗಸರಿಗೆ ಅಡಿಗೆ ಕೆಲಸವೇ ಅಗಾಧವಾದುದಾಗಿರುತ್ತದೆ. ಹಿರಿಯ ಹೆಂಗಸರಿಗೆ ನೇರವಾಗಿ ದೈಹಿಕ ಕೆಲಸ ಅಷ್ಟಾಗಿ ಇರದಿದ್ದರೂ ಮನೆಯ ಇಡೀ ಕೆಲಸ ಕಾರ್ಯಗಳನ್ನು ಅಲ್ಲಿನ ಜನಸಾಗರವನ್ನೂ ಹೊಂದಿಸಿಕೊಂಡು ಹೋಗುವಂತೆ ನಿರ್ವಹಿಸಬೇಕಾದ ವಿಪರೀತದ ಹೊಣೆ ಇರುತ್ತದೆ. ಇಲ್ಲಿನ ಹೆಂಗಸರು ಹಲವೊಮ್ಮೆ ಮನೆಯಲ್ಲಿನ ಪದಾರ್ಥಗಳನ್ನು ಗುಟ್ಟಾಗಿ ಮಾರಿ ಅಥವಾ ಚಿಕ್ಕಪುಟ್ಟ ರೀತಿಯಲ್ಲಿ ಲೇವಾದೇವಿ ವ್ಯವಹಾರಗಳನ್ನು ನಡೆಸಿ ಕೈ ಹಣವನ್ನು ಹೊಂದಿಸಿಕೊಳ್ಳುತ್ತಾರೆ.

ಜಮೀನುದಾರಿಕೆ ಮತ್ತು ಜಾತಿಗಳೇ ನಮ್ಮ ಹೆಂಗಸರ ಸ್ಥಿತಿಗತಿಗಳ ಪ್ರಧಾನ ಸೂಚಕ ಸಂಗತಿಗಳಾಗಿ ಪ್ರವರ್ತಿಸುತ್ತಾ ಇದ್ದದ್ದರಿಂದ ಸ್ವಲ್ಪ ಮಟ್ಟಿಗೆ ಮೇಲಿನ ಲಕ್ಷಣಗಳು ಸ್ಥಿರವೆಂಬಂತೆ ಈಚಿನವರೆಗೂ ನಡೆದು ಬಂತು. ಭಕ್ತಿ ಚಳುವಳಿಯ ಸುಧಾರಣಾವಾದಿ ಚಿಂತನೆಗಳಿಂದ, ಬ್ರಿಟಿಷರು ಜಾರಿಗೊಳಿಸಿದ ರಾಜಕೀಯ ವ್ಯವಸ್ಥೆಗಳಿಂದ ಮಹಿಳೆಯರ ಸ್ಥಿತಿಗತಿಗಳಲ್ಲಿ ಒಂದು ಬಗೆಯ ಚಲನೆ, ಬದಲಾವಣೆ ಕಾಣತೊಡಗಿತು. ವೃತ್ತಿ ಕಸುಬುಗಳನ್ನಾಧರಿಸಿದ್ದ ಜಾತಿ ವ್ಯವಸ್ಥೆಯಲ್ಲಿ ವಿವಧ ಬಗೆಯ ವೈಪರೀತ್ಯಗಳು ಬೆರೆಯತೊಡಗಿದವು. ಬ್ರಿಟಿಷರ ರಾಜ್ಯ ವ್ಯವಸ್ಥೆಯಲ್ಲಿ ಮೇಲುಜಾತಿಯವರು ಮೊದ ಮೊದಲು ಫಲಾನುಭವಿಗಳೆನಿಸಿ ಸಾಮಾಜಿಕವಾಗಿ ಮೇಲು ಮೇಲಕ್ಕೆ ಚಲಿಸಿದರೆಂಬುದು ನಿಜವಾದರೂ, ಕ್ರಮೇಣ ರೈತಜಾತಿಗಳೇ ಮೊದಲಾಗಿ ಹತ್ತು ಹಲವು ಸಣ್ಣ ಸಮುದಾಯಗಳೂ ಹೀಗೆ ಚಲಿಸತೊಡಗಿದವು. ರಾಜಕೀಯ ಅಧಿಕಾರ, ಶಿಕ್ಷಣಗಳ ಅವಕಾಶಗಳನ್ನು ಪಡೆದು ಅಧಿಕಾರದ ವಿವಿಧ ಹಂತಗಳನ್ನು ಪ್ರವೇಶಿಸಿದರು.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಹಿಂದುಳಿದ ಜಾತಿ, ಪಂಗಡಗಳವರಿಗೂ ಈ ಅವಕಾಶ ವಿಸ್ತರಿಸಿತು. ಹಸಿರು ಕ್ರಾಂತಿಯಂತಹ ಸರ್ಕಾರಿ ಕಾರ್ಯ ವಿಧಾನಗಳಿಂದಾಗಿ ಗ್ರಾಮೀಣ ಕೃಷಿ ಚಟುವಟಿಕೆಯಲ್ಲಿ ಹೊಸ ಬದಲಾವಣೆಗಳು ಬಂದವು. ಆರ್ಥಿಕವಾಗಿ ಮುನ್ನಡೆಯ ತೊಡಗಿದ ಗ್ರಾಮೀಣ ಸಮಾಜದ ಕೆಲವು ಭಾಗಗಳು ನಗರದ ಮಧ್ಯಮ ವರ್ಗದ ಮತ್ತು ಮೇಲುಜಾತಿಯ ಜೀವನ ವಿಧಾನಗಳನ್ನು ಆರೋಪಿಸಿಕೊಳ್ಳತೊಡಗಿದವು. ಕೆಳಜಾತಿ ಹಾಗೂ ವರ್ಗಗಳು ಸರ್ಕಾರದ ಜಾತ್ಯಾತೀತ ಕಾರ್ಯಕ್ರಮಗಳಿಂದಾಗಿ ಆರ್ಥಿಕವಾಗಿ ಮುನ್ನಡೆದರೂ ಸಾಮಾಜಿಕ ಮನ್ನಣೆಗಾಗಿ ಮೇಲು ಜಾತಿಯ ಅನುಕರಣೆಗೆ ತೊಡಗಿ ತಮ್ಮ ವೃತ್ತಿ ಕಸುಬುಗಳಲ್ಲಷ್ಟೇ ಅಲ್ಲದೆ ಆಹಾರ, ದೇವರು ದಿಂಡಿರುಗಳಲ್ಲೂ ಬದಲಾವಣೆ ಗಳನ್ನು ತಂದರು.

ಕೃಷಿ ಸಮಾಜದಲ್ಲಿ ಮೇಲುಸ್ತರದ ಗಂಡಸರೂ, ಹೆಂಗಸರೂ ದೈಹಿಕ ಶ್ರಮಗಳಲ್ಲಿ ತೊಡಗುತ್ತಿರಲಿಲ್ಲವೆಂಬುದನ್ನು ಈ ಮೊದಲೇ ವಿವರಿಸಲಾಗಿದೆ. ದೈಹಿಕ ಶ್ರಮಕ್ಕೆ ಮೀಸಲಾಗಿದ್ದ ಕೆಳಸ್ತರದವರೂ ಕೂಡ ಮೇಲುಸ್ತರಕ್ಕೆ ಚಲಿಸಲು ಸಿಕ್ಕಿದ ಅವಕಾಶ ಗಳಿಂದಾಗಿ, ಮೇಲು ಜಾತಿಯ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದನ್ನು ಮೊದಲು ಮಾಡಿದಾಗ ಅವರ ಜೀವನ ವಿಧಾನದಲ್ಲಿ ಆದ ಬದಲಾವಣೆಗಳ ತೀವ್ರ ಸ್ವರೂಪಗಳು ಮಹಿಳೆಯರಲ್ಲೇ ಹೆಚ್ಚು ವ್ಯಕ್ತವಾದವು. ಮೇಲು ಜಾತಿಯಲ್ಲಿ 'ಮಡಿ'ಯ ಕಲ್ಪನೆ ಅತಿ ಸೂಕ್ಷ್ಮ ಬಗೆಯದು. ಈ ಮಡಿ ಮೈಲಿಗೆಗಳೇ ಪ್ರಧಾನವಾದ ಸಂಪ್ರದಾಯದ ಹಲವು ಆಚರಣೆಗಳು ವರ್ಷದುದ್ದಕ್ಕೂ ಹರಡಿರುತ್ತವೆ. ಕುತೂಹಲಕರ ಸಂಗತಿಯೆಂದರೆ ಮನೆಯಲ್ಲಿ ಈ ಮಡಿ ಮೈಲಿಗೆಗಳ ಸಂರಕ್ಷಣೆಯ ಪೂರ್ಣ ಹೊಣೆಯನ್ನು ಮಹಿಳೆಯರೇ ವಹಿಸುತ್ತಾರೆ. ಸಂಪ್ರದಾಯದ ಆಚರಣೆಗಳ ಸಂರಕ್ಷಕರೆನಿಸಿ ಮಹಿಳೆಯರು ಕೆಲಮಟ್ಟಿನ ಅಧಿಕಾರಗಳನ್ನು ಪಡೆಯುತ್ತಾರೆ. ಮನೆಯಲ್ಲಿ ನಡೆಯುವ ಯಾವುದೇ ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಯರು ಪ್ರಧಾನ ಪಾತ್ರ ವಹಿಸುತ್ತಾರೆ. ಮಹಿಳೆಯರು ನೇರವಾಗಿ ಭಾಗವಹಿಸದ ಕೆಲವು ಆಚರಣೆಗಳಿವೆಯಾದರೂ, ಪೂರ್ವ ಸಿದ್ಧತೆಯ ಹಂತದ ಭಾಗವಹಿಸುವಿಕೆಯಾದರೂ ಅವರಿಗೆ ಇದ್ದೇ ಇರುತ್ತದೆ. ಪಾತ್ರೆ, ಬಟ್ಟೆ, ಮನೆ ಮುಂತಾದವನ್ನು 'ಮಡಿ' ಮಾಡುವ, 'ಮಡಿ'ಯಲ್ಲಿ ಅಡಿಗೆ ಮಾಡಿ ಒದಗಿಸುವ ರೀತಿಯ ಕೆಲಸಗಳು. ಪೂಜೆ, ಆಚರಣೆಗಳಿಗೆ ಸಂಬಂಧಿಸಿದ ಸಕಲ ಸಾಮಗ್ರಿಗಳನ್ನು ಅಣಿ ಮಾಡಿಕೊಡುವ ಕೆಲಸವೂ ಅವಳದೇ. ಇನ್ನು ಹೆಂಡತಿಯು ಪಕ್ಕದಲ್ಲಿಲ್ಲದೆ ಪೂರ್ಣವಾಗದೆಂಬ ಬಗೆಯ ಅನೇಕ ಆಚರಣೆಗಳೂ ಇವೆ. ಅಲ್ಲದೇ, ಮಹಿಳೆ ಮಾತ್ರವೇ ಆಚರಿಸುವ ವ್ರತ ನಿಯಮಗಳೂ ಇವೆ. ಈ ಕೊನೆಯ ಬಗೆಯುದರಲ್ಲಿ ಸಾಮಾನ್ಯವಾಗಿ ಮಂತ್ರಗಳ ಬಳಕೆ ಇರುವುದಿಲ್ಲ. ಬದಲಿಗೆ ಸ್ತೋತ್ರ, ಹಾಡುಗಳು ಇರುತ್ತವೆ.

ಬಹುತೇಕ ಎಲ್ಲ ಹಿಂದೂ ವ್ರತಾಚರಣೆಗಳೂ ಲೌಕಿಕವಾದ ಆಸೆ ಆಕಾಂಕ್ಷೆಗಳನ್ನು ನೆರವೇರಿಸಿಕೊಳ್ಳುವ ಉದ್ದೇಶವನ್ನೇ ಹೊಂದಿವೆ. ಈ ಸಂದರ್ಭಗಳು ಮಹಿಳೆಯರು

ಸ್ನೇಹವಲಯಗಳಲ್ಲಿ ಸಾಮಾಜಿಕವಾಗಿ ಬೆರೆಯುವ ಅವಕಾಶಗಳನ್ನು ಕಲ್ಪಿಸುತ್ತವೆ. ವ್ರತಾಚರಣೆಗಳನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ಗಂಡಸು ಸಂಪೂರ್ಣವಾಗಿ ಹೆಂಗಸಿಗೆ ವಹಿಸಿಬಿಟ್ಟಾಗ ಅವಳಿಗೆ ಆದ ಅನುಕೂಲವೆಂದರೆ ಸ್ವಲ್ಪಮಟ್ಟಿಗೆ ಮನೆಯ ಕೇಂದ್ರದಲ್ಲಿ ಗಂಡಸಿಗಿಂತ ಹೆಚ್ಚಿನ ಅಧಿಕಾರ, ಮನ್ನಣೆ ದೊರೆತಂತಾದದ್ದು. ಇಲ್ಲಿ ಗಂಡಸು ಅವಳನ್ನು 'ಅರ್ಧಾಂಗಿ' ಎಂದು ಕರೆದು ಗೌರವಿಸಿದ್ದಾನೆ. ಆದರೆ ಹೆಂಗಸು ಮಾಡುವ ಈ ಎಲ್ಲ ವ್ರತಾಚರಣೆಗಳ ಉದ್ದೇಶ ಮನೆ, ಮಕ್ಕಳು, ಗಂಡ ಇವರ ಶ್ರೇಯೋಭಿವೃದ್ಧಿಗಾಗಿ ಮಾತ್ರ. ಅವಳದೆಂದು ಯಾವ ಪ್ರತ್ಯೇಕ ಆಕಾಂಕ್ಷೆಯೂ ಇಲ್ಲಿ ವ್ಯಕ್ತವಾಗುವುದಿಲ್ಲ. ಪೂಜೆಯ ಕೇಂದ್ರವೆಂದರೆ ಅವಳ ಯಜಮಾನನೂ, ದೈವವೂ ಆದ ಪತಿಯೇ. ಈ ಪತಿ ಕುಡುಕ, ಜೂಜುಕೋರನಾಗಿದ್ದರೂ ತನ್ನನ್ನು ಹಿಡಿದು ಸದೆ ಬಡಿಯುವವನಾದರೂ, ರೋಗಿಷ್ಠನೋ, ಅಂಗವಿಕಲನೋ ಆದರೂ 'ದೈವ' ವೇ ಆಗಿರುತ್ತಾನೆ.

ಗಂಡ ಹೆಂಡಿರ ಸಂಬಂಧವೆಂಬುದು ತೀವ್ರತರ ಅಸಮಾನತೆಯನ್ನು ಪ್ರತಿನಿಧಿಸುವ ಬಗೆಯದು. ಹೆಣ್ಣು ಮದುವೆಗೆ ಮುಂಚೆ ಶುದ್ಧ ಕನ್ನಿಕೆಯಾಗಿರಬೇಕು. ಮದುವೆ ಯಾಯಿತೋ ಅದೆಂಥದೇ ಸಂದರ್ಭದಲ್ಲೂ ಪತಿಯನ್ನು ಬಿಡುವಂತಿಲ್ಲ. ಇನ್ನು ವಿಧವೆಯಾಗಿ ಬಿಟ್ಟರೂ ಅವಳಿಗೆ ಅವನಿಂದ ಬಿಡುಗಡೆ ಇಲ್ಲ. ಅವನ ಹಿಂದೆಯೇ ಅವಳು ತನ್ನ ಸುಖ ಸರ್ವಸ್ವವನ್ನು ತ್ಯಜಿಸಿ ಬಳೆ, ಕುಂಕುಮ, ಮಾಂಗಲ್ಯ, ಬಣ್ಣದ ಸೀರೆಗಳಂತಹ ದಿನ ನಿತ್ಯದ ಸಂತೋಷದ ಅಲಂಕಾರಗಳನ್ನೂ ತೆಗೆದು ಹಾಕಿ ಬಿಡಬೇಕು. ಕೇಶ ಮುಂಡನ, ಒಪ್ಪತ್ತಿನ ಊಟಗಳಂತಹ ನಿರ್ಬಂಧಗಳಿಗೂ ಒಳಗಾಗಬೇಕು. ಉಳಿದ ಬಾಳಿನುದ್ದಕ್ಕೂ ಅಪವಿತ್ರಳೆನಿಸಿ ದಿನಗಳೆಯುವುದು ಅವಳ ಹಣೆ ಬರಹ. ಆದರೆ ಇವೆಲ್ಲ ಅನ್ವಯ ವಾಗುವುದು ಮೇಲು ಜಾತಿಯವರಲ್ಲಿ ಮಾತ್ರ.

ಎಲ್ಲಾ ವ್ರತಾಚರಣೆ ಸಂಪ್ರದಾಯಗಳಲ್ಲಿ ಹೆಂಡತಿಯನ್ನು 'ಅರ್ಧಾಂಗಿ' ಎಂದು ವ್ಯವಹರಿಸುವ ಈ ಮೇಲು ಜಾತಿ ಪುರುಷ, ಆಕೆ ವಿಧವೆಯಾದಾಗ ಅವಳಿಂದ ಪೂರ್ಣ ಆತ್ಮವಿನಾಶವನ್ನು ನಿರೀಕ್ಷಿಸುತ್ತಾನಾದರೆ, ತಾನು ವಿದುರನಾದಾಗ ತನ್ನ ಮೇಲೆ ಈ ನಿರ್ಬಂಧವನ್ನು ಹೇರಿಕೊಳ್ಳುವುದಿಲ್ಲ. ಬದಲಿಗೆ 'ಗೃಹಕೃತ್ಯ' ಗಳು ಸಾಂಗವಾಗಿ ನೆರವೇರಬೇಕೆಂಬ ನೆಪದಲ್ಲಿ ವಿಳಂಬ ಮಾಡದೆ ಮರು ಮದುವೆಯಾಗಿ ಬಿಡುತ್ತಾನೆ. ಜಾತಿಯ ಸ್ತರ ಕೆಳಗಿನದಾಗುತ್ತಾ ಈ ಪಕ್ಷಪಾತದ ನ್ಯಾಯನಿರ್ಣಯವಿಲ್ಲವೆಂಬುದು ಗಮನಾರ್ಹ. ಅಲ್ಲಿ ಹೆಣ್ಣಿನ ಶೀಲ, ಅವಳ ಮರು ಮದುವೆ, ಸಮಯ ಬಂದರೆ ಗಂಡನನ್ನು ಬಿಡುವ ಹಕ್ಕು- ಇವೆಲ್ಲವನ್ನೂ ಗಂಡಿಗೆ ಸಮಾನವಾಗಿಯೇ ನಿರ್ಣಯಿಸಲಾಗುತ್ತದೆ.

ದೇಶದ ರಾಜಕೀಯ ಹಾಗೂ ಆರ್ಥಿಕ ರಂಗಗಳಲ್ಲಾದ ಬದಲಾವಣೆಗಳಿಂದಾಗಿ ವ್ಯಾಪಿಸತೊಡಗಿದ ನಗರೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯ ಸ್ಥಿತಿಗತಿಗಳಲ್ಲಿ ತೀವ್ರತರ ಬದಲಾವಣೆಗಳು ಕಾಣಲಾರಂಭಿಸಿದೆ. ಮಹಿಳೆಗೆ ದೊರಕಿದ ಶಿಕ್ಷಣ ಹಾಗೂ ಉದ್ಯೋಗದ

ಅವಕಾಶಗಳಿಂದಾಗಿ ಅವಳೀಗ ಪುರುಷನಿಗೆ ಸಮಾನವಾದ ಸ್ಥಾನಮಾನಗಳಲ್ಲಿ ಪ್ರವೇಶಗಳನ್ನು ಪಡೆಯುತ್ತಿದ್ದಾಳೆ. ನಗರದ ಮಹಿಳೆಯು ದಕ್ಕಿಸಿಕೊಳ್ಳುತ್ತಿರುವ ಹೊಸ ಹೊಸ ಪಾತ್ರಗಳನ್ನು ಪುರುಷನು ಅನಿವಾರ್ಯವಾಗಿ ಒಪ್ಪಬೇಕಾಗಿದೆ.

ಹಾಗೆ ನೋಡಲು ಹೋದರೆ ಇಂದಿಗೂ ಶಿಕ್ಷಣ, ಉದ್ಯೋಗಗಳಲ್ಲಿ ಮಹಿಳೆಯರ ಪ್ರವೇಶ, ಸಾಧನೆಗಳು ಅಷ್ಟೇನೂ ತೀವ್ರವಾಗಿಲ್ಲವೆಂಬುದನ್ನು ಅಂಕಿ ಅಂಶಗಳು ತೋರಿಸಬಲ್ಲವು. ಆದರೂ ಮಹಿಳೆಯ ಸ್ಥಿತಿಗತಿಗಳಲ್ಲಿ ಕಾಣುತ್ತಿರುವ ಮೇಲುಚಲನೆ ನಿರ್ಲಕ್ಷಿಸುವಂಥದ್ದೂ ಅಲ್ಲ. ಅವಳ ಸ್ಥಿತಿಗತಿಗಳು ಅನಾದಿಕಾಲದಿಂದಲೂ ಎಂಬಷ್ಟು ಹಿಂದಿನಿಂದಲೂ ಚಲನೆಯೇ ಸಾಧ್ಯವಿಲ್ಲವೆಂಬಷ್ಟು ಜಡವಾಗಿಬಿಟ್ಟಿದ್ದಾಗ, ದೇಶದ ಸ್ಥಿತಿ ಗತಿಗಳಲ್ಲಿ ಕಾಣಿಸಿದ ಪ್ರಧಾನ ಬದಲಾವಣೆಯಾಗಿ 'ನಗರೀಕರಣ' ಮೊದಲಾದದ್ದು, ಪ್ರಾಸಂಗಿಕವಾಗಿ ಎಂಬಂತೆ ಮಹಿಳೆಯ ಸ್ಥಿತಿಗತಿಗಳಿಗೂ ಹೊಸದೊಂದು ಚಾಲನೆಯನ್ನು ಒದಗಿಸಿಬಿಟ್ಟಿದ್ದು ನಿಜ. ಮನೆಯ ನಾಲ್ಕು ಗೋಡೆಗಳಿಂದ ಪಾರಾಗಿ ಬರಲು ದಾರಿಯೊಂದು ನಿರ್ಮಾಣವಾದದ್ದೂ ನಿಜ.

ನಗರೀಕರಣ ಪ್ರಕ್ರಿಯೆಯು ಪುರುಷನ ಜೀವನ ಶೈಲಿಯಲ್ಲೂ ಬದಲಾವಣೆಯನ್ನು ತಂದಿತು. ಶಿಕ್ಷಣಕ್ಕೆ ತೆರೆದುಕೊಂಡ ಯುವಕನು ತನ್ನ ಮನೆಯ ವೃತ್ತಿ ಕಸುಬು ಕೃಷಿಗಳಿಗೆ ಹಿಂತಿರುಗಿ ಹೋಗಲು ಅಸಾಧ್ಯವಾಗಿ ಬಿಡುತ್ತದೆ. ಅವನ ಶಿಕ್ಷಣಕ್ಕೆ ಅನುಗುಣವಾದ ಉದ್ಯೋಗಾವಕಾಶ ಹಳ್ಳಿಯಲ್ಲಿ ಸಾಧ್ಯವಿಲ್ಲ, ಹಳ್ಳಿಯಲ್ಲಿನ ವೃತ್ತಿಗೆ ತಕ್ಕ ತರಬೇತಿಯಿಂದ ಅವನು ದೂರ ಬಂದುಬಿಟ್ಟಿದ್ದಾನೆ. ಇದು ಅವನ ಸಂದಿಗ್ಧ. ಆದರೂ ಈಗೀಗಿನ ಸರ್ಕಾರಿ ಕಾರ್ಯಯೋಜನೆಗಳು, ಉಳುವವನೇ ಭೂಮಿಯ ಒಡೆಯನಾಗುತ್ತಾನೆ ಎಂಬಂತಹ ಕಾನೂನುಗಳು ಶಿಕ್ಷಿತ ಯುವಜನರನ್ನೂ ಹಳ್ಳಿಗಳಿಗೆ ಆಕರ್ಷಿಸುವುದರಲ್ಲಿ ಸ್ವಲ್ಪ ಮಟ್ಟಿಗೆ ನೆರವಾಗುತ್ತಿವೆ. ಆ ಮಾತಿರಲಿ.

ಇಷ್ಟಾದರೂ ಹೆಣ್ಣು ಮತ್ತು ಗಂಡು ಮಕ್ಕಳ ಬಗೆಗಿನ ನಮ್ಮ ಸಾಮಾಜಿಕ ಅಭಿಪ್ರಾಯಗಳಿಂದಾಗಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನೂ ಮುಂದುವರೆಸುವುದೇನೂ ಸಹಜದ ಮಾತಲ್ಲ. ವಾಸ್ತವದಲ್ಲಿ ಶಿಕ್ಷಣದ ಉನ್ನತ ಹಂತಗಳನ್ನು ತಲುಪಿದ ಹೆಣ್ಣು ಮಕ್ಕಳ ಸಾಧನೆ ಸಾಮರ್ಥ್ಯಗಳು ಗಂಡು ಹುಡುಗರನ್ನು ಮೀರಿಸುತ್ತಿದೆ ಎಂಬ ಅಂಕಿ ಅಂಶಗಳೇನೋ ಇವೆ. ಇಷ್ಟಾದರೂ ಅವಳ ಶಿಕ್ಷಣಕ್ಕೆ ಕುಟುಂಬದಲ್ಲೇ ಹಲವು ಕಂಟಕಗಳಿವೆ. ಅಷ್ಟೇನೂ ಬುದ್ಧಿವಂತನಲ್ಲದ ಮಗ, ರ್‍ಯಾಂಕ್ ಪಡೆವ ಮಗಳು -ಇವರಿಬ್ಬರಲ್ಲಿ ಉನ್ನತ ಶಿಕ್ಷಣದ ಅವಕಾಶ ದೊರೆಯುವುದು ಮೊದಲು ಮಗನಿಗೆ. ಉಳಿದರೆ ಮಗಳಿಗೆ, ಕೆಲವೊಮ್ಮೆ ಆರ್ಥಿಕ ಅನುಕೂಲವಿದ್ದರೂ ಜಾಸ್ತಿ ಓದಿದರೆ ಗಂಡು ಸಿಗಲಾರನೆಂಬ ಕಾರಣ ಅವಳ ಅವಕಾಶವನ್ನು ಮೊಟಕು ಮಾಡುತ್ತದೆ. ಗಂಡ-ಹೆಂಡತಿಯರಲ್ಲಿ ಯಾವ ಬಗೆಯಲ್ಲೂ ಹೆಂಡತಿ ಗಂಡನನ್ನೂ ಮೀರಿಸುವಂತಿರಬಾರದು. ಅವಳ ಜಾತಿಯಲ್ಲಿ ಹೆಚ್ಚು ಓದಿದ

ಗಂಡಸರು ಇಲ್ಲವೆಂದರೆ ಇವಳ ಓದು ಮುಂದುವರೆಯುವುದಿಲ್ಲ. ಇನ್ನೊಂದು ವಿಪರ್ಯಾಯದ ಕಾರಣದಲ್ಲಿ ಅವಳು ಒಂದು ಹಂತಕ್ಕಾದರೂ ಓದುವುದೂ ಅಪೇಕ್ಷಣೀಯ ವೆನಿಸಿಬಿಡುತ್ತವೆ. ಮಧ್ಯಮ ವರ್ಗದ ಎಲ್ಲ ವರಗಳೂ ತಮ್ಮ ಆದಾಯಕ್ಕೆ ಪೂರಕವಾಗಿ ಹೆಂಡಂದಿರ ವರಮಾನವಿರಲಿ ಎಂದು ಅಪೇಕ್ಷಿಸುತ್ತಾರೆ. ಇಲ್ಲಿ ಹೆಣ್ಣು ಓದಿರಲೂ ಬೇಕು, ಹಾಗೆಂದು ವರನ ಓದನ್ನು ಮೀರಿ ಅವನ ನೌಕರಿಯ ಸ್ತರವನ್ನು ಮೀರಿ ಮುಂದೆ ಹೋಗಿ ಬಿಡಬಾರದು. ಇವೆಲ್ಲ ನಗರದ ಮಧ್ಯಮ ವರ್ಗದ ಮೇಲುಜಾತಿಯ ಸಮುದಾಯಗಳಿಗೇ ಹೆಚ್ಚಾಗಿ ಅನ್ವಯವಾಗುತ್ತಿದೆ ಎಂಬುದು ನಿಜವಾದರೂ, ಉಳಿದ ಜಾತಿ ವರ್ಗಗಳಿಗೂ ಈ ಲಕ್ಷಣ ಹಬ್ಬುತ್ತಿದೆ ಎಂಬುದು ತೀರಾ ಅಸ್ಪಷ್ಟವಾಗೇನೂ ಉಳಿದಿಲ್ಲ.

ಶಿಕ್ಷಣ, ಉದ್ಯೋಗ, ನಗರೀಕರಣದಂತಹ ಆಧುನಿಕ ಪ್ರಕ್ರಿಯೆಗಳಲ್ಲಿ, 'ಮದುವೆ'ಗಾಗಿ ನಡೆಯುವ ಆಯ್ಕೆಯ ಅವಕಾಶಗಳೂ ಸಂಕೀರ್ಣಗೊಳ್ಳುತ್ತಿವೆಯಾಗಿ, ಜಾತಿ ಜಾತಿಗಳ ಒಳಪ್ರಭೇದಗಳಲ್ಲಿ ಅದೊಂದು ಬಗೆಯ ಒಡಂಬಡಿಕೆಯೂ ತೋರತೊಡಗಿದೆ. ಸಣ್ಣ ಸಣ್ಣ ಗುಂಪುಗಳು ಒಂದಾಗುವುದಕ್ಕೆ ಸಮುದಾಯದ ಒಪ್ಪಿಗೆಯೂ ದೊರೆಯಲಾರಂಭಿಸಿದೆ. ಈಗಿನ ಜೀವನ ಶೈಲಿಯ ಆಯ್ಕೆಯಲ್ಲಿ ಶಿಕ್ಷಣ, ವರ್ಗ, ಅಂತಸ್ತುಗಳೇ ಮುಖ್ಯವೆನಿಸಿ ಜಾತಿ ಸಂಬಂಧಗಳಂತಹ ಸಂಗತಿಗಳನ್ನು ಪಕ್ಕಕ್ಕೆ ಸರಿಸುವ ಅಂಶಗಳಾಗುತ್ತವೆ.

ಹೀಗೆಂದಾಗ ಮಹಿಳೆಯರಿಗೆ ದೊರೆಯುವ ಶಿಕ್ಷಣಾವಕಾಶಗಳು ಬಹುಮಟ್ಟಿಗೆ ಒಳ್ಳೆಯ ಗಂಡನನ್ನು ಹುಡುಕುವ ಉದ್ದೇಶದ್ದಾಗಿರುತ್ತದೆ ಎಂಬ ಮಾತೇ ಪ್ರಧಾನವಾದುದು. ಸರ್ಕಾರದ ಕಾಯಿದೆ ಕಾನೂನುಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯ, ಸವಲತ್ತುಗಳನ್ನು ಮೀಸಲಿರಿಸಬಹುದು. ತಂದೆ ತಾಯಿಯರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆ ಕಾಲೇಜುಗಳಿಗೆ ಕಳಿಸಲೂಬಹುದು. ಆದರೆ ಸೂಕ್ತ ವರನನ್ನು ಪಡೆಯುವಷ್ಟಕ್ಕೆ ಆವಳ ಶಿಕ್ಷಣ ಸೀಮಿತವಾಗಿಬಿಡುತ್ತದೆ. ಆ ಹುಡುಗಿ ಪದವಿ ಪಡೆಯುತ್ತಾಳೆ. ವರನಿಗೆ ಅಗತ್ಯವಾದರೆ ಪೂರಕ ಸಂಪಾದನೆಗಾಗಿ ನೌಕರಿ ಸೇರುತ್ತಾಳೆ. ಇಲ್ಲವೇ ಅವನ ಮನೆಯ ಅಲಂಕಾರವಾಗಿ ಕಲಿತದ್ದನ್ನು ಪಕ್ಕಕ್ಕಿಟ್ಟು ಜೀವನ ಸಾಗಿಸುತ್ತಾಳೆ. ವರನ ಸ್ಥಾನಮಾನ ಏರುತ್ತಾ ಹೋದಂತೆ ಹುಡುಗಿ ಅತ್ಯುನ್ನತ ಪ್ರತಿಭೆ, ಪದವಿಗಳನ್ನು ಪಡೆದಿದ್ದರೂ ಅವನ್ನೆಲ್ಲ ಉಪ್ಪಿನಕಾಯಿ ಹಾಕಿಟ್ಟು ಬದುಕಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲೂ ಕ್ರಮೇಣದ ಬದಲಾವಣೆಗಳಾಗುತ್ತಿವೆ. ಡಾಕ್ಟರ್, ಇಂಜಿನಿಯರ್, ಐಎಎಸ್ ವರರು ಅದೇ ಸ್ತರದ ವಧುಗಳನ್ನು ಅಪೇಕ್ಷಿಸತೊಡಗಿದ್ದಾರೆ. ಆದರೆ ಈ ಗುಂಪಿಗೆ ಸೇರಿದ ಭಾಗ್ಯಶಾಲಿಗಳು ಇಡೀ ಭಾರತದಲ್ಲಿ ಕೇವಲ ಕೆಲವರು. ಉಳಿದ ಪ್ರಧಾನ ಜನಸಮುದಾಯ ಈ ಗುಂಪನ್ನು ಒಂದು ಬಗೆಯ ಅಸೂಯೆಯಿಂದ, ಬೆರಗಿನಿಂದ ಕಾಣಬಹುದಷ್ಟೆ.

ಭಾರತದ ಮಹಿಳೆಗೆ ಒದಗಿ ಬಂದ ಶಿಕ್ಷಣಾವಕಾಶಕ್ಕೆ ವಿಚಿತ್ರವಾದೊಂದು ಚರಿತ್ರೆ ಇದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಸುಧಾರಣಾವಾದಿಗಳಿಂದಾಗಿ ಮಹಿಳೆಗೆ

ಶಿಕ್ಷಣಾವಕಾಶಗಳು ತೆರೆದುಕೊಳ್ಳಲಾರಂಭಿಸಿದ್ದು. ಉನ್ನತ ಜಾತಿಗಳಲ್ಲಿ ಎಳೆಯ ವಯಸ್ಸಿನ ವಿಧವೆಯರಿಗೆ ಜೀವನದ ಗುರಿಯೊಂದನ್ನು ಕಾಣಿಸುವ ಪ್ರಯತ್ನವಾಗಿ ಕಲ್ಕತ್ತದ ಅಂದಿನ ಸುಧಾರಣಾವಾದಿಗಳು ಈ ಮಹಿಳೆಯರಿಗೆ ಶಿಕ್ಷಣದ ಅವಕಾಶ ದೊರೆಯುವಲ್ಲಿ ದೊಡ್ಡ ಪ್ರಯತ್ನಗಳನ್ನು ಮಾಡಿದರು. ಹಾಗೆ ನಮ್ಮ ಮಹಿಳೆಯರಲ್ಲಿ ಮೊದ ಮೊದಲು ಶಿಕ್ಷಣಾವ ಕಾಶಗಳು ದೊರೆತದ್ದು ಈ ಬಾಲ ವಿಧವೆಯರಿಗೆ. ಎರಡನೆಯದಾಗಿ ಉನ್ನತ ಪದವಿಗಳನ್ನು ಪಡೆದು ದೊಡ್ಡ ಹುದ್ದೆಗಳಲ್ಲಿದ್ದ ಪುರುಷರು ವಿದ್ಯೆಯ ಗಂಧವಿಲ್ಲದ ಹೆಣ್ಣುಗಳನ್ನು ಕಟ್ಟಿಕೊಂಡು ಏಗುವುದರಲ್ಲಿ ಬೇಸತ್ತರು. ಅಗಾಧವಾದ ಮಾನಸಿಕ, ಬೌದ್ಧಿಕ ಅಂತರಗಳ ಕಷ್ಟವನ್ನು ಸರಿಪಡಿಸಬೇಕೆಂದರೆ ವಿದ್ಯಾವತಿಯಾದ ಹೆಣ್ಣು ಬೇಕೆಂದು ಆಶಿಸತೊಡಗಿದರು. 'ಉನ್ನತ ವರಗಳೆನಿಸಿದ' ಇವರ ಅಪೇಕ್ಷೆಗಳಿಗನುಗುಣವಾಗಿ ಹೆಣ್ಣು ಮಕ್ಕಳ ಮನೆಯವರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆ ಕಾಲೇಜುಗಳಿಗೆ ಕಳಿಸುವುದೂ ಅನಿವಾರ್ಯವಾಯಿತು. ಈ ವಿದ್ಯಾವತಿಯರು ನೌಕರಿಗಳನ್ನು ಅಪೇಕ್ಷಿಸುವ ವರ್ಗವಾಗದೆ, ಮನೆಯ ಗೌರವ ಹಾಗೂ ಪರಂಪರೆಗಳನ್ನು ಕಾಯ್ದುಕೊಳ್ಳುತ್ತಾ ಮನೆತನದ ಪ್ರತಿಷ್ಠೆಗೆ ಧಕ್ಕೆ ಬಾರದಂತೆ ಮನೆಮಂದಿಯ ಹಿತಗಳನ್ನು ಸಂರಕ್ಷಿಸುವಲ್ಲಿ ಮುಂಚಿಗಿಂತಲೂ ಹೆಚ್ಚು ಸಮರ್ಥರೆನಿಸಿ ಬಾಳುವ ಗುಣವತಿಯರಾಗುತ್ತಾರೆಂಬ ಸಾಮಾಜಿಕ ನಿರೀಕ್ಷೆ ಇದ್ದೇ ಇತ್ತು.

ವರದಕ್ಷಿಣೆಯ ಅಪಠಾವತಾರಗಳು ಹಾಗೂ ಪರಿಣಾಮಗಳನ್ನು ಕುರಿತ ಚರ್ಚೆ ಕೊನೆಮೊದಲಿಲ್ಲದೆ ನಡೆಸಬಹುದಾದದ್ದು. ಆದರೆ ಪ್ರಸಕ್ತದಲ್ಲಿ ವರದಕ್ಷಿಣೆಯು ಭಾರತದ ಮಹಿಳೆಯ ಶಿಕ್ಷಣವನ್ನು ಕುರಿತಂತೆ ಬೀರಿದ ಪರಿಣಾಮವನ್ನು ಸ್ವಲ್ಪ ಗಮನಿಸಬಹುದು. ನಮ್ಮಲ್ಲಿ ಬಹುಮಟ್ಟಿಗೆ ಹಿಂದೆ ಪ್ರಚಲಿತವಿದ್ದದ್ದು ವಧೂದಕ್ಷಿಣೆಯ ಪದ್ಧತಿ. ಆದರೆ ಕ್ರಮೇಣವಾಗಿ ವರದಕ್ಷಿಣೆಯ ರೂಢಿ ಬಂದದ್ದಕ್ಕೇ ಹಲವು ಕಾರಣಗಳು ಕೂಡಿ ಬಂದವು. ಹುಡುಗಿಯ ಮದುವೆ ಆಕೆ ಋತುಮತಿಯಾಗುವ ಮೊದಲೇ ಆಗಬೇಕು ಎಂಬ ನಿಯಮ ವಿದ್ದದ್ದು ಹುಡುಗಿಯ ತಂದೆ ತಾಯಿಯರನ್ನು ದೊಡ್ಡ ಆತಂಕಕ್ಕೆ ಸಿಲುಕಿಸುವ ಸಂಗತಿ ಯಾಗಿಬಿಟ್ಟಿತು. ಜಾತಿಯೊಳಗೇ ಸೂಕ್ತ ವರನನ್ನು ಹುಡುಗಿ ದೊಡ್ಡವಳಾಗುವ ಮುಂಚೆ ಹುಡುಕುವ ಪ್ರಯಾಸವನ್ನು ಭರಿಸಲಾಗದೆ ಹುಡುಗಿಯನ್ನು ಕುರುಡ, ಕುಂಟ, ಮುದುಕ, ನಿರ್ಗತಿಕ -ಯಾರೆಂದರವರಿಗೆ ಒಪ್ಪಿಸುವುದು ಸಾಮಾನ್ಯವಾಗಿತ್ತು. ಆದರೆ ಈ ಪ್ರಶ್ನೆ ಅತಾರ್ಕಿಕ, ಅಸಹಜವೆಂಬಷ್ಟು ಕ್ರೂರವಾಗಿ ಬೆಳೆದುಬಿಟ್ಟಾಗ, ತಂದೆ ತಾಯಿಯರಲ್ಲಿ ಈ ನಿಯಮವನ್ನು ಪಾಲಿಸಲಾರೆವು ಎಂಬಂತಹ ಅಸಹಾಯಕತೆಯ ಮೂಲದ ಪ್ರತಿರೋಧ ಹುಟ್ಟಿತು. ಋತುಮತಿಯಾದ ಮೇಲೂ ಹೆಣ್ಣು ಮಗಳು ಮನೆಯಲ್ಲಿ ಉಳಿಯ ತೊಡಗಿದಳು. ಸಮಾಜವು ಕಣ್ಣು ಮುಚ್ಚಿದಂತೆ ನಟಿಸಬೇಕಾಯಿತು. ಸೂಕ್ತ ವರನ ಶೋಧನೆಯಲ್ಲಿ ದಕ್ಷಿಣೆಯನ್ನು ಕೊಡುವ ರೂಢಿ ಬಂತು. ವರದಕ್ಷಿಣೆ ಹಾಗೂ ಮದುವೆಯ ಇತರ ಖರ್ಚುಗಳನ್ನು ಹೊಂದಿಸಿಕೊಳ್ಳಲು ವಧುವಿನ ತಂದೆಗೆ ಸಾಕಷ್ಟು ಸಮಯಾವಕಾಶ ಬೇಕಿತ್ತು. ಈ ಮಧ್ಯೆ ಬೆಳೆದ ಹುಡುಗಿಯನ್ನು ಸುಮ್ಮನೆ ಇಟ್ಟುಕೊಳ್ಳುವುದು ಕಷ್ಟವೆಂಬ

ಕಾರಣಕ್ಕೆ, ಮದುವೆಯಾಗುವವರೆಗೆ ಶಾಲೆ ಕಾಲೇಜಿಗೆ ಹೋಗಲಿ ಎಂಬಷ್ಟಕ್ಕೆ ಬಂತು. ಈ ಕಲಿತ ಹೆಣ್ಣುಗಳನ್ನು ಬಯಸುವ ವಿದ್ಯಾವಂತ ಗಂಡುಗಳೂ ಇದ್ದೇ ಇದ್ದರು. ವರದಕ್ಷಿಣೆಯು ಬೆಳೆ ಬೆಳೆಯುತ್ತಾ ಹುಡುಗಿಯರ ಮದುವೆಯ ವಯಸ್ಸು ಕೂಡ ಹೆಚ್ಚುತ್ತಲೇ ಹೋಗ ಬೇಕಾಯಿತು. ಇದೂ ಕೂಡ ಹುಡುಗಿಯರ ಶಿಕ್ಷಣಾವಕಾಶಕ್ಕೆ ಕಾರಣವಾಗಿ ಒದಗಿ ಬಂದಿ ತೆಂಬುದು ಗಮನಾರ್ಹ.

ಇನ್ನು ಗಾಂಧಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ನಾಡಿನ ಮಹಿಳೆಯರನ್ನು ತೊಡಗಿಸಿದ್ದರ ಪರಿಣಾಮದಿಂದಾಗಿ ಭಾರತದ ಮಹಿಳೆಯರ ಸ್ಥಿತಿಗತಿಗಳಲ್ಲಿ ಆದ ಬದಲಾವಣೆಗಳೂ ಕೂಡ ಗಮನಾರ್ಹ. ಒಟ್ಟು ಚಳುವಳಿಯ ಪರಿಣಾಮ ಎಂಬುದಕ್ಕಿಂತ ಅದರ ನೇತಾರರಾಗಿದ್ದ ಗಾಂಧಿಯವರ ವ್ಯಕ್ತಿತ್ವವೇ ಹೆಣ್ಣುಮಕ್ಕಳ ಹಾಗೂ ಅವರ ಕುಟುಂಬದವರ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದು. ಭಾರತೀಯರಿಗೆ ಗಾಂಧಿಯಲ್ಲಿ ಕಂಡದ್ದು ಸನ್ಯಾಸಿಯ, ಮಹಾತ್ಮನ ವ್ಯಕ್ತಿತ್ವ. ಆತನು ಹೆಣ್ಣು ಮಕ್ಕಳನ್ನು ಚಳುವಳಿಯಲ್ಲಿ ಭಾಗವಹಿಸಬೇಕೆಂದು ಕರೆ ಇತ್ತಿದ್ದಾನೆಂದರೆ ತಮ್ಮ ಹೆಣ್ಣು ಮಕ್ಕಳು ಖಂಡಿತವಾಗಿಯೂ ಭಾಗವಹಿಸಬಹುದು ಎಂಬ ಒಪ್ಪಿಗೆಗೆ ಇದು ಕಾರಣವಾಯಿತು. ಚಳುವಳಿಯು ಸ್ವಾತಂತ್ರ್ಯವನ್ನು ತಂದಿತು. ಬ್ರಿಟಿಷರು ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಿದರು. ಇವೆಲ್ಲ ಹಂತಗಳಲ್ಲಿ ಭಾಗಿಗಳಾಗಿದ್ದ ಮಹಿಳೆಯರಿಗೆ ಪ್ರಜಾಪ್ರಭುತ್ವದ ಕಲ್ಪನೆ ಅಂತರ್ಗತವಾಗುವುದು ಸಾಧ್ಯವಾಯಿತು. ಒಟ್ಟು ಪ್ರಕ್ರಿಯೆಯಲ್ಲಿ ಮಹಿಳೆಯರು ಪ್ರಜಾ ಪ್ರತಿನಿಧಿಗಳಾಗಿ ಅಧಿಕಾರಗಳನ್ನು ವಹಿಸಿಕೊಂಡರು. ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿಲ್ಲ ದಿದ್ದರೂ, ಭಾರತದ ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ಪ್ರಧಾನವಾದ ಅವಕಾಶಗಳು ನಮ್ಮ ಮಹಿಳೆಯರಿಗೆ ತೆರೆದುಕೊಂಡವು. ಕ್ರಮೇಣವಾಗಿ ರಾಜಕೀಯ ಕ್ಷೇತ್ರದ ಎಲ್ಲ ನೆಲೆಗಳಲ್ಲೂ ನಮ್ಮ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಲಾರಂಭಿಸಿದರು.

ಭಾರತದ ಮಹಿಳೆಯರು ಇಲ್ಲಿನ ರಾಜಕೀಯ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಅದೆಷ್ಟು ಸಹಜವಾಗಿ ಬೇರೂರಿ ಬೆಳೆದು ಬರುತ್ತಿದ್ದಾರೆಂಬುದು ತುಂಬಾ ಸಂತೋಷದ ಹಾಗೂ ಕುತೂಹಲದ ಸಂಗತಿ. ಇಂಥ ಮಹಿಳೆಯರು ಬಹುಮಟ್ಟಿಗೆ ನಗರದ ಮಧ್ಯಮ ವರ್ಗದ ಮೇಲು ಜಾತಿಗಳಿಗೇ ಸೇರಿದ್ದಾರೆಂಬುದೇನೋ ನಿಜವೇ. ಮಹಿಳೆಯ ಈ ಮುನ್ನಡೆಯನ್ನು ತಡೆಯುವ ಪ್ರಯತ್ನಗಳು ಪರೋಕ್ಷವಾಗಿ ನಡೆಯುತ್ತಲೇ ಇವೆ. ಪುರುಷ ಪ್ರಧಾನ ವ್ಯವಸ್ಥೆಗೆ ಇದನ್ನು ಅಷ್ಟು ಸಹಜವಾಗಿ ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲದಿರ ಬಹುದು. ಆದರೆ ಮಹಿಳೆಯ ಮುನ್ನಡೆಯು ವಿವಿಧ ಜಾತಿ, ವರ್ಗ, ಗ್ರಾಮಗಳ ಹಂತಕ್ಕೂ ವಿಸ್ತರಿಸುತ್ತಾ ಸಾಗಿರುವುದನ್ನು ಈ ಸಮಾಜವು ಅನಿವಾರ್ಯವಾಗಿಯಾದರೂ ಒಪ್ಪಿಕೊಳ್ಳಲೇ ಬೇಕಾಗಿದೆ.

ಭಾರತದ ಶಿಕ್ಷಿತ ಮಹಿಳೆಯರು ಅತ್ಯಂತ ಜವಾಬ್ದಾರಿಯ ಉದ್ಯೋಗ ನೌಕರಿಗಳಲ್ಲಿದ್ದು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ತಮ್ಮ ಎಂದಿನ ಹೊಣೆಯನ್ನು ಬಿಡದೆ ಉತ್ತಮ ಗೃಹಿಣಿಯರಾಗಿಯೂ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಂಬುದು ಪ್ರಶಂಸನೀಯ. ಎರಡೆರಡು ಹೊಣೆಗಳನ್ನು ಹೀಗೆ ನಿಭಾಯಿಸುವಲ್ಲಿ ಈ ಶಿಕ್ಷಿತ ಮಹಿಳಾ ವರ್ಗಕ್ಕೆ ನೆರವಾಗಿ ಒದಗಿರುವವರು ಶಿಕ್ಷಿತರಲ್ಲದ ವರ್ಗದವರಾದ ಮನೆಗೆಲಸದ ಹೆಣ್ಣಾಳುಗಳು. ಸಮಯ ಸಂದರ್ಭಗಳಲ್ಲಿ ಸಂಬಂಧಿಕರಾದ ಹೆಂಗಸರು. ಹೆರಿಗೆ, ಬಾಣಂತನಗಳಂತಹ ಕಷ್ಟ ಸಮಯಗಳಲ್ಲಿ ತಾಯಿಯೋ, ಅಕ್ಕನೋ ನೆರವಾಗುತ್ತಾರೆ. ವಿದೇಶಗಳಿಗೆ ಹೋಗಿ ನೆಲೆಸಿರುವ ಮಹಿಳೆಯರು ಹೆರಿಗೆ ಬಾಣಂತನಗಳಿಗೆ ತಾಯಿ, ಅತ್ತೆ, ಅಕ್ಕ ಹೀಗೆ ಯಾರನ್ನಾದರೂ ಕರೆಸಿಕೊಳ್ಳುವ ಪ್ರಸಂಗಗಳು ಹೆಚ್ಚುತ್ತಿವೆ. ಇಂತಹ ನೆರವಿನಿಂದಾಗಿ ಉದ್ಯೋಗಸ್ಥ ಮಹಿಳೆಯರು ಬಲು ಬೇಗನೆ ಚೇತರಿಸಿಕೊಂಡು ತಮ್ಮ ಕೆಲಸಗಳಿಗೆ ಹಿಂತಿರುಗುವುದು ಸಾಧ್ಯವಾಗುತ್ತದೆ.

ಕ್ರಮೇಣ ಶಿಕ್ಷಣ, ಉದ್ಯೋಗಾವಕಾಶಗಳು ಹೆಚ್ಚು ವ್ಯಾಪ್ತಿಯ ಮಹಿಳೆಯರಿಗೆ ದೊರಕುವಂತಾದಾಗ ಮನೆಗೆಲಸದ ನೆರವಿಗೆ ಹೆಣ್ಣಾಳುಗಳು ದೊರೆಯುವುದು ಕಷ್ಟವಾಗಬಹುದು, ಎಲ್ಲರೂ ಉದ್ಯೋಗ ನೌಕರಿಗಳಲ್ಲಿ ತೊಡಗುವಂತಾಗಿ ಕಷ್ಟ ತಾಪತ್ರಯಗಳ ಸಂದರ್ಭಗಳಿಗೆ ಧಾವಿಸಿ ಬರುವುದು ನೌಕರಿಗಳಲ್ಲಿರುವ ತಾಯಿಯರಿಗೂ ಸಾಧ್ಯವಾಗದಿರಬಹುದು -ಇವೆಲ್ಲದರ ನಡುವೆಯೂ ಭಾರತದ ಮಹಿಳೆಯು ಹೊಸ ಹೊಸ ಉಪಾಯಗಳನ್ನು ಹುಡುಕಿಕೊಳ್ಳುತ್ತಲೇ ತನ್ನ ಹೊಸ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾಳೆ. ಗೃಹಕೃತ್ಯದ ಹೊಣೆಗಾರಿಕೆಯನ್ನು ಸಂಭಾಳಿಸುತ್ತಿದ್ದಾಳೆ. ಪರಂಪರೆಯನ್ನು ಕಾಯ್ದು ಸಂರಕ್ಷಿಸುವ ಕರ್ತವ್ಯದೊಂದಿಗೆ ಆಧುನಿಕತೆಯನ್ನು ಸಮನ್ವಯಗೊಳಿಸುತ್ತಲೇ ಸಾಗಿರುವ ಭಾರತೀಯ ನಾರಿಯ ಮುನ್ನಡೆ ತೀರಾ ತ್ರಾಸದಾಯಕವಾದದ್ದೇನೋ ಹೌದು. ಆದರೆ ಮುಂದಿನ ಪೀಳಿಗೆಗೆ, ಒಟ್ಟಾರೆ ಸಮಾಜಕ್ಕೆ ಭರವಸೆಯನ್ನೊದಗಿಸುವ ಸಂಗತಿ ಇದೊಂದೇ ಆಗಿದೆ. ಭಾರತದ ನಾರಿಯ ಈ ಆದರ್ಶದ ಹೋರಾಟ ಅವಳ ವಿಕಸನಕ್ಕೂ, ಸಮಾಜದ ಒಳಿತಿಗೂ ಒಟ್ಟಿಗೇ ಮಾರ್ಗವನ್ನು ನಿರ್ಮಿಸುತ್ತಿದೆ. ಆಚಾರ ವಿಚಾರಗಳಲ್ಲಿ ಸಂಪ್ರದಾಯಗಳ ಸ್ಥೂಲವಿವರಗಳಲ್ಲಿ ಮೊದಲಿನಷ್ಟು ತೀವ್ರತೆ ಸಾಧ್ಯವಿಲ್ಲದೆ ಹೋಗುತ್ತಿರುವುದನ್ನಷ್ಟೇ ಗಮನಿಸಿ ಒಟ್ಟು ಸಂಸ್ಕೃತಿಗೇ ಏನೋ ದೊಡ್ಡ ಪ್ರಮಾದ ಸಂಭವಿಸುತ್ತಿದೆ ಎಂಬಂತೆ, ಇದಕ್ಕೆಲ್ಲ ಮಹಿಳೆಯೇ ಕಾರಣ ಎಂಬಂತೆ ಕೆಲವರು ದಾಂಧಲೆಯನ್ನೆಬ್ಬಿಸುತ್ತಿದ್ದಾರೆ.

ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಭಾರತೀಯ ಮಹಿಳೆ ಅಂದಿಗೂ ಇಂದಿಗೂ ಕುಟುಂಬದ ಸಂರಕ್ಷಣೆಯ ಭಾರವನ್ನು, ಬರಲಿರುವ ಪೀಳಿಗೆಯನ್ನು ಸಮರ್ಥವಾಗಿ ಸಂಗೋಪನೆ ಮಾಡುವ ಹೊಣೆಯನ್ನು ಪ್ರಧಾನವಾಗಿಯೇ ಪರಿಗಣಿಸಿ ನಡೆದಿದ್ದಾಳೆಂಬುದು

ತಿಳಿಯುತ್ತದೆ. ತನ್ನ ವ್ಯಕ್ತಿತ್ವ ವಿಕಸನಕ್ಕೆ ಹೊರಗಿನ ಉದ್ಯೋಗ ನೌಕರಿಗಳು ನೆರವಿಗೆ ಬರುವ ಬಹುತೇಕ ಸಂದರ್ಭಗಳನ್ನು ಕೂಡ ಬಿಟ್ಟುಕೊಡಲು ಅವಳು ತಯಾರಾಗಿಯೇ ಇರುತ್ತಾಳೆ. 'ಮಹಿಳೆಯರು ಸ್ವಂತದ ಸಾಧನೆಗಳ ಮೇಲೆ ತಾವಾಗಿಯೇ ನಿರ್ಬಂಧಗಳನ್ನು ಹೇರಿ ಕೊಂಡಿದ್ದಾರೆ' ಎಂದು ಈ ಸಂದರ್ಭವನ್ನು ಖ್ಯಾತ ಸಮಾಜ ಶಾಸ್ತ್ರಜ್ಞೆ ನೀರಾದೇಸಾಯಿ ವಿವರಿಸಿದ್ದಾರೆ. ನಮ್ಮ ಮಹಿಳೆಯರ ಪಾಲಿಗೆ ಉದ್ಯೋಗ ಎಂದರೆ ಒಂದು ನೌಕರಿ ಎಂದಷ್ಟೇ ಹೊರತು, ಅದು ತಮ್ಮ ಸಾಧನೆಯ ಕ್ಷೇತ್ರ, ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡು ಬೆಳೆಯಬೇಕಾದ ಅವಕಾಶ ಎನ್ನುವಂಥದ್ದಾಗಲಾರದು. ತನ್ನ ಸಂಸಾರದಲ್ಲಿ ಹೆಂಡತಿಯಾಗಿ, ತಾಯಿಯಾಗಿ, ಗೃಹಿಣಿಯಾಗಿ ತಾನು ನಿರ್ವಹಿಸಬೇಕಾದ ಹೊಣೆಯನ್ನೇ ಅವಳು ಪ್ರಧಾನವಾಗಿ ಭಾವಿಸಬೇಕಾಗುತ್ತದೆಯಾಗಿ, ಹೊರಗೆ ಸ್ವತಂತ್ರ ಜವಾಬ್ದಾರಿಯ ಉನ್ನತ ಹುದ್ದೆಗಳನ್ನು ಒಪ್ಪಿಕೊಳ್ಳಲು ಹೋಗುವುದಿಲ್ಲ. ಅವಳು ಉನ್ನತ ಪದವಿಗಳನ್ನು, ಅರ್ಹತೆಗಳನ್ನು ಹೊಂದಿದ್ದರೂ ಪೂರ್ಣ ಕಾಲದ ಅಧ್ಯಾಪನ ಸಂಶೋಧನೆಗಳ ಅವಕಾಶಗಳನ್ನು ಸರಿಸಿ ಅರೆ ಕಾಲಿಕ ಅಧ್ಯಾಪಕಿಯಾಗುತ್ತಾಳೆ. ವೈದ್ಯ, ನ್ಯಾಯ ಶಾಸ್ತ್ರಗಳಂತಹ ವಿಶೇಷ ಪರಿಣತಿಯನ್ನು ಬೇಡುವ ಕ್ಷೇತ್ರಗಳಲ್ಲಿನ ಪದವಿಗಳಲ್ಲಿ ರ್‍ಯಾಂಕ್, ಪಡೆದ ಪ್ರತಿಭಾವಂತೆಯರೂ ತಮ್ಮ ವೃತ್ತಿಗಳಲ್ಲಿ ಸ್ವತಂತ್ರವಾಗಿ ತೊಡಗಿ ಬೆಳೆಯುವ ಅವಕಾಶಗಳನ್ನು ನಿರಾಕರಿಸಿ ಯಾವುದೋ ನರ್ಸಿಂಗ್ ಹೋಂನಲ್ಲಿ, ಯಾರೋ ಲಾಯರಲ್ಲಿ ಸಹಾಯಕರೆನಿಸಿ ದುಡಿಯುವುದನ್ನು ಆಯ್ದುಕೊಳ್ಳುತ್ತಾರೆ. ಪ್ರತಿಭೆಯ ಪ್ರಕಾಶನಕ್ಕೆ ಅವಕಾಶವಿಲ್ಲ, ಸಂಪಾದನೆಯೂ ಅತ್ಯಲ್ಪ. ಆದರೇನು? ಮನೆಯ ಕಡೆ ನಿಗಾ ವಹಿಸಬೇಕೆಂದರೆ, ಇದು ಅನಿವಾರ್ಯ. ಉದ್ಯೋಗ ಕ್ಷೇತ್ರವು ನಿರೀಕ್ಷಿಸುವಷ್ಟು ವೇಳೆ, ಶ್ರಮ, ತಾಳ್ಮೆಗಳು ಅವಳ ಜೀವಿತದಲ್ಲಿ ಉಳಿದಿರುವುದೇ ಇಲ್ಲ. ಕಲಿತದ್ದು ಮರೆಯದಿರಲಿ ಎಂಬಷ್ಟಕ್ಕೆ ಅವಳು ತೃಪ್ತಿ ಕಾಣಬೇಕು. ಇಂದಿನ ದ್ವಿಪಾತ್ರ ನಿರ್ವಹಣೆಯ ಒತ್ತಡದಲ್ಲಿ ಮಹಿಳೆ ಸಿಲುಕಿ ಹೋಗಿರುವಾಗಲೂ, ತನ್ನ ಕ್ಷೇಮ ಚಿಂತನೆಯನ್ನೇ ಪ್ರಧಾನವಾಗಿ ಪರಿಗಣಿಸಿ ಮನೆಯ ಹೊರಗಿನ ಅವಕಾಶಗಳನ್ನು ಬಾಚಿಕೊಳ್ಳಲು ಹೋಗುತ್ತಿಲ್ಲ. ಮನೆಯ ಒಳಗಿನ ಪಾತ್ರಕ್ಕೆ ಧಕ್ಕೆ ಭಾರದಂತೆ ಏನನ್ನಾದರೂ ಸಾಧಿಸುವ ಸಾಧ್ಯತೆಗಳ ಬಗ್ಗೆ ಚಿಂತಿತಳಾಗಿದ್ದಾಳೆ. ಉದ್ಯೋಗಾವಕಾಶ ಎಂಬುದು ನಮ್ಮ ಮಹಿಳೆಯರ ಪಾಲಿಗೆ ಸದ್ಯಕ್ಕಂತೂ ವ್ಯಕ್ತಿವಿಕಸನದ ಅವಕಾಶಗಳೇನಲ್ಲ. ಪಡೆದ ಪದವಿ, ತರಬೇತಿಗಳನ್ನು ಒಂದಿಷ್ಟು ಬಳಕೆಯಲ್ಲಿ ಉಳಿಸುವುದು, ಸಂಸಾರವು ಆರ್ಥಿಕವಾಗಿ ಸಬಲವಾಗಲು ತನ್ನ ಕಾಣಿಕೆಯನ್ನು ಕೊಡುವುದು ಎಂಬಷ್ಟಕ್ಕೇ ಅವು ಉಳಿದಿವೆ. ಅವಳ ಈ ಸಂದರ್ಭವನ್ನು ಈ ಸಮಾಜವು ಸಹಾನುಭೂತಿಯಿಂದ ಗ್ರಹಿಸಿ ನೆರವಾಗುವ ಬದಲು ಅವಳು ದಡ್ಡಿ, ಅಸಮರ್ಥಳು ಎಂಬಂತೆ ವ್ಯಾಖ್ಯಾನಿಸುತ್ತದೆ. ಕೆಲವೊಮ್ಮೆ ಮನೆಯ ಒಳಗೂ, ಹೊರಗೂ ಒಟ್ಟೊಟ್ಟಿಗೆ ಈ ಆಕ್ಷೇಪಗಳಿಗೆ ಅವಳು ಗುರಿಯಾಗುತ್ತಾಳೆ. ಇನ್ನು ಇವೆಲ್ಲ ಸಂಘರ್ಷಗಳೇ ಬೇಡವೆಂದು ತನ್ನ ಕ್ಷೇತ್ರದಲ್ಲಿನ ಸಾಧನೆ, ತನ್ನ ವೃತ್ತಿಯ ಸಫಲತೆಗಳನ್ನೇ ಮಹಿಳೆಯು

ಮುಂದುಮಾಡಿಕೊಂಡರೆ ಮನೆ ಸಂಸಾರ ಮಕ್ಕಳು ಎಂಬ ಸುಖಗಳನ್ನು ತ್ಯಾಗ ಮಾಡಬೇಕಷ್ಟೆ. ಈ ಸಮಾಜ ವ್ಯವಸ್ಥೆ ಎಂದೆಂದೂ ಮಹಿಳೆಯಿಂದ ನಿರೀಕ್ಷಿಸುವುದು ತ್ಯಾಗವನ್ನೇ. ಅತ್ಯಾಧುನಿಕ ಗೃಹೋಪಕರಣಗಳು, ಕಂಪ್ಯೂಟರ್‌ಗಳು, ಹೊಸ ತಂತ್ರಜ್ಞಾನಗಳು ಆಧುನಿಕ ಮಹಿಳೆಯ ದೈನಂದಿನ ಗೋಳಾಟದಲ್ಲಿ ನೆರವು ನೀಡುತ್ತಿವೆ ಎಂಬುದೇನೋ ನಿಜ. ಆದರೂ ಅವಳು ನಿರ್ವಹಿಸಬೇಕಾಗಿರುವ ದ್ವಿ ಪಾತ್ರಗಳ ಮೂಲ ಸಾಮಾಜಿಕ ಆಶಯವೇ ಅವಳ ಮುಂದೆ ನಿಂತಿರುವ ದೊಡ್ಡ ಸವಾಲಾಗಿರುವುದು. ಸಮಾಜವು ಆರೋಗ್ಯಕರವಾಗಿ ಸಂತೃಪ್ತವಾಗಿ ಮುನ್ನಡೆಯುವಲ್ಲಿ ಕುಟುಂಬ ಸಂಸ್ಥೆಯ ಪಾತ್ರವೇ ಅತ್ಯಂತ ಮಹತ್ತರವಾದುದು. ಈ ಸಂಸ್ಥೆಯು ಸದೃಢವಾಗಿ ನಿಲ್ಲಬೇಕೆಂದರೆ ಮಹಿಳೆಯೇ ಮುಖ್ಯ ಕಾರಣ. ಎಂದಿನಿಂದಲೂ ಹೆಣ್ಣೇ ಮನೆಯ ಕೇಂದ್ರ ಶಕ್ತಿಯಾಗಿ ದುಡಿಯುತ್ತಾ ಬಂದಿದ್ದಾಳೆ. ಅವಳು ಆತ್ಮ ವಿಕಸನದ ಹಾದಿಯನ್ನು ಶೋಧಿಸುತ್ತಿರುವಾಗಲೂ ಮೂಲ ಕೇಂದ್ರವನ್ನು ಮರೆಯದೆ ಸಾಗಬೇಕೆಂಬ ಬಗ್ಗೆ ಪ್ರೀತಿಯನ್ನು ಹೊಂದಿದ್ದಾಳೆ. ಇಂದಿನ ಸಮಾಜವು ಅವಳನ್ನು ಕೃತಜ್ಞತೆಯಿಂದ ಕಾಣಬೇಕು ಎಂಬುದಕ್ಕೆ ಇದಕ್ಕಿಂತ ದೊಡ್ಡ ಕಾರಣ ಬೇಕಾಗಿಲ್ಲ. ಅಂಥಾದ್ದರಲ್ಲಿ ಅವಳನ್ನು ಛಿದ್ರಗೊಳಿಸಲು ಹೊಸ ಹೊಸ ಉಪಾಯಗಳನ್ನು ಹುಡುಕುತ್ತಾ ಸಾಗಿರುವ ಈ ಸಮಾಜದ ಎದುರು ಮಹಿಳೆ ಸವಾಲೆಸೆದು ನಿಲ್ಲುವ ಪ್ರತಿಭಟನೆಯ ಮಾದರಿಯಾಗಿ ಬೆಳೆಯುವುದು ಅನಿವಾರ್ಯವಾಗಿ ಬಿಡಬಹುದು. ಇದನ್ನು ಇನ್ನಾದರೂ ಈ ಸಮಾಜವು ಅರಿತು ಮಹಿಳೆಯನ್ನು ಮನ್ನಿಸಿ ಗೌರವಿಸಬೇಕು. ಪ್ರೀತಿ ಸಹಾನುಭೂತಿಗಳಿಂದ ಅವಳನ್ನು ಕಾಣುವುದು ಅವಳ ವಿಕಸನದ ಹಾದಿಗಳಿಗೆ ತೊಡಕಾಗದೆ ನೆರವಾಗುವುದು ಸಮಾಜದ ಏಳಿಗೆಯ ಅಗತ್ಯಗಳಾಗಿವೆ.

ಹಿಂದೂ ಮೇಲ್ಜಾತಿಯ, ನಗರ ಮಧ್ಯಮವರ್ಗದ ಮಹಿಳೆಯರ ಪ್ರಸ್ತಾಪವೇ ಇಲ್ಲಿನ ಚರ್ಚೆಯುದ್ದಕ್ಕೂ ಪ್ರಧಾನವಾಗಿ ಬಂದಿದೆ. ಈ ಮಾದರಿ ಕೇವಲ ಅಧ್ಯಯನದ ಅನುಕೂಲಕ್ಕಾಗಿ ಬಳಸಿದ್ದು. ಇದನ್ನು ಅನ್ವಯಿಸಿ ಚರ್ಚೆಯ ವ್ಯಾಪ್ತಿಯನ್ನು ವಿಸ್ತರಿಸುವ ಅಪಾರ ಸಾಧ್ಯತೆ ಈ ವಸ್ತುವಿನೊಳಗೆ ಇದ್ದೇ ಇದೆ. ಭಾರತೀಯ ಮಹಿಳೆಯ ಸ್ಥಿತಿಗತಿಗಳಲ್ಲಿ ಆಗುತ್ತಿರುವ ಬದಲಾವಣೆಗಳ ಸ್ವರೂಪವನ್ನು ಗ್ರಾಮಗಳಿಂದ ನಗರಗಳಿಗೆ ವಲಸೆ, ರಾಜಕೀಯದಲ್ಲಿ ಮಹಿಳೆಯರ ಪ್ರವೇಶ, ಶಿಕ್ಷಣಾವಕಾಶ, ಸುಧಾರಣಾವಾದಿಗಳ ಚಟುವಟಿಕೆಗಳು, ವರದಕ್ಷಿಣೆಯ ಅವತಾರಗಳು-ಇಂಥ ಸಂಗತಿಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಎಲ್ಲ ಜಾತಿ ವರ್ಗಗಳ ಮಹಿಳೆಯರೂ ಈ ಬದಲಾವಣೆಗಳಿಗೆ ಕ್ರಮೇಣವಾಗಿಯಾದರೂ ವ್ಯಾಪಿಸಿಕೊಳ್ಳುತ್ತಾ, ಒಗ್ಗಿಕೊಳ್ಳುತ್ತಾ ಸಾಗಿದ್ದಾರೆ ಎಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯಾಗಿದೆ.

ಮೊಲೆ ಮೂಡಿ ಬಂದರೆ ಹೆಣ್ಣೆಂಬರು

ಈ ಹೊತ್ತಿನ ನಮ್ಮ ಸ್ತ್ರೀವಾದಿ ಚಿಂತನೆಗಳಿಗೆ ಕೆಲವು ಹೊಸ ಆಯಾಮಗಳನ್ನು ಕಾಣಿಸುವ ಒಂದಿಷ್ಟು ಟಿಪ್ಪಣಿಗಳನ್ನು ಇಲ್ಲಿ ಮಾಡಲಾಗಿದೆ. ಅಮೇರಿಕದ 'ಟೈಮ್ಸ್' ಪತ್ರಿಕೆಯಲ್ಲಿ ಬಂದ 'ದ ರಿಯಲ್ ಟ್ರೂಥ್ ಅಬೌಟ್‌ದ ಫೀಮೇಲ್ ಬಾಡಿ' ಎಂಬ ಲೇಖನ ಈ ಬರಹಕ್ಕೆ ಮುಖ್ಯ ಪ್ರೇರಣೆ. Woman - female, Sex- Gender ಎಂಬ ಹಲವು ಸೂಕ್ಷ್ಮಗಳಲ್ಲಿ ಆಧುನಿಕ ಸ್ತ್ರೀವಾದಿ ಚಿಂತನೆಗಳು ನಡೆದಿರುವಾಗ, ಕನ್ನಡದ ಮಟ್ಟಿಗಂತೂ ಇವಕ್ಕೆ ಸೂಕ್ತವೆನಿಸುವ ಯಾವ ಪದಗಳನ್ನು ಬಳಸಬಹುದು ಎಂಬ ಗೊಂದಲವೂ ನಿವಾರಣೆಯಾಗಿಲ್ಲ. ನಮ್ಮ ಚಿಂತನೆಗಳು ಸೂಕ್ಷ್ಮವಾದವುಗಳಲ್ಲ ಎಂಬುದು ನನ್ನ ಅರ್ಥವಲ್ಲ. ಆದರೆ ಸೂಕ್ತ ಪರಿಭಾಷೆಯನ್ನು ರೂಪಿಸಿಕೊಳ್ಳದೆ ಹಲವು ಸಮಾನ ಚಿಂತನೆಗಳೊಂದಿಗೆ ಮುಖಾಮುಖಿಯಾಗಿ ನಿಂತು ಸಂಕಥನವನ್ನು ಬೆಳೆಸುವುದು ತೀರಾ ಕಷ್ಟವಾಗಿ ಬಿಡುತ್ತದೆ. ಇಲ್ಲಿನ ಟಿಪ್ಪಣಿಗಳಲ್ಲೂ ಪರಿಭಾಷೆಯ ಸಮಸ್ಯೆ ಇದ್ದೇ ಇದೆ. ಈ ಬರೆಹದ ಸಂದರ್ಭಕ್ಕೆ ಸೂಕ್ತವೆಂದು ತೋರಿದಂತೆ ರೂಢಿಯಲ್ಲಿರುವ ಪರಿಭಾಷೆಯೊಂದಿಗೆ ಹೊಸ ಪದಗಳನ್ನು ರೂಪಿಸಿಕೊಳ್ಳುವ ಯತ್ನವನ್ನು ಮಾಡಲಾಗಿದೆ. ಅದೂ ಸಾಲದೆ ಬಂದಾಗ ಇಂಗ್ಲಿಷನ್ನೇ ಬಳಸಿದ್ದೇನೆ. ಈ ಪರಿಭಾಷೆಯ ಬಗೆಗಿನ ಚರ್ಚೆಯನ್ನು ಸದ್ಯಕ್ಕೆ ಮುಕ್ತವಾಗಿಟ್ಟುಕೊಳ್ಳಬಹುದು. ಆ ಮಾತಿರಲಿ.

ಮಹಿಳೆ ಮತ್ತು ಹೆಣ್ಣು

ಮಹಿಳೆ ಅಥವಾ ಸ್ತ್ರೀ ಎಂದು ಕರೆಸಿಕೊಳ್ಳುವುದರಲ್ಲಿರುವ ಘನತೆ ಹೆಂಗಸು ಅಥವಾ ಹೆಣ್ಣು ಎಂದು ಕರೆಸಿಕೊಳ್ಳುವುದರಲ್ಲಿ ಕಡಿಮೆಯಾಗಿ ಬಿಡುತ್ತದೆ. ಇದು ಸಂಸ್ಕೃತ/ಕನ್ನಡ ಎಂಬ ಭಾಷಾ ತಾರತಮ್ಯಕ್ಕೆ ಸಂಬಂಧಿಸಿದ್ದು ಎಂದೇನಲ್ಲ. 'ಮಹಿಳೆ' ವ್ಯಕ್ತಿ ಎನಿಸಬಹುದಾದರೆ, 'ಹೆಣ್ಣು' ಅವಳ ದೇಹ ಲಕ್ಷಣಕ್ಕೆ ಪ್ರತಿನಿಧಿಯಾಗಬಹುದಾದಂಥದು. 'ಮಹಿಳೆ' ಗಣ್ಯಳು. ಮನೆತನ, ಅಧಿಕಾರ, ಸಾಮಾಜಿಕ ಸ್ಥಾನಮಾನಗಳನ್ನು ಪ್ರತಿನಿಧಿಸುವಾಕೆ. 'ಹೆಣ್ಣು' ಎಂದರೆ ತೀರಾ ನಗಣ್ಯಳು. ಮುಟ್ಟು, ಬಸಿರು, ಹೆರಿಗೆಗಳ ತಾಪತ್ರಯಗಳಲ್ಲಿ ರಕ್ತಹರಿಸುತ್ತಾ, ಮಾನವ ಸಂತತಿಯ ಪೈಕಿ ಅತಿ ಪುಟ್ಟದಾದ ಮೆದುಳಿನವಳೆನಿಸಿ, ಹಾಗಾಗಿ

ಎರಡನೆಯ ದರ್ಜೆಯವಳಾಗಿರುವ ಮಾನವ ಪ್ರಾಣಿ. ಅರಿಸ್ಟಾಟಲನಿಂದ ಹಿಡಿದು ಫ್ರಾಯ್ಡನವರೆಗಿನ gender ಕುರಿತ ಎಲ್ಲ ಚಿಂತನೆಗಳೂ, ಜೀವ ವಿಕಾಸವಾಗಲು ತೊಡಗಿದ ಅದ್ಭುತ ಮಥನದಲ್ಲಿ ಉದಿಸಿ ಬಂದದ್ದು ಏಕಮೇವ ಲಿಂಗ sex- ಅದು ಗಂಡು, ಹೆಣ್ಣಲ್ಲ - ಎಂಬುದನ್ನೇ ಪ್ರತಿಪಾದಿಸುತ್ತಾ ಬಂದಿದೆ.

ಜೀವವಿಜ್ಞಾನವಂತೂ ಮಾನವ ಸಂತತಿಯಲ್ಲಿ ಹೆಣ್ಣು ಗುಲಾಮಳು ಮಾತ್ರ ಎಂಬುದನ್ನು ಛಲ ಹಿಡಿದು ಹೇಳುತ್ತದೆ. ೬೦-೭೦ರ ದಶಕದ ಸಮಾಜೋ ಜೀವ ವಿಜ್ಞಾನಿಗಳೂ, ನಂತರ ೯೦ ರ ದಶಕದ ಜೀವವಿಕಾಸ ಮನೋವಿಜ್ಞಾನಿಗಳೂ ಈ ಹೆಣ್ಣು ತಳಿಯ ದರ್ಜೆಯನ್ನೇರಿಸುತ್ತೇವೆಂದರು. ಆದರೆ ಈ ಪ್ರಯತ್ನ ಮಾನವ ಜೀವ ವಿಕಾಸ ಸಿದ್ಧಾಂತಕ್ಕೆ ವ್ಯಭಿಚಾರದ ಬಣ್ಣ ಬಳಿಯುತ್ತಿದ್ದಾರೇನೋ ಎನ್ನುವಷ್ಟು ವಿಕಾರಕ್ಕೆ ತಿರುಗಿತು. ಏಕೆಂದರೆ ಈ ಚಿಂತನೆ 'ಇತಿಹಾಸ ಪೂರ್ವಯುಗದಲ್ಲಿ ಗಂಡು ಬೇಟೆಯಾಡುತ್ತಾ ಸ್ವಚ್ಛಂದವಾಗಿ ತಿರುಗುತ್ತಿದ್ದ. ಹೆಣ್ಣು ಇಂತಹ ಬೇಟೆಗಾರ ಗಂಡಿನ ಮೇಲೆ ಆಕ್ರಮಣ ನಡೆಸಿ ತನ್ನ ವಶದಲ್ಲಿರಿಸಿಕೊಂಡು ತನ್ನ ಲೈಂಗಿಕ ಅಗತ್ಯಗಳಿಗಾಗಿ ಬಳಸುತ್ತಿದ್ದಳು' ಎನ್ನುತ್ತದೆ. ಇಂದೂ ಕೂಡ ಮಾನವ ವಿಕಾಸದ ಚರಿತ್ರೆಯನ್ನು ಬಿಂಬಿಸುವ ಉದ್ದೇಶದ ಮ್ಯೂಸಿಯಂಗಳಲ್ಲಿ ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು ಬೇಟೆಯಾಡುತ್ತಿರುವ ಗಂಡುಗಳನ್ನೂ, ಬೆಂಕಿ ಕಾಯಿಸುತ್ತಾ ಮುದುರಿ ಕುಳಿತು ಮೊಲೆಯುಣಿಸುತ್ತಿರುವ ಹೆಣ್ಣುಗಳನ್ನೂ ಮಾದರಿಗಳಾಗಿ ಚಿತ್ರಿಸುವುದನ್ನು ಕಾಣಬಹುದು. ಪುರುಷ ಚಿಂತನೆಯ ಆಧುನಿಕ ಉದಾರನೀತಿಯು 'ಇಂಥ ಹೆಣ್ಣು ಇಂದು ಏನೆಲ್ಲವನ್ನೂ ಸಾಧಿಸಲು ಸಮರ್ಥಳಾಗುತ್ತಿದ್ದಾಳೆ' ಎಂದು ಚಕಿತಗೊಳ್ಳುತ್ತಲೇ 'ಏನಾದರೇನು, ಈ ಸಾಧನೆ ಮಾಡಬೇಕೆಂದರೆ ಅವಳು ತನ್ನೊಳಗಿನ ಹೆಣ್ಣನ್ನು ಇಲ್ಲವಾಗಿಸುವ ದುರಂತವಂತೂ ಇದ್ದೇ ಇದೆ.' ಎಂದು ವಿಷಾದವನ್ನೂ ವ್ಯಕ್ತ ಪಡಿಸುತ್ತದೆ.

'ಹೆಣ್ಣುತನ' ಎಂಬುದು ನಿಸರ್ಗದತ್ತ 'ಹೆಣ್ಣು ರಸಗ್ರಂಥಿಗಳ' ಫಲಿತವಾದ್ದರಿಂದ ಹೆಣ್ಣೆಂದರೆ ಇನ್ನೇನಾಗಲೂ ಸಾಧ್ಯವಿಲ್ಲ ಎಂಬ ತೀರ್ಪು ನೀಡುವ ಹಳೆಯ ಸಿದ್ಧಾಂತಗಳ ಬಗ್ಗೆ, ಹೊಸ ದೃಷ್ಟಿಕೋನದ ಸಂಶೋಧನೆಗಳು ಪ್ರಶ್ನೆಗಳನ್ನು ಕೇಳತೊಡಗಿವೆ ಎಂಬುದು ಆಶಾದಾಯಕವಾದ ಸಂಗತಿ. ಮಾನವ ಸಂತತಿಯ ಸಂದರ್ಭವನ್ನು gender ಆಧರಿಸಿ ವಿಭಜಿಸಿ ನೋಡುವ ಪ್ರವೃತ್ತಿಯನ್ನು ವಿರೋಧಿಸಲು ಈ ಚಿಂತನೆಗಳು ಆರಂಭಿಸಿವೆ. ಹೆಣ್ಣು ದೇಹದ ಋತುಚಕ್ರ, ಬಸಿರು, ಹೆರಿಗೆಗಳಂತಹ ಗುಣಲಕ್ಷಣಗಳನ್ನು ಅವಳ ದೌರ್ಬಲ್ಯಗಳೆಂದು ಗುರುತಿಸುವುದನ್ನು ಬಿಟ್ಟು, ಆ ಆವರ್ತಗಳೇ ಅವಳ ಶಕ್ತಿ ಸಂಕೇತಗಳು ಎಂದು ಒಪ್ಪಿಕೊಳ್ಳಲಾರಂಭಿಸಿವೆ. ಕೊನೆಗೆ ಅವಳ ಋತುಚಕ್ರ ಮುಕ್ತಾಯದ ಹಂತವನ್ನು ಕೂಡ 'ಅದು ಅವಳ ಶಕ್ತಿ ಸಾಧ್ಯತೆಗಳ ಕೊನೆಯಲ್ಲ, ಬದಲಿಗೆ ಅದು ಅವಳ ಶಕ್ತಿಸಾಧ್ಯತೆಯ ಹೊಸ ಹಂತ' ಎಂದೂ ಹೇಳುತ್ತದೆ. ಈವರೆಗೆ ವಿಕಾಸಸಿದ್ಧಾಂತದ ಮನೋವಿಜ್ಞಾನವು

'ಗಂಡು ಎಂದರೆ ಧೈರ್ಯದಿಂದ ಮುನ್ನುಗ್ಗುವ ಸ್ವಭಾವದ್ದು ಹಾಗೂ ಮುದ್ದಾದ ಪುಟಾಣಿ ಸಂಗತಿಗಳೆಂದರೆ ಆ ತಳಿಗೆ ತುಂಬಾ ಪ್ರಿಯ' ಎಂದು ವ್ಯಾಖ್ಯಾನಿಸುತ್ತಾ ಬಂದಿದೆ. ಇಂಥಾ ಶೋಧನೆಗಳು ತೀವ್ರ ಸವಾಲುಗಳನ್ನು ಇಂದು ಎದುರಿಸುತ್ತಿವೆ. ಶತಮಾನದ ಅಂಚಿನಲ್ಲಿ ನಿಂತು ಇಂದು ನಾವು 'ಮಹಿಳಾ ವಿಮೋಚನೆ' ಎಂಬ ಚಿಂತನೆಗೆ ವಿದಾಯ ಹೇಳುತ್ತಾ 'ಹೆಣ್ಣಿನ ವಿಮೋಚನೆ' ಎಂಬ ಚಿಂತನೆಯನ್ನು ಅಪ್ಪಿಕೊಳ್ಳುತ್ತಿದ್ದೇವೋ ಏನೋ! 'ಹೆಣ್ಣು ಜೀವ' ವೆಂದರೆ ಮಾನವ ಸಂತತಿಯಲ್ಲಿ 'ಕೆಳದರ್ಜೆ' ಯ ತಳಿ ಎಂಬಂತೆ ಈವರೆಗೆ ನೀಡಿದ ವಿವರಣೆಯನ್ನು ಪಲ್ಲಟಗೊಳಿಸುತ್ತಾ, ಹೆಣ್ಣಿನ ಈಸ್ಟ್ರೋಜನ್ ರಸಗ್ರಂಥಿ, ಅವಳ ಅಂಡಾಶಯ, ಅವಳ ಮೆದುಳಿನ ಕಾರ್ಟೆಕ್ಸ್-ಇವೇ ಮೊದಲಾದವು ಅವಳ 'ಶಕ್ತಿ ಕೇಂದ್ರ' ಗಳು ಎಂದು ಹೇಳತೊಡಗಿವೆ.

ಫೆಮಿನಿಸ್ಟ್ ಸಿದ್ಧಾಂತಗಳು

ಕನ್ನಡದಲ್ಲಿ ವಿವರಿಸಲು ಹೊರಟರೆ ಮತ್ತೆ ಪದಕೋಶದ ಸಮಸ್ಯೆ. ಈವರೆಗೆ ನಾವು 'ಫೆಮಿನಿಸ್ಟ್' ಎಂದರೆ 'ಸ್ತ್ರೀವಾದಿ' ಎಂದು ಬಳಸುತ್ತಿದ್ದೇವೆ. 'ದೇಹ ಕೇಂದ್ರಿತ' ವೆನ್ನುವಂತೆ ಬೆಳೆಯುತ್ತಿರುವ 'ಫೆಮಿನಿಸ್ಟ್' ಚಿಂತನೆಯನ್ನು 'ಸ್ತ್ರೀವಾದಿ' ಯಿಂದ ಬೇರೆಯಾಗಿ ಗುರುತಿಸದೆ ದಾರಿಯಿಲ್ಲ. ಇಂಗ್ಲಿಷಿನಲ್ಲಿ 'ಫೀಮೇಲಿಸ್ಟ್' ಬಳಕೆ ಇದೆ. ಇದನ್ನು ನಾವು 'ಹೆಣ್ಣು ವಾದಿ' ಎಂದರೆ ಸ್ವಲ್ಪ ಮುಜುಗರವಾಗಿ ಕೇಳಿಸಬಹುದೇನೋ. ಆದರೂ ಈವರೆಗಿನ gender ವ್ಯತ್ಯಾಸದ ಮೂಲತಂತ್ರ ಮುಖ್ಯವಾಗಿ 'ಸಂಸ್ಕೃತಿ ಚಿಂತನೆ' ಯಾಧಾರಿತವಾದದ್ದು, ಜೀನ್ಸ್ ಅಥವಾ ವಂಶವಾಹಿ ಸಂಗತಿಗಳ ನೆಲೆಯದ್ದಲ್ಲ ಎಂದು ವಿವರಿಸಬಹುದು. ಆಗ 'ವಂಶವಾಹಿ' ಯಂತಹ 'ವೈಜ್ಞಾನಿಕ' ಸಂಗತಿಗಳ ಬಗೆಗಿನ ಚಿಂತನೆಗಳನ್ನು 'ಸರಿಪಡಿಸಿ' ಪರಿಶೀಲಿಸುವುದೇ ಸಮಸ್ಯೆಯನ್ನು ಎದುರಿಸುವ ದಾರಿ ಎನ್ನಬೇಕಾಗುತ್ತಿದೆ. ಈವರೆಗಿನ 'ಫೆಮಿನಿಸ್ಟ್' ಚಿಂತನೆ 'ಸಮಾನತೆ'ಯ 'ಅವಕಾಶ' ವನ್ನು ಕುರಿತದ್ದಾಗಿದೆ. ಅಂದರೆ ರೂಢಿಯಲ್ಲಿರುವ 'ಸಾಮಾಜಿಕ ಚಿಂತನೆಗಳು' ಸ್ತ್ರೀ-ಪುರುಷರ ನಡುವೆ ಪೈಪೋಟಿಯನ್ನು ಸೃಷ್ಟಿಸಿ, ಈ ಪೈಪೋಟಿಯಲ್ಲಿ ಗೆಲ್ಲುವವರು ಪುರುಷರಾದ್ದರಿಂದ ಅವರೇ ಮಾನವ ಸಂತತಿಯಲ್ಲಿ ಶ್ರೇಷ್ಠರೆನ್ನಿಸುತ್ತಾರೆ ಎಂದು ತೀರ್ಮಾನಿಸಿಬಿಟ್ಟಿವೆ. ಆದರೆ ಈ ಪಂದ್ಯದ ನಿಯಮಗಳೇ ನ್ಯಾಯಬದ್ಧವಾಗಿಲ್ಲ. ಸಮಾನ ಅವಕಾಶಗಳನ್ನು ನಿರಾಕರಿಸಿ ಪುರುಷಪರವಾಗಿ ನಿಯಮಗಳನ್ನು ರೂಪಿಸಲಾಗಿದೆಯಾಗಿ ಈ ಆಟದ ನಿಯಮಗಳಲ್ಲಿ ಸೂಕ್ತ ಬದಲಾವಣೆಗಳನ್ನು ತರಬೇಕಾಗಿದೆ ಎಂಬುದು ಈವರೆಗಿನ ಸ್ತ್ರೀವಾದಿ ಚಿಂತನೆಯ ಮುಖ್ಯ ಎಳೆ. ಈ ಚಿಂತನೆ ನಿಜವಾಗಿಯೂ ಮಹಿಳೆಯ ವಿಮೋಚನೆಯ ದಾರಿಯನ್ನು ತೋರಬಹುದೇ ಎಂಬ ಬಗ್ಗೆ ಕೆಲವು ಪ್ರಶ್ನೆಗಳೇಳುತ್ತವೆ. ಏಕೆಂದರೆ ಅವಕಾಶಗಳನ್ನು 'ಗಳಿಸುವುದು' ಎಲ್ಲ ಮಹಿಳೆಯರಿಗೂ, ಎಲ್ಲ ದೇಶಕಾಲ ಹಾಗೂ ಸಂಸ್ಕೃತಿ ಪರಿಸರಗಳಲ್ಲೂ ಸಮಾನವಾಗಿ ಸಾಧ್ಯವಾಗಬಹುದಾದ ಕ್ರಿಯೆಯಾಗುವುದಿಲ್ಲ.

ಅಂದಮೇಲೆ ಮಹಿಳೆಯರಲ್ಲೇ ಅನಗತ್ಯ ತಾರತಮ್ಯಗಳು ಉದ್ಭವಗೊಂಡು ಒಳ ಪೈಪೋಟಿಗೆ ದಾರಿಯಾಗುವ ಅಪಾಯವೇ ಇದೆ. ಹಾಗಾಗಿ ಈ ತಂತ್ರ 'ಮಹಿಳಾ ವಿಮೋಚನೆ'ಗೆ ದಾರಿಯನ್ನು ಹುಡುಕುತ್ತಾ ಹೊರಟದ್ದಾದರೂ ಸ್ವಯಂಕೃತ ಬಂಧನವೇ ಆಗಿ ಬಿಡಬಹುದು. ಹಾಗಾದರೆ 'ವಿಮೋಚನೆ'ಯ ದಾರಿಯನ್ನು ಹುಡುಕುವ ಹೊಸ ತಂತ್ರವನ್ನು ನಾವೀಗ ರೂಪಿಸಬೇಕು. ಮಹಿಳೆಗೆ ನಮ್ಮ ಸಾಮಾಜಿಕ ಚಿಂತನೆಗಳು 'ಸಮಾನ ಅವಕಾಶ' ಗಳನ್ನು ನೀಡಿಲ್ಲ ಎಂಬುದನ್ನು ಪ್ರತಿಭಟಿಸುವ, ಅಂಥ ಅವಕಾಶಗಳನ್ನು 'ಗಳಿಸಲು' ಹೋರಾಡುವ ದಾರಿಯನ್ನು ಹೊಸ ಚಿಂತನೆಗಳು ಪ್ರಶ್ನಿಸುತ್ತಿವೆ.

ಹೆಣ್ಣು-ಗಂಡುಗಳ ಸಹಜ ಸಾಮರ್ಥ್ಯಗಳನ್ನು 'ವೈಜ್ಞಾನಿಕ' ಚಿಂತನೆಗಳು ಆಯಾ ತಳಿಗಳ ಗುಣಲಕ್ಷಣಗಳನ್ನಾಧರಿಸಿ ವ್ಯಾಖ್ಯಾನಿಸಿವೆ ಹಾಗೂ ಗಂಡು ತಳಿಯ ಲಕ್ಷಣಗಳನ್ನು ಗುಣಾತ್ಮಕವಾಗಿಯೂ, ಹೆಣ್ಣು ತಳಿಯುವನ್ನು ನೇತ್ಯಾತ್ಮಕವಾಗಿಯೂ ಪರಿಗಣಿಸಿ ಕ್ರಮವಾಗಿ ಸಶಕ್ತ-ಅಶಕ್ತ ಗುಂಪುಗಳೆಂದು ವಿಭಜಿಸಿ ತೀರ್ಮಾನಗಳನ್ನು ನೀಡಿವೆ. ಹೆಣ್ಣು, ಗಂಡು ತಳಿಗಳ ಗುಣಲಕ್ಷಣಗಳಲ್ಲಿ 'ವ್ಯತ್ಯಾಸ'ಗಳಿರುವುದೇನೂ ಸುಳ್ಳಲ್ಲ. ದೈಹಿಕ ಸಾಮರ್ಥ್ಯದಲ್ಲಿ ಮೇಲುನೋಟಕ್ಕೆ ಸಾಧಾರಣವಾಗಿ ಹೆಣ್ಣಿಗಿಂತ ಗಂಡು ಹೆಚ್ಚು ಬಲಶಾಲಿ ಎಂಬುದನ್ನು ನಿರಾಕರಿಸಲು ಕಾರಣಗಳಿಲ್ಲ. ತೂಕ, ಎತ್ತರ, ಶಕ್ತಿ ಎಲ್ಲದರಲ್ಲೂ ಅವನದೇ ಮೇಲುಗೈ. ಆದರೆ ದೇಹದ ಆಂತರಿಕ ಸಾಮರ್ಥ್ಯದ ಮಾತಿಗೆ ಬಂದರೆ ಇಲ್ಲಿ ಹೆಣ್ಣಿಗೇ ಗೆಲುವು, ದೇಹದ ಆಯಾಸವನ್ನು ಹೆಚ್ಚು ಹೊತ್ತು ತಡೆದುಕೊಳ್ಳುವ ಶಕ್ತಿ ಅವಳಲ್ಲೇ ಹೆಚ್ಚು. ಇತ್ತೀಚಿನ ಹಲವು ದಶಕಗಳಲ್ಲಿ ಮಹಿಳೆ ಕ್ರೀಡೆ, ಸೈನ್ಯ ವಿಭಾಗಗಳಂತಹ ಕ್ಷೇತ್ರಗಳಲ್ಲಿ ತೋರುತ್ತಿರುವ ಸಾಧನೆಗಳು ಅವಳ ಆಂತರಿಕ ಶಕ್ತಿ ಸಾಮರ್ಥ್ಯಗಳು ಪ್ರಕಟ ಗೊಳ್ಳಬಹುದಾದ ಸಾಧ್ಯತೆಗಳನ್ನು ಕುರಿತು ಸಾಕಷ್ಟು ಹೇಳುತ್ತಿವೆ. ಬರುವ ಶತಮಾನದಲ್ಲಿ ಗಂಡಿನ ಸಾಧನೆಗಳನ್ನು ಅತಿಕ್ರಮಿಸಿ ದಾಟುವ ಕುರುಹುಗಳನ್ನು ಅವಳು ತೋರುತ್ತಿದ್ದಾಳೆ.

ಗಂಡಿನಲ್ಲಿರುವ ಟೆಸ್ಟೋಸ್ಟರೋನ್, ಹೆಣ್ಣಿನಲ್ಲಿರುವ ಈಸ್ಟ್ರೋಜನ್ ರಸಗ್ರಂಥಿಗಳು ಆಯಾ ತಳಿಗಳನ್ನು ಪ್ರತ್ಯೇಕಿಸುವ ಮುಖ್ಯ ವೈಲಕ್ಷಣಗಳು ಎಂದು ಜೀವವಿಜ್ಞಾನ ಹೇಳುತ್ತಾ ಬಂದಿದೆ. ಆದರೆ ಬೆಳಕಿಗೆ ಬಂದಿರುವ ಹೊಸ ಶೋಧನೆಯೆಂದರೆ ಈ ಎರಡೂ ರಸಗ್ರಂಥಿಗಳೂ ಮಾನವ ಸಂತತಿಯ ಎರಡು ತಳಿಗಳಲ್ಲೂ ಇರುತ್ತವೆ. ಅಲ್ಲದೆ, ಈ ಪೈಕಿ ಈಸ್ಟ್ರೋಜನ್ ರಸಗ್ರಂಥಿಯೇ ಹೆಚ್ಚು ಚಟುವಟಿಕೆಯದು. ಸದಾಕಾಲ ದೇಹದ ಪ್ರತಿಯೊಂದು ಜೀವಕಣದೊಂದಿಗೂ ಪ್ರತಿಕ್ರಿಯೆಯಲ್ಲಿ ತೊಡಗಿರುವಂಥದು. ಜೀವಕಣಗಳೂ ಕೂಡ ಈ 'ಹೆಣ್ಣು' ರಸಗ್ರಂಥಿಗಳಿಗಾಗಿ ಪರಿತಪಿಸುತ್ತವೇನೋ. ಈ ರಸಗ್ರಂಥಿಯ ಕೊರತೆ ಗಂಡುಗಳಲ್ಲಿ 'ಪುರುಷತ್ವ' ದ ಕೊರತೆಗೂ ಆಸ್ಟಿಯೋಪೋರೋಸಿಸ್ ಎಂಬ ಕಾಯಿಲೆಗೂ ಕಾರಣವಾಗಬಹುದು. ಹೆಣ್ಣು ಟೆಸ್ಟೋಸ್ಟೆರೋನ್ ರಸಗ್ರಂಥಿಯನ್ನು ಸ್ರವಿಸುವುದು ಲೈಂಗಿಕ ಚೋದನೆಗೆ ಅಗತ್ಯ. ಸಾಮಾನ್ಯವಾಗಿ ಗಂಡುಗಳಲ್ಲಿ ಟೆಸ್ಟೋಸ್ಟೆರೋನ್ ಪ್ರಧಾನವಾಗಿ,

ಹೆಣ್ಣುಗಳಲ್ಲಿ ಈಸ್ಟ್ರೋಜನ್ ಪ್ರಧಾನವಾಗಿ ಇರುತ್ತದೆ ಎಂಬುದು ಒಂದು ಲಕ್ಷಣ ಎಂದ ಮಾತ್ರಕ್ಕೆ ಅವೆರಡರಲ್ಲಿ ಯಾವುದು ಶಕ್ತಿಯುತವಾದದ್ದು ಎಂಬ ತೀರ್ಮಾನವೇನೂ ಸಾಧ್ಯವಿಲ್ಲ.

ಎರಡೂ ಸೆಕ್ಸ್‌ಗಳಲ್ಲಿ ಕೆಲವು ಆದಿ ಭೌತಿಕ ದೇಹಲಕ್ಷಣಗಳಿರುವುದು ನಿಜ. ಆದರೆ ಯಾವ 'ಸೆಕ್ಸ್'ನ ಅಧಿಕಾರ ಚಲಾವಣೆ ನಡೆಯಬೇಕು ಎಂಬುದನ್ನೇನೂ ಇವು ನಿರ್ಧರಿಸುವುದಿಲ್ಲ. ಹೆಣ್ಣಿನ ದೇಹರಚನೆಯೇ ಸಾಮಾಜಿಕ ಅಗತ್ಯಗಳನ್ನು ಪೂರೈಸುವ ಉದ್ದೇಶದ್ದು. ಅವಳ ಗರ್ಭಾಶಯ ಪ್ರತಿ ತಿಂಗಳೂ ಶಿಶುವೊಂದಕ್ಕೆ ಆಶ್ರಯತಾಣವಾಗುವೆ ಎನ್ನುವ ನಿರೀಕ್ಷೆಯಿಂದ ಸಜ್ಜಾಗುತ್ತದೆ. ಆ ಮಗುವಿಗೆ ಮುಂದೆ ಸೂಕ್ತ ಆಹಾರವನ್ನೊದಗಿಸುವ ಸಿದ್ಧತೆಯಲ್ಲಿ ಅವಳ ಎದೆ ತುಂಬಿ ನಿಲ್ಲುತ್ತದೆ. ಹೆಣ್ಣಿನ ಕಣಕಣವೂ ಸಮುದಾಯದ ಹಿತಚಿಂತನೆಯಲ್ಲಿರುತ್ತದೇನೋ. ಹೆಣ್ಣುತಳಿ ತಾನೊಮ್ಮೆ ಸ್ವೀಕರಿಸಿದ ಭ್ರೂಣಕೋಶಗಳನ್ನು ಮಗುವಿನ ಜನನದ ನಂತರದ ಎಷ್ಟೋ ದಶಕಗಳವರೆಗೂ ಕೂಡ ತನ್ನ ರಕ್ತಧಾರೆಯಲ್ಲಿ ಜೀವ ಸಹಿತ ಕಾದಿಡಬಲ್ಲದು. ಇಂಥವನ್ನು ಹೆಣ್ಣಿಗೊಂದು ಹೊರೆ ಎನ್ನಬಹುದೇ, ಅಥವಾ ಅವಳ ಸಾಮರ್ಥ್ಯದ ಪರಿ ಎನ್ನಬಹುದೇ? ಋತುಚಕ್ರದ ಆರಂಭ ಮುಜುಗರದ, ಅವಹೇಳನದ, ದುಃಖದ ಸಂಗತಿಯೋ ಎಂಬಂತೆ ಸಂಶೋಧನೆಗಳು ಹೇಳುತ್ತಾ, ಈ ಸಂದರ್ಭವನ್ನು ಹೆಣ್ಣು ಅಳುಮುಖದಿಂದ ಎದುರಿಸಬೇಕೆಂಬಂತೆ ಮಾಡಿಟ್ಟಿವೆ. ವಾಸ್ತವದಲ್ಲಿ ಈ ಅನುಭವ ಹೆಣ್ಣಿಗೆ ತನ್ನ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಮುಖ್ಯ ಕಾರಣವಾಗಬೇಕು. ಸಾಮಾಜಿಕವಾಗಿ ಆರೋಪಿತವಾದ ಮನೋಭಾವದಿಂದ ಹೊರಬಂದರೆ, ಹೆಣ್ಣು ತನ್ನ ದೇಹದ ಈ ಅನುಭವ ತನಗೆ ಆನಂದವನ್ನೂ, ಹೊಸ ಚೇತನವನ್ನೂ, ಪ್ರಬುದ್ಧತೆಯನ್ನೂ. ಸ್ವಸ್ಥತೆಯನ್ನೂ ನೀಡುತ್ತಿದೆ ಎಂಬುದನ್ನು ಗುರುತಿಸುವುದು ಸಾಧ್ಯ.

ಹಾಗೆಯೇ ಋತುಚಕ್ರವು ಕೊನೆಗೊಳ್ಳುವ ಹಂತವನ್ನೂ ಅಪವ್ಯಾಖ್ಯಾನ ಮಾಡುತ್ತಾ ಪ್ರೌಢಹೆಂಗಸಿನ ಮನಸ್ಥಿತಿಯನ್ನು ಹದಗೆಡಿಸಲಾಗುತ್ತಿದೆ. ಈ ಹಂತ ಹೆಣ್ಣು ಎದುರಿಸಬೇಕಾಗಿರುವ ದೊಡ್ಡ ದುರಂತ ಎಂಬಂತೆ ಸಾಮಾಜಿಕ ಚಿಂತನೆಗಳು ಪ್ರವರ್ತಿಸುತ್ತಾ ಅವಳನ್ನು ಪರದಾಟಕ್ಕೆ ಸಿಲುಕಿಸುತ್ತವೆ. ಅವಳೊಬ್ಬ ಮನೋರೋಗಿಯೇ ಎಂದು ಅವಳನ್ನೇ ಒಪ್ಪಿಸತೊಡಗುತ್ತವೆ. ಇಂಥ ಸಾಮಾಜಿಕ ಆಭಾಸಗಳನ್ನು ಗೆಲ್ಲುವ ದಾರಿಗಳನ್ನೀಗ ನಾವು ರೂಪಿಸಿಕೊಳ್ಳಬೇಕಾಗಿದೆ. ಈವರೆಗೆ ಮೂಲಭೂತವಾದ 'ಸಾಮಾಜಿಕ ಅಗತ್ಯ'ವನ್ನು ನನ್ನ ಋತುಚಕ್ರ ಪೂರೈಸಿದೆ, ಇದೀಗ 'ಸ್ವಂತ ಹಿತ' ದ ಕಡೆಗೆ ಗಮನಕೊಡುವ ಬಗ್ಗೆ ನನ್ನ ದೇಹ ನಿರ್ಧರಿಸಿದೆ ಎಂದು ಈ ಹಂತವನ್ನು ಮಹಿಳೆ ಪರಿಭಾವಿಸತೊಡಗಿದರೆ ಬದುಕಿನ 'ಹೊಸ ಅಧ್ಯಾಯ'ವೆಂದು ಇದನ್ನು ಸ್ವಾಗತಿಸುವುದು ಸಾಧ್ಯ.

ಅಂದರೆ, ಸಮಾನ ಅವಕಾಶಕ್ಕಾಗಿ ಹಾತೊರೆಯುವ, ಅದನ್ನು 'ಗಳಿಸಿ' ಈಗಿನ 'ಬಂಧನ'ದಿಂದ 'ವಿಮೋಚನೆ' ಪಡೆಯುವ ಹೋರಾಟದ ಹಾದಿಗಿಂತ, ನಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳುವ, ಈ ಅಸ್ಮಿತೆಯೇ ನಮ್ಮ ನಿಜವಾದ ಶಕ್ತಿ ಎಂದು ಸ್ಥಾಪಿಸುವ ಹಾದಿಯೇ ಹೆಚ್ಚು ಸುಸಂಗತವಾದದ್ದು. ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸಗಳಿವೆ ಎಂಬುದೊಂದು ವಾಸ್ತವ. ಒಪ್ಪೋಣ. ಆದರೆ ಗಂಡು ಲಕ್ಷಣಗಳನ್ನೂ ಶ್ರೇಷ್ಠವೆಂದು ನಿರ್ಧರಿಸುವ ಅಥವಾ ಹೆಣ್ಣು ಲಕ್ಷಣಗಳನ್ನು ಕುಂದು ಕೊರತೆಗಳೆಂದೋ ರೋಗದ ಬಗೆಗಳೆಂದೋ ಗುರುತಿಸಲು ಯಾವ ಕಾರಣಗಳೂ ಇಲ್ಲ. ಹೆಣ್ಣು ಎಂದರೆ ಸೆಕೆಂಡ್‌ಸೆಕ್ಸ್ ಅಥವಾ ಎರಡನೆಯ ದರ್ಜೆಯ ತಳಿ ಎಂದಲ್ಲ. ಅವಳು ಗಂಡಿಗಿಂತ ವಿಭಿನ್ನ ಅಥವಾ ಸೆಪರೇಟ್ ಸೆಕ್ಸ್ ಅಷ್ಟೇ.

ಜೀವವಿಕಾಸ ಸಿದ್ಧಾಂತದ ಮರು ವಿವೇಚನೆ

ನಮ್ಮ ಅಸ್ಮಿತೆಯನ್ನು ಸಾಧಿಸಲು ದೇಹದ ಆಂತರಿಕ ಸಾಮರ್ಥ್ಯಗಳನ್ನು ಪುರಸ್ಕರಿಸುವ ಬಗೆಯಲ್ಲಿ ಸಮಸ್ಯೆಗಳಿಲ್ಲವೆಂದಲ್ಲ. ದೇಹಲಕ್ಷಣಗಳನ್ನು ಎತ್ತಿ ಹಿಡಿಯುತ್ತಾ ಗಂಡಿನ ಅಹಂಕಾರವನ್ನೇ ಪೋಷಿಸುವಂತಾಗದೇ, ಅವನೆದುರು ಮರ್ಯಾದೆಯನ್ನೂ ಸ್ವಂತಿಕೆಯನ್ನೂ ಬಿಟ್ಟುಕೊಟ್ಟಂತೆ ಆಗಲಾರದೇ ಎಂಬ ಪ್ರಶ್ನೆಗಳು ಏಳಬಹುದು. ಜೀವ ವಿಕಾಸ ಸಿದ್ಧಾಂತವು ಗಂಡು ನಿಸರ್ಗದ ಹುಟ್ಟು ಬೇಟೆಗಾರ, ಹೆಣ್ಣು ಅವನ ಒಂದು ಸಾಧನ ಮಾತ್ರ ಎಂದು ಹೇಳಿತೆಂಬುದು, ಪುರುಷ ಸ್ವಾಮ್ಯದ ಸಮಾಜದಲ್ಲಿ ಜನಪ್ರಿಯವಾಗಿದ್ದು ಸಹಜವೇ. ಸ್ತ್ರೀವಾದಿ ಚಿಂತಕಿಯರು ಇದನ್ನು ಪ್ರತಿಭಟಿಸಿ ಜೀವವಿಜ್ಞಾನ ಎಂಬುದು ಸೆಕ್ಸಿಸ್ಟ್ ಚಿಂತನೆಯೇ ಹೊರತು ವಿಜ್ಞಾನವಲ್ಲ ಎಂದದ್ದೂ ಸಕಾರಣವಾದದ್ದೇ. ಸ್ತ್ರೀದಮನಕಾರಿ ಪುರುಷರಿಗೆ ಹೊಸತೊಂದು ಆಯುಧವನ್ನೊದಗಿಸಿದ ಒಬ್ಬ ಪುರುಷನಷ್ಟೇ ಎಂದು ಡಾರ್ವಿನ್ ಕುರಿತು ತಮ್ಮ ಸಿಟ್ಟನ್ನು ಫೆಮಿನಿಸ್ಟ್ ಚಿಂತಕಿಯರು ಪ್ರಕಟಿಸಿದರು. 'ಮಹಿಳೆಯರು ಇಂತಹ ಜೀವವಿಜ್ಞಾನ ಚಿಂತನಾಕ್ರಮಗಳನ್ನು ಲಕ್ಷಿಸಲು ಹೋಗಬಾರದು, 'ವೈಜ್ಞಾನಿಕ' ಚಿಂತನೆಗಳಾದ್ದರಿಂದ ಪ್ರಶ್ನಿಸಲು ಸಾಧ್ಯವಿಲ್ಲ ಎಂಬ ಭ್ರಮೆಗಳಿಂದ ಹೊರಬರಬೇಕು' ಎಂದು ಆಗ್ರಹ ಪಡಿಸಿದರು.

ಇಷ್ಟಾದರೂ ಇಂಥಾ ಅಪವಿಜ್ಞಾನಕ್ಕೆ ಮದ್ದು ಮಾಡಲು ಇನ್ನಷ್ಟು ವಿಜ್ಞಾನವನ್ನೇ ಬಳಸಬೇಕಾಗುತ್ತದೆ. ಮಾನವ ಜೀವವಿಕಾಸದ ಕತೆಯಲ್ಲೇ ಹೊಸ ಹೊಸ ಬಗೆಯ ಅಲೆಗಳೇಳತೊಡಗಿವೆ. 'ಗಂಡು ಸಹಜ ಬೇಟೆಗಾರ'ನೆಂಬ ಸಿದ್ಧಾಂತ ಮೇಲುನೋಟದಲ್ಲೇ ಹಲವು ಸಂದೇಹಗಳಿಗೆ ಸಿಲುಕುತ್ತದೆ. ಒಂದು ಸಂತಾನದ ಎರಡು ತಳಿಗಳನ್ನು 'ಶ್ರೇಷ್ಠತೆ'ಯ ಸೂಚಕದೊಂದಿಗೆ ಪ್ರತ್ಯೇಕಿಸುವ ವಿಜ್ಞಾನದ ಈ ಮಾತು ನಿಜವೇ ಆದರೆ, ಈ ವೇಳೆಗೆ ಗಂಡಸರು ಹೆಂಗಸರಿಗಿಂತ ಅತೀವ ಹೆಚ್ಚಳ ಸಂಖ್ಯೆಯಲ್ಲಿರಬೇಕಿತ್ತು. ಆದರೆ ಆ ಪ್ರಮಾಣ ಹೆಚ್ಚು ಕಡಿಮೆ ಸರಿಸಮಾನದಷ್ಟಿದೆ. ದುರ್ಬಲ ಹಾಗೂ ಅವಲಂಬಿತ ಸೆಕ್ಸ್ ಎನಿಸಿದ ಹೆಣ್ಣನ್ನು ಮಕ್ಕಳು ಮರಿಗಳನ್ನು ಕಾಯುತ್ತಾ ಕೂರಲು ವಾಸಸ್ಥಾನಗಳಲ್ಲೇ ಬಿಟ್ಟು ಗಂಡು

ಬೇಟೆಗಾಗಿ ಹೊರಟು ಹೋಗುತ್ತಿದ್ದನಂತೆ. ಈ ಹೆಣ್ಣುಗಳು ಗಂಡುಗಳು ಹಿಂತಿರುಗಿ ಬರುವುದರ ಪ್ರತೀಕ್ಷೆಯಲ್ಲಿ ಇರುತ್ತಿದ್ದರಂತೆ. ಶಕ್ತ ಗಂಡಸರು ದುರ್ಬಲ ಹೆಂಗಸರ ಮೇಲೆ ಕಾಡು ಪ್ರಾಣಿಗಳ ಧಾಳಿಯಂತಹ ಅನೇಕ ಪ್ರಕೃತಿ ವಿಕೋಪಗಳನ್ನು ಎದುರಿಸುತ್ತಾ ಸಂತತಿಯ ರಕ್ಷಣೆ ಮಾಡಬೇಕಾದಂತಹ ಹೊಣೆಗಾರಿಕೆಯನ್ನು ಹೇಗೆ ತಾನೇ ಹೊರಿಸುತ್ತಿದ್ದರು? ಮಾನವ ಸಂತತಿಗೆ ಮೂಲನೆಲೆಯ ಕಲ್ಪನೆ ಹುಟ್ಟಿತಾಗಿ ಶ್ರಮ ವಿಭಜನೆಯ ಕಲ್ಪನೆಯೂ ಅನಿವಾರ್ಯವಾಯಿತು. ಇದು ಮಾನವ ತನ್ನ ಬುದ್ಧಿ ವಂತಿಕೆಯಿಂದ ರೂಪಿಸಿಕೊಂಡ ಸಂರಚನೆ. ಹಾಗಲ್ಲದೆ ಇದು ನಿಸರ್ಗ ಸಹಜವೇ ಆಗಿದ್ದಿದ್ದರೆ ನಮ್ಮ ದಾಯಾದಿ ಜೀವಸಂತತಿಗಳಲ್ಲೂ ಈ ಲಕ್ಷಣಗಳು ಕಾಣಿಸಬೇಕಿತ್ತು. ಉಳಿದ ಕಪಿ ಸಂತತಿಗಳಲ್ಲಿ ಇಂದಿಗೂ ಶ್ರಮವಿಭಜನೆಯ ಕ್ರಮವೇನಿಲ್ಲ. ಏನಿದ್ದರೂ ಗಂಡು ಹೆಣ್ಣುಗಳು ಒಟ್ಟೊಟ್ಟಿಗೆ ಗುಂಪುಗಳಲ್ಲಿ ಸಂಚರಿಸುತ್ತವೆ.

ಜೀವವಿಕಾಸ ಸಿದ್ಧಾಂತದ ಈ ಪುರುಷಕೇಂದ್ರಿತ ಚಿಂತನೆಯನ್ನು ಎಪ್ಪತ್ತರ ದಶಕದ ಮಹಿಳೆಯರು ಪ್ರಶ್ನಿಸತೊಡಗಿದರು. ಬೇಟೆಗಾರ ಜೀವಸಂತತಿ ಎನಿಸಿಯೂ ಮಾನವ ಸಮುದಾಯ ಒಟ್ಟಾರೆಯಲ್ಲಿ ಮಾಂಸಕ್ಕಿಂತ ಸಸ್ಯಮೂಲದಿಂದಲೇ ತನ್ನ ಆಹಾರದ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾಗುತ್ತಿತ್ತು ಎಂಬುದಕ್ಕೆ ಉತ್ಖನನಗಳು ಸಾಕ್ಷಿಗಳನ್ನು ತೋರಿಸುತ್ತವೆ. ಮೂಲನೆಲೆಗಳಲ್ಲಿ ಉಳಿದು ಸಸ್ಯ ಮೂಲದ ಆಹಾರ ಸಂಗ್ರಹ ಮಾಡುತ್ತಿದ್ದವರು ಹೆಂಗಸರು. ಬೇಟೆಯ ಶೌರ್ಯವನ್ನು ತೋರಿ ಗಂಡಸರು ತರುತ್ತಿದ್ದ ಮಾಂಸಾಹಾರ ಸಮುದಾಯದ ಹೊಟ್ಟೆಗೆ ಸಾಕಾಗುವಷ್ಟೇನೂ ಇರುತ್ತಿರಲಿಲ್ಲ. ಮಾನವ ಸಂತತಿಗೆ ತುತ್ತು ಕೊಟ್ಟು ಸಂಗೋಪನ ಮಾಡಿದವಳು ತಾಯಿಯೇ. ಸ್ವಂತ ರಕ್ಷಣೆಯ ಮಾತು ಬಂದರೆ ಗಂಡಿಗಿಂತಲೂ ಹೆಣ್ಣೇ ಹೆಚ್ಚು ಸ್ವಾವಲಂಬಿ.

ಅಂದಾಕ್ಷಣಕ್ಕೆ ಇವಳು ಎಂದೂ ಹೊರಗಿನ ನೆರವನ್ನು ಪಡೆಯಲೇ ಇಲ್ಲವೆಂದಲ್ಲ. ಹೆರಿಗೆ, ಬಾಣಂತನದಂತಹ ಸಂದರ್ಭಗಳಲ್ಲಿ ನೆರವು ಅಗತ್ಯವಾಗಿರಬೇಕು. ಮೊಲೆಯುಣಿಸುವ ಕ್ರಿಯೆ ತೀರಾ ಸರಳವಾದುದೆನಿಸಬಹುದು. ಆದರೆ ಈ ಕ್ರಿಯೆಗೆ ಅವಳು ಕನಿಷ್ಠ ದಿನವೊಂದಕ್ಕೆ ಐದುನೂರು ಕ್ಯಾಲೋರಿಗಳನ್ನು ವ್ಯಯಮಾಡಬೇಕು. ಹೆಚ್ಚೂ ಕಡಿಮೆ ಎಂಟು ಕಿ. ಮೀಗಳಷ್ಟು ನಡಿಗೆಗೆ ಬೇಕಾಗುವ ಶಕ್ತಿ ಇದು. ಇಂತಹ ಹೆಚ್ಚುವರಿ ಸಂದರ್ಭಗಳಲ್ಲಿ ಅವಳಿಗೆ ಯಾರು ನೆರವಾಗುತ್ತಿದ್ದರು? ಗಂಡಸು ಹೆಂಗಸಿನ ರಕ್ಷಕನೆಂಬ ಸಿದ್ಧಾಂತವನ್ನು ಇಲ್ಲಿ ಎಷ್ಟು ಅನ್ವಯಿಸಬಹುದು? ಅಥವಾ ಅವಳು ಅದನ್ನು ಹೇಗೆ ನಿರ್ವಹಿಸುತ್ತಿದ್ದಳು ಎಂಬ ಇನ್ನೊಂದು ಮುಖವನ್ನು ಈ ಕತೆ ಮರೆಮಾಚುತ್ತದೆ. ಇನ್ನು ಋತುಚಕ್ರದ ಹಂತವನ್ನು ದಾಟಿದ ಮಹಿಳೆಯ ಅಸ್ತಿತ್ವಕ್ಕೆ ನಿಸರ್ಗ ಮೂಲದ ಕಾರಣವೇನು ಎಂಬ ಮಾತು. ಸಂತಾನಧಾರಣೆ, ಸಂಗೋಪನೆಗಳಷ್ಟೇ ನಿಸರ್ಗ ಹೆಣ್ಣಿಗೆ ನಿಯುಕ್ತ ಗೊಳಿಸಿರುವ ಕೆಲಸಗಳು ಎನ್ನುವುದಾದರೆ, ಋತುಚಕ್ರದ ಕೊನೆಯೊಂದಿಗೆ ಹೆಣ್ಣಿನ

ಜೀವನವೂ ಮುಗಿದುಹೋಗಬೇಕು. ನಿಯುಕ್ತ ಜವಾಬ್ದಾರಿ ಇಲ್ಲದ ಜೀವದ ಬಗ್ಗೆ ನಿಸರ್ಗಕ್ಕೆ ದಾಕ್ಷಿಣ್ಯವೆಂಥದೂ ಇರುವುದಿಲ್ಲ. ಆದರೆ ಹೆಂಗಸು ಸಂತಾನವನ್ನು ಹೆರುವ, ಸಂಗೋಪನ ಮಾಡುವ ಜವಾಬ್ದಾರಿಗಳನ್ನು ಮುಗಿಸಿದ ಮೇಲೂ ಹಲವು ದಶಕಗಳವರೆಗೆ ಜೀವಿಸಿರುತ್ತಾಳೆ. ಅವಳ ಗರ್ಭಾಶಯ ಮಾತ್ರ ನಿವೃತ್ತಿ ಪಡೆಯುತ್ತದಷ್ಟೆ. ಜೀವ ವಿಕಾಸ ಸಿದ್ಧಾಂತವು 'ತರುಣಿಯರು ಹೊಸದಾಗಿ ತಾಯಂದಿರಾಗುತ್ತಾ ಹೋದಂತೆ ಈ ಅಜ್ಜಿಯರು ಸ್ವಲ್ಪ ಬೆಳೆದ ಮಕ್ಕಳ ಪಾಲನೆಗೆ ಅಗತ್ಯವಾಗುತ್ತಿದ್ದರು' ಎಂದು ವಾದ ಮಾಡಬೇಕಷ್ಟೆ.

ಹಾಗಾದರೆ ಋತುಚಕ್ರದ ನಂತರದಲ್ಲಿ ಹೆಣ್ಣಿನ ಬದುಕಿನ ಗುರಿಯಾದರೂ ಏನು? ಸಂತಾನವನ್ನು ಹೆರುವ ಕ್ರಿಯೆ ಮುಗಿದ ಮೇಲೂ ಸಮುದಾಯದ ಬದುಕಿನಲ್ಲಿ ಈ 'ಅಜ್ಜಿ'ಯರು ನಿರುಪಯುಕ್ತರೇನೂ ಆಗಿ ಬಿಡುವುದಿಲ್ಲ. ಹೆಚ್ಚಿದ ಆರೋಗ್ಯ ಮತ್ತು ಪ್ರೌಢತೆಗಳಿಂದ ಕೂಡಿದ ಅವರು ಈಗ ಸಂತತಿ ರಕ್ಷಣೆಗೆ ಹೊಸ ವೈವಿಧ್ಯದ ಕೊಡುಗೆ ನೀಡಬಲ್ಲ ಸಮರ್ಥರಾಗುತ್ತಾರೆ.

ಉದಾಹರಣೆಗೆ ಶಿಲಾಯುಗದಲ್ಲಿ 'ಪುರುಷನೇ ಬೇಟೆಗಾರನಾಗಿದ್ದ' ಎಂಬ ಸಿದ್ಧಾಂತವನ್ನು ಗಮನಿಸಿ. ಈ ಸೈದ್ಧಾಂತಿಕ ತೀರ್ಮಾನ ಎಂಬುದು ವಾಸ್ತವದಲ್ಲಿ ಒಂದು ಪ್ರಮೇಯ ಮಾತ್ರ. 'ಬೇಟೆ'ಯಲ್ಲಿ ಗದ್ದಲ ಸಲ್ಲದು. ಹೆಂಗಸರನ್ನು ಜೊತೆಗೊಯ್ದರೆ ಮಕ್ಕಳೂ ಬರಬೇಕಾದ್ದೇ. ಈ ಒಟ್ಟು ಗದ್ದಲ 'ಬೇಟೆ'ಯನ್ನು ಸಾಧ್ಯವಾಗಿಸುವುದಿಲ್ಲ. ಎಂದರೆ 'ಬೇಟೆಗಾರ ಗಂಡಸು' ತಾನೊಬ್ಬನೇ ಬೇಟೆಯಾಡುತ್ತಿದ್ದ ಎಂಬ ಪ್ರಮೇಯ. ಇದು ಯಾವುದೋ ಒಂದು ಬಗೆಯ ಬೇಟೆಯನ್ನಷ್ಟೇ ಹೇಳುತ್ತದೆ. 'ಗುಂಪುಬೇಟೆ'ಯ ವಿಧಾನದಲ್ಲಿ ಸದ್ದುಗದ್ದಲಗಳು ಅನುಕೂಲಕರವೇ ಆಗಿರುತ್ತದೆ. ಶಿಲಾಯುಗದಲ್ಲೂ 'ಗುಂಪುಬೇಟೆ' ಇತ್ತೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರಕದೆ ಈ ಮಾತನ್ನು ಪುರಸ್ಕರಿಸಲು ಕಷ್ಟವೆನಿಸಿತ್ತು. ಇಪ್ಪತ್ತೈದು ಸಾವಿರ ವರ್ಷಗಳಷ್ಟು ಹಿಂದೆ 'ಗುಂಪು ಬೇಟೆ'ಯ ವಿಧಾನದಲ್ಲಿ ಬಳಸುತ್ತಿದ್ದಿರಬಹುದಾದ ಬಲೆಯಂತಹುದೊಂದರ ಕುರುಹುಗಳನ್ನು ಓಲ್ಗಾ ಸಾಫರ್ ಎಂಬಾಕೆ ಗುರುತಿಸಿ ಇದನ್ನು ಉತ್ತರಿಸಿದಳು. ಬಲೆ ಬೀಸಿ ಬೇಟೆಯಾಡುವ ಗುಂಪು ಕ್ರಿಯೆಯಲ್ಲಿ ಗಂಡಸಿನ ಶೌರ್ಯ ಮಾತ್ರ ಇರುತ್ತಿರಲಿಲ್ಲ, ಅಲ್ಲಿ ಹೆಂಗಸರು ಮಕ್ಕಳು ಎಲ್ಲರೂ ಪ್ರಧಾನ ಪಾತ್ರವನ್ನೇ ವಹಿಸುತ್ತಿದ್ದರು. ಹೆಂಗಸು ತಾನೊಬ್ಬಳೇ ಬೇಟೆಯಾಡಲು ಹೋಗುತ್ತಿದ್ದ ಸಂದರ್ಭಗಳಿಗೂ ಸಾಕ್ಷಿಗಳು ಇವೆ ಎಂದ ಮೇಲೆ 'ಗಂಡಸು- ಬೇಟೆಗಾರ' ಎಂಬ ಸಿದ್ಧಾಂತ ಕೇವಲ ಪುರುಷ ಪಕ್ಷಪಾತದ ಚಿಂತನೆ ಮಾತ್ರವೆನಿಸುತ್ತದೆ. ಪ್ರಾಚೀನ ಹೆಣ್ಣು ದೇವತೆಗಳೆಲ್ಲರೂ ಕಾಡು ಪ್ರಾಣಿಗಳನ್ನು ಸ್ವಾಧೀನ ಪಡಿಸಿಕೊಂಡು ಮೆರೆಯುವ ಬೇಟೆಗಾರ್ತಿಯರೇ. ಜೀವವಿಕಾಸದ ಕತೆಯಲ್ಲಿ ಮಾನವ ಸಂತತಿಯ ಹೆಣ್ಣು ತಳಿಯ ಪಾತ್ರವನ್ನು ಇವು ಸ್ಪಷ್ಟವಾಗಿ ನಿರೂಪಿಸುತ್ತವೆ.

ಸ್ತ್ರೀ ಪುರುಷ ಪಾತ್ರಗಳ ಪುನರ್ ಮೌಲ್ಯಮಾಪನ

ಇದನ್ನೇ ಬೆಳೆಸಿ ಹೆಣ್ಣೇ ಬೇಟೆಗಾರ್ತಿ, ಗಂಡೇನಿದ್ದರೂ ಸೋಮಾರಿ ಮೂಳ ಎಂಬ ಸಿದ್ಧಾಂತವನ್ನೇನೂ ಇಲ್ಲಿ ಮಂಡಿಸುತ್ತಿಲ್ಲ. ಮಾನವ ಸಂತತಿ ಲಕ್ಷಾಂತರ ವರ್ಷಗಳ ತನ್ನ ಯಾನದಲ್ಲಿ ಅವೆಷ್ಟು ವೈವಿಧ್ಯಮಯ ನಿಸರ್ಗ ಸವಾಲುಗಳನ್ನು ಹಾದು ಬರುತ್ತಿದೆ ಎಂಬುದನ್ನು ಗ್ರಹಿಸಿದರೆ, ಸಿದ್ಧಾಂತಗಳನ್ನು ಹೀಗೆ ಏಕಮುಖವಾಗಿ ನಿರ್ಮಿಸುವುದರ ಪ್ರಮಾದಗಳನ್ನು ಕಲ್ಪಿಸಬಹುದು. ನಿರಂತರವಾದ ಸವಾಲುಗಳನ್ನು ಸಂದರ್ಭೋಚಿತವಾಗಿ ಎದುರಿಸುತ್ತಾ ಬಂದದ್ದರಲ್ಲಿ ಒಟ್ಟು ಮಾನವ ಸಂತತಿಯ ಸಾಹಸವಿದೆ, ಪಾಲ್ಗೊಳ್ಳುವಿಕೆ ಇದೆ ಎಂಬುದನ್ನು ಮೊದಲು ಒಪ್ಪಬೇಕು. ಈ ಸಾಹಸ, ಪಾಲ್ಗೊಳ್ಳುವಿಕೆಗಳು ಹೆಣ್ಣು-ಗಂಡು ತಳಿಗಳಲ್ಲಿ ಭಿನ್ನರೂಪಗಳಲ್ಲಿ ವ್ಯಕ್ತವಾಗಿರಬಹುದೆಂಬುದು ಪ್ರತ್ಯೇಕ ಸಂಗತಿ. ಈ ಭಿನ್ನತೆ ಶ್ರೇಷ್ಠತೆ- ಕನಿಷ್ಠತೆಗಳ ಕುರುಹುಗಳಲ್ಲ. ವಾದಕ್ಕೆ ವಾದವಾಗಿ ದೇಹ ಸಾಮರ್ಥ್ಯ, ಆಂತರಿಕ ಸಾಮರ್ಥ್ಯ, ಬುದ್ಧಿಶಕ್ತಿ- ಇಂತಹ ನೆಲೆಗಳನ್ನು ಹಿಡಿದು ಯಾರು ಶ್ರೇಷ್ಠರು, ಯಾರು ಫಸ್ಟ್ ಸೆಕ್ಸ್, ಯಾರು ಸೆಕೆಂಡ್‌ಸೆಕ್ಸ್ ಎಂಬಂತಹ ಮಾತುಗಳನ್ನು ಬೆಳೆಸಬೇಕೆಂದರೆ, ಅಂಥವಕ್ಕೆ ಅಗತ್ಯವೆನಿಸುವ ಸಾಕ್ಷಿಗಳನ್ನೂ, ದಾಖಲೆಗಳನ್ನೂ, ತರ್ಕಗಳನ್ನೂ ಒಟ್ಟುಗೂಡಿಸುವುದೇನೂ ಕಷ್ಟವಲ್ಲ.

ಸದ್ಯದಲ್ಲಿ ಮಹಿಳೆಯರು ಈ ವಿತಂಡವಾದದ ವಿರುದ್ಧ ಸೆಣೆಸಬೇಕಾದ ಅಸಹಜ ಸ್ಥಿತಿಯೊಂದನ್ನು ನಮ್ಮ ಸಾಮಾಜಿಕ ಚಿಂತನೆಗಳು ಊರಿ ಬೆಳೆಸಿಬಿಟ್ಟಿವೆ. 'ಶ್ರೇಷ್ಠತೆ'ಯ ಸುಳಿಗೆ ಸಿಲುಕಿ ಚಿಂತನೆಗಳನ್ನು ಬೆಳೆಸುತ್ತಾ ಹೋದಂತೆಲ್ಲಾ ಒಳಸುಳಿಗಳಿಗೆ ಸಿಲುಕಿಕೊಳ್ಳುವ ಅಪಾಯವೇ ಹೆಚ್ಚಾಗುತ್ತದೆ. ಭಿನ್ನತೆ, ವಿಶಿಷ್ಟತೆಗಳನ್ನು ಒಪ್ಪಿ, ಅಸ್ಮಿತೆಯನ್ನೂ ಕಾಯ್ದುಕೊಳ್ಳುವುದು ಹೆಚ್ಚು ಕ್ಷೇಮಕರ ಹಾದಿ ಎನಿಸಬಹುದು.

ಸೌಂದರ್ಯ ಲಹರಿ

ಹೆಣ್ಣಿನ ದೇಹಸಂಬಂಧದಲ್ಲಿ ಮಂಡನೆಯಾಗುತ್ತಿರುವ ಹೊಸ ಚಿಂತನೆಗಳ ಹಿನ್ನೆಲೆಯಲ್ಲಿ ಭಾರತೀಯ ಪಾರಂಪರಿಕ ಗ್ರಹಿಕೆಗಳನ್ನು ಮರಳಿ ವಿವೇಚಿಸಬೇಕಾದ ಅವಶ್ಯಕತೆಯಿದೆ. ಮನುಷ್ಯನ ಪರಮ ಸಾಧ್ಯತೆಯನ್ನು ದೇವರು ಎಂದು ತಿಳಿಯುವುದಾದರೆ ಅಂಥ ದೇವರುಗಳನ್ನು ಗಂಡಾಗಿ ಗ್ರಹಿಸಿರುವಂತೆ, ಹೆಣ್ಣಾಗಿಯೂ ಗ್ರಹಿಸಲಾಗಿದೆ. ಹೆಣ್ಣು ದೇವತೆಗಳನ್ನು ಗಂಡು ದೇವತಾ ಜಗತ್ತಿಗೆ ಅಧೀನವಾಗಿ, ಪರಿಶಿಷ್ಟವಾಗಿ ನೋಡುವ ಪರಂಪರೆಯೊಂದು ಇದೆ. ಆದರೆ ಅಷ್ಟೇ ಬಲವಾದ ಇನ್ನೊಂದು ಪರಂಪರೆಯಲ್ಲಿ ಹೆಣ್ಣು ಸರ್ವತಂತ್ರ ಸ್ವತಂತ್ರ ನೆಲೆಯುಲ್ಲಿ ಮಂಡಿತಳಾಗಿದ್ದಾಳೆ. 'ಶಕ್ತಿ' ಎಂಬ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಈ ಹೆಣ್ಣು ದೇವರ ಅಪರಿಮಿತ ವಿನ್ಯಾಸಗಳನ್ನು ಇಲ್ಲಿ ಕಾಣಬಹುದಾಗಿದೆ. ನಮ್ಮ ಸಂಸ್ಕೃತಿಗಳು ಆರಾಧಿಸುವ ಹೆಣ್ಣು ಗ್ರಾಮ ದೇವತೆಗಳಿಂದ ಮೊದಲಾಗಿ ಈ ವಿನ್ಯಾಸ ಅತ್ಯಂತ ಅಮೂರ್ತವಾದ ಶ್ರೀ ಚಕ್ರಗಳವರೆಗೆ ಹರಡಿಕೊಂಡಿದೆ. ಗಂಡು ಜಗತ್ತಿನ ಹಂಗಿಲ್ಲದ

ಈ ಹೆಣ್ಣು ದೇವರುಗಳಿಗೆ ಸಾಮಾನ್ಯವಾಗಿ ವಿನಾಶಕಾರಿ ಸಾಮರ್ಥ್ಯಗಳನ್ನು ಅಥವಾ ವಿನಾಶಗಳಿಂದ ರಕ್ಷಿಸುವ ಸಾಮರ್ಥ್ಯಗಳನ್ನು ಆರೋಪಿಸಲಾಗಿದೆ. ಸಾಂಪ್ರದಾಯಿಕ ಮಾನವ ಶಾಸ್ತ್ರಜ್ಞರು ಈ ದೇವತಾ ಲೋಕವನ್ನು ಸಂಸ್ಕೃತಿಯ ಮಾತೃಪ್ರಧಾನ ಹಂತದ ಪಳಿಯುಳಿಕೆಯಾಗಿ ವ್ಯಾಖ್ಯಾನಿಸುವುದುಂಟು. ಈ ಹೆಣ್ಣು ದೇವರುಗಳು ಸಾಮಾನ್ಯವಾಗಿ ದೇಹರಹಿತರಾಗಿದ್ದು ಮಾಧ್ಯಮಗಳಿಗಾಗಿ ತವಕಿಸುತ್ತಿರುತ್ತಾರೆ.

ಆದರೆ ಈ ಗ್ರಹಿಕೆಯ ಜೊತೆಗೆ ಸಂಪೂರ್ಣ ಸೌಷ್ಠವದೇಹಯುಕ್ತ ಹೆಣ್ಣು ದೇವರುಗಳನ್ನು ಆರಾಧಿಸುವ ಪರಂಪರೆಯೂ ಇದೆ. ಈ ಪರಂಪರೆಯಲ್ಲಿ 'ಶಕ್ತಿ' ಹೆಣ್ಣು ಮಾತ್ರವಷ್ಟೇ ಅಲ್ಲ, ಹೆಣ್ಣಿನ ಸಮಗ್ರ ಸೌಷ್ಠವದೇಹವನ್ನು ಹೊಂದಿರುವವಳು. ಈ ದೇವತೆಯ ದೇಹದ ಸೌಷ್ಠವತೆ ಮತ್ತು ಸಮೃದ್ಧಿಯನ್ನೇ ಆರಾಧಕರು ಆಚರಣೆಯ ಭಾಗವನ್ನಾಗಿ ಮಾಡಿ ಕೊಳ್ಳುತ್ತಾರೆ. ಅದ್ವೈತ ಚಿಂತಕರು, ಅದರಲ್ಲೂ ಆದಿ ಶಂಕರರು, ಇಂಥ ಆರಾಧನೆಗಳ ಪ್ರವರ್ತಕರಾಗಿರುವುದನ್ನು ನೋಡುತ್ತೇವೆ. ಶಂಕರಾಚಾರ್ಯರ ಸೌಂದರ್ಯಲಹರಿ ಒಂದು ಲೋಲುಪರಚನೆಯೆಂಬಂತೆ ಆಧುನಿಕ ದೃಷ್ಟಿಗೆ ತೋರಬಹುದು. ಆದರೆ ಹೆಣ್ಣಿನ ಪರಮ ಸಾಧ್ಯತೆಯನ್ನು ಹೆಣ್ಣು ದೇಹದ ಎಲ್ಲ ನೆಲೆಗಳಲ್ಲೂ ಗ್ರಹಿಸುವ ಮತ್ತು ಆರಾಧಿಸುವ ಈ ವಿಧಾನ ನಾವೀಗ ಅರಿಯಲು ಯತ್ನಿಸುತ್ತಿರುವ ಹೆಣ್ಣಿನ ಪರಿಕಲ್ಪನೆಗೆ ಸಮೀಪವಾಗಿದೆ. ಚೈತನ್ಯವನ್ನು ದೇಹರಹಿತವಾಗಿ ಗ್ರಹಿಸಿ ಅದನ್ನು ಲಿಂಗಭೇದ ಮತ್ತು ಲಿಂಗ ತಾರತಮ್ಯಗಳಿಂದ ಬಿಡುಗಡೆಗೊಳಿಸುವ ಹೋರಾಟ ವಿಧಾನಕ್ಕೆ ಸಮಾಂತರವಾಗಿ, ಪೂರಕವಾಗಿ ಅಥವಾ ಪರ್ಯಾಯವಾಗಿ ದೇಹಸ್ಥ ಹೆಣ್ಣಿನ ಸಾಧ್ಯತೆಗಳನ್ನು ಒಪ್ಪುವ ವಿಧಾನ ಪರಿಶೀಲನಾರ್ಹವಾಗಿದೆ.

ಸಮಕಾಲೀನ ಕನ್ನಡ ಸಾಹಿತ್ಯ : ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ

ಈ ಪ್ರಬಂಧದ ತಲೆಬರಹದಲ್ಲಿ ಒಬ್ಬ ಸ್ತ್ರೀಯಾಗಿ, ಸಾಹಿತ್ಯದ ವಿದ್ಯಾರ್ಥಿಯಾಗಿ ನನ್ನ ಆಸಕ್ತಿಯನ್ನು ಕೆರಳಿಸುವ ಎರಡು ಚಿಂತನಾ ಭಾಗಗಳಿವೆ. (೧) ಸ್ತ್ರೀವಾದದ ಬಗೆಗಿನ ಚಿಂತನೆ (೨) ಈ ಚಿಂತನೆಗೆ ಅಭಿವ್ಯಕ್ತಿಯನ್ನು ಕೊಟ್ಟಿರುವ ಸಮಕಾಲೀನ ಕನ್ನಡ ಸಾಹಿತ್ಯ. ಪ್ರಸ್ತುತ ಪ್ರಬಂಧದಲ್ಲಿ ಈ ಎರಡೂ ನೆಲೆಗಳ ಚಿಂತನೆಯನ್ನು ಗ್ರಹಿಸುವ ಪ್ರಯತ್ನವನ್ನು ಮಾಡಿದ್ದೇನೆ.

ಸಾಹಿತ್ಯ ಎನ್ನುವುದು, ಸಾಹಿತಿಯು ತನ್ನ ಜೀವನದ ಅನುಭವಗಳನ್ನೂ ಜೀವನದ ದೃಷ್ಟಿಯನ್ನೂ ಅಭಿವ್ಯಕ್ತಿಗೊಳಿಸುವ ಶಬ್ದ ಮಾಧ್ಯಮ. ಈ ಅಭಿವ್ಯಕ್ತಿಗೆ ಸಹೃದಯರನ್ನು ತಲುಪಬೇಕೆನ್ನುವ ನಿಶ್ಚಿತ ಗುರಿಯೂ ಇರುತ್ತದೆ. ಸಾಹಿತಿಗೆ ಒದಗುವ ಜೀವನಾನುಭವಗಳು, ಹಾಗೂ ಆ ಮೂಲಕ ಒದಗುವ ಜೀವನದೃಷ್ಟಿಗೆ ಮುಖ್ಯ ಆಧಾರ ಅವನ ಸಮಕಾಲೀನ ಜನಜೀವನವೇ ಆಗಿರುತ್ತದೆ. ಸಾಹಿತಿಯೂ ಈ ಜನಜೀವನದ ಭಾಗವೇ. ಇಲ್ಲಿನ ಎಲ್ಲ ಚಟುವಟಿಕೆಗಳೂ, ಸಮಸ್ಯೆಗಳೂ, ಸಾಹಿತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸುತ್ತುವರೆದಿರುತ್ತವೆ. ಆ ಅನುಭವಗಳಲ್ಲಿ ಸಾಹಿತಿಯು ಸಕ್ರಿಯವಾಗಿ ಭಾಗಿಯಾಗಿರಲಿ ಅಥವಾ ತನ್ನ ಸುತ್ತಲಿನದನ್ನು ಗಮನಿಸಿದ ಮಾತ್ರದಿಂದ ಆ ಅನುಭವವನ್ನು ಗಳಿಸಿರಲಿ, ಅದು ಆತನ ಜೀವನ ದೃಷ್ಟಿಯನ್ನು ರೂಪಿಸುವಷ್ಟು ಆಳವಾಗಿ ಅವನ ಚಿಂತನ ಕ್ರಮದಲ್ಲಿ ಸೇರಿಕೊಂಡರೆ, ಆ ಅನುಭವವನ್ನು ಪ್ರಾಮಾಣಿಕವೆಂದು ಪರಿಗಣಿಸಬಹುದು. ಸಾಹಿತ್ಯದಲ್ಲಿ ಈ ಪ್ರಾಮಾಣಿಕ ಅನುಭವದ ಅಭಿವ್ಯಕ್ತಿ ಇರಬೇಕಾದದ್ದು ಒಂದು ಪ್ರಾಥಮಿಕ ಅಗತ್ಯ. ಈ ಅಭಿವ್ಯಕ್ತಿ ಕಲಾತ್ಮಕವಾಗಿಯೂ ಸಫಲವಾಗಿದ್ದರೆ ಒಂದು ಶ್ರೇಷ್ಠ ಸಾಹಿತ್ಯ ಕೃತಿಯ ಸೃಷ್ಟಿಯಾಗುತ್ತದೆ.

ಓದುಗರು ಸಾಹಿತ್ಯದಲ್ಲಿ ನಿರೀಕ್ಷಿಸುವುದು ಏನನ್ನು ಎಂಬ ಪ್ರಶ್ನೆಗೆ ಸಾಮಾನ್ಯ ಓದುಗರಿಂದ ಹಿಡಿದು ಕಾವ್ಯ ಮೀಮಾಂಸಕರವರೆಗೆ ಎಲ್ಲರೂ ತಮ್ಮದೇ ಉತ್ತರಗಳನ್ನು ಕೊಟ್ಟುಕೊಂಡಿದ್ದಾರೆ. ಅವುಗಳಲ್ಲಿ ಅತ್ಯಂತ ವ್ಯಾಪಕವೂ, ಜನಪ್ರಿಯವೂ ಆದ ಉತ್ತರ 'ಆನಂದ' ಪ್ರಾಪ್ತಿ ಎಂಬುದು. 'ಆನಂದ' ಎನ್ನುವುದು 'ಸತ್ಯದರ್ಶನ'ದಿಂದ ಆಗುವಂಥಾದ್ದು

ಎಂದು ತತ್ತ್ವಶಾಸ್ತ್ರದ ರೀತಿಯಲ್ಲಿ ನಿರ್ವಚಿಸಿಕೊಂಡರೆ, ಸಾಹಿತ್ಯದ ಓದಿಗೆ ಒಂದು ತಾತ್ತ್ವಿಕ ನೆಲೆಯ ಉದ್ದೇಶವಿದೆ ಎನ್ನಬಹುದು. ಇಂತಹ ಒಂದು ನೆಲೆಯನ್ನೊದಗಿಸಿ ಓದುಗನಿಗೆ ಜೀವನದೃಷ್ಟಿಯನ್ನು ಒದಗಿಸುವ ಸಾಹಿತ್ಯವನ್ನು 'ಗಂಭೀರ' ಓದು ಎಂದು ಪರಿಗಣಿಸ ಬಹುದು. ಹಾಗಿಲ್ಲದೆ 'ಆನಂದ'ವೆನ್ನುವುದು ವಿಹಾರ, ವಿಶ್ರಾಂತಿ, ಮನೋರಂಜನೆಗಳ ನೆಲೆಯಷ್ಟರಲ್ಲೇ ಉಳಿದರೆ ಅದನ್ನು 'ಲಘುವಾದ ಓದು' ಎನ್ನಬಹುದು. ಹೀಗೆ ಯಾವುದೇ ಓದಿಗೂ ಒಂದು ದೃಷ್ಟಿಕೋನದ ಬದ್ಧತೆ ಇದ್ದೇ ಇರುತ್ತದೆ.

ನಾವು ವಾಸಿಸುವ ಸಮಾಜದಲ್ಲಿನ ಗುಣ-ದೋಷಗಳನ್ನು ನಿರಂತರವಾಗಿ ಅವಲೋಕಿಸುವುದರಿಂದ ನಾವು ಕೇವಲ ಸಮಾಜದ ರೀತಿ ನೀತಿಗಳನ್ನು ಮಾತ್ರವೇ ಅರ್ಥ ಮಾಡಿಕೊಳ್ಳುತ್ತೇವೆಂದಲ್ಲ : ಇಡೀ ಮಾನವ ಜಾತಿಯ ಸ್ವಭಾವ ಪರಿಚಯವಾಗುತ್ತದೆ. ಮೇಲು ನೋಟಕ್ಕೆ ನಾಗರಿಕ ಸಮಾಜವೆಂದು ತೋರುತ್ತಿರುವ ಇಲ್ಲಿ ಎಂತಹ ಅಮಾನವೀಯ ಆಲೋಚನೆಗಳು, ರಾಕ್ಷಸ ಮನೋವೃತ್ತಿಗಳು ನೆಲೆಸಿವೆ ಎಂಬುದರ ದರ್ಶನವಾಗುತ್ತದೆ. ಪ್ರಪಂಚದ ಎಲ್ಲ ಮಹಾಪುರುಷರೂ 'ಲೋಕಶಾಂತಿ'ಯ ಮೂಲವನ್ನು ಹುಡುಕಿ ಹೊರಟವರೇ. ಬಹುತೇಕ ಈ ಎಲ್ಲರೂ ಕಂಡ ಒಂದೇ ವಾಸ್ತವ ಎಂದರೆ, ಸಮಾಜ ದಲ್ಲಿರುವ ಜೀವಿಗಳಲ್ಲಿ ನಿರ್ಮಾಣವಾಗಿರುವ ಅಸಮಾನತೆಯೇ ಲೋಕಶಾಂತಿಯ ಭಂಗಕ್ಕೆ ಮೂಲಕಾರಣ ಎಂಬುದು. ಜಾತಿ, ವರ್ಣ, ವರ್ಗ ಈ ಮುಂತಾದ ನೆಲೆಗಳಲ್ಲಿ ಅಸಮಾನತೆ ಯನ್ನು ಗುರುತಿಸಲಾಗಿದೆ. ಇದರ ನಿರ್ಮೂಲನಕ್ಕಾಗಿ ಹೋರಾಡುವ ಅನೇಕ ಪ್ರಯತ್ನಗಳು ನಡೆದಿವೆ. ಆಗೀಗ ಆ ಪ್ರಯತ್ನಗಳು ಸಫಲಗೊಂಡ ಸಂದರ್ಭಗಳೂ ಇವೆ. ಆದರೆ, ಈ ಅಸಮಾನತೆಗಳ ಪೈಕಿ ಸ್ತ್ರೀ-ಪುರುಷ ನೆಲೆಯ ಅಸಮಾನತೆಯ ಸಮಸ್ಯೆಯನ್ನು ಪರಿಗಣಿಸಿ ಗಂಭೀರವಾದ ಆಲೋಚನೆಗಳು ಆರಂಭಗೊಂಡದ್ದೇ ಈಚಿನ ದಶಕಗಳಲ್ಲಷ್ಟೇ. ಅಸಮಾನತೆಯು ಆರಂಭಗೊಳ್ಳುವುದೇ ಒಬ್ಬರನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಇನ್ನೊಬ್ಬರು ಮಾಡುವ ಪ್ರಯತ್ನದಿಂದಾಗಿ. ಇಂಥವರಿಗೆ ಒಬ್ಬರನ್ನು ಅಧೀನವಾಗಿಟ್ಟು ಕೊಂಡರೆ ಮಾತ್ರವೇ ಜೀವನದ ಸುಖ ದಕ್ಕಿದಂತೆ. ಈ ಪ್ರಯತ್ನಕ್ಕೆ ಸುಖದ ಉದ್ದೇಶ ಎಂಬುದು ಲೌಕಿಕ ದುರಾಸೆಯ ಒಂದು ಕಾರಣವಾದರೆ, ಭಯ, ಅರಕ್ಷಿತತೆ, ಆತಂಕ ಈ ಮೊದಲಾದ ಮಾನಸಿಕ ಸ್ಥಿತಿಗಳು ಎರಡನೆಯ ಕಾರಣ.

ಜಾತಿ, ವರ್ಣ, ವರ್ಗಗಳೆಂಬ ಭೇದಗಳು ಮಾನವ ನಿರ್ಮಿತ ಸಮಾಜ ರಚನೆಯಲ್ಲಿ ಕೃತಕ ನಿರ್ಮಾಣಗಳು. ಇವುಗಳ ಅಸಮಾನತೆಯಲ್ಲಿ ಅಧಿಕಾರಕ್ಕಾಗಿ ನಡೆಸುವ ಆಕ್ರಮಣವೇ ಬಹುಮುಖ್ಯ ಅಂಶ. ಆದರೆ, ಸ್ತ್ರೀ-ಪುರುಷ ಅಸಮಾನತೆ ಇದಕ್ಕಿಂತ ತೀವ್ರ ಸ್ವರೂಪದ್ದು. ಸ್ತ್ರೀ-ಪುರುಷರು ಭಿನ್ನರಾಗಿರುವುದು ಪ್ರಕೃತಿಯಲ್ಲಿನ ಒಂದು ಉದ್ದೇಶ ಪೂರ್ವಕ ಕ್ರಿಯೆ. ಈ ಉದ್ದೇಶ ಪೂರ್ವಕ ಕ್ರಿಯೆಗೆ ಅನುಗುಣವಾಗಿ ಇಬ್ಬರ ದೈಹಿಕರಚನೆ, ಸ್ನಾಯು ಬಲ, ಕೆಲವಮ್ಮಟ್ಟಿಗೆ ಮನೋಭಾವ ಎಲ್ಲದರಲ್ಲೂ ಅಂತರವಿರುವುದು ನಿಜ. ಆದರೆ,

ಅರ್ಥಮಾಡಿಕೊಳ್ಳಬೇಕಾದ ಸಂಗತಿ ಎಂದರೆ ಈ ಇಬ್ಬರಲ್ಲಿ ಮೇಲು ಕೀಳಿನ ಮಾತು ಇಲ್ಲವೇ ಇಲ್ಲ. ಏಕೆಂದರೆ ಈ ಇಬ್ಬರೂ ಸೇರಿಯೇ ಜೀವನ ಎಂಬುದು ಪರಿಪೂರ್ಣಗೊಳ್ಳುತ್ತದೆ. ಪ್ರತ್ಯೇಕದಲ್ಲಿ ಇಬ್ಬರೂ ಪೂರ್ಣತೆ ಇಲ್ಲದವರೇ ಎಂದ ಮೇಲೆ ಯಾರು ಮೇಲು ಯಾರು ಕೀಳು ಎಂಬ ಪ್ರಶ್ನೆಯೇ ಅವಾಸ್ತವವಾದದ್ದು. ಆದರೂ ಮಾನವ ಚರಿತ್ರೆಯಲ್ಲಿ ಈ ಅಸಹಜವೂ, ಅವಾಸ್ತವವೂ ಆದ ಪ್ರಶ್ನೆ ಎದ್ದಿದೆಯಷ್ಟೇ ಅಲ್ಲ ಭೂತಾಕಾರವನ್ನು ತಳೆದು ನಿಂತಿದೆ. ಇದನ್ನು ಪರಿಹರಿಸಿದ ಹೊರತು ಮಾನವ ಜಾತಿಗೆ ಉಳಿಗಾಲವಿಲ್ಲ.

ಪುರುಷನು ತಾನೇ ಶ್ರೇಷ್ಠನೆಂಬುದನ್ನು ಸಾಧಿಸುತ್ತಾ ಅದನ್ನೇ ಸತ್ಯವೆಂದು ಒಪ್ಪಲು ಆಗ್ರಹಪಡಿಸುತ್ತಿದ್ದಾನೆ. ಆದರೆ, ಮಾನವ ಜಾತಿಯ ಒಂದು ಅವಿಭಾಜ್ಯ ಅಂಗವೆನಿಸಿದ ಸ್ತ್ರೀ ಇನ್ನೊಂದು ಅವಿಭಾಜ್ಯ ಅಂಗವೆನಿಸಿದ ಪುರುಷನೆದುರು ನಿಂತು, ಇಬ್ಬರೂ ಸಮಾನರು ಎನ್ನುವುದನ್ನು ಮನಗಾಣಿಸಲು ಹೋರಾಡಬೇಕಾಗಿ ಬಂದಿದೆ. ಮಾನವ ಚರಿತ್ರೆಯ ಆರಂಭದಿಂದಲೇ ಈ ಅಸಮಾನತೆಯ ಪ್ರಶ್ನೆ ಇರಲಿಲ್ಲವೆಂಬುದೂ ಮುಂದೆ ಬಂದ ನಾಗರಿಕತೆಯ ಬೆಳವಣಿಗೆಯಲ್ಲಿ ಆದ ಸಮಾಜ ರಚನೆಯ ವಿವಿಧ ಘಟ್ಟಗಳು ಪುರುಷನಿಗೆ ತನ್ನ ಅಧಿಕಾರವನ್ನು ಸ್ಥಾಪಿಸಿ ಸ್ತ್ರೀಯನ್ನು ಅಂಕೆಯಲ್ಲಿಟ್ಟುಕೊಳ್ಳುವ ಅವಕಾಶಗಳನ್ನೂ ಒದಗಿಸಿತೆಂಬುದೂ ಚಿಂತನಶೀಲರೆಲ್ಲರೂ ಬಲ್ಲ ಸಂಗತಿಗಳೇ. ಸೂಕ್ಷ್ಮಜ್ಞರಾದ ಹಲವಾರು ಚಿಂತನಶೀಲರು ಮಾನವ ಸಮಾಜವು ಸಾಗುತ್ತಿರುವ ಈ ಜಾಡು ಎಂತಹ ವಿನಾಶದ ಅಂಚನ್ನು ತಲುಪಲಿದೆ ಎಂಬುದನ್ನು ಕಂಡಿದ್ದಾರೆ. ಈ ಕಾರಣದಿಂದಲೇ ಸ್ತ್ರೀಯರ ಹಕ್ಕಿನ ಹೋರಾಟದಲ್ಲಿ ಸೂಕ್ಷ್ಮ ಹಾಗೂ ಪ್ರಾಮಾಣಿಕ ಸಂವೇದನೆಯ ಪುರುಷರೂ ಇದ್ದಾರೆ.

ಹೋರಾಟ, ಚಳುವಳಿ ಎನ್ನುವುದು ಯಜಮಾನ ಪದ್ಧತಿಯ ವಿರುದ್ಧ ಅಧೀನತೆಯು ಕ್ರಿಯಾತ್ಮಕವಾಗಿ ಸಿಡಿದೇಳುವ ಸ್ಥಿತಿ. ಇಲ್ಲಿ ತನ್ನ ವಿರುದ್ಧ ಶಕ್ತಿಯನ್ನು ಜಯಿಸಿ, ಮಣಿಸಿ ಅಥವಾ ಪರಿವರ್ತಿಸಿ ಪ್ರಗತಿಯನ್ನು ಸಾಧಿಸುವ ಗುರಿ ಇದೆ. ಇಲ್ಲಿನ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ, ತಾನು ಬದುಕುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಪುರುಷನ ದೃಷ್ಟಿ ಮಾತ್ರವೇ ಪ್ರತಿನಿಧಿತವಾಗುತ್ತಿದ್ದರೆ ಅದರ ಮಿತಿಗಳನ್ನು ಒಡೆಯಲು ಸಕ್ರಿಯವಾದ ಚಳುವಳಿ ಸ್ತ್ರೀಗೆ ಬೇಕಾಗುತ್ತದೆ. ಉದಾಹರಣೆಗೆ ದುಡಿಮೆಯ ಸಂದರ್ಭದಲ್ಲಿ ಸಮಾನ ಅವಕಾಶಗಳಿಗಾಗಿ ಅಥವಾ ತನ್ನ ಸಹಜ ವಿಕಾಸದಲ್ಲಿ ಅಡ್ಡಿಗಳನ್ನುಂಟು ಮಾಡುವ ಸಾಮಾಜಿಕ ನಿಯಮಾವಳಿಗಳನ್ನು ವಿರೋಧಿಸುವಲ್ಲಿ ಇಂತಹ ಚಳುವಳಿಗಳು ಅಗತ್ಯವಾಗುತ್ತವೆ. ಆದರೆ, ಈ ಚಳುವಳಿಗೆ ಒಂದು ತಾತ್ವಿಕ ನೆಲೆಯಿದ್ದಾಗ ಮಾತ್ರವೇ ಅದು ಅರ್ಥಪೂರ್ಣವೂ, ಸತ್ವಯುತವೂ ಆಗುತ್ತದೆ. ಸಮಸ್ಯೆಯನ್ನು ಕುರಿತಂತೆ ಅಂತರ್ಗತ ಧ್ಯಾನದಿಂದ ಈ ತಾತ್ವಿಕ ಚಿಂತನೆ ಸ್ಪಷ್ಟವಾಗಿದ್ದರೆ ಮಾತ್ರವೇ ಯಾವುದೇ ಚಳುವಳಿಯ ಕ್ರಿಯಾತ್ಮಕತೆಯು ಒಂದು ತರ್ಕಬದ್ಧ ನೆಲೆಯನ್ನು ತಲುಪಲು ಸಾಧ್ಯವಾಗುವುದು. ಸ್ತ್ರೀ

ವಿಮೋಚನಾ ಚಳುವಳಿಯ ಹಿನ್ನೆಲೆಯಲ್ಲಿ ಇಂಥ ದೀರ್ಘ ಚಿಂತನೆಯ ಅವಶ್ಯಕತೆ ಇದೆ. ಹೀಗೆ ಸ್ತ್ರೀವಾದಿ ಚಳುವಳಿಯ ಬೆನ್ನೆಲುಬೆನಿಸಿದ ಚಿಂತನೆಯ ರೂಪವು ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿದೆ. ಈ ಸ್ತ್ರೀವಾದದ ನೆಲೆಗಳ ಆಲೋಚನೆ, ಚಿಂತನೆಗಳು ನೇರವಾಗಿ ಚರ್ಚಿತವಾಗಿರುವುದು ಒಂದು ಬಗೆಯದಾದರೆ ಈ ದೃಷ್ಟಿಕೋನದಿಂದ ಜೀವನವನ್ನು ಗ್ರಹಿಸಿ ನಿರ್ಮಾಣಗೊಂಡ ವಿವಿಧ ಸಾಹಿತ್ಯ ಪ್ರಕಾರಗಳು ಇನ್ನೊಂದು ಬಗೆ. ಸಾಹಿತ್ಯ ಎನ್ನುವುದು ಜೀವನಾನುಭವಗಳ, ಹಾಗೂ ಆ ಮೂಲಕ ಕಂಡ ಜೀವನ ದೃಷ್ಟಿಯು ಶಬ್ದ ಮಾಧ್ಯಮದಲ್ಲಿ ಅಭಿವ್ಯಕ್ತಗೊಂಡ, ಕಲಾ ಪ್ರಕಾರ ಎಂದು ವಿವೇಚಿಸಿದಾಗಲೇ ಗಂಭೀರವಾದ ಒಂದು ಬರವಣಿಗೆ ಒಂದು ದೃಷ್ಟಿಕೋನದ ಅಭಿವ್ಯಕ್ತಿಗೆ ಬದ್ಧವಾಗಿರುತ್ತದೆ ಎಂದಂತಾಯಿತು. ಹಾಗೆಯೇ ಗಂಭೀರವಾದ ಯಾವುದೇ ಓದು ಸಹ ದೃಷ್ಟಿಕೋನದಿಂದ ಬದ್ಧವಾಗಿರುತ್ತದೆ. ಸಾಹಿತ್ಯವು ಹಾಗೆ ಹೊಂದಿರಬಹುದಾದ ದೃಷ್ಟಿಕೋನಗಳಲ್ಲಿ ಈ ಸ್ತ್ರೀವಾದದ ದೃಷ್ಟಿಕೋನವೂ ಒಂದಾಗಿರಲು ಸಾಧ್ಯ. ಮಾನವ ಸಮಾಜದಲ್ಲಿ ಸ್ತ್ರೀಯು ಅಸಮಾನಳೆಂದು ಪರಿಗಣಿತಳಾಗಿರುವುದಕ್ಕೆ ಕಾರಣಗಳು, ಅವಳನ್ನು ಸಮಾನಳೆಂದು ಪರಿಗಣಿಸಬೇಕಾದ ಅವಶ್ಯಕತೆಯು ಮಾನವ ಜಾತಿಗೆ ಎಷ್ಟು ಅನಿವಾರ್ಯ ಎಂಬ ಸಂಗತಿ, ಈವರೆಗೆ ಘಲಿಸಿಹೋಗಿರುವ ಅನ್ಯಾಯಗಳನ್ನು ಸರಿಪಡಿಸಿ ಪ್ರಕೃತಿ ಸಹಜ ರೀತಿಯ ಸ್ಥಾನಮಾನಗಳು ತಮ ತಮಗೆ ದಕ್ಕಬೇಕಾದರೆ ಸ್ತ್ರೀ ಪುರುಷರಿಬ್ಬರೂ ಸಾಧಿಸಬೇಕಾಗಿರುವ ಚಳುವಳಿಯ ಕಾರ್ಯವಿಧಾನ ಇವುಗಳ ಬಗೆಗೆ ನೇರವಾದ ಚಿಂತನೆಗಳ ಮಂಡನೆಗಳನ್ನು, ಹಾಗೂ ಸಾಹಿತ್ಯ ಪ್ರಕಾರಗಳ ಮೂಲಾಧಾರಗಳ ರೂಪದಲ್ಲಿ ಅಭಿವ್ಯಕ್ತಗೊಂಡಿರುವ ಎಲ್ಲ ಸಾಹಿತ್ಯವನ್ನು ಸ್ತ್ರೀವಾದಿ ಓದು ಎನ್ನಬಹುದು.

ಈ ದೇಶದಲ್ಲಿ ಸ್ತ್ರೀವಾದಿ ಚಿಂತನೆಗಳು ನಾಲ್ಕು ಮುಖ್ಯ ನೆಲೆಗಳಲ್ಲಿ ನಡೆದಿವೆ ಎಂಬ ಒಂದು ವಿಶ್ಲೇಷಣೆಯನ್ನು ಡಾ. ವೀಣಾ ಮುಜುಂದಾರ್ ಅವರು ನಡೆಸಿದ್ದಾರೆ. (೧) ವಾಸ್ತವವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದು. ಎಂದರೆ, ಈವರೆಗೆ ಸತ್ಯದ ಚಿತ್ರಣವೆಂದು ಗ್ರಹಿಕೆಯಾಗಿರುವುದರಲ್ಲಿ ಎಷ್ಟೊಂದು ಅಭಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಬಗೆಗೆ ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕು. ಸತ್ಯ, ವಾಸ್ತವ ಎಂದು ಗ್ರಹಿಸಿದ್ದು ಪುರುಷ ದೃಷ್ಟಿಕೋನದ್ದಾಗಿದೆಯಲ್ಲವೇ ಎಂಬ ಅರಿವು (೨) ಸಮಸ್ಯೆಯನ್ನು ಗುರುತಿಸುವಲ್ಲಿ ಆಗಿರುವ ಸ್ಥಿತ್ಯಾಂತರಗಳು-ಸ್ತ್ರೀಗೆ ಗೌರವಾದರಗಳ ಸ್ಥಾನ ಇತ್ತು ಎಂದು ಈವರೆಗೆ ನಂಬಿಸುತ್ತಾ ಬರಲಾಗಿದೆ. ಇತ್ತೀಚೆಗಷ್ಟೇ ಸ್ತ್ರೀವಾದಿ ಸಮಸ್ಯೆಯೊಂದಿದೆ ಎಂಬುದನ್ನು ಗುರುತಿಸಿ ಒಪ್ಪಲಾಗಿದೆ. ಅಂದರೆ ರೋಗ ನಿಧಾನ (Diagonosis) ಜಾರಿಗೊಂಡಿದೆ. (೩) ಆಗಿಹೋದ ತಪ್ಪುಗಳನ್ನು ಮರೆಯಿಸುವ ಪ್ರಯತ್ನ ಸಾಗಿದೆ. ಈ ಪ್ರಯತ್ನ ಹೊಸದಲ್ಲ. ಸ್ತ್ರೀಯನ್ನು ಭ್ರಾಮಕ ನೆಲೆಯಲ್ಲಿಟ್ಟು ವಂಚಿಸಲಾಗುತ್ತಿದೆ. ಮಾತೃತ್ವ, ದೈವತ್ವಗಳ ಮಾತು: ವೇದ ಕಾಲದಲ್ಲಿ ಎಂಥೆಂಥ ಸ್ತ್ರೀಯರ ಇರುವಿಕೆ ಸಾಧ್ಯವಿತ್ತು ಎಂಬ ನಿದರ್ಶನಗಳಿಂದ ಪ್ರಯೋಜನವಿಲ್ಲ. ಏಕೆಂದರೆ, ಈ

ನಿದರ್ಶನಗಳು ಕೇವಲ ಅಪವಾದಗಳು. ಒಬ್ಬ ಇಂದಿರಾಗಾಂಧಿಯನ್ನು ತೋರಿ ಸ್ತ್ರೀಗೆ ಮಹತ್ವದ ಸ್ಥಾನವನ್ನು ಕೊಡಲಾಗಿದೆ ಎಂದಂತೆ. ಬಹುತೇಕ ಸ್ತ್ರೀಯರ ಪಾಡೇನು ಎಂಬುದನ್ನು ಗಮನಿಸಬೇಕು. (೪) ಈವರೆಗೆ ನಡೆದು ಬಂದದ್ದನ್ನು ಪೂರ್ಣ reverse ಮಾಡಬೇಕೋ ಅಥವಾ ನಡೆಯುತ್ತಿರುವ ಕ್ರಮವನ್ನು ತಿದ್ದುಪಡಿ ಮಾಡಿ ಪ್ರಯೋಗಿಸ ಬೇಕೋ ಎಂಬ ಡೋಲಾಯಮಾನತೆ, ಇಲ್ಲೂ ಸಹ ಭ್ರಮೆಯ ಪ್ರಯೋಗವಿದೆ. ಅಭಿವೃದ್ಧಿ, ಪ್ರಗತಿ, ಸಮಾನತೆಗಳೆಂಬ ಮಾತನಾಡುತ್ತಾ ಜನತೆ, ಸಮುದಾಯ ಎಂಬ ಪದಗಳನ್ನು 'ಪುರುಷ' ಎಂಬುದಕ್ಕೆ ಬದಲಾಗಿ ಬಳಸಿದಾಗ 'ಎಲ್ಲ ಸರಿಹೋಯಿತು' ಎಂಬ ಭಾವ ಬರುತ್ತದೆ. ಆದರೆ, ವಾಸ್ತವದಲ್ಲಿ ಈ 'ಜನತೆ' 'ಸಮುದಾಯ'ದಲ್ಲಿ 'ಸ್ತ್ರೀ' ಸೇರ್ಪಡೆ ಯಾಗುವುದಿಲ್ಲ. ಈ ಬಗೆಗೆ ಮೈಮರೆಯದೆ 'ಸ್ತ್ರೀ' ಸೇರುತ್ತಾಳೆ ಎಂಬ ಬಗ್ಗೆ ಸ್ಪಷ್ಟನೆ ಪಡೆಯಬೇಕು.

ಇಡೀ ಈ ಚಿಂತನೆಯಲ್ಲಿ ಸ್ತ್ರೀಗೆ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟವಾದ ಮಂಡನೆ ಇದೆ. ಸ್ತ್ರೀಗೆ ಬೇಕಾಗಿರುವುದು ಬೇರೆಯೇ ಆದ ವಿಶಿಷ್ಟ ಸ್ಥಾನಮಾನಗಳಲ್ಲ. ಸಮಾಜದ ಜವಾಬ್ದಾರಿಗಳನ್ನು ಹಂಚಿಕೊಳ್ಳುವಲ್ಲಿ, ಈಗಿರುವ ವ್ಯವಸ್ಥೆಯ ಅಳವಡಿಕೆಯಲ್ಲಿ, ಸ್ತ್ರೀಯ ಪಾಲು. ಜನತೆ, ಸಮುದಾಯ, ಸಮಾಜ ಎಂದಾಗ 'ಸ್ತ್ರೀಯನ್ನೂ' ಒಳಗೊಂಡಂತೆ ಎಲ್ಲರೂ ಎಂಬಂತಹ ವ್ಯಾಖ್ಯಾನ.

ಇಂಥ ಸ್ತ್ರೀವಾದಿ ಚಿಂತನೆಗಳನ್ನು ಒಳಗೊಂಡ ಸಾಹಿತ್ಯವನ್ನು ಮುಖ್ಯವಾಗಿ ನಾಲ್ಕು ಬಗೆಗಳೆಂದು, ಅಧ್ಯಯನದ ಅನುಕೂಲಕ್ಕಾಗಿ ಮಾತ್ರ ವಿಂಗಡಿಸಿಕೊಳ್ಳಬಹುದು. ವಾಸ್ತವ ಅರ್ಥದಲ್ಲಿ ಇವು ಭಿನ್ನ ಬಗೆಗಳೇನೂ ಆಗಿರದೆ, ಒಂದು ಬಗೆಯನ್ನು ವಿವರಿಸುತ್ತಿರುವಾಗ ಅದೇ ವಿವರಣೆಯ ಭಾಗ ಮುಂದಿನ ವಿಭಾಗಕ್ಕೂ ಸೇರಬಹುದು.

(೧) ಇಡೀ ಅನುಭವವನ್ನು ಸ್ತ್ರೀಯ ಮುಖಾಂತರ ನೋಡುವುದು. ಅಂದರೆ, ಸಾಹಿತ್ಯದಲ್ಲಿ ಹೆಣ್ಣು ಜಗತ್ತನ್ನು ಹೇಗೆ ಅಭಿವ್ಯಕ್ತಗೊಳಿಸಲಾಗಿದೆ ಎಂದು ಹುಡುಕುವುದು.

(೨) ಸ್ತ್ರೀಪರ ದೃಷ್ಟಿಕೋನ ಹಾಗೂ ಪುರುಷ ಪ್ರಧಾನ ದೃಷ್ಟಿಕೋನಗಳನ್ನು ವಿಂಗಡಿಸಿ ನೋಡುವುದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಇದೇ ಕಾಣುವುದು.

(೩) ಕೃತಿಯನ್ನು ಪೂರ್ವನಿರ್ಧಾರಿತ ಮಾನದಂಡಗಳಿಂದ ನೋಡುವುದು. ಇದು ಮೇಲೆ ಹೇಳಿದ ಬಗೆಯ ಮುಂದುವರಿಕೆಯೇ ಎನ್ನಬಹುದು. ಈ ಹಿಂದೆ, ವಿವರಿಸಿದಂತೆ ಸ್ತ್ರೀವಾದಿ ದೃಷ್ಟಿಕೋನ ಎಂಬ ಚಿಂತನೆಯೇ ಇತ್ತೀಚಿನ ದಶಕಗಳದ್ದು. ಎಂದ ಮೇಲೆ, ಅದಕ್ಕು ಎಷ್ಟೋ ಮುಂಚಿನಿಂದಲೂ ಸಾಹಿತ್ಯರಚನೆ, ವಿಮರ್ಶೆ ನಡೆದುಬಂದಿರುವುದರಲ್ಲಿ ಬಳಸಿರುವ ಮಾನದಂಡಗಳು ಸಹಜವಾಗಿಯೇ ಪುರುಷ ದೃಷ್ಟಿಕೋನವುಳ್ಳದ್ದೇ ಆಗಿರುತ್ತದೆ. ಹಾಗೆ ಪೂರ್ವನಿರ್ಧಾರಿತ ಮಾನದಂಡಗಳನ್ನೇ ಬಳಸಿ ಓದನ್ನು ಗ್ರಹಿಸಿದಾಗ, ಸಹಜವಾಗಿಯೇ

'ಇಲ್ಲಿ ಸಾಹಿತ್ಯದ ಮೌಲ್ಯಗಳೇ ಇಲ್ಲ' 'ಸ್ತ್ರೀಯರು ಬರೆಯುವುದೆಲ್ಲ ಅಡಿಗೆ ಮನೆ ಸಾಹಿತ್ಯ' ಎಂಬಂತಾಗಿ ಆ ಸಾಹಿತ್ಯವನ್ನೇ ನಿರಾಕರಿಸಲಾಗುತ್ತದೆ.

(೪) ಮೇಲೆ ಹೇಳಿದ ೨ ಹಾಗೂ ೩ ನೆಯ ಬಗೆಯ ಮುಂದುವರಿಕೆಯ ರೀತಿಯಾಗಿ, ಇಡೀ ಸಾಹಿತ್ಯವನ್ನು ಸ್ತ್ರೀವಾದಿ ಚಿಂತನೆಗಳನ್ನು ಮಂಡಿಸಲಾದ ಓದಿನ ಹಿನ್ನೆಲೆಯಲ್ಲಿ ಪುನರ್ವ್ಯಾಖ್ಯಾನ ಮಾಡುವುದು.

ಸ್ತ್ರೀ-ಪುರುಷ ಅಸಮಾನತೆಯ ಬಗೆಗಿನ ಚಿಂತನೆಯಲ್ಲಿ ಈ ಸಾಹಿತ್ಯವು ಹೇಗೆ ಪ್ರಯೋಜನಕ್ಕೆ ಬರುತ್ತದೆ ಎಂಬುದು ಮುಂದಿನ ಪ್ರಶ್ನೆ. ಒಟ್ಟಾರೆ ಸಾಹಿತ್ಯವನ್ನು ಗಮನಿಸುವಾಗ, ಪ್ರತಿಯೊಂದು ಕೃತಿಯೂ ಆಯಾ ಸಾಹಿತಿಯ ವೈಯಕ್ತಿಕ ಅಭಿವ್ಯಕ್ತಿ ಎನ್ನುವುದರ ಜೊತೆ ಜೊತೆಯಲ್ಲೇ ಇಡೀ ಸಮಾಜದ, ಮಾನವ ಜನಾಂಗದ ಅಭಿವ್ಯಕ್ತಿಯೂ ಅಲ್ಲಿರುತ್ತದೆ ಎಂಬುದೂ ನಿಜ. ಈ ಚಿಂತನೆಗಳಲ್ಲಿ ಸಮಾನತೆಯ ಎಷ್ಟೋ ಅಂಶಗಳನ್ನು ಗುರುತಿಸುವಂತೆಯೇ, ವೈರುಧ್ಯಗಳು ಪ್ರಕಟಗೊಂಡಿರುವುದನ್ನೂ ಗುರುತಿಸಲು ಸಾಧ್ಯವಿದೆ. ಬೇರೆ ಬೇರೆ ದೇಶಗಳಿಗೆ, ಬೇರೆ ಬೇರೆ ಸಮಾಜಗಳಿಗೆ ಸೇರಿದ ಸ್ತ್ರೀ ಹಾಗೂ ಪುರುಷರ ಅಭಿವ್ಯಕ್ತಿಗಳಲ್ಲಿ ಇರುವ ಸಮಾನ ಹಾಗೂ ವೈರುಧ್ಯದ ಸಂಗತಿಗಳನ್ನು ವಿಶ್ಲೇಷಿಸಿ ನೋಡಿದಾಗ, ಸ್ತ್ರೀವಾದಿ ಸಮಸ್ಯೆಯ ಸ್ಪಷ್ಟವಾದ, ಪೂರ್ಣವಾದ ರೂಪವನ್ನು ಗ್ರಹಿಸಲು ಸಹಾಯಕವಾಗುತ್ತದೆ. ಸಮಾನತೆಯನ್ನು ಗಳಿಸುವ ಈ ಹೋರಾಟದಲ್ಲಿ ಇಂದಿನ ಸ್ತ್ರೀಯ ಸ್ಥಾನವನ್ನು ಗುರುತಿಸುವ ಅವಶ್ಯಕತೆ ಪ್ರಪ್ರಥಮವಾದದ್ದು. ಸಮಸ್ಯೆಯನ್ನು ಬಿಡಿಸುವ ಮೊದಲು ಅದರ ಸ್ವರೂಪವನ್ನು ನಿಖರವಾಗಿ ಗುರುತಿಸಿಕೊಳ್ಳಬೇಕಾದ್ದು ಅಗತ್ಯ. ಉದಾಹರಣೆಗೆ, ಸ್ತ್ರೀಗೆ 'ಸಮಾನತೆ' ಬೇಕು ಎಂದಾಗ, ಈ ಸಮಾನತೆ ಬೇಕಾಗಿರುವುದು ಯಾವ ಕ್ಷೇತ್ರದಲ್ಲಿ, ಯಾವ ರೂಪದಲ್ಲಿ, ಈಗಿನ ಕೊರತೆ ಇರುವುದು ಎಲ್ಲಿ ಎಂಬ ಪ್ರಶ್ನೆಗಳಿಗೆ ಉತ್ತರ ತಿಳಿದಿರಬೇಕು. ಈ ನೆಲೆಯಲ್ಲೇ ನಿಖರತೆ ಇಲ್ಲದಿದ್ದರೆ ಉತ್ತರಗಳು ದಕ್ಕುವ ಸಾಧ್ಯತೆಗಳ ಮಾತಿರಲಿ, ಕಣ್ಣೆದುರಿಗೇ ಕಂಡರೂ ಅವುಗಳನ್ನು ಗುರುತಿಸಿ ನಮ್ಮದಾಗಿಸಿಕೊಳ್ಳುವ ಸಾಮರ್ಥ್ಯ ಉಳಿಯದೆ, ಗಾಳಿಯಲ್ಲಿ ಗುದ್ದಾಡಿದಂತೆ, ವ್ಯರ್ಥ ಹೋರಾಟದ ಶ್ರಮ ಮಾತ್ರವೇ ನಮ್ಮ ಪಾಲಿಗೆ ಉಳಿಯುತ್ತದೆ. ಹೀಗಾಗಿ, ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ನೆಲೆಯಲ್ಲಿ ಇರುವ ಒಂದು ಮುಖ್ಯ ಪೂರಕ ಸಾಮಗ್ರಿ ಎಂದರೆ ಈ ಬಗೆಯ ಸಾಹಿತ್ಯದ ಓದು ಎನ್ನಬಹುದು. ಇಲ್ಲಿ ಸ್ತ್ರೀವಾದಿ ಓದಿನ ಅವಶ್ಯಕತೆ ಕಾಣುತ್ತದೆ.

ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ ಅಭಿವ್ಯಕ್ತಗೊಂಡಿರುವ ಬಗೆಯನ್ನು ಗಮನಿಸುವಾಗ 'ಸಮಕಾಲೀನ' ಎಂಬ ಮಾತನ್ನು ಸ್ವಲ್ಪ ವಿವರಿಸಿಕೊಳ್ಳುತ್ತೇನೆ. ಸಾಹಿತ್ಯ ಸಂದರ್ಭದಲ್ಲಿ 'ಸಮಕಾಲೀನ ಕನ್ನಡ ಸಾಹಿತ್ಯ' ಎಂಬುದು ಏಳೆಂಟು ದಶಕಗಳಷ್ಟು ಹಿಂದಕ್ಕೂ ಹೋಗಬಹುದಾದರೂ ಇಲ್ಲಿ ಅದನ್ನು ಸುಮಾರು ೧೫ ರಿಂದ ೨೦ ವರ್ಷಗಳ ಈಚಿನ ಸಾಹಿತ್ಯ ಎಂದು ಇಟ್ಟುಕೊಳ್ಳಬಹುದು. ಇದಕ್ಕೆ ಕಾರಣವೆಂದರೆ, ಈ ಹಿಂದೆಯೇ

ಹೇಳಿದಂತೆ ಸ್ತ್ರೀವಾದಿ ಚಿಂತನೆ ಎಂಬ ಮಾತೇ ತೀರಾ ಇತ್ತೀಚಿನದು. ಕನ್ನಡ ಸಾಹಿತ್ಯದಲ್ಲಿ ಅದರ ಅಭಿವ್ಯಕ್ತಿಯು ತೊಡಗಿದ ಕಾಲಾವಧಿಯನ್ನು ಈ ಎರಡು ದಶಕಗಳಲ್ಲೇ ನಿಗದಿಗೊಳಿಸಬೇಕಾಗುತ್ತದೆ. ಅದಕ್ಕೂ ಹಿಂದೆ ಈ ಪ್ರಶ್ನೆ ಎದ್ದಿದೆಯಾದರೂ ಪ್ರಧಾನವಾಗಿ ಪರಿಗಣಿತವಾಗಿಲ್ಲ ; ಪರಿಗಣಿತವಾಗಿರುವಷ್ಟು ಸಹ ಪುರುಷ ದೃಷ್ಟಿಕೋನದ ಸ್ತ್ರೀಯ ಬಗೆಗಿನ ಚಿಂತನೆಗಳು ಮಾತ್ರ ಆಗಿವೆ.

ಸ್ತ್ರೀವಾದಿ-ಸ್ತ್ರೀಪರ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಿರುವ ಸಮಕಾಲೀನ ಕನ್ನಡ ಸಾಹಿತ್ಯವನ್ನು ಮೂರು ವಿಭಾಗಗಳಲ್ಲಿ ಅಧ್ಯಯನ ಮಾಡಬಹುದು.

೧. ಪುರುಷರಿಂದ ರಚಿತವಾದ ಸ್ತ್ರೀಪರ ದೃಷ್ಟಿಯ ಕಥಾಸಾಹಿತ್ಯ.

೨. ಹಳೆತಲೆಮಾರಿನ ಕೆಲವು ಬರಹಗಾರ್ತಿಯರು ಈ ಹೊಸ ದೃಷ್ಟಿಕೋನದಿಂದ ಬರೆಯಲಾರಂಭಿಸಿದ ಕಥಾಸಾಹಿತ್ಯ.

೩. ಪ್ರಸ್ತುತ ಅವಧಿಯಲ್ಲಿ ಬರೆಯುತ್ತಿರುವ ಬರಹಗಾರ್ತಿಯರು.

ಈ ವಿಭಾಗಗಳಡಿಯಲ್ಲಿ ಪ್ರಾತಿನಿಧಿಕವಾಗಿ ಕೆಲವೇ ಕೃತಿಗಳನ್ನು ಆಯ್ದು ಈ ಮುಂದೆ ಚರ್ಚಿಸಬಹುದು. ಏಕೆಂದರೆ, ಇಲ್ಲಿ ಇಡೀ ಸಾಹಿತ್ಯದ ವಿಶ್ಲೇಷಣೆಗಿಂತ, ನಾವು ಈವರೆಗೆ ಚರ್ಚಿಸಿದ ಸ್ತ್ರೀವಾದಿ ಚಿಂತನೆಗಳ ಅಭಿವ್ಯಕ್ತಿಯನ್ನು, ಅದರ ಸ್ವರೂಪವನ್ನು ಗುರುತಿಸುವುದೇ ಮುಖ್ಯ ಉದ್ದೇಶವಾಗಿದೆ. ಮೇಲೆ ಹೇಳಿದ ವಿಭಜನಾ ಕ್ರಮದಿಂದ ಸ್ತ್ರೀಯ ಬಗೆಗೆ ಸ್ತ್ರೀಯರಲ್ಲಿ ಹಾಗೂ ಪುರುಷರಲ್ಲಿ ಕಾಲಕ್ರಮದಲ್ಲಿ ಎಂತಹ ಚಿಂತನೆ ಹರಿದು ಬಂದಿದೆ ಎನ್ನುವ ಅಂಶ ಹಾಗೂ ಈ ಚಿಂತನೆ ಸಾಹಿತ್ಯ ರೂಪದಲ್ಲಿ ಎಷ್ಟರ ಮಟ್ಟಿಗೆ ಸಫಲತೆಯನ್ನು ಸಾಧಿಸಿದೆ ಎಂಬ ಪ್ರಶ್ನೆಗೆ ಉತ್ತರಗಳನ್ನು ಕಾಣಲು ಪ್ರಯತ್ನಿಸಲಾಗಿದೆ.

ಪುರುಷರಿಂದ ರಚಿತವಾದ ಸ್ತ್ರೀಪರ ದೃಷ್ಟಿಯ ಸಾಹಿತ್ಯದಲ್ಲಿ ಮುಖ್ಯವಾಗಿ ಕಥಾಸಾಹಿತ್ಯವೇ ಕಾಣುವುದು. 'ಇಂದಿರಾ', 'ಇಂದಿರಾಬಾಯಿ'ಗಳಂತಹ ಆರಂಭದ ಕಾದಂಬರಿಗಳಲ್ಲೇ ಪ್ರಗತಿಯ ಸೂಚಕವೆನಿಸುವ ಚಿಂತನೆಯಾಗಿ ಸ್ತ್ರೀಪರ ವಾದ ಬಂದಿದೆ. ಆದರೆ, ಈ ಯಾವ ಸಾಹಿತ್ಯದಲ್ಲೂ ಈಗ ವ್ಯಾಖ್ಯೆಗೊಂಡಿರುವ ಅರ್ಥದಲ್ಲಿ ಸ್ತ್ರೀವಾದವೆಂಬುದು ಪ್ರಸ್ತಾಪವಾಗಿಲ್ಲ. ಸ್ತ್ರೀಪರವಾದ ಎಂಬುದು ಬಹುಮಟ್ಟಿಗೆ ಸ್ತ್ರೀಯ ಬಗೆಗಿನ ಜಿಜ್ಞಾಸೆಗಿಂತ ಧರ್ಮಜಿಜ್ಞಾಸೆಯಾಗಿ ನಿರೂಪಿತವಾಗಿದೆ. 'ಪ್ರಗತಿ' ಎಂಬುದು ಸಹ ಒಂದು ನಿರ್ಬಂಧಿತ ಚೌಕಟ್ಟಿನ ಒಳಗೇ ಬರುವಂಥಾದ್ದು. ಇಲ್ಲಿನ 'ಪ್ರಗತಿ' ಎಂಬುದನ್ನು 'ಇಷ್ಟರ ಮಟ್ಟಿಗೆ ಆಯಿತಲ್ಲಾ' ಎಂಬಂತಹ ಸಮಾಧಾನದಲ್ಲಿ ನೋಡಬೇಕೆ ಹೊರತು ಪೂರ್ಣವಾದ ಹೊಸ ದೃಷ್ಟಿಕೋನವನ್ನು ಶೋಧಮಾಡಲು ಹೋಗಬಾರದು. ಉಚ್ಚ ಶಿಕ್ಷಣ ಪಡೆದರೂ ಪರಂಪರಾಗತ ಪದ್ಧತಿಗಳನ್ನು ಒಲಿದು ಪಾಲಿಸುವ, ಮನೆಯ ಹೊರಗೆ ಹೋದರೂ ಮನೆಯವರ ಒಪ್ಪಿಗೆಯನ್ನು ಪಡೆಯಬೇಕು ಎನ್ನುವ ರೀತಿಯದು. ಕಾರಂತರ

ಕಾದಂಬರಿಗಳಲ್ಲಿ ಸ್ತ್ರೀಯರು ವಾಸ್ತವ ನೆಲೆಯಲ್ಲಿ ಪರಿಹಾರವನ್ನು ಶೋಧಿಸಿ, ಆ ಬಗ್ಗೆ ಅವರೇ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. 'ಸರಸಮ್ಮನ ಸಮಾಧಿ', 'ಮೂಕಜ್ಜಿಯ ಕನಸುಗಳು', 'ಮೈಮನಗಳ ಸುಳಿಯಲ್ಲಿ'-ಬರುವ ಪಾತ್ರಗಳು ಸ್ತ್ರೀ ಸಾಮರ್ಥ್ಯದ ಸಾಧ್ಯತೆಗಳನ್ನು ತೋರುವ ಮಾದರಿಗಳು.

ಸ್ತ್ರೀಯರ ಪರಿಸ್ಥಿತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ 'ವೈಶಾಖ' ಕಾದಂಬರಿ ಪ್ರಮುಖವಾದದ್ದಾಗಿದೆ. ಸಮಸ್ಯೆಯ ನಿವಾರಣೆಯ ಬಗೆಗೆ ಚದುರಂಗರು ಸುಳಿವುಗಳನ್ನೇನೂ ನೀಡುತ್ತಾರೆಂದಲ್ಲ. ಹಾಗೆ ನೀಡುವುದು ಸಾಧ್ಯವೂ ಇಲ್ಲ. ಸ್ತ್ರೀಯನ್ನು ಈ ಸಮಾಜ ನಡೆಸಿಕೊಳ್ಳುತ್ತಿರುವ ಬಗೆಯನ್ನು, ಅನನ್ಯವಾದೊಂದು ರೀತಿಯಲ್ಲಿ ಚದುರಂಗರು ಚಿತ್ರಿಸಿದ್ದಾರೆ. ಚಿತ್ರಮೂಲನ ಕೋಟೆ ಹಾಗೂ ಆ ಬಗ್ಗೆ ರುಕ್ಮಿಣಿ ಕಾಣುವ ಕನಸು-ಮಹಿಳೆಯರ ಸಮಸ್ಯೆಯ ಸ್ವರೂಪವನ್ನು, ಅದರ ತೀವ್ರತೆಯನ್ನು ತೋರಿಸುತ್ತದೆ. ರುಕ್ಮಿಣಿಯ ಬಾಳಿನಲ್ಲಿಯೂ ಕನಸಿನಲ್ಲಿ ಕಂಡದ್ದೇ ಸತ್ಯವಾಗಿ ಬಿಡುತ್ತದೆ. ಕೋಟೆಯೊಳಗೆ ಹೊಕ್ಕವಳಿಗೆ ಹೊರಬರುವ ದಾರಿ ಕಾಣಲೇ ಇಲ್ಲ. ಅಸಹಾಯಕ ಪರಿಸ್ಥಿತಿಯಲ್ಲಿ ಸಿಲುಕಿದ ಈ ಗರ್ಭಿಣಿಯ ಗತಿ ಏನಾಯಿತು ಎಂಬುದು ಕೇವಲ ಪ್ರಶ್ನೆಯೇ. ಇವಳ ಹಾಗೆಯೇ ಸಮಾಜದ ಶೋಷಣೆಗೆ ಬಲಿಯಾದ ಹರಿಜನ ಲಕ್ಕನೂ ಎಲ್ಲವನ್ನೂ ಕಳೆದುಕೊಂಡ ಗತಿಗೇಡಿಯಾಗುತ್ತಾನೆ ನಿಜ. ಆದರೆ ದಾರಿಯನ್ನು ಹುಡುಕಿ ಹೊರಹೋಗಬಲ್ಲ ಅವಕಾಶ, ಹಾಗೆ ಹೋದರೆ, ಕಾಡಿನಲ್ಲೇ ಆದರೂ ಸರಿ, ನಿರಭ್ರ ಪ್ರಕೃತಿಯಲ್ಲಿ ಸ್ವತಂತ್ರನಾಗಿ ನಿಂತು ಹೊಸ ಸೂರ್ಯೋದಯವನ್ನು ಕಾಣುವ ಅವಕಾಶ ಅವನಿಗಿದೆ. ಈ ಸಮಾಜದ ವ್ಯವಸ್ಥೆಗೆ ಬೆದರಿ ಓಡಿದರೂ ಬದುಕಿ ಉಳಿಯುವ ಸಾಧ್ಯತೆ ಇದೆ. ಆದರೆ, ಸ್ತ್ರೀಯರಿಗೆ ಮಾತ್ರ ಹೊರಗೆ ಹೋಗಲು ದಾರಿಯೇ ಕಾಣದ ಕೋಟೆಯ ಬಂಧನ ಭದ್ರವಾಗಿದೆ. ರುಕ್ಮಿಣಿಯಂತೆಯೇ ಬವಣೆ ಪಡುತ್ತಿರುವ ಕಲ್ಯಾಣಿ, ಗಂಗಿಯರಷ್ಟೇ ಅಲ್ಲದೆ, ಮೇಲು ನೋಟಕ್ಕೆ 'ಸ್ತ್ರೀಯ ಸಂಕಷ್ಟಕ್ಕೆ ಸ್ತ್ರೀಯೆ ಕಾರಣ' ಎನ್ನುವುದಕ್ಕೆ ಮಾದರಿಗಳಂತೆ ಕಾಣುವ ಸುಶೀಲ, ಲಕ್ಷಮ್ಮರು ಸಹ ಸಮಸ್ಯೆಯ ಕೋಟೆಯಲ್ಲಿ ಸಿಲುಕಿರುವವರೇ. ರುಕ್ಮಿಣಿಗೆ ಕೋಟೆಯ ಹೊರ ಹೋಗುವ ದಾರಿಯನ್ನು ಕಾಣಬೇಕೆನ್ನುವ ಧಾವಂತವಾದರೂ ಇದೆ. ಇವರಿಗೆ ತಮ್ಮ ಪರಿಸ್ಥಿತಿಯ ಬಗೆಗಿನ ಅರಿವೂ ಇಲ್ಲ : ಬದಲಿಗೆ ಪುರುಷ ನಿರ್ಮಿತ ಮೌಲ್ಯಗಳಿಗೆ ಹಾಗೂ ಆ ಮೂಲದ ಶೋಷಣೆಗಳಿಗೆ ತಾವೇ ವಾಹಕಗಳಾಗಿಬಿಟ್ಟಿರುವ ಅಜ್ಞಾನದ ದುರಂತವೂ ಇದೆ. ಕಾದಂಬರಿಯ ಉದ್ದಕ್ಕೂ ಇರುವ ಸಮಾಜದ ವಿವಿಧ ನೆಲೆಯ ಸ್ತ್ರೀಪಾತ್ರಗಳ ಚಿತ್ರಣದಲ್ಲಿ ಸ್ತ್ರೀಯರ ಸಮಸ್ಯೆಯನ್ನು ಕುರಿತಂತೆ ಸಹಾನುಭೂತಿಯ ವಿಶ್ಲೇಷಣೆ ಈ ಕಾದಂಬರಿಯ ವೈಶಿಷ್ಟ್ಯ.

ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕತೆಯಲ್ಲಿ ಸ್ತ್ರೀಶಕ್ತಿಯ ಸಾಧ್ಯತೆಗಳ ಸೂಚನೆ ಇದೆ. ಗಯ್ಯಾಳಿಗಳಾಗಿ ಸ್ಫೋಟಗೊಳ್ಳಬಲ್ಲ ಇವರು, ಅನಿರೀಕ್ಷಿತ, ಆಕಸ್ಮಿಕ

ಅಪಾಯಗಳನ್ನು ಸಾಂದರ್ಭಿಕವಾದ ಒಂದು ಧೈರ್ಯ, ಸ್ಫೂರ್ತಿಗಳಿಂದ ತಡೆಗಟ್ಟಬಲ್ಲ ರಕ್ಷಕರೂ ಆಗಬಲ್ಲರು. ಉರುಳಿಬರುವ ದಿಮ್ಮಿಗೆ ಬಗಿನೆ ಮರದ ತುಂಡುಕೋಲು ಹಿಡಿದು ತಡೆಯೊಡ್ಡುವಂತಹ ಅನೂಹ್ಯ ಘಟನೆಗಳು ನಡೆಯುತ್ತವೆ. ಸಿಡಿದೇಳುವ ದಾನಮ್ಮನಂತಹವರು ಒಂದು ನೆಲೆಯಲ್ಲಿ ಪಾರಂಪರಿಕ ಮಾತೃ ದೇವತೆಯ ಕಲ್ಪನೆಯನ್ನು ಪ್ರಕಟಿಸುತ್ತಾರೆ ಎಂಬ ಡಾ. ಕೆ. ವಿ. ನಾರಾಯಣ ಅವರ ವಿಶ್ಲೇಷಣೆಯನ್ನು ಇಲ್ಲಿ ಗಮನಿಸಬಹುದು.

ಈ ಮುಂದೆ, ಸ್ತ್ರೀಯರ ಬರಹಗಳಲ್ಲಿನ ಸ್ತ್ರೀವಾದಿ ಚಿಂತನೆಯನ್ನು ಕುರಿತು ಒಂದು ವಿಶ್ಲೇಷಣೆ ಇದೆ. ಆದರೆ, ಇಲ್ಲಿ ನಾನು ಕೃತಿಕಾರರ ಹಾಗೂ ಕೃತಿಗಳ ಬಗೆಗೆ ವಿವರವಾದ ಚರ್ಚೆಯನ್ನು ಎತ್ತಿಕೊಳ್ಳುವ ಬದಲು ಒಟ್ಟಾರೆಯಾಗಿ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರು ಅಭಿವ್ಯಕ್ತಿಸಿರುವ ಸ್ತ್ರೀವಾದಿ ಚಿಂತನೆಗಳ, ಮುಖ್ಯ ಧೋರಣೆಗಳನ್ನು ಗ್ರಹಿಸಲು ಯತ್ನಿಸಿದ್ದೇನೆ.

ಸ್ತ್ರೀಯರು ನಿರ್ಮಿಸಿದ ಸ್ತ್ರೀವಾದಿ ಸಾಹಿತ್ಯದಲ್ಲಿ, ಆರಂಭ ಕಾಲದಲ್ಲಿ ಮತ್ತೆ ಪ್ರಧಾನವಾಗಿ ಕಾಣುವುದು ಕಥಾ ಸಾಹಿತ್ಯವೇ. ಪುರುಷ ನಿರ್ದೇಶಿತ ಸ್ತ್ರೀ ಧರ್ಮದಿಂದ ಸಿಡಿದೆದ್ದು ನಿಜವಾದ ತಮ್ಮ ಜೀವನ ಧರ್ಮದ ಅನ್ವೇಷಣೆ ವಚನಕಾರ್ತಿಯರಲ್ಲಿ ಕಂಡು ಬಂದಿರುವುದನ್ನೂ, ಅಕ್ಕಮಹಾದೇವಿಯು ಸಾಹಿತ್ಯ ಮಾಧ್ಯಮದಲ್ಲಿ ಸಮರ್ಥವಾಗಿ ಅದನ್ನು ಅಭಿವ್ಯಕ್ತಿಗೊಳಿಸಿರುವುದನ್ನೂ ಎಲ್ಲರೂ ಗಮನಿಸಿದ್ದಾರೆ. ಆದರೂ, ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ತ್ರೀಯ ಇಂತಹ ಭಾಗವಹಿಸುವಿಕೆ ಮತ್ತೆ ಕಾಣುವುದು ಆಧುನಿಕ ಕಾಲದಲ್ಲೇ. ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ, ಗಿರಿಬಾಲೆ ಇವರುಗಳ ಸಾಹಿತ್ಯದಲ್ಲಿ ಪರಂಪರಾಗತವಾಗಿ ಬಂದಿರುವ ಸ್ತ್ರೀಗೆ ಸಲ್ಲಬೇಕಾದ ಸ್ಥಾನ -ಇವುಗಳ ಚರ್ಚೆ ಇದೆ. ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆ, ಹೆಣ್ಣಿನ ಪರಾವಲಂಬನೆ-ಹೀಗೆ ಸ್ತ್ರೀ ವಿರೋಧಿಯಾದ ಸಮಾಜ ವ್ಯವಸ್ಥೆಯ ವಿಶ್ಲೇಷಣೆ ಇದೆ. ಆರಂಭಕಾಲದ ಈ ಬರಹಗಾರ್ತಿಯರ ವಿಶೇಷವೆಂದರೆ ಸಾಹಿತ್ಯ ರಚನೆ ಇವರಿಗೆ ಅನಿವಾರ್ಯವೆನಿಸಿ ಆದದ್ದು. ಕೇವಲ ಕಾಲ ಕಳೆಯುವುದಕ್ಕಾಗಿ ನಿರ್ಮಾಣಗೊಂಡ ಲಕ್ಷುರಿಗಳಲ್ಲ. ಬಹುಮಟ್ಟಿಗೆ ಇವರ ಬರವಣಿಗೆಗಳಲ್ಲಿ ಸಮಾಜದಲ್ಲಿರುವ ಸ್ತ್ರೀ ವಿರೋಧಿದುಷ್ಟ ಪದ್ಧತಿಗಳನ್ನು ತೋರಿ ಟೀಕಿಸುವ ಕೆಲಸ ನಡೆದಿದೆ. ಹಲವೊಮ್ಮೆ ಸ್ತ್ರೀಯು ಹಿಡಿಯಬಹುದಾದ ಹೊಸ ಹಾದಿಗಳ ಸೂಚನೆಯನ್ನು ನೀಡಲಾಗಿದೆ. ಆದರೂ ಇಲ್ಲಿನ ಹೋರಾಟದ ಕ್ರಮ ಆಕ್ರಮಣದ ವಿರುದ್ಧ ರಕ್ಷಣಾ ಕ್ರಮ ಮಾತ್ರವೇ ಹೊರತು ಹೊಸ ದಿಗಂತದ ಕಡೆಗೆ ಸಾಗುವ ದಿಟ್ಟ ಹೆಜ್ಜೆಯಲ್ಲ. ಅಂದಿನ ಪರಿಸ್ಥಿತಿಗೆ ಇಷ್ಟಾದದ್ದೇ ಹೆಚ್ಚು ಎಂಬ ಮಾತು ಬೇರೆ.

ಮುಂದಿನ ಚರಿತ್ರೆ ಈ ಮನೋಭಾವದಲ್ಲಿ ಇಳಿಮುಖವನ್ನು ತೋರುತ್ತದೆ. ಮಧ್ಯಮ, ಹಾಗೂ ಮೇಲು ವರ್ಗಗಳ ಶಿಕ್ಷಿತ ಸ್ತ್ರೀಯರು ಸಾಹಿತ್ಯ ರಚನೆಗೆ ತೊಡಗಿದ ಕಾಲಕ್ಕೆ

ಅನಿವಾರ್ಯ ಬದ್ಧತೆಯಿಂದಾಗಿ ಬರೆಯುವುದು ತಪ್ಪಿ, ಮನರಂಜನೆ, ಜನಪ್ರಿಯತೆಗಳ ಉದ್ದೇಶದಿಂದಲು ಕಥೆ ಕಾದಂಬರಿಗಳ ಸೃಷ್ಟಿ ಮೊದಲಾಯಿತು. ಆರ್ಯಾಂಬ ಪಟ್ಟಾಭಿ, ತ್ರಿವೇಣಿ, ಎಂ. ಕೆ. ಇಂದಿರಾ, ಅನುಪಮಾ ನಿರಂಜನ, ರಾಜಲಕ್ಷ್ಮಿ ಈ ಬರಹಗಾರ್ತಿಯರನ್ನು ಗಮನಿಸಿಬಹುದು. ಇವರು ಬಹುತೇಕ ಬರೆದದ್ದು ಕಥಾ ಸಾಹಿತ್ಯ. ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಪ್ರೇಮ ವಿವಾಹ-ಮುಂತಾದವುಗಳ ಪ್ರಸ್ತಾಪವಿದ್ದರೂ ಇಲ್ಲಿ ಹೆಚ್ಚಿನ ಮಟ್ಟಿಗೆ ವ್ಯಕ್ತವಾಗಿರುವುದು ಪುರುಷ ದೃಷ್ಟಿಕೋನದಿಂದ ವ್ಯಕ್ತವಾದ ಸ್ತ್ರೀವಾದ. ಅಂದರೆ, ವಿಮೋಚನೆಗಾಗಿ ತುಡಿಯುತ್ತಾ ಪ್ರಗತಿಯ ಹೊಸಹಾದಿಯನ್ನು ಹಿಡಿಯುವಾಗಲೂ ಪುರುಷ ನಿರ್ದೇಶಿತ ಚೌಕಟ್ಟಿನಿಂದ ಅಷ್ಟೇನೂ ಹೊರಗೆ ಹೋಗುವುದಿಲ್ಲ. ಹಾಗೆ ಹೊರ ಬಂದಂತೆ ತೋರಿದಾಗಲೂ ಪಾಪ ಪ್ರಜ್ಞೆಯು ಕಾಡುತ್ತದೆ. 'ಗೆಜ್ಜೆ ಪೂಜೆ'ಯ ಚಂದ್ರಳ ವಿಮುಕ್ತಿಗೆ ತ್ಯಾಗವೇ ತಡೆಯಾಗುತ್ತದೆ. 'ಶರಪಂಜರ'ದ ಕಾವೇರಿಗೆ 'ಪಾಪ ಪ್ರಜ್ಞೆ'ಯ ಕಾಟ. ಇವರ ಜೀವನದಲ್ಲಿ ನಡೆದಿತ್ತೆನ್ನಲಾದ 'ಪಾಪ'ಗಳೆಂಬ ಸಂಗತಿಗಳು ನಿಜಕ್ಕೂ ಅಷ್ಟು ಅಕ್ಷಮ್ಯವೇ? ಪುರುಷನ ದೃಷ್ಟಿಕೋನದಲ್ಲಿ ಹೌದು. ಶೀಲ, ತ್ಯಾಗ, ವಾತ್ಸಲ್ಯ, ಪ್ರೇಮ-ಯಾವುದೇ ಇರಲಿ ಅದನ್ನು ನಿರ್ವಹಿಸುವ ಹೊಣೆ ಅದರ ಶುದ್ಧತೆಯನ್ನು ಕಾಪಾಡುವ ಹೊಣೆ ಸ್ತ್ರೀಗೆ ಮಾತ್ರವೇ ಇದೆ. ಸ್ತ್ರೀಪರವೆಂದು ತೋರುವ ಧೋರಣೆಗಳೂ ಇವನ್ನೇ ಸಮರ್ಥಿಸುತ್ತವೆ, ಸ್ವಲ್ಪ ಬೇರೆ ರೀತಿಯಲ್ಲಿ ಅಷ್ಟೆ. ಅನುಪಮಾ ನಿರಂಜನರವರ ಮೊದ ಮೊದಲ ಬರಹಗಳು ಈ ಪಟ್ಟಿಯಲ್ಲೇ ಸೇರುತ್ತವಾದರೂ ನಂತರದ 'ಮಾಧವಿ'ಯಂತಹ ಬರಹಗಳಲ್ಲಿ ನಿಜವಾದ ಅರ್ಥದಲ್ಲಿ ಸ್ತ್ರೀವಾದಿ ಚಿಂತನೆ ನಿರೂಪಿತವಾಗಿದೆ.

ನಿಜವಾದ ಅರ್ಥದಲ್ಲಿ ಸ್ತ್ರೀವಾದಿ ದೃಷ್ಟಿಕೋನವನ್ನು ಹೊಂದಿರುವುದಷ್ಟೇ ಅಲ್ಲದೆ ಅದನ್ನು ಸಮರ್ಥವಾಗಿ ಸಾಹಿತ್ಯ ಮಾಧ್ಯಮದಲ್ಲಿಯೂ ಹಿಡಿದಿಡುವ ಸಾಮರ್ಥ್ಯದ ಬರಹಗಾರ್ತಿಯರಲ್ಲಿ ವೀಣಾ ಶಾಂತೇಶ್ವರ, ವೈದೇಹಿ, ಸಾರಾ ಅಬೂಬಕರ್ ಮುಂತಾದವರನ್ನು ಹೆಸರಿಸಬಹುದು. ವೀಣಾ ಅವರ ಅಭಿವ್ಯಕ್ತಿ ಕೆಲವೆಡೆ ಬೆಚ್ಚಿ ಬೀಳುವಂತೆ ತೋರಿದರೂ ಅದು ಅನಿರೀಕ್ಷಿತತೆಯಿಂದಾಗಿಯೇ ಹೊರತು ಅವಾಸ್ತವತೆಯಿಂದ ಅಲ್ಲ ಎನಿಸುತ್ತದೆ. ವೈದೇಹಿಯವರ ಸಾಹಿತ್ಯದಲ್ಲಿ ಹೊಸ ದೃಷಿಕೋನ ಮಾತ್ರವೇ ಅಲ್ಲದೆ ಅಭಿವ್ಯಕ್ತಿಯ ತಂತ್ರದ ಮೇಲೆ ಸಾಧಿಸಿರುವ ಅಗಾಧ ನಿಯಂತ್ರಣವೂ ಗಮನಾರ್ಹ. ವೈದೇಹಿಯವರ ಕತೆಗಳಲ್ಲಿನ ಒಂದು ಮಾದರಿಯೆಂದರೆ ಹೆಣ್ಣು ಜಗತ್ತನ್ನು ವಿವರಗಳಲ್ಲಿ ಮಂಡಿಸುವುದು. ದೈನಂದಿನ ಜಗತ್ತನ್ನು ತೋರುವಂತೆ ಕಾಣುವ ಈ ವಿವರಗಳಲ್ಲಿ ಹಲವು ತಲೆಮಾರುಗಳ ಹೆಂಗಸರನ್ನು ಚಿತ್ರಿಸುತ್ತಲೇ ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸದ ಸೂಕ್ಷ್ಮಗಳನ್ನು ಎದುರಿಗಿಡುತ್ತಾರೆ. ಅವರ 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗಳು' ಕಥಾ ಸಂಕಲನದಲ್ಲಿನ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ' ಒಂದು ಕಳ್ಳ ವೃತ್ತಾಂತ', 'ಹಕ್ಕಿಲ್ಲದವರು' ಈ ಕತೆಗಳನ್ನು ಇಲ್ಲಿ ನಿದರ್ಶನವಾಗಿ ಗಮನಿಸಬಹುದು. ಅವರ ಇನ್ನೊಂದು ಮಾದರಿ ಕತೆಗಳಲ್ಲಿ ನಿರೂಪಕಿಯು ನೇರವಾಗಿ ಪ್ರವೇಶಿಸಿ ಘಟನೆಗಳನ್ನು

ವ್ಯಾಖ್ಯಾನಿಸುತ್ತಾರೆ. ಮೊದಲಿನ ಮಾದರಿಯಲ್ಲಿ ಲೇಖಕಿಯ ಚಿಂತನೆಗಳನ್ನು ಪರೋಕ್ಷ ಮಾರ್ಗದಿಂದ ಗ್ರಹಿಸಬೇಕಾಗಿ ಬರುತ್ತದೆಯಾದರೆ ಈ ಮಾದರಿಯಲ್ಲಿ ಅದು ನೇರವಾದ ಗ್ರಹಿಕೆಗೆ ಬರುವ ರೀತಿಯಾಗಿದೆ. ಅವರ 'ಅಕ್ಕು' ಹಾಗೂ 'ಆತ' ಕತೆಗಳನ್ನು ಇಲ್ಲಿ ಉದಾಹರಿಸಬಹುದು.

ಕವಯತ್ರಿಯರ ಒಂದು ಅಧ್ಯಯನದಲ್ಲಿ ಪ್ರಧಾನವಾಗಿ ಕಂಡು ಬರುವ ಕೊರತೆ ತಂತ್ರಕ್ಕೂ ಸಂಬಂಧಿಸಿದ್ದಾಗಿದೆ. ಈಚೆಗಿನ ಮಹಿಳಾ ಸಾಹಿತ್ಯದಲ್ಲಿ ಪ್ರಧಾನವಾಗಿ ಕಾಣುವುದು ಕಾವ್ಯ ಪ್ರಕಾರವೇ. ಅದರಲ್ಲೂ ವಾಚ್ಯಮಯ ಹೇಳಿಕೆಗಳು, ಉದ್ದೇಶವಿಲ್ಲದ ಕಾವ್ಯಬಂಧ, ಕಾವ್ಯತಂತ್ರದಲ್ಲಿ ಸಿದ್ಧ ಇಲ್ಲದಿರುವುದು-ಮೊದಲಾದ ದೋಷಗಳು ಕಾಣುತ್ತವೆ. ಅಂತರಂಗವನ್ನು ಅಭಿವ್ಯಕ್ತಿಗೊಳಿಸುವ ಕ್ರಿಯೆ ಸ್ತ್ರೀಗೆ ಇನ್ನೂ ಅಷ್ಟು ಸಹಜವಾಗಿ ದಕ್ಕಿದಂತಿಲ್ಲ. ಅಭಿವ್ಯಕ್ತಿಯಲ್ಲಿ ಭಯ ಸಂಕೋಚಗಳನ್ನು ಗೆಲ್ಲುವುದು ಸವಾಲಾದಾಗ ಅದನ್ನು ಗೆದ್ದ ನಂತರದಲ್ಲೂ ಅಭಿವ್ಯಕ್ತಿ ಕಾವ್ಯವೆನಿಸಬೇಕಾದರೆ ಮತ್ತೊಂದೇ ಸವಾಲಾಗಿ ನಿಲ್ಲುತ್ತದೆ. ಅಂದರೆ ಮಹಿಳಾ ಸಾಹಿತಿಗೆ ಒಟ್ಟಿಗೇ ಎರಡು ಸವಾಲುಗಳು ಎದುರಾಗುತ್ತವೆ. ಒಂದು ಅರಿವಿನ ಜಾಗೃತಿಗೆ ಸಂಬಂಧಿಸಿದ್ದಾದರೆ ಇನ್ನೊಂದು ಅಭಿವ್ಯಕ್ತಿ ಮಾಧ್ಯಮದ ತಂತ್ರಕ್ಕೆ ಸಂಬಂಧಿಸಿದ್ದು. ಈ ಎರಡು ದಿಕ್ಕಿನಲ್ಲೂ ನಮ್ಮ ಕವಯತ್ರಿಯರು ಕ್ರಮವಾಗಿ ಉನ್ನತಿಯ ಸಾಧನೆಯನ್ನು ತೋರುತ್ತಿದ್ದಾರೆಂಬ ಸಂಗತಿಯನ್ನು ಪ್ರಾಯೋಗಿಕವಾದ ಒಂದು ವಿಮರ್ಶೆಯಲ್ಲಿ ಡಾ. ಬಿ. ಎಸ್. ಸುಮಿತ್ರಾಬಾಯಿಯವರು (ಸಾರ್ವತ್ರಿಕದೆಡೆಗೆ,೧೯೮೭) ತೋರಿಸಿದ್ದಾರೆ. ಪ್ರಾತಿನಿಧಿಕವಾಗಿ ಹನ್ನೆರಡು ಕವಯತ್ರಿಯರನ್ನು ಆಯ್ದುಕೊಂಡು ಮೂರು ಗುಂಪುಗಳನ್ನಾಗಿ ಮಾಡಿ, ಸ್ತ್ರೀಯರ ಕಾವ್ಯವು ಕಾಲ ಕ್ರಮದಲ್ಲಿ ಉತ್ತಮಗುಣಗಳನ್ನು ಅಳವಡಿಸಿಕೊಂಡಿರುವುದನ್ನು ಈ ವಿಭಜನೆಯ ವಿಶ್ಲೇಷಣೆಯಿಂದ ನಿರೂಪಿಸಿದ್ದಾರೆ.

ಬರಬರುತ್ತಾ ಮಹಿಳಾ ಸಾಹಿತ್ಯದಲ್ಲಿ ಕಾವ್ಯ ರೂಪದಲ್ಲೇ ಹೆಚ್ಚಿನ ಸಾಧ್ಯತೆಗಳು ಕಾಣುತ್ತಿವೆ. ಬೇರೆ ಪ್ರಕಾರ-ಮುಖ್ಯವಾಗಿ ಕತೆ, ಕಾದಂಬರಿಗಳಲ್ಲಿ ಹೊಸ ಅನ್ವೇಷಣೆಗಳೇನೂ ಕಂಡುಬಂದಿಲ್ಲ. ಮಹಿಳಾ ಸಾಹಿತಿಗೆ ಇಲ್ಲಿ ಅವಳು ಬಳಸುವ ಮಾಧ್ಯಮವೂ ಒಂದು ಸವಾಲಾಗಿರುವ ಸಾಧ್ಯತೆ ಇದೆ ಎನಿಸುತ್ತದೆ. ಮಹಿಳಾ ಸಾಹಿತಿಯ ಮಾಧ್ಯಮವಾದ ಭಾಷೆ-ಅಂದರೆ ನಾವಾಡುವ ಭಾಷೆ ಮೂಲಭೂತವಾಗಿ ಪುರುಷ ಪರವಾದದ್ದು. ಇದನ್ನೇ ತನ್ನ ಮಾಧ್ಯಮವನ್ನಾಗಿ ಬಳಸಲು ಹೊರಟಾಗ ಅನಿವಾರ್ಯವಾಗಿ ಮಾಡಿಕೊಳ್ಳಬೇಕಾಗಿ ಬರುವ ರಾಜಿಯಿಂದಾಗಿ ಈ ಸಮಸ್ಯೆ ನಿಂತಿದೆಯೆ? ಇದು ಕೇವಲ ಒಂದು ಪ್ರಶ್ನೆ. ಒಂದು ವೇಳೆ ಹೌದು ಎಂದಾದರೆ ಇದಕ್ಕೆ ಪರಿಹಾರವೇನು ಎಂಬ ಮತ್ತೊಂದು ಪ್ರಶ್ನೆ. ಪುರುಷಪರವಾದ ಈ ಭಾಷೆಯನ್ನು ಬದಲಾಯಿಸಿ ತನಗೆ ಬೇಕಾದಂತೆ ಬಗ್ಗಿಸಿಕೊಳ್ಳುವ ಸಾಹಸಕ್ಕೆ ಅವಳು ತಯಾರಾಗಬೇಕು. ಸಮಸ್ಯೆಯ ಜೊತೆಗೆ ಮತ್ತೊಂದು ಸಮಸ್ಯೆ ಎನಿಸಿದರೂ, ಪುರುಷ ಪರವಾದ ಭಾಷೆಯಿಂದಾಗಿಯೇ ಸಮಸ್ಯೆ ಎದ್ದಿದೆ ಎನ್ನುವುದಾದರೆ, ಅದನ್ನು ಬಗ್ಗಿಸುವ

ಹೊಸ ಸಾಹಸಕ್ಕೆ ಕೈಹಾಕದೆ ಕಾವ್ಯ ನಿರ್ಮಾಣ ತಂತ್ರದ ತೊಡಕನ್ನು ಬಿಡಿಸಲಾಗದು. ಈ ಸಾಹಸಕ್ಕೆ ದೀರ್ಘವಾದ ಪ್ರಯೋಗಶೀಲತೆ, ತಾಳ್ಮೆಗಳ ಅವಶ್ಯಕತೆ ತುಂಬಾ ಇದೆ ಎನ್ನುವ ಮಾತಂತೂ ಇದ್ದೇ ಇದೆ. ಅಥವಾ ಇರುವ ಇನ್ನೊಂದು ದಾರಿ ಎಂದರೆ ಈ ಶಬ್ದ ಮಾಧ್ಯಮವನ್ನೇ ನಿರಾಕರಿಸಿ ಶಬ್ದೇತರ ಮಾಧ್ಯಮಗಳಿಗೆ ಹೋಗುವುದು. ಪರಂಪರಾಗತವಾಗಿ ಸ್ತ್ರೀ ತನ್ನನ್ನು ಅಭಿವ್ಯಕ್ತಿಗೊಳಿಸಿರುವುದು ಈ ಶಬ್ದೇತರ ಮಾಧ್ಯಮದಲ್ಲೇ. ಶಬ್ಧ ಮಾಧ್ಯಮವನ್ನು ತನಗೆ ತಕ್ಕಂತೆ ಒಗ್ಗಿಸಿಕೊಳ್ಳಲಾಗದೆ ಹೋದರೆ, ಶಬ್ದೇತರ ಮಾಧ್ಯಮವೇ ತನಗೆ ತಕ್ಕುದೆಂದು ಗ್ರಹಿಸಿ ಮುಂದುವರೆಯುವುದು. ಈ ಯಾವ ಮಾತುಗಳೂ ಸಲಹೆಗಳೂ ಅಲ್ಲ ; ಸೂಚನೆಗಳೂ ಅಲ್ಲ ; ಕೇವಲ ಉತ್ತರಗಳ ಶೋಧದಲ್ಲಿ ನಿಂತಿರುವ ಕೆಲವು ಪ್ರಶ್ನೆಗಳು.

ಡಾ. ಎಚ್. ಎಸ್. ಶ್ರೀಮತಿ ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿ, ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥೆಯಾಗಿ ಕೆಲಸ ಮಾಡುತ್ತಿದ್ದಾರೆ. ವಿಶ್ವ ವಿದ್ಯಾಲಯದ ಪ್ರಕಟಣೆಯಾದ 'ಮಹಿಳಾ ಅಧ್ಯಯನ' ಪತ್ರಿಕೆಯ ಸಂಪಾದಕಿ. ಶ್ರೀಮತಿಯವರ ಉತ್ತಮ ಅನುವಾದಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ಮಹಾಶ್ವೇತಾದೇವಿ ಯವರ ಕತೆ, ಕಾದಂಬರಿಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಮತ್ತೆ ಕೆಲವು ಅಚ್ಚಿನಲ್ಲಿವೆ. ಖ್ಯಾತ ಕಾದಂಬರಿಕಾರ್ತಿ ತ್ರಿವೇಣಿ ಯವರ ಕೃತಿಗಳನ್ನು ಅಧ್ಯಯನ ಮಾಡಿ ವಿಶ್ಲೇಷಿಸಿದ ಲೇಖನದ ಪುಟ್ಟ ಹೊತ್ತಿಗೆಯೊಂದು ಸಿದ್ಧವಾಗಿದೆ. ಶ್ರೀಮತಿ ಸದ್ದಿಲ್ಲದೆ ಶುದ್ಧ ಬರಹಗಳನ್ನು ಕೊಡುತ್ತ ಬಂದವರು. 'ಚಹರೆ' ಸ್ತ್ರೀವಾದೀ ನೆಲೆಯಲ್ಲಿ ಹಲವು ವಿಷಯಗಳನ್ನು ಚರ್ಚಿಸಿರುವ ಹೊಸ ನೋಟಗಳುಳ್ಳ ವಿಶಿಷ್ಟ ಕೃತಿ. ಸ್ತ್ರೀವಾದವನ್ನು ಅಬ್ಬರವಿಲ್ಲದ ಗಂಭೀರವಾದ ಚೌಕಟ್ಟಿನಲ್ಲಿಟ್ಟು ಅಕಾಡಮಿಕ್ ಶಿಸ್ತಿಗೆ ಒಳ ಪಡಿಸುವ ಪ್ರಾಮಾಣಿಕ ಪ್ರಯತ್ನವಾಗಿ 'ಚಹರೆ' ಮುಖ್ಯ ವಾಗುತ್ತದೆ. ಇಂಥದೊಂದು ಅಪರೂಪದ ಕೃತಿಯನ್ನು ಓದುಗರ ಕೈಯಲ್ಲಿಡಲು ಇಳಾ ಪ್ರಕಾಶನ ಸಂತೋಷಿಸುತ್ತದೆ.

- ವಿಜಯಾ

ಇಳಾ ಪ್ರಕಾಶನ, ಬೆಂಗಳೂರು